TIGHT BINDING BOOK

TIGHT BINDING BOOK

UNIVERSAL LIBRARY
OU_202135
UNIVERSAL LIBRARY

ಓಂ.

ಶ್ರೀರಸ್ತು.

ಶ್ರೀ ವಿಚಾರದೀಪಕ

ವೆಂಬ,

ಸರ್ವ ವೇದಾಂತ ಸಿದ್ಧಾಂತ ಸಾರಭೂತವಾದ ಈ ಗ್ರಂಥವು
ಶ್ರೀಮತ್ಪರಮಹಂಸ ಬ್ರಹ್ಮಾನಂದ ಸ್ವಾಮಿಗಳಿಂದ ಹಿಂದೀ ಭಾಷಾ
ಟೀಕಾ ಸಹಿತ ~~ಸಂಸ್ಕೃತದಲ್ಲಿ~~ ರಚಿಸಲ್ಪಟ್ಟಿದ್ದುದನ್ನು
ಮೂಲಗ್ರಂಥದ ಹಕ್ಕುದಾರರ ಸಮ್ಮತಿಯಿಂದ

ಮಹೀಶೂರ ರಾಜಧಾನಿಯಲ್ಲಿರುವ
ಶಿವಾನಂದ ಸುಬ್ರಹ್ಮಣ್ಯ,
ನಾಮಕನಾದ ನನ್ನಿಂದ, ಕನ್ನಡದಲ್ಲಿ ಭಾಷಾಂತರ
ಮಾಡಲ್ಪಟ್ಟು,
ಮಹಾರಾಜಪೂಜಿತ ರಾ॥ ರಾ॥ ಶ್ರೀ॥ ಸಾ॥ ನೀಲಗಿರಿ
ಚಿಕ್ಕ ಮಾಮಣ್ಣನವರ, ಧರ್ಮಪತ್ನಿಯರಾದ ಈ ಗಿರುವ
ಶ್ರೀಮತ್ ಮಾತೃಶ್ರೀ ತಿಮ್ಮಮ್ಮನವರ
ಸಹಾಯದಿಂದ,

ಮ॥ ಬೆಂಗಳೂರು ವಾಜಪೇಯ ಕೃಷ್ಣಯ್ಯನವರ
ಸ್ವಕೀಯ ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.
ಮೊದಲನೇ ಛಾಪಾ ೧,೦೦೦ ಪ್ರತಿಗಳು.

ಈ ಗ್ರಂಥದ ಸರ್ವಾಧಿಕಾರವು ಗ್ರಂಥಕರ್ತರು
ತಮ್ಮಲ್ಲಿಯೇ ಇಟ್ಟುಕೊಂಡಿರುವರು.
(*All Rights Registered.*)

1902.

ಈ ಗ್ರಂಥವು

ಬೊಂಬಾಯಿ ಪ್ರಾಂತ್ಯದವರಾದ ಶ್ರೀಮತ್ಪರಮಹಂಸ ಬ್ರಹ್ಮಾನಂದ ಸ್ವಾಮಿಗಳಿಂದ ರಚಿಸಲ್ಪಟ್ಟ ಭಾವಾರ್ಥಭಾಸಿನೀ ಟೀಕಾಸಹಿತವಾದ ಹಿಂದೀಗ್ರಂಥದ ಭಾಷಾಂತರವು.

ಇದನ್ನು ಮುದ್ರಾಪಿಸುವ ವಿಷಯದಲ್ಲಿ ಸಹಾಯಮಾಡಿದ ಮಹಾರಾಜಪೂಜಿತ॥ರಾ॥ ರಾಜೇಶ್ರೀ ಸಾಹುಕಾರ್ ನೀಲಗಿರಿ ಚಿಕ್ಕಪಾಪಂಣನವರ ಧರ್ಮಪತ್ನಿಯರಾದ ಈಗಿರುವ ಶ್ರೀಮ॥ಮಾತ್ರ್ಯಾಶ್ರೀ ಧರ್ಮಹೃದಯರಾದ ನಮ್ಮ ತಿಂಮಮ್ಮನವರಿಗೂ ಹಾಗೆ ಅವರ ಚಿರಂಜೀವಿಗಳಿಗೂ ಸಹಾ ಶ್ರೀ ಸಚ್ಚಿದಾನಂದಸ್ವರೂಪನಾದ ಪರಮೇಶ್ವರನಲ್ಲಿ ಸರ್ವದಾ ಶ್ರೇಯಸ್ಸಂಪ್ರಾರ್ಥಿಸುವೆವು.

ಈ ಗ್ರಂಥದಲ್ಲಿ ಮೂಲ ಗ್ರಂಥಕ್ಕೆ ವಿರುದ್ಧವಾದ ಮಾತುಗಳಾಗಲಿ ಅಥವಾ ಯಾವದಾದರೂ ಮರತುಬಿಟ್ಟದ್ದರೆ ಇದನ್ನೋದುವ ಸತ್ಪುರುಷರು ಕರುಣೆಯಿಂದ ಗ್ರಂಥಕರ್ತನಾದ ನನಗೆ ತಿಳಿಸಿದಲ್ಲಿ ಪುನರ್ಮುದ್ರಣದಲ್ಲಿ ಸರಿಪಡಿಸುತ್ತೇನೆ.

ಈ ಗ್ರಂಥವು ಜಾಗ್ರತೆಯಾಗಿ ಪೂರೈಸಬೇಕಾಗಿ ಬಂದದ್ದರಿಂದ ಪ್ರೂಪ್ ನೋಡುವ ವೇಗದಲ್ಲಿ ಎಲ್ಲೋ ಒಂದೊಂದಕ್ಷರ ಮರತು ನೋಡಿದ್ದರಿಂದ ಈ ಗ್ರಂಥದ ಕಡೇಭಾಗದಲ್ಲಿ ಶುದ್ಧಾಶುದ್ಧ ಪತ್ರಿಕೆ ಹಾಕಲ್ಪಟ್ಟಿರುವದು,

ನೋಟೀಸ್.

ಈ ಗ್ರಂಥವನ್ನಪೇಕ್ಷಿಸುವವರು ಮೈಸೂರು ಜಗನ್ಮೋಹನ ಬಂಗಲೆ ಬಲಭಾಗದಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ ವೇದಾಂತ ಸುಬ್ಬಯ್ಯನವರಲ್ಲಿಯೂ, ಮ॥ ರಾ॥ ಬೆಂಗಳೂರು ವಾಜಪೇಯ, ಕೃಷ್ಣಯ್ಯನವರಲ್ಲಿಯೂ, ಮೈಸೂರು ಮಂಡಿ ಮಾರ್ಕೆಟ್ಟಿನ ಬಳಿಯಲ್ಲಿರುವ ಚಿಲ್ಲರೆ ಅಂಗಡಿ ಕರಿಯಪ್ಪ ಮತ್ತು ಮುದ್ದಪ್ಪನವರಲ್ಲಿಯೂ, ಮೈಸೂರು ಕೋಟೆ ಪೋಲೀಸ್ ಸ್ಟೇಷನ್ ಬಳಿಯಲ್ಲಿರುವ ಮ॥ ಪನ್ಸಾರಿ ದುಕಾನ್ ತುಕ್ಕೋಜೀರಾಯರಲ್ಲಿಯೂ ಪಡೆಯಬಹುದು.

ಇದರ ಕ್ರಯ	...	೧—೮—೦
ಆತ್ಮಾನುಭವ ಪ್ರಕಾಶಿಕೆ	...	೦—೧೦—೦
ವೇದಾಂತ ದೀಪಿಕೆ	...	೦—೬—೦
ಆತ್ಮಬೋಧ ಪ್ರಕರಣ ಕನ್ನಡ ಟೀಕಾ ತಾತ್ಪರ್ಯ ಸಹಿತ	...	೦—೪—೦
ಸ್ವಾನುಭವ ಪಂಚರತ್ನಮಾಲಾ ಕನ್ನಡ ಟೀಕಾಸಹಿತ		೦—೦—೬

ಈ ಗ್ರಂಥಗಳು ಮೇಲ್ಕಂಡವರಲ್ಲಿ ದೊರಿಯುವದು ಇಷ್ಟವುಳ್ಳವರು ತರಿಸಿಕೊಳ್ಳಬಹುದು.

ಓಂ.

ಶುಭಮಸ್ತು.

ಪ್ರಕೃತಾರ್ಥ ನಿರೂಪಣ.

೧—ಎಲೈ ಸ್ವದೇಶ ಬಂಧುಗಳಿರಾ ! ಈ ಕಲಿಯುಗದಲ್ಲಿ ಪಾಪ ಬಾಹುಳ್ಯವಾಗಿರುವದ್ದರಿಂದ, ಯೋಗದ ಸಿದ್ಧಿಯು, ಜಪದ ಸಿದ್ಧಿಯು, ವ್ರತದ ಸಿದ್ಧಿಯು, ಯಾಗಸಿದ್ಧಿಯು, ಹಾಗೆ ಸುರಾರ್ಚನಾದಿಗಳ ಸಿದ್ಧಿಯೂ ಕೂಡ, ಕ್ರಮವಾಗಿ ಆಗುವವೆಂಬ, ನಿರ್ಬಲವಾದ ಸಂಕಲ್ಪವಂ ಪರಿತ್ಯಜಿಸಿ, ವಿಚಾರ ಪರರಾಗಿ,—

—ಯಾತಕ್ಕೆಂದರೆ;—

೨—ಬುದ್ಧಿಪೂರ್ವಾಬುದ್ಧಿಪೂರ್ವಕೃತಾನಾಂಪಾ
ಪಕರ್ಮಣಾಂ | ಪ್ರಾಯಶ್ಚಿತ್ತಮಿದಂಜ್ಞಾ
ನಮಿತಿವೇದಾಂತಡಿಂಡಿಮಃ || *

ಟೀ|| ಇದು ಪಾಪವ್ಯಾಪಾರವೆಂದು ತಿಳಿದು ಮಾಡಿದಪಾಪಕ್ಕೂ, ತಿಳಿಯದಲೇ ಮಾಡಿವ ಪಾಪಕ್ಕೂ ಸಹಾ ಪ್ರಾಯಶ್ಚಿತ್ತ ರೂಪವಾದದ್ದು ಜ್ಞಾನವೆ, ಎಂದು ವೇದಾಂತ ಡಂಗುರವು ಸಾರುತ್ತಿರುವದು.

— ಮತ್ತೂ ಯೇನಂದರೆ; —

೩—ಯಾವದು ಅಖಂಡಾನಂದ ಸ್ವರೂಪವೆಂದು ಶ್ರುತಿಸ್ಮೃತಿಗಳಿಂ ಹೇಳಲ್ಪಡುವದೊ, ಆ ವಸ್ತುವು ನಿತ್ಯಸಿದ್ಧವಾಗಿದ್ದರೂ, ನಮ್ಮಗಳಲ್ಲಿ ಅಜ್ಞಾನವು ಅಧಿಕವಾಗಿರುವದ್ದರಿಂದ, ಅದು ಇಲ್ಲದಂತಿರುವದು. ಅಜ್ಞಾನದ ನಾಶದಿಂದ ಅದು ಪ್ರಕಾಶಿಸತಕ್ಕದ್ದಾಗಿರುವದು. ಅಜ್ಞಾನವು ಜ್ಞಾನದಿಂದ ನಾಶವಾಗುವದು. ಜ್ಞಾನವು ತತ್ವ ವಿಚಾರದಿಂ ಹುಟ್ಟುವದ್ದರಿಂದ ಈ ಗ್ರಂಥವು ಬರೆಯಲ್ಪಟ್ಟಿರುವದು.

೪—ಚಿನ್ಮಯಸ್ಯಾದ್ವಿತೀಯಸ್ಯ ನಿಷ್ಕಲಸ್ಯಾಶ
ರೀರಿಣಃ । ಉಪಾಸಕಾನಾಂಕಾರ್ಯಾರ್ಥಂ
ಬ್ರಹ್ಮಣೋರೂಪಕಲ್ಪನಾ ॥ ... ...

ಎಂಬ ರಾಮ ಪೂರ್ವತಾಪನೀ, ಉಪನಿಷದಾವ್ಯಕ್ಯದಂತೆ ಈ ಗ್ರಂಥಕರ್ತರಾದ ಬ್ರಹ್ಮಾನಂದ ಸ್ವಾಮಿಯವರು ಅವತರಿಸಿ ಭಕ್ತಜನಗಳ ಹಿತಕ್ಕೋಸುಗ, ಮಂಗಳಾ ಚರಣಾದಿಯಾಗಿ, ಗ್ರಂಥ ಸಮಾಪ್ತಿ ಪರ್ಯಂತವೂ, ದೇವ ಭಾಷೆಯಲ್ಲಿ ೧೧೩ ಶ್ಲೋಕಗಳನ್ನು ರಚಿಸಿ ಅದಕ್ಕೆ ವಿಚಾರದೀಪಕವೆಂಬ ನಾಮವನ್ನಿಟ್ಟರು. ಬಳಿಕ ತಾವು ರಚಿಸಲ್ಪಟ್ಟ ಶ್ಲೋಕಗಳ ಅರ್ಥವು ಇತರ ಪಂಡಿತರಿಗೆ ಸಾಮಾನ್ಯವಾಗಿ ತೋರಿದರೂ, ಅವುಗಳ ಭಾವವು ಪ್ರಕಾಶಿಸಲಾರದೆಂಬ ಅಭಿಪ್ರಾಯವಂ ಪಿಡಿದು, ತಾವೇ ಸ್ವಭಾಷೆಯಾದ ಹಿಂದೀಭಾಷೆಯಲ್ಲಿ ಅವುಗಳಿಗೆ ಟೀಕೆಯಂ ರಚಿಸಿ, ' ಭಾವಾರ್ಥಭಾಸಿನೀ, , ಎಂಬ ನಾಮವನ್ನಿಟ್ಟರು.

೫—ಇಂತು ಭಾವಾರ್ಥಭಾಸಿನೀ ಟೀಕಾ ಸಹಿತವಾದ ವಿಚಾರದೀಪಕವು ಕವಡೆ ಹುಡುಕುವ ನೆಪದಲ್ಲಿ ಚಿಂತಾಮಣಿ ದೊರಕಿದಂತೆ ಯಾವದೋ ಕಾರಣದಿಂದ ನನಗೆ ಪ್ರಾಪ್ತವಾಯಿತು ಅದನ್ನು ನೋಡುವಲ್ಲಿ, ಉಪನಿಷತ್, ಬ್ರಹ್ಮಸೂತ್ರ, ಭಗವದ್ಗೀತಾ, ಸಾಂಖ್ಯ-

ಸೂತ್ರ, ಯೋಗಸೂತ್ರ, ಜ್ಞಾನವಾಸಿಷ್ಠ ಮೊದಲಾದ ಗ್ರಂಥಗಳ ಸಾರವೆಲ್ಲವೂ ಅಡಗಿದ್ದವು. ಮತ್ತು ಪರಾಶರ, ಮನು, ಯಾಜ್ಞ್ಯ ವಲ್ಕ್ಯ ಶ್ರೀ ಶಂಕರಾಚಾರ್ಯಸ್ವಾಮಿ, ಹಾಗೆ ವಿದಾರಣ್ಯ ಸ್ವಾಮಿಗಳೇ ಮೊದಲಾದ ಮಹಾ ಪುರುಷರ ವಾಕ್ಯಗಳೂ ತುಂಬಿದ್ದವು. ಇಂಥಾ ಗ್ರಂಥವು ಕನ್ನಡದಲ್ಲಿ ಭಾಷಾಂತರಿಸಿದರೆ ನಮ್ಮ ಕನ್ನಡ ದೇಶ ನಿವಾ ಸಿಗಳಾದ ಸಕಲ ಸಾಧು ಸತ್ಪುರುಷರಿಗೆ ಪರಮ ಪ್ರಯೋಜನ ವಾಗು ವದೆಂದು ತಿಳಿದೆನು.

೬—ಆದರೆ,ಹಿಂದೀಭಾಷಾ ಪರಿಚಯುವಿಲ್ಲದ ನಾನು ಆ ಗ್ರಂ ಥವನ್ನು ಬಿಡದೆ ಹಲದಿಂ ಪುನಃಪುನಃ ನೋಡುತ್ತಿರುವಲ್ಲಿ ಸರ್ವಾಕ್ಷ ರಗಳು ಮತ್ತು ಸರ್ವ ಶಬ್ದಗಳು ಯಾವ ದೇವತೆಗೆ ಪ್ರಿಯವ್ಯಾಗಿರುವ ದೆಂದು ಶೃತಿ ಸ್ಮೃತಿಗಳಲ್ಲಿ ಹೇಳಿರುವವೋ ? ಆ ದೇವತೆಯ ಪ್ರಸಾ ದವು ಬುದ್ಧಿಯಲ್ಲುಂಟಾಗಲು ಅದನ್ನು ಈ ಗ್ರಂಥರೂಪವಾಗಿ ಈ ಕ ನ್ನಡ ಮಾತಿನಲ್ಲಿ ಬರೆದಿರುವೆನು.

೭.—ಈ ಗ್ರಂಥವು ಸರ್ವೋಪನಿಷತ್ಸಾರವೆಂತಲೂ, ಮು ಖ್ಯವಾಗಿ ಜ್ಞಾನವಾಸಿಷ್ಠದ ಹೃದಯ ರತ್ನವೆಂತಲೂ ಇದನ್ನು ನೋ ಡುವ ವಿದ್ವಜ್ಜನರಿಗೆ ಹೊಳೆಯದೆ ಇರಲಾರದು.

ಮತ್ತು ಸಂಸ್ಕೃತ ಪಂಡಿತರಿಗೆ ಆನಂದ ಜನಕವಾಗಿಯೂ, ಪಾಮರರಿಗೆ ವಿವೇಕವನ್ನುಂಟು ಮಾಡುವದಾಗಿಯೂ, ಜಿಜ್ಞಾಸುಗಳಿಗೆ ಮುಕ್ತಿಮಾರ್ಗ ಪ್ರದರ್ಶಕವಾಗಿಯೂ ಇರಬೇಕೆಂಬ ತಾತ್ಪರ್ಯ ದಿಂದ ಗ್ರಂಥಕರ್ತರು ಇದನ್ನು ಬರೆದಿದ್ದಾರೆ ಎಂದು ತಿಳಿಯಬರುತ್ತೆ.

೮—ಈ ಗ್ರಂಥದ ಟೀಕಿನಲ್ಲಿ ಸಂಸ್ಕೃತ ಶಬ್ದಗಳು ಅಲ್ಲಲ್ಲಿ ಸಂಭವಿಸುವದ್ದರಿಂದ, ಅದರ ತಿಳುವಳಿಕೆಗೋಸುಗ ಅಡ್ಡ ರೇಖೆಹಾಕಿ ಸಂಖ್ಯಾಕ್ರಮವಾಗಿ ಟಿಪ್ಪಣಿವನ್ನು ಬರದಿರುವೆನು. ಟೀಕಿನ ಪಂಕ್ತಿ ಯಲ್ಲಿ ಕಾಣುವ ಸಂಖ್ಯೆಯನ್ನು ಅಡ್ಡರೇಖೆಯ ಕೆಳಗಿನ ಸಂಖ್ಯೆಗೆ ಹೋಲಿಸಿ ನೋಡಿದಲ್ಲಿ ಅರ್ಥವು ಸುಬೋಧ ವಾಗುವದು.

೯—ಮತ್ತು ಈ ಗ್ರಂಥದಲ್ಲಿ ಯಾವ ಯಾವ ವಿಷಯಗಳು ಇರುವವೆಂಬುವದಕ್ಕೆ ನಿದರ್ಶನವಾಗಿ, ಶ್ಲೋಕಸಂಖ್ಯಾ ಕ್ರಮದಿಂದ

ಅಂತೂಯ ವಿಷಯಗಳು ಸೂಚಿಸಲ್ಪಟ್ಟಿರುವದು. ಇದನ್ನು ನೋಡು ವದ್ದರಿಂದ ತಮಗೆ ಬೇಕಾದ ವಿಷಯವನ್ನು ಶೀಘ್ರವಾಗಿ ಹುಡುಕಿ ನೋಡಿಕೊಳ್ಳಬಹುದು.

ಮುಖ್ಯವಾಗಿ ಈ ಗ್ರಂಥವನ್ನು ಆಮೂಲಾಂತವಾಗಿ ಮನ ಸ್ಸಿಟ್ಟು ಚನ್ನಾಗಿ ನೋಡುವ ಸತ್ಪುರುಷರಿಗೆ ಗ್ರಂಥ ಕರ್ತನ ಮಹಿ ಮೆಯೂ. ಗ್ರಂಥದ ಫಲವೂ ತೋರದೆ ಇರಲಾರದು.

—ವಿಜ್ಞಾಪನಾ.—

ಲೋಕದಲ್ಲಿ ಆಧುನಿಕರಾದ ತತ್ವಜ್ಞಾನಿಗಳಲ್ಲಿ ಕೆಲವರು ಸ್ವತಃ ಯೂವದಾದರು ಗ್ರಂಥಗಳನ್ನು ರಚಿಸಿದರೂ, ಅಥವಾ ಪುರಾತನರ ಗ್ರಂಥಗಳಿಗೆ ವ್ಯಾಖ್ಯಾನವಂ ಮಾಡಿದರೂ. ಅದೇನೊ ಲೋಕೋಪ ಕಾರವೇ ಸರಿ, ಆದರೆ ತಮ್ಮಿಂದ ಬರೆಯಲ್ಪಟ್ಟ ಗ್ರಂಥಗಳಲ್ಲಿ ಅನ್ಯ ಮಹಾ ಪುರುಷರ ಗ್ರಂಥಗಳನ್ನೂ ಅವರನ್ನೂ ದೂಷಿಸಿ ಬರದರೆ,ತಮಗೆ ಮಹಿಮೆಯೂ, ತಮ್ಮ ಗ್ರಂಥಕ್ಕೆ ಪ್ರತಿಷ್ಠೆಯೂ ಉಂಟಾಗುವದೆಂಬ ಈ ದುರಭಿಮಾನ ಪಿಶಾಚಕ್ಕೆ ಮಹಾ ಮಂತ್ರವೇನೋ, ಬುದ್ಧಿಶಾಲಿ ಗಳು ಯೋಚಿಸಬಹುದು.

ಮತ್ತು ತನ್ನ ತಿಳುವಳಿಕೆಯು, ತಿಳುವಳಿಕೆಯು, ತಾನು ಓದಿದ್ದೇ ಶಾಸ್ತ್ರವು, ತಾನೆ ದೊಡ್ಡವನೆಂಬ ಈ ದುರಹಂಕಾರ ವೇತಾಳಕ್ಕೆ ಸಂಚಾರ ಪ್ರದೇಶವಾವುದೊ, ಅದನ್ನು ಲಕ್ಷ್ಯವಿಡಬೇಕು.

ಬ್ರಹ್ಮಾನಂದ ಸಮುದ್ರದಲ್ಲಿ ಒಂದು ಬಿಂದು ವಿನಷ್ಟಾದರೂ ಆನಂದ ವನ್ನನುಭವಿಸುವದಕ್ಕೆ ಶಕ್ತಿ ಇಲ್ಲದೆ ಚಾತಕದಂತಿದ್ದರೂ, ಮಹಾಗಜಗಳಂತೆ ಬೇಕಾದಷ್ಟು ಪಾನವಂಮಾಡಿ, ತೃಪ್ತರಾಗಿರುವೆ ವೆಂದು ನಟಿಸುತ್ತಾ ವಿಷಯ ಭೋಗದಿಂದಲೇ ಇಂದ್ರಿಯಗಳನ್ನು ತೃಪ್ತಿಪಡಿಸುತ್ತಿರುವರು. ಮತ್ತೂ ಇವರ ಆನಂದವಾರ್ತೆಗಳು ಎಂತಿ ರುವವೆಂದರೆ, “ ಅನುಭೂತಿಂ ವಿನಾಮೂಢೋ ವೃಥಾ ಬ್ರಹ್ಮಣಿಮೋ ದತೆ ॥ ಪ್ರತಿಬಿಂಬಿತ ಶಾಖಾಗ್ರ ಫಲಾಸ್ವಾದನ ಮೋದವತ್ ., ಎಂಬ ರತ್ನಾವಳಿಯ ವಾಕ್ಯದ ತಾತ್ಪರ್ಯ ದಂತಿರುವದು.

ಇನ್ನು ಕೆಲವರು ಯುದ್ಧಭೂಮಿಯಲ್ಲಿ ನಿಲ್ಲುವ ಕ್ಷತ್ರಿಯವೀರರ ಪುತ್ರರೆಂದು ತಮ್ಮನ್ನು ತಾವು ಭಾವಿಸಿಕೊಂಡು, ಅದ್ವೈತವಾಸನಾ ರಹಿತರಾಗಿ, ಜನ್ಮಾಂತರದ ದುರ್ಬಲವಾದ ಪ್ರಾರಬ್ಧಕರ್ಮವಾಸನೆಗೆ ಕಟ್ಟು ಬಿದ್ದು ಕೀಲಿತವಾಗಿ ಶೂನ್ಯವಾಗಿರುವ ಶಸ್ತ್ರವನ್ನು ತಮ್ಮ ಕರದಲ್ಲಿ ಹಿಡಿದು ಝಳಪಿಸುತ್ತಲೂ, ಲೋಕದಲ್ಲಿ ಇರುವವರೆಲ್ಲರೂ ಮಾಂಗಲ್ಯಧಾರಿಗಳೆಂದೂ, ತಾವು ಅವರಿಗೆ ಪತಿಯಾಗಿರುವೆವೆಂದೂ ಅಂಗೈಯ್ಯಗಲ ಪುಸ್ತಕದೊಳಗೆಲ್ಲ ಚಿತ್ರಿಸುತ್ತಲೂ, ನಿತ್ಯನೈಮಿತ್ತ್ಯಕಾಮ್ಯ ಪ್ರಾಯಶ್ಚಿತ್ತಾದಿ ಶಾಸ್ತ್ರೋಕ್ತವಾದ ಸರ್ವ ಕರ್ಮಗಳನ್ನು ಕ್ರಮತಪ್ಪದೆ, ಕಾಲಮೀರದೆ, ಪವಿತ್ರವನ್ನು ಕೆಳಗಿಡದೆ ವಶಿಷ್ಠರಿಗಿಂತಲೂ, ಅಧಿಕವಾಗಿ, ನಡೆಸುವೆವೆಂತಲೂ,ಮತ್ತು ಅಗ್ನಿಷ್ಟೋಮಾದಿ ಸರ್ವ ಕ್ರತುಗಳನ್ನು ಮಾಡಿನಹುಷನಂತೆ ಇಂದ್ರನ ಪದವಿಯನ್ನು ಸೂರೆಗೊಳ್ಳುವೆವೆಂತಲೂ, ದೇಹಮಾತ್ರದಿಂದ ವಿಷಯ ಲಂಪಟರಾಗಿ, ಅಲ್ಪ ಸ್ವಲ್ಪವ್ಯುತ್ಪತ್ತಿ ಜ್ಞಾನದಿಂ ಮೆರೆಯುತ್ತ ಪುರಾತನ ವಾಕ್ಯಗಳಿಗೆ ತಮ್ಮ ವಿವಾದಕ್ಕನುಗುಣವಾಗಿ ಅರ್ಥಕಲ್ಪನೆಯಂ ಮಾಡುತ್ತಲೂ, ಅಂಗೈಯ್ಯಗಲ ಛತ್ರಿಯಂ ಹಿಡಿದು ಇದರಿಂದ ಜಗತ್ತಿಗೆ ಸೂರ್ಯತಾಪವಂ ತಪ್ಪಿಸುವೆನೆಂದು ಹೇಳುವ ಪ್ರೌಢಪ್ರತಿವಾದಿಯಂತೆ ತನ್ನ ಬೋಧೆಯಿಂದ ಸಮಸ್ತ ಜಗತ್ತನ್ನು ಸ್ವಾಧೀನಕ್ಕೆ ತರುವೆನೆಂದು ಲೋಕ ರಕ್ಷಕನಾದ ಶ್ರೀಮಹಾ ವಿಷ್ಣುವಿಗಿಂತಲೂ ಅಧಿಕವಾಗಿ ನಟಿಸುತ್ತಿರುವರು. ಇವರು ದೇಶಕಾಲಗಳನ್ನೂ, ಪ್ರತಿಕ್ಷಣದಲ್ಲಿಯೂ ಪುಟ್ಟುತ್ತಲಿರುವ ಮನೋವೃತ್ತಿಗಳ ಸ್ವರೂಪಕಾರಣ ಫಲಗಳನ್ನು ತಿಳಿದವರಾಗಿದ್ದರೆ, ತಮ್ಮ ಗ್ರಂಥಗಳಲ್ಲಿ ಈರೀತಿಯಾಗಿ ಬರೆಯುತ್ತಿರಲಿಲ್ಲ.

ಮತ್ತು ಪ್ರಪಂಚದಲ್ಲಿರುವವರೆಲ್ಲರೂ ಶಿಲೆಯಂತೆ ಜಡರೆಂತಲೂ, ತಾವು ಮಾತ್ರ ಬಿದಿರುಗಳಂತೆ ಧ್ವನಿಗೈಯ್ಯುವರೆಂತಲೂ, ತಿಳಿದುಕೊಂಡು ದೂಷಿಸುತ್ತಿರುವರು. ಇವರಿಗೆ ಪೂರ್ಣಪಂಡಿತರಾಗಿ ಆತ್ಮ

ಜ್ಞಾನದಿಂ ತೃಪ್ತರಾಗಿರುವ ಮಹಾತ್ಮರ ಅನುಗ್ರಹವಾಗಿದ್ದರೆ, ಕುಮಾ ರಸ್ವಾಮಿಯಂತೆ ಪೂಜಾರ್ಹರಾಗುತ್ತಿದ್ದರು.

—ಮತ್ತೂ ಯೇನಂದರೆ,—

ಒಂದು ಗ್ರಂಥವನ್ನಾಗಲೀ, ಅಥವಾ ಒಬ್ಬ ಮಹನೀಯನನ್ನಾ ಗಲೀ ದೂಷಿಸುವವರು ತಾವು ನಿರ್ದೋಷಿಗಳಾಗಿಯೂ, ತಮ್ಮ ಗ್ರಂಥವು ನಿರ್ದೂಷಿತವಾಗಿಯೂ ಇರಬೇಕಲ್ಲವೆ. ಸಾಕು ಇವರ ದೂಷಣಾ ಗ್ರಂಥಗಳಲ್ಲಿ ಒರುವ ಪೂಜ್ಯತೆಯು ಈ ಸ್ಥಲಕ್ಕೆ ಬೇಡಾ,-

ಯಾಕಂದರೆ,—ಈ ಗ್ರಂಥ ಕರ್ತರಾದ ಬ್ರಹ್ಮಾನಂದ ಸ್ವಾಮಿ ಗಳು ಕೇವಲ ಪರಮ ಸಾಧುಗಳು, ಮತ್ತು ಬ್ರಹ್ಮನಿಷ್ಠರು, ಹಾಗೆ ಶ್ರೋತ್ರಿಯೋತ್ತಮರು, ಇನ್ನು ಪರಮ ಹಂಸಾಶ್ರಮಿಗಳಾಗಿದ್ದರಿಂದ ಅವರನ್ನು ಕುರಿತು ನಾನು ನಮಸ್ಕರಿಸುವೆನು

ಕನ್ನಡ ಭಾಷಾಂತರ ಮಾಡಿದ
ಈ ಗ್ರಂಥಕರ್ತ,
ವೇ॥ ಸುಬ್ರಹ್ಮಣ್ಯಸ್ವಾಮಿ.

ಮೂಲಗ್ರಂಥ ಕರ್ತರಾದ

ಬ್ರಹ್ಮಾನಂದ ಸ್ವಾಮಿಗಳ

ಪ್ರಸ್ತಾವನಾ.

ಓಂ. ಸರ್ವ ಮಹಾಶಯ ಸಜ್ಜನರುಗಳಿಗೆ, ವಿದಿತವಾಗಬೇಕಾದದ್ದೇನೆಂದರೆ,— ಈಗಿನ ಕಾಲದಲ್ಲಿ ಈ ಭಾರತ ವರ್ಷವಾಸಿಗಳಾದ ಆಸ್ತಿಕ ಜನಗಳೊಳಗೆ ವೇದಾಂತ ಮತಕ್ಕೆ ವಿಶೇಷದಿಂದ ಪ್ರಚಾರವಾಗುತ್ತಿರುವದು. ಮತ್ತು ವಿಚಾರ ದೃಷ್ಟಿಯಿಂದ ನೋಡಿದ್ದೇ ಆದರೆ, ಅನ್ಯ ಸರ್ವ ಮತಗಳಿಗಿಂತ, ಈ ವೇದಾಂತ ಮತವೇ ವೇದ ಪ್ರಮಾಣ ಯುಕ್ತವಾಗಿರುವದ್ದರಿಂದ ಸರ್ವೋತ್ತಮವೆಂದು ನಿಶ್ಚಿತವಾಗುವದು. ಯಾತಕ್ಕೆಂದರೆ,— ಅನ್ಯ ಯಾವ ಯೋಗ, ಮೀಮಾಂಸಾ, ಜೈನ, ಬೌದ್ಧಾದಿಯಾದ ಮತಗಳುಂಟೋ, ಅವುಗಳೆಲ್ಲವು ನಾನಾ ಪ್ರಕಾರವಾದ ಕ್ರಿಯಾ ಜಾಲಗಳಿಂದ ಸಂಯುಕ್ತವಾಗಿರುವವು.

ಆ ಕ್ರಿಯಾ ಜಾಲದಲ್ಲಿ ಸಿಕ್ಕಿ [illegible]ರುವ ಪುರುಷನು, ಕದಾಚಿತ್ತಾದರೂ, ನಿಷ್ಕ್ರಿಯ[illegible] ಅಕೃತ್ರಿಮ ಪರಮಾನಂದಕ್ಕೆ ಅನುಭವವಂ ಮಾಡಲಾಗುವದಿಲ್ಲ. [illegible] ವೇದಾಂತ ಮಾರ್ಗದಿಂದಾದರೆ, ಕರ್ತೃತ್ವ ಭೋಕ್ತೃತ್ವಾಭಿಮಾನದಿಂದ ದೂರನಾಗಿ ತನ್ನ ನಿಷ್ಕ್ರಿಯಶಾಂತವಾದ ಆತ್ಮಸ್ವರೂಪದಲ್ಲಿ ಪುರುಷನಿಗೆ ಸ್ಥಿತಿಯಾಗುವದು. ಈ ಕಾರಣದಿಂದ ಪ್ರತ್ಯಕ್ಷವಾಗಿಯೇ, ಇದರ ಸರ್ವೋತ್ತಮತೆಯು, ಪ್ರತೀತವಾಗುವದು. ಆದ್ದರಿಂದ ಹ್ಯಾಗೂ ಈ ವೇದಾಂತ ಮತದ ಪ್ರತಿಪಾದಕವಾದ ಉಪನಿಷತ್,, ಬ್ರಹ್ಮಸೂತ್ರ, ಭಗವದ್ಗೀತಾ ಇತ್ಯಾದಿ ಅನೇಕ ಸಂಸ್ಕೃತ ಶಾಸ್ತ್ರಗಳು ಜಗತ್ತಿನಲ್ಲಿ ಪ್ರಸಿದ್ಧವಾಗಿರುವವು. ಆದಾಗ್ಯೂ ಅಲ್ಪಬುದ್ಧಿಯುಳ್ಳ ಜಿಜ್ಞಾಸುಜನಗಳಿಗೆ ಅವುಗಳ ಯಥಾರ್ಥಾಭಿಪ್ರಾಯ ತಿಳಿಯಲು ಕಠಿನವಾಗಿರುವದು. ಯಾತಕ್ಕೆಂದರೆ ಅವುಗಳ ಮೂಲ ಮತ್ತು ಭಾಷ್ಯಾದಿಗಳಲ್ಲಿ ಅನ್ಯ ಮತಗಳ ಖಂಡನ ಮಂಡನಗಳಿಗಾಗಿ ಆಚಾರ್ಯ ಜನಗಳು ಅನೇಕ ಪ್ರಕಾರವಾದ

ಸೂಕ್ಷ್ಮಯುಕ್ತಿಗಳನ್ನು ಕಥನ ಮಾಡಿರುವರು. ಹಾಗೆ ಹಿಂದೀಭಾಷೆಯಲ್ಲಿ ಯಾವ ವಿಚಾರ ಸಾಗರ, ವೃತ್ತಿ ಪ್ರಭಾಕರಾದಿಯಾದಗ್ರಂಥಗಳಿರುವವ್ರೊ, ಅವ್ರುಗಳಲ್ಲಿಯೂ ವಿಶೇಷವಾಗಿ ಖಂಡನ ಮಂಡನಗಳು ಬರೆಯಲ್ಪಟ್ಟಿರುವದು. ಆದಕಾರಣ ಅವ್ರುಚಿರಕಾಲ ಪ್ರಯಾಸವಿನಃ ಅಲ್ಪಮತಿಗಳಾದ ಪುರುಷರ ಬುದ್ಧಿಯಲ್ಲಿ ಕ್ರಮ ಪ್ರಕಾರ ಸರೀಯಾಗಿ ಆರೋಹಣವಾಗಲು ಕಠಿನವಾಗಿರುವದು. ಆದ್ದರಿಂದ ಅತಿಸುಗಮ ಅಲ್ಪವಿಸ್ತಾರ, ವಿವಾದದಿಂದ ರಹಿತವಾಗಿ, ಉಪಯೋಗ ಮಾತ್ರವಾದ ಸರ್ವವೇದಾಂತ ಸಿದ್ಧಾಂತಗಳ ಸಾರಭೂತವಾದ ಯಾವ ಈ ವಿಚಾರ ದೀಪಕ ನಾಮವುಳ್ಳ ನವೀನ ಗ್ರಂಥ ವಿರುವದೊ, ಆ ಇದನ್ನು ಯಾವ ಪುರುಷರಿಗೆ ತಮ್ಮ ಹೃದಯ ರೂಪ ಮಂದಿರದಿಂದ, ಅಜ್ಞಾನ ರೂಪ ವಾದ ಅಂಧಕಾರವನ್ನು ದೂರ ಮಾಡಲು ಇಚ್ಛೆಯಾಗುವದೊ, ಅವರಿಗೆ ಅವಶ್ಯವಾಗಿಈ ವಿಚಾರದೀಪಕ ತಮ್ಮ ಹಸ್ತದಲ್ಲಿ ತೆಗದುಕೊಂಡು ನೇತ್ರ ರೂಪಮಾರ್ಗದಿಂದ ತಮ್ಮ ಹೃದಯ ರೂಪಮಂದಿರದಲ್ಲಿ ಸ್ಥಾಪನ ಮಾಡಲು ಯೋಗ್ಯವಾಗಿರುವದು.

ಶ್ರೀ ಮತ್ಪರಮಹಂಸ,
ಸ್ವಾಮಿ ಬ್ರಹ್ಮಾನಂದ.

ಈಗ್ರಂಥದೊಳಗಿರುವಪ್ರತಿಯೊಂದು
ಶ್ಲೋಕದ ವಿಷಯಸೂಚನಾ,,

೧. ನೇ ಶ್ಲೋ—ಲ್ಲಿ.

ಮಂಗಳಾಚರಣ, ಮತ್ತು ಅನುಬಂಧ ಚತುಷ್ಟಯನಿರೂಪಣಾ.

೨.ನೇ ಶ್ಲೋ—ಲ್ಲಿ.

ಈಗ್ರಂಥದನಾಮಾನುಸಾರ ವಿಚಾರಕ್ಕೆದೀಪಕರೂಪದಿಂದವರ್ಣನಾ

೩. ನೇಶ್ಲೋ—ಲ್ಲಿ.

ಕಲಿಯುಗದಲ್ಲಿ ಯೋಗಾದಿಗಳಿಂದ ಸಿದ್ಧಿಇಲ್ಲ.ಆದ್ದರಿಂದ ವಿಚಾರವೇ ಮುಖ್ಯ

೪. ನೇ ಶ್ಲೋ—ಲ್ಲಿ.

ವಿಚಾರವಿಲ್ಲದವನು ಪಶುವಿಗೆ ಸಮಾನವೆಂಬವರ್ಣನಾ,

೫.ನೇ ಶ್ಲೋ—ಲ್ಲಿ.

ವಿಚಾರವಿನಃ ವನಕ್ಕೆಹೋಗುವದ್ದರಿಂದಲೂಸುಖವಿಲ್ಲವೆಂಬುದು.

೬. ನೇ ಶ್ಲೋ—ಲ್ಲಿ.

ವಿಚಾರವಿನಃ ಆತ್ಮಜ್ಞಾನದ ಪ್ರಾಪ್ತಿಯಾಗುವದಿಲ್ಲವೆಂಬವಿಷಯು.

೭. ನೇ ಶ್ಲೋ—ಲ್ಲಿ.

ವಿಚಾರಸ್ವರೂಪನಿರೂಪಣಾ.

೮. ನೇ ಶ್ಲೋ—ಲ್ಲಿ.

ವಿಸ್ತಾರವಿಚಾರಕೋಸುಗ, ಉಪೋಧ್ಘಾತರೀತಿಮತ್ತುಮುಮುಕ್ಷು ವಿಕಾಂತವಂಶೇರುವದು.

೯. ನೇಶ್ಲೋ—ಲ್ಲಿ.

ಮುಮುಕ್ಷು ಪುರುಷನ ವಿಚಾರ ಕ್ರಮು.

೧೦.ನೇಶ್ಲೋ—ಲ್ಲಿ.

ಮುಮುಕ್ಷು ಪುರುಷನಿಗೂ, ಅನ್ಯಪುರುಷನಿಗೂ ಸಂವಾದ ಮತ್ತುಬಾಲ್ಯಾದಿ ಅವಸ್ಥಾವಿಚಾರ.

೧೧ನೇ ಶ್ಲೋ—ಲ್ಲಿ

ಆಯುಸ್ಸು ವೃಥಾ ಹೋದುದೆಂಬುದು.

೧೨ ನೇಶ್ಲೋ—ಲ್ಲೀ

ಸತ್ಸಂಗಾದಿಗಳಂ ಮಾಡದೆ, ಆಯುಸ್ಸು ವ್ಯರ್ಥವಾಗಿ ಹೋದುದೆಂಬವಿಚಾರ

೧೩. ನೇಶ್ಲೋ—ಲ್ಲಿ

ಭಗವಂತನಕೀರ್ತನೆಯಂ ಮಾಡದೆ ಜೀವಿತಕಾಲವು ವ್ಯರ್ಥವಾದುದೆಂಬುದು.

೧೪. ನೇಶ್ಲೋ—ಲ್ಲಿ.

ಮುಮುಕ್ಷು ಪುರುಷನು ಪಶ್ಚಾತ್ತಾಪದಿಂದ ಬಾಂಧವರಂ ಕುರಿತು ವಿಚಾರವಮಾಡುವದು.

೧೫. ನೇ ಶ್ಲೋ—ಲ್ಲಿ.

ದಾರಾತ್ಮಜಸೇವಕರಂ ಕುರಿತು ವಿಚಾರ ಮಾಡುವದು.

೧೬. ನೇಶ್ಲೋ—ಲ್ಲಿ.

ಬಂಧುಜನಗಳವಿಷಯದಲ್ಲಿ ವೈರಾಗ್ಯ.

೧೭. ನೇಶ್ಲೋ—ಲ್ಲಿ.

ಯಾರಿಗಾರೂ ಸಂಬಂಧವಿಲ್ಲದ್ದರಿಂದ ತನಗಾರೂದುಃಖಭಾಗಿಗಳಾಗುವದಿಲ್ಲವೆಂಬ ವಿಷಯ.

೧೮. ನೇಶ್ಲೋ—ಲ್ಲಿ.

ಪರವೈರಾಗ್ಯವಂ ಹೊಂದಿ ಪುನಃವಿಚಾರವಂ ಮಾಡುವಿಕೆ

೧೯. ನೇಶ್ಲೋಕ—ಲ್ಲಿ.

ಪೃಥಕ್ಕಾಗಿಸ್ತ್ರೀಯಲ್ಲಿ ದೋಷದೃಷ್ಟಿವರ್ಣನೆ.

೨೦. ನೇಶ್ಲೋ—ಲ್ಲಿ.

ಮತ್ತು ಅದೇವಿಚಾರಾ

೨೧, ನೇಶ್ಲೋ—ಲ್ಲಿ

ಪುತ್ರನಲ್ಲಿ ದೋಷದೃಷ್ಟಿವರ್ಣನೆ

೨೨, ನೇಶ್ಲೋ—ಲ್ಲಿ,

ಧನದಲ್ಲಿ ದೋಷದೃಷ್ಟಿವರ್ಣನೆ

೨೩ ನೇ ಶ್ಲೋ—ಲ್ಲಿ,

ಉದರಪೋಷಣವಿಷಯದಲ್ಲಿ ವಿಚಾರ.

೨೪ ನೇಶ್ಲೋ—ಲ್ಲಿ,

ಮುಮುಕ್ಷುಪುರುಷನುತನ್ನ ಶರೀರವಿಷಯದಲ್ಲಿಶೋಚನಗ್ರೈಯ್ಯವಿಕೆ

೨೫ ನೇ ಶ್ಲೋ—ಲ್ಲಿ,

ಶರೀರದ ಕೃತಘ್ನತೆ ಯನಿರೂಪಣಾ

೨೬ ನೇ ಶ್ಲೋ—ಲ್ಲಿ,

ಶರೀರಾಸಕ್ತಿಗೆ ಹೇತುವನ್ನು ತೋರಿಸುವಿಕೆ-ಅಂದರೆ, ಅವಿದ್ಯಾಸ್ವರೂಪನಿರೂಪಣ

೨೭ ನೇಶ್ಲೋ—ಲ್ಲಿ,

ಆಯುಷ್ಯ ವಿಚಾರಾ

೨೮ ನೇಶ್ಲೋ—ಲ್ಲಿ

ಆಯುಸ್ಸುಕ್ಷಣಭಂಗುರವಾದದ್ದೆಂದುವರ್ಣಿಶಿ, ಅದಕ್ಕೆವಿಪರೀತವಾಗಿತನ್ನನಿಶ್ಚಯವಂತೋರಿಸುವಿಕೆ

೨೯ ನೇಶ್ಲೋ—ಲ್ಲಿ,

ಇಂದ್ರಿಯಗಳದುಷ್ಟತೆಯವರ್ಣನಾ

೩೦ ನೇಶ್ಲೋ—ಲ್ಲಿ,

ಮತ್ತೂ ಆ ಇಂದ್ರಿಯಗಳದೆವಿಚಾರ

೩೧ ನೇಶ್ಲೋ—ಲ್ಲಿ,

ಮನಸ್ಸಿನ ದುಷ್ಟತೆಯವರ್ಣನಾ

೩೨ ನೇಶ್ಲೋ—ಲ್ಲಿ,

ಪುನಃಮನೊ ದುಷ್ಟತೆಯವರ್ಣನಾ

೩೩ನೇ ಶ್ಲೋ—ಲ್ಲಿ,

ಈಶ್ವರನಮಾಯಾಪ್ರಬಲವರ್ಣನಾ_ಮತ್ತುಗರ್ಭನಿಶ್ಚಯಸ್ವರೂಪ,

೩೪ನೇಶ್ಲೋ—ಲ್ಲಿ,

ಪೇಳಿದಕ್ಕೆವಿಪರೀತವಾಗಿತನ್ನ ಆಚರಣವರ್ಣನಾ

೩೫ ನೇಶ್ಲೋ—ಲ್ಲಿ,

ಇಂತುಮನೊ ದುರ್ಜತೆಯನ್ನುವರ್ಣಿಸಿ,ಆಮನದಿಂ ಬೇರೆಯಾದತನ್ನ ಆತ್ಮಸ್ವರೂಪವಂತಿಳಿಯದವನಾಗಿ, ತನ್ನನ್ನು ವಿಚಾರಮಾಡುವಿಕೆ

ಅವತರಣಿಕೆ,

ಇಲ್ಲಿಪರಿಯಂತವೂ ಮಾಡಲ್ಪಟ್ಟವಿಚಾರಗಳಸಂಕ್ಷೇಪವರ್ಣನಾ

೩೬ನೇ ಶ್ಲೋ—ಲ್ಲಿ,

ಮುಮುಕ್ಷುಪುರುಷನುಗುರುವಿನಸಮೀಪವಂಪೊಂದುವದು.

೩೭ನೇ ಶ್ಲೋ —ಲ್ಲಿ.

ಶಿಷ್ಯನುಗುರುವಿನಲ್ಲಿ ಪ್ರಶ್ನೆಯಂ ಮಾಡುವಿಕೆ

೩೮ ನೆ ಶ್ಲೋ—ಲ್ಲಿ,

ಗುರುವಿನ ಉತ್ತರ

೩೯ ನೇ ಶ್ಲೋ—ಲ್ಲಿ,

ಪರಲೋಕಸಂಬಂಧ ವಿಷಯದಲ್ಲಿ ಪುನಃಶಿಷ್ಯನು ಪ್ರಶ್ನೆಯಂಮಾಡುವಿಕೆ

೪೦ ನೇ ಶ್ಲೋ—ಲ್ಲಿ,

ಅದಕ್ಕೆಗುರು ಉತ್ತರವಂ ಪೇಳುವಿಕೆ

೪೧ ನೇ ಶ್ಲೋ—ಲ್ಲಿ,

ಧರ್ಮವಿಷಯವಾಗಿ ಶಿಷ್ಯನು ಮಾಡುವ ಮೂರುಪ್ರಶ್ನೆಗಳು.

೪೨ ನೇಶ್ಲೋ—ಲ್ಲಿ,

ಅವುಗಳಿಗೆ ಗುರು ಪೇಳುವ ಉತ್ತರಗಳು,

೪೩ ನೇಶ್ಲೋ—ಲ್ಲಿ,

ಜಗದ್ವಿಷಯದಲ್ಲಿಶಿಷ್ಯನು ಮಾಡುವ ಐದು ಪ್ರಶ್ನೆಗಳು,

೪೪ ನೇಶ್ಲೋ—ಲ್ಲಿ,

ಐದುಪ್ರಶ್ನೆಗಳಿಗೂ ಒಂದೇ ಶ್ಲೋಕದಲ್ಲಿಗುರುಹೇಳುವಉತ್ತರ

೪೫ ನೇ ಶ್ಲೋ—ಲ್ಲಿ,

ಪುನಃಜಗದ್ವಿಷಯದಲ್ಲಿಶಿಷ್ಯನಪ್ರಶ್ನೆ,ಅಂದರೆ, ಸೃಷ್ಟಿಯವಿಷಯ ವಾಗಿ

೪೬ ನೇಶ್ಲೋ—ಲ್ಲಿ.

ಅದಕ್ಕೆ ಗುರುವಿನ ಉತ್ತರ

೪೭ ನೇಶ್ಲೋ—ಲ್ಲಿ.

ಜಗತ್ತಿನಸ್ಥಿತಿವಿಷಯದಲ್ಲಿ ಶಿಷ್ಯನಪ್ರಶ್ನೆ.

೪೮ ನೇಶ್ಲೋ—ಲ್ಲಿ

ಅದಕ್ಕೆಗುರುವಿನ ಉತ್ತರ

೪೯ ನೇಶ್ಲೋ—ಲ್ಲಿ.

ಕರ್ಮವಿಷಯವಾಗಿ ಶಿಷ್ಯನ ಪ್ರಶ್ನೆ,

೫೦ ನೇಶ್ಲೋ—ಲ್ಲಿ,

ಅದಕ್ಕೆ ಗುರುವಿನ ಉತ್ತರ

೫೧ ನೇಶ್ಲೋ—ಲ್ಲಿ

ಪುನಃ ಸ್ಥಿತಿವಿಷಯದಲ್ಲಿ ಶಿಷ್ಯನ ಪ್ರಶ್ನೆ,

೫೨ ನೇಶ್ಲೋ—ಲ್ಲಿ,

ಅದಕ್ಕೆಗುರು ಶ್ರುತಿಸಮ್ಮತವಾಗಿಹೇಳುವ ಉತ್ತರ.

೫೩ ನೇಶ್ಲೋ—ಲ್ಲಿ,

ಜಗತ್ತಿನಪ್ರಳಯ ವಿಷಯದಲ್ಲಿ ಶಿಷ್ಯನಪ್ರಶ್ನೆ,

೫೪ ನೇಶ್ಲೋ—ಲ್ಲಿ,

ಅದಕ್ಕೆ ಗುರುವಿನ ಉತ್ತರ,

೫೫ ನೇಶ್ಲೋ---ಲ್ಲಿ,

ದೇವ ಪೂಜಾವಿಷಯವಾಗಿ ಶಿಷ್ಯನುಮಾಡುವಮೂರುಪ್ರಶ್ನೆಗಳು,

೫೬ ನೇಶ್ಲೋ-ಲ್ಲಿ,

ಅದಕ್ಕೆ ಗುರು ಎರಡು ಶ್ಲೋಕಗಳಿಂದಹೇಳುವಉತ್ತರ,

೫೭ ನೇಶ್ಲೋ--ಲ್ಲಿ,

ಪುನಃ ಗುರು ವಿನ ಉತ್ತರ

೫೮ ನೇಶ್ಲೋ---ಲ್ಲಿ,

ದೇವನನಿವಾಸವಿಷಯವಾಗಿ, ಶಿಷ್ಯನ ಮೂರುಪ್ರಶ್ನೆಗಳು,

೫೯ ನೇಶ್ಲೋ---ಲ್ಲಿ,

ಅವುಗಳಿಗೆಗುರು ಒಂದೇ ಶ್ಲೋಕದಿಂದನಿರೂಪಿಸುವಉತ್ತರ—ಅಂದರೆ, ಜಗದುತ್ಪತ್ತಿಮೊದಲುಗೊಂಡುಇಲ್ಲಿನವರಿವಿಗೂ, ತತ್ಪದಾರ್ಥವಾದ ಈಶ್ವರನಂ ತಟಸ್ಥಲಕ್ಷಣದಿಂದನಿರೂಪಿಸಲ್ಪಟ್ಟಿರುವದು,

೬೦ ನೇಶ್ಲೋ---ಲ್ಲಿ,

ತ್ವಂಪದಾರ್ಥವಾದಜೀವನವಿವೇಚನ ಕ್ಕೊಸುಗವಾಗಿ ಶಿಷ್ಯನುಮಾಡುವ ಅಧ್ಯಾತ್ಮವಿಷಯುಕವಾದ ಏಳುಪ್ರಶ್ನೆಗಳು,

೬೧ ನೇಶ್ಲೋ---ಲ್ಲಿ,

ಅವುಗಳಲ್ಲಿ ಆರು ಪ್ರಶ್ನೆಗಳನ್ನು ನಿಷೇಧಪಡಿಸಿ, ಅಂತ್ಯ ಪ್ರಶ್ನೆಯುನ್ನಂಗಿಕರಿಸಿ ಗುರು ಪೇಳುವ ಉತ್ತರ

೬೨ ನೇಶ್ಲೋ---ಲ್ಲಿ,

ತನ್ನಸ್ವರೂಪಬೋಧಾರ್ಥವಾಗಿ ಪುನಃಶಿಷ್ಯನಪ್ರಶ್ನೆ,

೬೩ ನೇಶ್ಲೋ--ಲ್ಲಿ,

ಅದಕ್ಕೆ ಗುರುವಿನ ಉತ್ತರ

೬೪ ನೇಶ್ಲೋ--ಲ್ಲಿ,

ಕರ್ತೃತ್ವ ಭೋಕ್ತೃತ್ವವಿಷಯದಲ್ಲಿ ಶಿಷ್ಯನು ಮಾಡುವಪ್ರಶ್ನೆ,

೬೫ ನೇ ಶ್ಲೋ--ಲ್ಲಿ,

ಅದಕ್ಕೆ ಪುನಃ ಗುರುವಿನ ಉತ್ತರ

೧೬ ನೇಶ್ಲೋ---ಲ್ಲಿ,

ಆತ್ಮನಬಂಧ,ಮತ್ತುಮೋಕ್ಷವಿಷಯದಲ್ಲಿಶಿಷ್ಯನಮೂರುಪ್ರಶ್ನೆಗಳು

೧೭ ನೇಶ್ಲೋ--ಲ್ಲಿ,

ಅವುಗಳಿಗೆ ಒಂದೇ ಶ್ಲೋಕದಿಂದ ಗುರು ಉತ್ತರವಂಪೇಳುವದು.

೧೮ ನೇ ಶ್ಲೋ---ಲ್ಲಿ,

ಪುನಃ ಜೀವಾತ್ಮನವಿಶೇಷಬೋಧಾರ್ಥವಾಗಿ,ಶಿಷ್ಯನಮೂರುಪ್ರಶ್ನೆಗಳು.

೧೯ ನೇಶ್ಲೋ——ಲ್ಲಿ,

ಅವುಗಳಿಗೆ ಗುರುಕ್ರಮವಾಗಿ ಮೂರುಶ್ಲೋಕಗಳಿಂದ ಉತ್ತರವಂಪೇಳುವಿಕೆ ಮೊದಲನೆ ಪ್ರಶ್ನೆಗೆ ಉತ್ತರ.

೨೦ ನೇ ಶ್ಲೋ—ಲ್ಲಿ,

ಎರಡನೆ ಪ್ರಶ್ನೆಗೆ ಉತ್ತರ

೨೧ ನೇ ಶ್ಲೋ—ಲ್ಲಿ,

ಮೂರನೆ ಪ್ರಶ್ನೆಗೆ ಉತ್ತರ ಅಂದರೆ,-

ಜೀವನ ತಟಸ್ಥಲಕ್ಷಣವು ಇಲ್ಲಿನವರಿಗುನಿರೂಪಿಸಲ್ಪಟ್ಟಿರುವದು. ಇದಕ್ಕೆ ಪೂರ್ವ ಈಶ್ವರನತಟಸ್ಥಲಕ್ಷಣವುನಿರೂಪಿಸಲ್ಪಟ್ಟಿರುವದು.

೨೨ ನೇಶ್ಲೋ—ಲ್ಲಿ,

ಜೀವೇಶ್ವರರ ಸ್ವರೂಪಲಕ್ಷಣವಿಷಯದಲ್ಲಿ ಶಿಷ್ಯನುಮಾಡುವ ಮೂರುಪ್ರಶ್ನೆಗಳು.

೨೩ನೇ ಶ್ಲೋ--ಲ್ಲಿ,

ಅವುಗಳಿಗೆ ಗುರು ಒಂದೇ ಶ್ಲೋಕದಿಂದ ಪೇಳುವ ಉತ್ತರ.

೨೪ ನೇಶ್ಲೋ---ಲ್ಲಿ,

ಜೀವೇಶ್ವರರ ಐಕತೆಯ ವಿಷಯದಲ್ಲಿ ಶಿಷ್ಯನಶಂಕಾ

೨೫ ನೇಶ್ಲೋ---ಲ್ಲಿ,

ಅದಕ್ಕೆ ಗುರುವಿನ ಸಮಾಧಾನ.

೨೬ ನೇಶ್ಲೋ---ಲ್ಲಿ,

ಮುಮುಕ್ಷುಗಳಿಗಾಗಿಚಿತ್ತಶುದ್ಧಿವಿಷಯದಲ್ಲಿಮಾಡುವಶಿಷ್ಯನಪ್ರಶ್ನೆ.

೨೭ ನೇ ಶ್ಲೋ---ಲ್ಲಿ,

ಅದಕ್ಕೆ ಗುರುವಿನ ಉತ್ತರ.

೨೮ ನೇಶ್ಲೋ---ಲ್ಲಿ,

ಪ್ರಮಾಣಗತ ಸಂಶಯ ವಿಷಯದಲ್ಲಿ ಪುನಃ ಶಿಷ್ಯನಪ್ರಶ್ನೆ

೨೯ ನೇಶ್ಲೋ---ಲ್ಲಿ,

ಅದಕ್ಕೆ ಗುರುವಿನ ಉತ್ತರ

೩೦ ನೇಶ್ಲೋ---ಲ್ಲಿ.

ಜ್ಞಾನ ಉಪಾಸನಾ, ಕರ್ಮಗಳ ವಿಷಯದಲ್ಲಿ.ಅಂದರೆ,ಪ್ರಮೇಯಗತ ಸಂಶಯವಿಷಯವಾಗಿ ಪ್ರಶ್ನೆ

೩೧ ನೇಶ್ಲೋ---ಲ್ಲಿ,

ಅದಕ್ಕೆ ಉತ್ತರ

೩೨ ನೇಶ್ಲೋ---ಲ್ಲಿ.

ಜ್ಞಾನಸಾಧನ ಮತ್ತು ಸ್ವರೂಪಬೋಧಾರ್ಥವಾಗಿ, ಶಿಷ್ಯನಪ್ರಶ್ನೆ.

೩೩ ನೇಶ್ಲೋ---ಲ್ಲಿ,

ಎರಡುಶ್ಲೋಕಗಳಿಂದಗುರುಉತ್ತರವಂಪೇಳುವಿಕೆಂಬುದಕ್ಕೆಉತ್ತರ.

೩೪ ನೇಶ್ಲೋ---ಲ್ಲಿ,

ಎರಡನೆ ಪ್ರಶ್ನೆಗೆ ಉತ್ತರ

೩೫ ನೇಶ್ಲೋ---ಲ್ಲಿ,

ಪರವೈರಾಗ್ಯ ಪೂರ್ವಕ ಜೀವನ್ಮುಕ್ತಿಯಸುಖದಪ್ರಾಪ್ತ್ಯರ್ಥವಾಗಿ, ಶಿಷ್ಯನುಮಾಡುವಪ್ರಶ್ನೆ—ಅಂದರೆ,ಪರಮಾನಂದಪ್ರಾಪ್ತಿವಿಷಯವಾಗಿ.

೩೬ ನೇ ಶ್ಲೋ---ಲ್ಲಿ,

ಅದಕ್ಕೆ ಒಂದು ಶ್ಲೋಕದಿಂದಲೇ ಉತ್ತರ

೪೭ ನೇಶ್ಲೋ---ಲ್ಲಿ,

ಕರ್ಮಸದ್ಭಾವಸಂಶಯದಿಂದ, ಸುಖ ದುಃಖಗಳಿಗೂಸದ್ಭಾವಉಂಟಾಗುವದೆಂಬಅಭಿಪ್ರಾಯವಂಪಿಡಿದುಪುನಃಶಿಷ್ಯನುಮಾಡುವಪ್ರಶ್ನೆ.

೪೮ನೇಶ್ಲೋ--ಲ್ಲಿ.

ಅದಕ್ಕೆ ಗುರುವಿನ ಉತ್ತರ

೪೯ನೇ ಶ್ಲೋ--ಲ್ಲಿ.

ವಿಷಯ ಸುಖದಿಂದಾ ಪೂರ್ವಕ್ಕೆ, ಆತ್ಮಸುಖಪ್ರಾಪ್ತಿಯ ಕೋರಿಕೆ ಇಂದೊಡಗೂಡಿ, ಶಿಷ್ಯನು ಮಾಡುವಪ್ರಶ್ನೆ.

೫೦ ನೇಶ್ಲೋ---ಲ್ಲಿ,

ಪುನಃ ಅದಕ್ಕೆ ಗುರುವಿನ ಉತ್ತರ.

೫೧ ನೇ ಶ್ಲೋ-- ಲ್ಲಿ

ಸರ್ವದುಃಖ ನಿವೃತ್ತಿರೂಪವಾದ ಮೋಕ್ಷದ ದ್ವಿತೀಯಾಂಶವನ್ನು ಜೀವಿಸುತ್ತಿರುವಾಗಲೇ ಪಡೆಯಲೋಸುಗ, ಪುನಃಶಿಷ್ಯನಪ್ರಶ್ನೆ

೫೨ನೇಶ್ಲೋ---ಲ್ಲಿ,

ಅದಕ್ಕೆ ಗುರುವಿನ ಉತ್ತರ, ಅಂದರೆ, ಜೀವನ್ಮುಕ್ತಿಯನಿರತಿಶಯ ಪರಮಾನಂದಕ್ಕೆ ಹೇತುವಾದ ನಿರ್ವಿಕಲ್ಪಸಮಾಧಿಯನ್ನು ಬೋಧಿಸುವಿಕೆ.

೫೩ ನೇ ಶ್ಲೋ---ಲ್ಲಿ.

ಜ್ಞಾನೋದಯಕ್ಕೆಪೂರ್ವದಲ್ಲಿನಿರ್ವಿಕಲ್ಪಸಮಾಧಿಯಕರ್ತವ್ಯವೋ, ಅಲ್ಲದೆ ಜ್ಞಾನವಾದನಂತರವೂ ಕರ್ತವ್ಯವಿರುವದೋ; ಎಂಬಸಂಶಯದಿಂದೊಡಗೂಡಿ, ಪುನಃಶಿಷ್ಯನು ಮಾಡುವಪ್ರಶ್ನೆ.

೫೪ನೇ ಶ್ಲೋ---ಲ್ಲಿ.

ಅದಕ್ಕೆ ಗುರುವಿನ ಉತ್ತರ

೫೫ ನೇಶ್ಲೋ---ಲ್ಲಿ.

ಚಿತ್ತವೃತ್ತಿಯ ನಿರೋಧಕಸಾಧನವಉಪಾಯವಂತಿಳಿಯಲೋಸುಗ, ಪುನಃಶಿಷ್ಯನಪ್ರಶ್ನೆ,

೯೬ ನೇ ಶ್ಲೋ---ಲ್ಲಿ.

ಗುರುಅದಕ್ಕೆದೃಷ್ಟಾಂತಸಹಿತವಾಗಿಪೇಳುವಉತ್ತರ

೯೭ ನೇ ಶ್ಲೋ---ಲ್ಲಿ.

ಯೋಗದಸ್ವರೂಪವಂತಿಳಿಯಲೋಸುಗ ಶಿಷ್ಯನಮೂರುಪ್ರಶ್ನೆ,

೯೮ ನೇ ಶ್ಲೋ---ಲ್ಲಿ,

ಅವುಗಳಿಗೆ ಗುರು ಏಕಶ್ಲೋಕ ದಿಂದಲೇಪೇಳುವಉತ್ತರ.

೯೯ ನೇ ಶ್ಲೋ---ಲ್ಲಿ,

ದೈವ ಪೌರುಷ ಬಲಾಬಲಗಳವಿಷಯದಲ್ಲಿ ಶಿಷ್ಯನ ಎರಡುಪ್ರಶ್ನೆ,

೧೦೦ನೇ ಶ್ಲೋ---ಲ್ಲಿ,

ಅವಕ್ಕೆ ದೃಷ್ಟಾಂತಸಹಿತವಾಗಿ, ಒಂದೇ ಶ್ಲೋಕ ದಿಂದ ಗುರುಪೇಳುವಉತ್ತರ

೧೦೧ನೇ ಶ್ಲೋ---ಲ್ಲಿ,

ಜಡ ಚೇತನವಿಷಯದಲ್ಲಿ ಶಿಷ್ಯನುಮಾಡುವಪ್ರಶ್ನೆ,

೧೦೨ನೇ ಶ್ಲೋ---ಲ್ಲಿ,

ಅದಕ್ಕೆ ಬಹುಸಾರವಾಗಿ ಗುರು ಪೇಳುವ ಉತ್ತರ,

೧೦೩ನೇ ಶ್ಲೋ-- ಲ್ಲಿ,

ಸರ್ವಕರ್ಮತ್ಯಾಗ ರೂಪವಾದ ಸನ್ಯಾಸದಿಂದಲೇ ಮೋಕ್ಷವೊ, ಸರ್ವಕರ್ಮಯುಕ್ತವಾದಗೃಹಸ್ಥಧರ್ಮದಿಂದಲೇಮೋಕ್ಷವೊ,ಎಂಬ ಶಂಕೆ ಇಂದೊಡಗೂಡಿ, ಪುನಃಶಿಷ್ಯನುಮಾಡುವಎರಡುಪ್ರಶ್ನೆಗಳು

೧೦೪ನೇ ಶ್ಲೋ---ಲ್ಲಿ,

ಅದಕ್ಕೆಮೂರುಶ್ಲೋಕಗಳಿಂದ ಗುರುಕ್ರಮವಾಗಿಉತ್ತರವಂಪೇಳುವಿಕೆ ಅಂದರೆ,—ಎರಡಕ್ಕೂಸಮವಾಗಿ. ಉತ್ತರವಂನಿರೂಪಿಸುವರು,

ಪ್ರಥಮ ಪ್ರಶ್ನೆಗೆ ಉತ್ತರ,

೧೦೫ ನೇ ಶ್ಲೋ---ಲ್ಲಿ,

ದ್ವಿತೀಯಪ್ರಶ್ನೆಗೆ ಉತ್ತರ,ಇಲ್ಲಿಸನ್ಯಾಸಿಯ ಚರಿತ್ರೆಯಂಪೇಳುವರು,

೧೦೬ ನೇ ಶ್ಲೋ---ಕ್ಕೆ,

ಈಗ ಗೃಹಸ್ಥನಧರ್ಮವಂವಿವರಿಸುವರು.

೧೦೭ ನೇ ಶ್ಲೋ---ಕ್ಕೆ,

ಇಲ್ಲಿನಪರ್ಯಂತವೂ ಹೇಳಲ್ಪಟ್ಟ ವೇದಾಂತರಹಸ್ಯವೆಲ್ಲವನ್ನೂ ಕೇಳಿ ತೃಪ್ತನಾದ ಶಿಷ್ಯನುಈಗತನ್ನ ಕೃತಕೃತ್ಯತೆಯನ್ನುಸೂಚನೆಗೈಯ್ಯುತ್ತಾ ಗುರುವಿನಲ್ಲಿ ಅನುಜ್ಞೆಯಂಬೇಡುವಿಕೆ

೧೦೮ ನೇ ಶ್ಲೋ---ಕ್ಕೆ,

ಶಿಷ್ಯನಕೃತಕೃತ್ಯತೆಯನ್ನೂಹಾಗೆಪ್ರಾರ್ಥನೆಯನ್ನೂ ಕೇಳಿ,ತನ್ನ ಉಪದೇಶದಪರಿಶ್ರಮಕ್ಕೆಸಫಲತೆಯನ್ನು ನೋಡಿ, ಅತ್ಯಂತಪ್ರಸನ್ನತೆಯಂಪೊಂದಿದ ಗುರುವು ಈಗಮೂರು ಶ್ಲೋಕಗಳಿಂದ ಉಪದೇಶಗೈಯುವವರಾಗಿ, ಶಿಷ್ಯನಿಗೆ ಅನುಜ್ಞೆಯಂಕೊಡುವಿಕೆ ಅಂದರೆ, ಬಾಹ್ಯಶರೀರದವ್ಯಾಪಾರದಲ್ಲಿಇರಬೇಕಾದರೀತಿಯನ್ನು ಅಪ್ಪಣೆಕೊಡಿಸುತ್ತಾರೆ

೧೦೯ ನೇ ಶ್ಲೋ---ಕ್ಕೆ,

ಆಂತರಿಕವಾದಮನದವ್ಯವಹಾರದಲ್ಲಿಇರಬೇಕಾದರೀತಿ.

೧೧೦ನೇ ಶ್ಲೋ---ಕ್ಕೆ,

ಎಲ್ಲಾಗ್ರಂಥದಮುಖ್ಯರಹಸ್ಯವಂವರ್ಣಿಸುತ್ತಾ ಗುರು ಉಪದೇಶದ ಸಮಾಪ್ತಿಯಂಮಾಡುವಿಕೆ,

೧೧೧ ನೇ ಶ್ಲೋ —ಕ್ಕೆ,

ಗ್ರಂಥಕರ್ತರು ಗ್ರಂಥೋಪಸಂಹಾರವಂ ಮಾಡುವಿಕೆ.

೧೧೨ ನೇಶ್ಲೋ - ಕ್ಕೆ,

ಗ್ರಂಥಾಧ್ಯಯನದ ಫಲವರ್ಣನೆ

೧೧೩ ನೇ ಶ್ಲೋ---ಕ್ಕೆ,

ಗ್ರಂಥಕರ್ತರು ಈ ಗ್ರಂಥವನ್ನು ತಮ್ಮ ಇಷ್ಟ ದೇವನಿಗೆ ಅರ್ಪಣವಂ ಮಾಡುವಿಕೆ



ಓಂ

ಶ್ರೀ ಪರಮಾತ್ಮನೇನಮಃ.

ಶ್ರೀವಿಚಾರ ದೀಪಕಪ್ರಾರಂಭಃ.

(ಮಂಗಲಮ್.)

ಅನುಬಂಧ ಚತುಷ್ಟಯಂ.

ಶ್ಲೋ॥ ಫಣೀಂದ್ರಭೋಗಾಮಲತಲ್ಪಶಾಯಿನೇ ।
ದುರಂತದುರ್ಜ್ಞೇಯವಿಚಿತ್ರಮಾಯಿನೇ ।
ಸಮಸ್ತತತ್ವೈಕ ಹೃದಬ್ಜಯಾಯಿನೇ ।
ನಮೋಸ್ತುಮೇಶಾಯವಿಮೋಕ್ಷದಾಯಿನೇ॥೧॥

ನತ್ವಾಪಾದಾಂಬುಜಂ ವಿಷ್ಣೋರಲ್ಪಧೀಬೋಧಸಿದ್ಧಯೇ।
ಭಾವಾರ್ಥಭಾಸಿನೀಂಕುರ್ವೇ ಭಾಷಾಟೀಕಾಂಯಥಾಮತಿ ॥

ಟೀಕಾ—ಶ್ರೀಗಣಪತಯೇನಮಃ ॥ ಪ್ರಾರಬ್ಧಗ್ರಂಥದ ನಿರ್ವಿಘ್ನಪರಿಸಮಾಪ್ತ್ಯರ್ಥವಾಗಿ ಶಾಸ್ತ್ರಾಜ್ಞೆಯಿಂದಲೂ, ಮತ್ತು ಪರಂಪರಾ ವೃದ್ಧವ್ಯವಹಾರದಿಂದಲೂ, ಕರ್ತವ್ಯತೆಗೆಪ್ರಾಪ್ತವಾದ ಯಾವಮಂಗಲಾಚರಣವಿರುವದೋ, ಅದನ್ನು ಪ್ರ[illegible]ಮದೊಳ್ ತನ್ನಹೃದಯದಲ್ಲಿ ಅನು[೧]ಷ್ಠಾನವಂಮಾಡಿ, ಪುನಃ ಅನ್ಯಜನಗಳಪ್ರವೃತ್ತಿಗೋಸುಗ ಗ್ರಂಥಕಾರನು ಗ್ರಂಥದಆದಿಯಲ್ಲಿ ಒಂದು ಶ್ಲೋಕದಿಂದ ವರ್ಣನೆಯಂ ಮಾ

೧ [illegible]

ದಿರುವನು. ॥ಆಮಂಗಳವು, "ವಸ್ತು ನಿರ್ದೇಶರೂಪವೆಂದೂ, ಆಶೀರ್ವಾದರೂಪವೆಂದೂ, ಮತ್ತೂ ನಮಸ್ಕಾರರೂಪವೆಂದೂ,, ಈಭೇದದಿಂದ ಮೂರು ಪ್ರಕಾರವಾಗಿರುವದು. ॥ಅವುಗಳಲ್ಲಿ ತನ್ನ ಇಷ್ಟದೇವತಾ ಅಥವಾಪರಮಾತ್ಮನ ಕೇವಲಸ್ವರೂಪಮಾತ್ರದಯಾವನಿರೂಪಣವಿರುವದೋ, ಅದನ್ನು ವಸ್ತುನಿರ್ದೇಶ ಮಂಗಳವೆಂದು ಹೇಳುವರು. ಮತ್ತು ಯಾವದು ಇಷ್ಟದೇವತೆಯು ಅಥವಾಪರಮಾತ್ಮನ ಸ್ಮರಣಪೂರ್ವಕ-ವಾದ ಶಿಷ್ಯರ ಕಲ್ಯಾಣಾರ್ಥವಾಗಿ ಆಶೀರ್ವಾದದ ನಿರೂಪಣ ವಿರುವದೋ, ಅದು ಆಶೀರ್ವಾದ ರೂಪಮಂಗಳ ವೆನ್ನಲ್ಪಡುವದು. " ಹಾಗೆ ಇಷ್ಟದೇವತಾಅಥವಾಪರಮಾತ್ಮನಂ ಕುರಿತು ಯಾವನಮಸ್ಕಾರ ಮಾಡತಕ್ಕದ್ದೋ ಅದುನಮಸ್ಕಾರ ರೂಪಮಂಗಳವೆನಿಸಿ ಕೊಳ್ಳುವದು" ಆದರೆ, ಅವುಗಳಲ್ಲಿಮೂರನೆಯದಾದಯಾವನಮಸ್ಕಾರ ರೂಪಮಂಗಳ ವಿರುವದೋಅದು ಈಸ್ಥಲದಲ್ಲಿ ಮಾಡಲ್ಪಡುವದು ॥ಫಣೀಂದ್ರಯಿತಿ"(ಫಣೀಂದ್ರಭೋಗಾ ಮಲತಲ್ಪಶಾಯಿನೆ) ಅಂದರೆ, ಫಣೀದ್ರ-ಯಾವ ಶೇಷನಾಗ ಆದರ ಭೋಗ-ಅಂದರೆ, ಶರೀರ ರೂಪವಾದ ಯಾವನಿರ್ಮಲವೆನಿಪ ಬಿಳೀಹಾಸಿಕೆ ಇರುವದೋ, ಅದರಮೇಲೆ ಸರ್ವದಾಕ್ಷೀರಸಾಗರದಲ್ಲಿ ಯಾವನು ಶಯನಗೈಯ್ಯುತ್ತಿರುವನೊ, ಮತ್ತು(ದುರಂತದುಜ್ಞೇಯ ವಿಚಿತ್ರಮಾಯಿನೆ) ಅಂದರೆ, ಯಾವದರಅಂತವಂಗ್ರಹಿಸಲುಅತ್ಯಂತದುಷ್ಕರ ವಾಗಿರುವದೋ, ಮತ್ತು ಯಾವದರ ಯಥಾರ್ಥವಂ ತಿಳಿಯುವದೂಕೂಡ, ಅತ್ಯಂತ ಕಠಿನವಾಗಿರುವದೋ, ಹಾಗೆಯಾವನಲ್ಲಿ ನಾನಾಪ್ರಕಾರವಾದ ವಿಚಿತ್ರಶಕ್ತಿಗಳಿರುವವೋ,ಹೀಗೆ ಯಾವಅನಿರ್ವಚನೀಯವಾದ ಅಘಟಘಟನಾಪಟೀಯಸೀ, ಅಂದರೆ ಯಾವಮಾತೂ ಯಾವಪ್ರಕಾರದಲ್ಲಿಯೂ ಘಟಿಸಲಶಕ್ಯವಾಗಿರುವದೋ, ಅಂಥಾದ್ದನ್ನು ಘಟಣ ಮಾಡಿಕೊಡುವದರಲ್ಲಿ ಕುಶಲವಾದ ಮಾಯಾಶಕ್ತಿ ಯಿರುವದೋ, ಅದಕ್ಕೆಯಾವನು ಅಧಿಷ್ಠಾನಪತಿಯಾಗಿರುವನೋ, "ಹಾಗೆಗೀತೆಯುಸಪ್ತಮಾಧ್ಯಾಯದಲ್ಲಿ ಶ್ರೀಕೃಷ್ಣಭಗವಂತನು ತನ್ನಮುಖದಿಂದಲೇ ಹೇಳಿ

---

೨ ಆಮಂಗಳ ಪರಿಹಾರಾರ್ಥವಾಗಿ ಅಜ್ಞಾನ ನಿವೃತ್ತಿಗಾಗಿ.

ದ್ದೇನೆಂದರೆ,- " ದೈವೀಹ್ಯೇಷಾ ಗುಣಮಯೀ ಮಮ ಮಾಯಾದು ರತ್ಯಯಾ-,, ಅರ್ಥ—ಎಲೆ ಅರ್ಜುನ, ಹೀಗೆಯಾದ ತ್ರಿಗುಣಮಯ ವಾದ ನನ್ನ ದೈವೀ ಶಕ್ತಿ ರೂಪವಾದ ಮಾಯೆ ಇರುವದೋ, ಹಾಗೆ-ದುರತ್ಯಯಾ, - ಅಂದರೆ,ಅದನ್ನು ದಾಟುವದು ಅತ್ಯಂತ ಕಠಿನವಾಗಿರು ವದುಎಂದುಹೇಳಿರುವನು,,ಮೂಲಶ್ಲೋಕದ ಪ್ರಥಮ ಪಾದದಲ್ಲಿ ಯಾ ವನನ್ನು ನಿರೂಪಣ ಮಾಡಿರುವರೋ,ಅಂದರೆ,- ಯಾವನು ಸರ್ವದಾಕ್ಷೀ ರಸಾಗರದಲ್ಲಿ ಶೇಷನಾಗವೆಂಬಹಾಸಿಕೆಯಮೇಲೆ ಶಯನಮಾಡಿರುವನೋ ಅವನು ಈನಿರೂಪಣೆಯಲ್ಲಿ ಏಕದೇಶೀಆದ್ದರಿಂದ ಭಗವಂತನಿಗೆ ಪರಿಚ್ಛಿ ನ್ನತ್ವಸಿದ್ಧಿಯಾಗುವದು. ಆದ್ದರಿಂದೀಗ ಆಶಂಕೆಯನಿರಾಕರಣಾರ್ಥ ವಾಗಿ ಮೂರನೆಪಾದವನ್ನು ಹೇಳಿರುವರು. (ಸಮಸ್ತತತ್ವೈಕಹೃದಬ್ಜ ಯಾಯಿನೆ)ಅಂದರೆ,ಯಾವನ್ಮಾತ್ರ ಜಗತ್ತಿನಲ್ಲಿಚರಾಚರಭೂತಪ್ರಾಣಿ ಗಳಿರುವವೋ ಅವುಗಳೆಲ್ಲದರ ಹೃದಯ ರೂಪಕ ಮಲದಲ್ಲಿ ಗಮನ ಮಾ ಡಿರುವಂಥಾವನು. ಅಂದರೆ- ಅವುಗಳ ಅಂತಃಕರಣ ದಲ್ಲಿ ಅಂತರ್ಯಾ ಮಿರೂಪ ದಿಂದಿರುವಂಥಾವನು. ಈ ವಿಷಯವಾದರೂಗೀತೆಯದಶಮಾ ಧ್ಯಾಯದಲ್ಲಿ " ಅಹ ಮಾತ್ಮಾ ಗುಡಾಕೇಶ ಸರ್ವಭೂತಾಶಯಸ್ಥಿತಃ ಅರ್ಥ—ಹೇಗುಡಾಕೇಶ ಅಂದರೆ,-ಎಲೆ ಅರ್ಜುನಾ, ನಾನು ಸರ್ವಭೂ ತಪ್ರಾಣಿಗಳ ಅಂತಃ ಕರಣದಲ್ಲಿ ಸಾಕ್ಷಿಯಾದ ಆತ್ಮರೂಪದಿಂದ ಇದ್ದು ಕೊಂಡಿರುವೆನು ಎಂದು ನಿರೂಪಿಸಲ್ಪಟ್ಟಿರುವದು. " ಹಾಗೆ (ವಿಮೋ ಕ್ಷದಾಯಿನೆ) ಎಂದರೆ,-ಯಾವನು ತನ್ನನ್ನು ಶ್ರದ್ಧಾಪೂರ್ವಕವಾಗಿ ಸ್ಮರಣ ಮಾಡುವಂಥಾ ಭಕ್ತಜನಗಳನ್ನು ಕುರಿತು ಮೋಕ್ಷ ಪದವ ನ್ನು ಕೊಡುವಂಥಾವನಾಗಿರುವನೋ, ಈ ವಾರ್ತೆಯೂ ಕೂಡ ಗೀತೆ ಯ ಹನ್ನೆರಡನೆ ಅಧ್ಯಾಯದಲ್ಲಿ " ತೇಷಾಮಹಂಸ ಮುದ್ಧರ್ತಾಮೃ ತ್ಯುಸಂಸಾರ ಸಾಗರಾತ್ । ಭವಾಮಿನಚಿರಾತ್ಪಾರ್ಥ ಮಯ್ಯಾವೇಶಿತ ಚೇತಸಾಮ್ ,, ಅರ್ಥ-ಹೇ ಪಾರ್ಥ, ಅಂದರೆ,-ಎಲೆ ಅರ್ಜುನಾ, ಯಾ ರು ನನ್ನಲ್ಲಿ ಚಿತ್ತವನ್ನು ಏಕಾಗ್ರವಾಗಿ ಪ್ರವೇಶ ಗೊಳಿಸಿ, ಸ್ಮರಣೆಗೈ ಯ್ಯುತಿರುವರೋ, ಆ ಪುರುಷರನ್ನು ನಾನು ಶೀಘ್ರವಾಗಿ ಜನ್ಮಮರಣ ರೂಪವಾದ ಸಂಸಾರ ಸಮುದ್ರದಿಂದ ಉದ್ಧಾರ ಮಾಡಿಕೊಳ್ಳುವೆನು

ಎಂದು ಶ್ರೀ ಕೃಷ್ಣನು ಅಪ್ಪಣೆ ಗೈದಿರುವನು ,, ಆದಕಾರಣ ಪೂರ್ಣೋಕ್ತವಾದ ಸರ್ವ ವಿಶೇಷಣಗಳಿಂದ ಸಂಯುಕ್ತವಾಗಿ, ಯಾವನು- ಮೇಶ-ಅಂದರೆ, ಮಾ-ಎಂದರೆ ಯಾವ ಲಕ್ಷ್ಮಿಯು,ಅವಳಿಗೆ ಪತಿಯಾದ ವಿಷ್ಣು ಭಗವಂತನಿರುವನೋ, ಅವನನ್ನು ಕುರಿತು ' ನಮೋಸ್ತು , ಅಂದರೆ,-ಗ್ರಂಥದ ನಿರ್ವಿಘ್ನ ಪರಿಸಮಾಪ್ತ್ಯರ್ಥವಾಗಿ ನನ್ನ ಪುನಃ ಪುನಃ ನಮ್ರತಾ ಪೂರ್ವಕ ನಮಸ್ಕಾರವಾಗಲೀ- '' ಹಾಗೆ ಈ ಮಂಗಳಾ ಚರಣದ ಶ್ಲೋಕ ದ್ವಾರದಿಂದಲೇ ಈ ಗ್ರಂಥಕ್ಕೆ ಯಾವ ವಿಷಯ ಪ್ರಯೋಜನಾದಿ ನಾಲ್ಕು ಅನುಬಂಧಗಳುಂಟೋ,ಅದನ್ನು ಗ್ರಂಥಕಾರನು ಸೂಚಿಸಿರುವನು, ಎಂತೆಂದರೆ,- ಮೂಲಶ್ಲೋಕದಲ್ಲಿ ಯಾವ ಪ್ರಥಮವಾದ ಎರಡು ಪಾದಗಳಿಂದ, ಈಶ್ವರನ ಲಕ್ಷಣವನ್ನು ನಿರೂಪಿಸಿ, ಪುನಃ ಮೂರನೇ ಪಾದದಲ್ಲಿ ಆ ಈಶ್ವರನಿಗೆ ಸರ್ವ ಭೂತ ಪ್ರಾಣಿಗಳ ಹೃದಯ ಕಮಲದಲ್ಲಿ ಇರುವ ವಿಷಯವನ್ನು ನಿರೂಪಿಸಿದರೋ, ಅದರಿಂದ "ತತ್ವಮಸಿ ,, ಆದಿ ಮಹಾವಾಕ್ಯಗಳಿಂದ ಪ್ರತಿಪಾದಿಸಲ್ಪಡುವ ಯಾವ ಈಶ್ವರ ಮತ್ತು ಜೀವನ ಏಕತ್ವ ವುಂಟೋ ಅದು ಈ ಗ್ರಂಥದ ವಿಷಯವೆಂದು ಸೂಚನೆ ಗೈದಿರುವರು. ಹಾಗೆ ಉತ್ತರವಾದ ಚತುರ್ಥ ಪಾದದಲ್ಲಿ ಯಾವ (ವಿಮೋಕ್ಷದಾಯಿನೆ)ಇಂತೆಂಬ ಪದವಿರುವದೋ, ಅದರಿಂದ ಸರ್ವ ದುಃಖಗಳ ಅತ್ಯಂತ ನಿವೃತ್ತಿ ಮತ್ತು ನಿರತಿಶಯ ಪರಮಾನಂದದ ಪ್ರಾಪ್ತಿರೂಪವಾದ ಯಾವ ಕೈವಲ್ಯ ಮೋಕ್ಷವುಂಟೋ, ಅದು ಈ ಗ್ರಂಥದ ಪ್ರಯೋಜನವೆಂದು ಸೂಚನೆ ಮಾಡಿರುವರು. ಹಾಗೆ ಅಲ್ಲಿಯ ಚತುರ್ಥಪಾದದಲ್ಲಿ, ಯಾವ (ನಮೋಸ್ತು ಮೇಶಾಯ) ಅಂದರೆ,- ಲಕ್ಷ್ಮಿಗೆ ಪತಿಯಾದ ಭಗವಂತನಂ ಕುರಿತು ನಮಸ್ಕಾರವಾಗಲೀ ಹೀಗೆಂಬ ಪದವಂ ನಿರೂಪಿಸಿ ಇರುವರೋ, ಆದರಿಂದ ಆರ್ಜವತ್ವಾದಿ[೩] ಗುಣಗಳಿಂ ಉಪಲಕ್ಷಿತವಾದ ಯಾವ ವಿವೇಕ ವೈರಾಗ್ಯಾದಿ ಸಾಧನಗಳಿಂ ಸಂಪನ್ನನಾಗಿ ಮೋಕ್ಷದ ಉತ್ಕಟೇಚ್ಛೆ

---

೩ ಅವಿದ್ಯಾ ರೂಪಕುಹಕ ಸಂಬಂಧದ ಅಭಾವವು. ಇದು ಆತ್ಮಧರ್ಮವು ಆದಿಶಬ ದಿಂದ ದಯಾ ಸಂತೋಷಗಳನ್ನು ತಿಳಿಯುತಕ್ಕದ್ದು.

ಯುಳ್ಳ ಜಿಜ್ಞಾಸು ಪುರುಷನುಂಟೋ, ಅವನೇ ಈ ಗ್ರಂಥಕ್ಕೆ ಅಧಿಕಾರಿ ಎಂದು ಸೂಚನೆ ಮಾಡಿರುವರು. (ಹಾಗೆ ಗ್ರಂಥಕ್ಕೂ ಮತ್ತು ಜೀವಬ್ರಹ್ಮರ ಏಕತ್ವಕ್ಕೂ ಪರಸ್ಪರ ಪ್ರತಿಪಾದ್ಯ ಪ್ರತಿಪಾದಕ ಭಾವ ಸಂಬಂಧ ವಿರುವದು. ಅಂದರೆ,—ಗ್ರಂಥ ಪ್ರತಿಪಾದಕವಾಗಿಯೂ, ಮತ್ತು ಏಕತ್ವ ಪ್ರತಿಪಾದ್ಯವಾಗಿಯೂ ಇರುವದು. (ಹಾಗೆ ಸರ್ವ ದುಃಖ ನಿವೃತ್ತಿ ಮತ್ತು ಪರಮಾನಂದದ ಪ್ರಾಪ್ತಿರೂಪವಾದ ಯಾವ ಮೋಕ್ಷವುಂಟೋ ಅದಕ್ಕೂ ಮತ್ತು ಅಧಿಕಾರಿ ಪುರುಷನಿಗೂ ಪರಸ್ಪರ ಪ್ರಾಪ್ಯ ಪ್ರಾಪಕ ಭಾವಸಂಬಂಧ ವಿರುವದು. ಅಂದರೆ,— ಮೋಕ್ಷ ಪ್ರಾಪ್ಯವಾಗಿಯೂ, ಮತ್ತು ಅಧಿಕಾರಿ ಅದರ ಪ್ರಾಪಕನಾಗಿಯೂ ಇರುವನು. (ಹಾಗೆ ಜೀವ ಬ್ರಹ್ಮರ ಏಕತ್ವ ಜ್ಞಾನಕ್ಕೂ ಮತ್ತು ಗ್ರಂಥಕ್ಕೂ ಪರಸ್ಪರ ಜನ್ಯಜನಕ ಭಾವಸಂಬಂಧ ವಿರುವದು ಅಂದರೆ,—ಜ್ಞಾನಜನ್ಯವಾಗಿಯೂ, ಮತ್ತು ಗ್ರಂಥ ಅದಕ್ಕೆವಿಚಾರದ್ವಾರಾ, ಜನಕವಾಗಿಯೂ ಇರುವದು, (ಇವೇಆದಿಯಾಗಿ (೪) ಅನ್ಯಪರಸ್ಪರ ಸಂಬಂಧಗಳನ್ನೂ ತಿಳಿದುಕೊಳ್ಳತಕ್ಕದ್ದು ... ... ॥೧॥

ಅ—ಈಪ್ರಕಾರವಾಗಿ ಮಂಗಳಾಚರಣವನ್ನೂ ಮತ್ತು ಅಧಿಕಾರಿ ಜನಗಳ ಪ್ರವೃತ್ತಿಗೋಸುಗ ಗ್ರಂಥದ ನಾಲ್ಕು ಅನುಬಂಧಗಳನ್ನೂ ಸೂಚನೆಮಾಡಿ ಈಗ ಈಗ್ರಂಥದ ನಾಮಾನುಸಾರ ವಿಚಾರವನ್ನು ದೀಪಕರೂಪದಿಂದ ವರ್ಣನೆಯಂ ಮಾಡುತ್ತಾರೆ.

—ಸಚ್ಛಾಸ್ತ್ರ ತೈಲ ಇತಿ—

ಶ್ಲೋ॥ ಸಚ್ಛಾಸ್ತ್ರತೈಲಶ್ಚ ವಿರಾಗವರ್ತಿಕ ।
ಶ್ರೋತ್ರಃಸುಪಾತ್ರಶ್ಚ ಗುರೂಕ್ತಿಪಾವಕಃ ॥
ನಿವಾರ್ತಹೃದ್ಗೃಹಗತಃ ಪ್ರಕಾಶಯೇತ್ ।
ಸರ್ವೇಪ್ಸಿತಂವಸ್ತು ವಿಚಾರದೀಪಕಃ ॥೨॥

ಟೀಕಾ— ವಿಚಾರ ರೂಪವಾದ ಒಂದು ದೀಪಕ ವಿರುವದು. ಅದೆಂತೆಂದರೆ,—ಹ್ಯಾಗೆ ದೀಪಕದಲ್ಲಿ ತೈಲವಿರುವದೋ, ಹಾಗೆಯೇ ವಿಚಾರ ರೂಪ

೪ ಶ್ರವಣ ಮನನ ನಿದಿಧ್ಯಾಸಗಳಿಗೂ, ಪರೋಕ್ಷ ಜ್ಞಾನಕ್ಕೂವುಳ್ಳ ಸಂಬಂಧ. ಅಪರೋಕ್ಷಜ್ಞಾನಕ್ಕೂ ಮೋಕ್ಷಕ್ಕೂ ಉಳ್ಳ ಸಂಬಂಧ.

ವಾದ ದೀಪಕದಲ್ಲಿ ಸಚ್ಛಾಸ್ತ್ರಗಳಾದ ಯಾವ ಭಗವದ್ಗೀತಾ ಉಪನಿಷ ದಾದಿಗಳಿರುವವೋ, ಅವು ತೈಲಸ್ಥಾನೀಯವಾಗಿರುವವು. ಯಾತಕ್ಕಂದರೆ,- ಹ್ಯಾಗೆ ತೈಲವಿನಃ ದೀಪಕವು ಪ್ರಜ್ವಲಿತ ವಾಗುವದಿಲ್ಲವೋ, ಹಾಗೆಯೇ ಸಚ್ಛಾಸ್ತ್ರಗಳನ್ನು ಗುರುಮುಖದ್ವಾರಾ ಶ್ರವಣಮಾಡಿ, ಅಥವಾ ತಾ ನಾದರೂ ನೋಡಿದಲ್ಲದೆ ವಿಚಾರದ ಉತ್ಪತ್ತಿ ಆಗಲರಿಯದು, " ಮತ್ತು ಹ್ಯಾಗೆ ದೀಪಕದಲ್ಲಿ ವರ್ತಿ ಇರುವದೋ ಹಾಗೆ ವಿಚಾರರೂಪ ದೀಪಕದಲ್ಲಿ (೧) ವಿರಾಗರೂಪವಾದ ವ(೨)ರ್ತಿ ಇರುವದು. ಯಾಕಂದರೆ,—ಹ್ಯಾಗೆ ವರ್ತಿಯವಿನಹ ಬರೀ ಒಂದು ತೈಲವು ವ್ಯರ್ಥವಾಗುವದೋ ಹಾಗೆಯೇ ವಿರಾಗವಿಲ್ಲದಿರುವದ್ದರಿಂದ ಸ್ತ್ರೀಯಾದಿಯಾದ ವಿಷಯಗಳಲ್ಲಿ ನಿರಂತರ ವು ಆಸಕ್ತಿಯಾಗುವದರಿಂದ ಸಚ್ಛಾಸ್ತ್ರದ ಶ್ರವಣಾದಿಗಳು ವ್ಯರ್ಥವಾ ಗುವವು. ,, ಮತ್ತು ಹ್ಯಾಗೆ ದೀಪಕವು ಯಾವದಾದರೂ ಮೃತ್ತಿಕಾದಿ ಪಾತ್ರದಲ್ಲಿ ಪ್ರಜ್ವಲಿತವಾಗುವದೋ ಹಾಗೆಯೇ ವಿಚಾರರೂಪ ದೀಪಕವು ಚಿತ್ತರೂಪ (೩) ಸುಂದರ ಪಾತ್ರದಲ್ಲಿ ಪ್ರಜ್ವಲಿತವಾಗುವದು. ಯಾತ ಕ್ಕಂದರೆ.—ಹ್ಯಾಗೆ ಪಾ(೪)ತ್ರವಿಲ್ಲದಿದ್ದರೆ, ತೈಲ ಮತ್ತು ವರ್ತಿ ವ್ಯರ್ಥ ವಾಗುವದೋ,ಹಾಗೆಯೇ ಚಿತ್ತದಸ್ಥಿತಿಮತ್ತು ಶ್ರದ್ಧೆ ಇಲ್ಲದಿದ್ದರೆ ಸಚ್ಛಾ ಸ್ತ್ರ ಮತ್ತು ವಿರಾಗವು ವ್ಯರ್ಥವಾಗುವದು " ಮತ್ತು ಹ್ಯಾಗೆ ದೀಪಕ ವು ಅಗ್ನಿಯ ಸ್ಪರ್ಶವಾಗುವದರಿಂದ ಪ್ರಜ್ವಲಿತವಾಗುವದೋ ಹಾಗೆಯೇ ವಿಚಾರರೂಪದೀಪಕವು,ತತ್ವವೆತ್ತನಾದ ಗುರುವಿನವಾಕ್ಯವು ಚಿತ್ತದಲ್ಲಿ ಸ್ಪ ರ್ಶಮಾಡುವದ್ದರಿಂದ ಪ್ರಜ್ವಲಿತವಾಗುವದು. ಯಾತಕ್ಕಂದರೆ,—ಹ್ಯಾ ಗೆ ಅಗ್ನಿಯವಿನಹ ತೈಲಾದಿಗಳು ಪ್ರಕಾಶ ಮಾಡುವದಕ್ಕೆ ಸಮರ್ಥವಾಗ ದಿರುವವೋ ಹಾಗೆ ತತ್ವವೆತ್ತನಾದ ಗುರುವಿನ ವಾಕ್ಯವಿನಹ ಸಚ್ಛಾ ಸ್ತ್ರದಿಗಳು ಜ್ಞಾನರೂಪ ಪ್ರಕಾಶಮಾಡುವಲ್ಲಿ ಸಮರ್ಥ ವಾಗಲಾರವು.

---

೧ ಶಬ್ದ ಸ್ಪರ್ಶ ರೂಪ ರಸ ಗಂಧಗಳಾದ ವಿಷಯಗಳ ಅಪೇಕ್ಷಾ ಮಾಡದಿರುವದ ಕ್ಕೆ ವಿರಾಗವೆಂದು ಹೆಸರು.

೨ ಬತ್ತಿ.

೩ ನಿರ್ಮಲ.

೪ ಹಣತೆ—ಕಂಬ.

ಈ ನಿಷ್ಠೆಯು ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿಯೂ ನಿರೂಪಿಸಲ್ಪಟ್ಟಿರುವದು. " ಆಚಾರ್ಯವಾನ್ಪುರುಷೋವೇದ ,, ಅರ್ಥ- ಆ ಆತ್ಮವನ್ನು ಗುರುವುಳ್ಳ ಪುರುಷನೆ ತಿಳಿವನು ಎಂದು ., ಮತ್ತು ಹ್ಯಾಗೆ ದೀಪವು ವಾಯುವಿನಿಂದ ರಹಿತವಾದ ಸ್ಥಾನದಲ್ಲಿದ್ದು ಸರ್ವವಾಂಛಿತವಸ್ತುವನ್ನು ಸಾಕ್ಷಾತ್ತಾಗಿ ಪ್ರಕಾಶ ಪಡಿಸುವದೋ ಹಾಗೆ ವಿಚಾರರೂಪದೀಪಕವು ಕುಸಂಗರೂಪವಾದ ವಾಯುವಿನಿಂದ ರಹಿತವಾಗಿ, ಹೃದಯರೂಪಸ್ಥಾನದಲ್ಲಿದ್ದುಕೊಂಡು ಸರ್ವರಿಗೂ ವಾಂಛಿತವಾದ ಯಾವ ಆತ್ಮವಸ್ತುವುಂಟೋ ಅದನ್ನು (*) ಸಾಕ್ಷಾತ್ತಾಗಿ ಪ್ರಕಾಶ ಪಡಿಸುವದು||೧||

ಅ — ಈ ಪ್ರಕಾರದಿಂ ವಿಚಾರವನ್ನು ದೀಪಕ ರೂಪದಿಂದ ನಿರೂಪಿಸಿ, ಈಗ ನಾಲ್ಕು ಶ್ಲೋಕಗಳಿಂದ ಆ ವಿಚಾರವು ಅವಶ್ಯ ಕರ್ತವ್ಯವೆಂದು ವರ್ಣನೆಯಂ ಮಾಡುತ್ತಾರೆ.

—❀ ಕ ಲೌ ಇ ತಿ ❀—

ಶ್ಲೋ|| ಕಲೌಹಿಯೋಗೋ ನಜಪಸ್ತಪೋವ್ರತಂ
ನಚಾಪಿಯಾಗೋ ನಸುರಾರ್ಚನಂತಥಾ ||
ಪ್ರಯಾತಿಸಿದ್ಧಿಂದುರತಿಪ್ರಭಾವತ
ಸ್ತತೋವಿಚಾರೈಕಪರಾಯಣೋಭವೇತ್ ||೨||

ಟೀಕಾ — ' ಕಲೌ , ಅಂದರೆ,- ಈ ಕಲಿಯುಗದಲ್ಲಿ, ದುರಿತ, ಯಾವಪಾಪವು, ಅದರ- ಪ್ರಭಾವ- ಅಂದರೆ, ಬಾಹುಳ್ಯವಾಗಿರುವದ್ದರಿಂದ (ಯೋಗಃ) ಅಂದರೆ, ಯಮ ನಿಯಮಾದಿ ಅಷ್ಟಾಂಗ ರೂಪವಾದ ಯಾವಯೋಗವುಂಟೋ, ಅದರಿಂದ ಸರಿಯಾಗಿ ವಾಸ್ತವವಾದಸಿದ್ಧಿಯು ಪ್ರಾಪ್ತವಾಗುವದಿಲ್ಲ, ಯಾಕಂದರೆ,- ಪೂರ್ವ ಸದ್ಯುಗಾದಿಗಳಲ್ಲಿ ಪುರುಷರಿಗೆ ಆಯುಷ್ಯ ಅಧಿಕವಾಗುತ್ತಿದ್ದದು. ಮತ್ತು ಯೋಗವಿದ್ಯೆಗಳನ್ನು ತಿಳಿಯುವಂತಹ ಯೋಗಿಜನಗಳೂ ಬಹಳವಾಗುತ್ತಿದ್ದರು. ಆ ಪುರುಷರ ಶರೀರದಲ್ಲಿ ಸಾಮರ್ಥ್ಯವೂ ಇನ್ನು ನೀರೋಗತಾದಿ ಸರ್ವ ವ್ಯವಹಾರವೂ ಅನುಕೂಲವಾಗಿದ್ದದು. ಆದ್ದರಿಂದ ಆ ಕಾಲದಲ್ಲಿ ಯೋಗದ ಸಿದ್ಧಿಯು ಶೀಘ್ರವಾಗಿ

* ಸಂಶಯ ವಿಪರೀತ ಭಾವನೆಗಳಿಲ್ಲದಂತೆ.

ಆಗುತ್ತಿದ್ದದು. "ಮತ್ತು ಈಸಮಯದಲ್ಲಾದರೋ ಹೇಳಲ್ಪಟ್ಟ ಸರ್ವವಾರ್ತೆಗಳಿಗೂ ವಿಪರೀತವಾದ್ದರಿಂದ ಯಥಾರ್ಥವಾಗಿ ಅದರ ಸಿದ್ಧಿಯಾಗುವದಿಲ್ಲ. ,, ಹಾಗೆ (ಜಪಃ) ಅಂದರೆ,-ಗಾಯತ್ರ್ಯಾದಿ ಮಂತ್ರಗಳ ಯಾವಜಪವು ಮಾಡಲ್ಪಡುವದೋ, ಅವ್ರೂಸಿದ್ಧಿಯಾಗುವುದಿಲ್ಲ. ಯಾಕಂದರೆ,-ವಿಶೇಷವಾಗಿ ಈಸಮಯದಲ್ಲಿ ಸರ್ವಮಂತ್ರಗಳು (೧)ಕೀಲಿತವಾಗಿ ಮತ್ತು ಶಾಪಯುಕ್ತವಾಗಿರುವವು ,, ಹಾಗೆ ಪಾರ್ವತಿಯಂಕುರಿತು ಪರಮೇಶ್ವರನು " ಜಿಹ್ವಾದಗ್ಧಾ ಪರಾನ್ನೇನ ಹಸ್ತೌದಗ್ಧೌ ಪ್ರತಿಗ್ರಹಾತ್। ಪರಸ್ತ್ರೀಭಿರ್ಮನೋದಗ್ಧಂ ಕಥಂಸಿದ್ಧಿರ್ವರಾನನೆ ,, ಅರ್ಥ—ಹೇವರಾನನೆ ಅಂದರೆ-ಉತ್ಕೃಷ್ಟವಾದ ಮುಖವುಳ್ಳ ಪಾರ್ವತಿಯೇ! ಕಲಿಯುಗದಲ್ಲಿ ಬ್ರಾಹ್ಮಣಾದಿಗಳಾದವರ ಜಿಹ್ವೆಯು (೨) ಪರರ ಅನ್ನವನ್ನು ಭಕ್ಷಣಮಾಡಿದ (೩) ಗ್ಧವಾಗಿರುವದು. ಮತ್ತು ಹಸ್ತೌ- ಅಂದರೆ- ಎರಡು ಕೈಗಳು ಶುಭಾಶುಭ ದಾನಗಳಂ ಗ್ರಹಿಸಿ ದಗ್ಧವಾಗಿರುವವು. ಹಾಗೆ ಪರಸ್ತ್ರೀಯುರ ಚಿಂತನೆಯಿಂದ ಅಭ್ಯಂತರದಲ್ಲಿ ಮನವೂ ದಗ್ಧವಾಗಿರುವದು. ಆದಕಾರಣ (ಕಥಂಸಿದ್ಧಿಃ) ಅಂದರೆ_ ಮಂತ್ರಾದಿಗಳಾದಿಯಾದ ಸಿದ್ಧಿಯು ಯಾವ ಪ್ರಕಾರದಿಂದಾದೀತು ಎಂದು ಹೇಳಿರುವನು, ಹಾಗೆ (ತಪೊ) ಅಂದರೆ,-ಪಂಚಾಗ್ನಿ ತಪನಾದಿ ರೂಪವಾದ ಯಾವ ತಪವಿರುವದೋ ಅದರ ಸಿದ್ಧಿಯೂಕೂಡ ಆಗಲರಿಯದು. ಯಾಕಂದರೆ,-ಈಕಾಲದಲ್ಲಿ ಪ್ರಾ(೪)ಯಃ ಪುರುಷನು (೫) ಇಂದ್ರಿಯಾರಾಮಿಯಾಗಿರುವನು. ಮತ್ತು ಚಿಕ್ಕವಯಸ್ಸಿನಲ್ಲಿಯೇವಿಷಯಾಸಕ್ತನಾಗುವದರಿಂದ ಶರೀರದಲ್ಲಿ ಬಲವು ಅಭಾವವಾಗುವಕಾರಣ ತಪಸ್ಸು ಮಾಡುವದಕ್ಕೆ ಸಮರ್ಥನಾಗುವದಿಲ್ಲ. " ಹಾಗೆ (ವ್ರತಂ) ಅಂದರೆ,-- ಕೃಚ್ಛ್ರ (೬) ಚಾಂದ್ರಾಯಣಾದಿಯಾದ ಯಾವ

---

೧ ಮೊಟಕು—ಸಡಿಲ.

೨ ವಿಜಾತೀಯವಾದ.

೩ ದೂಷಿತ.

೪ ಅಧಿಕವಾಗಿ.

೫ ಭೋಗಕ್ರೀತಾಪರನಾಗಿ.

೬ ದೇಹ ದೋಷವಂ ಹೋಗಲಾಡಿಸಿಕೊಳ್ಳುವದಕ್ಕೂ ದೇಹಮದವನ್ನಡಗಿಸುವದಕ್ಕೂ ಸಹ ಮಾಡತಕ್ಕ ನಿಯಮಗಳು.

ವ್ರತವಿರುವದೋ ಅದರ ಸಿದ್ಧಿಯೂ ಆಗುವದಿಲ್ಲ, ಯಾಕೆಂದರೆ,-ಕಲಿಯುಗದಲ್ಲಿ ಪ್ರಾಣವು ಅನ್ನದ ಆಶ್ರಯ ಮಾಡುತ್ತಿರುವದು. ,, ಈ ವಿಷಯವು ಪರಾಶರ ಸಂಹಿತೆಯಲ್ಲಿ “ ಕೃತೇಚಾಸ್ಥಿಗತಾಃಪ್ರಾಣಾ ಸ್ತ್ರೇತಾಯಾಂ ಮಾಂಸಸಂಸ್ಥಿತಾಃ । ದ್ವಾಪರೇರುಧಿರಂಯಾವತ್ ಕಲಾವನ್ನಾ * ದಿಷುಸ್ಥಿತಾಃ ॥ ,, ಅರ್ಥ-ಸ(೭)ದ್ಯುಗದಲ್ಲಿ ಪುರುಷರ ಪ್ರಾಣಗಳು (೮) ಅಸ್ಥಿಗಳ ಆಶ್ರಯವಂಮಾಡಿಕೊಂಡಿರ್ದವು. ಅನಂತರ ದ್ವಾಪರದಲ್ಲಿ (೯) ರುಧಿರದ ಆಶ್ರಯ ಮಾಡಿಕೊಳ್ಳಬೇಕಾಯಿತು, ಆಪ್ರಾಣಗಳು ಈಗ ಕಲಿಯುಗದಲ್ಲಾದರೋಕೇವಲ ಅನ್ನದ ಆಶ್ರಯದಲ್ಲೇ ಇರುತ್ತಿರುವವು ಎಂದು ನಿರೂಪಿಸಲ್ಪಟ್ಟಿರುವದು.“ ಆದ್ದರಿಂದ ವ್ರತದ ಸಿದ್ಧಿಯೂ ಆಗಲರಿಯದು. ಮತ್ತು ಯಾರೋ ಕೆಲವರು ಶ್ರದ್ಧಾವಂತ ಪುರುಷರು ಹಠದಿಂದ ಮಾಡುತ್ತಲೂ ಇರುವರು. ಆದರೆ ಅವರ ಶರೀರದಲ್ಲಿ ಅಧಿಕವಾಗಿ ಯಾವದೂ ಇಲ್ಲದಿದ್ದರೂ ಯಾವದಾದರೂ ಒಂದೊಂದುರೋಗ ಉತ್ಪನ್ನವಾಗುತ್ತಿರುವದು ,, ಹಾಗೆ (ಯಾಗೋ) ಅಂದರೆ,-ಅಶ್ವಮೇಧ, ರಾಜಸೂಯಾದಿಯಾದ ಯಾವ ಯಜ್ಞಗಳಿರುವವೋ ಅವುಗಳೂ ಕೂಡ ಈಕಾಲದಲ್ಲಿ ಸಿದ್ಧಿಯಾಗಲಾರವು, ಯಾತಕ್ಕೆಂದರೆ,- ಅವುಗಳಿಗೆ ಯೋಗ್ಯವಾದ ಭೂಮಿಯು ಅಧಿಕ ದ್ರವ್ಯವು ಮತ್ತು ಅವುಗಳನ್ನು ಮಾಡಿಸುವಂಥಾ ರುತ್ವಿಜರು ಇನ್ನೂ ಆಪ್ರಕಾರ ಮಂತ್ರಗಳಲ್ಲಿ ಶಕ್ತಿಯೂ ಸಹ ಈ ಕಾಲದಲ್ಲಿ ಕಾಣಲ್ಪಡುವದಿಲ್ಲ. “ ಹಾಗೆ (ಸುರಾರ್ಚನಂ) ಅಂದರೆ,-ಮಹಾದೇವಾದಿ ದೇವತೆಗಳ ಯಾವ ಪೂಜೆಯುಂಟೋ, ಅವೂಸಿದ್ಧವಾಗುವದಿಲ್ಲ. ಯಾಕೆಂದರೆ,-

ಪ್ರಥಮದಲ್ಲೇ ಆ ಪ್ರಕಾರವಾದ ಶ್ರದ್ಧೆಯಾಗುವದೂ ಅತ್ಯಂತ ದುರ್ಲಭವಾಗಿರುವದು. ಮತ್ತೂ ಯೇನಂದರೆ-ಪ್ರಾಯಃಮರ್ತ್ಯಲೋಕದಿಂದ ದೇವತೆಗಳು ಹೊರಟು ಹೋಗಿರುವರು. ಈ ವಾರ್ತೆಯು ಅನ್ಯಸ್ಮೃತಿಯಲ್ಲಿಯೂ “ ಕಲೌದಶ ಸಹಸ್ರಾಂತೆ ಹರಿಸ್ತ್ಯಕ್ಷ್ಯತಿಮೇದಿ

---

* ಆದಿ ಶಬ್ದದಿಂದ ದುಗ್ಧಾದಿಗಳ ಗ್ರಹಣವನ್ನು ತಿಳಿದುಕೊಳ್ಳತಕ್ಕದ್ದು.

೭ ಕೃತಯುಗ.

೮ ಮೂಳೆ —ಎಲುವು.

೯ ರಕ್ತ.

ನೀಂ । ತದರ್ಧಂಜಾಹ್ನವೀತೋಯಂತದರ್ಧಂಗ್ರಾಮದೇವತಾಃ ,, ಅರ್ಥ-ದಶಸಹಸ್ರ ಕಲಿಯುಗದ ವರ್ಷಗಳು (೧೦) ವ್ಯತೀತವಾಗುವಲ್ಲಿ (೧೧) ವಿಷ್ಣುಭಗವಂತನು ಪೃಥ್ವಿಯುಪರಿತ್ಯಾಗಮಾಡಿ ಬಿಟ್ಟಾನು,ಮತ್ತು ತದರ್ಧಂ-ಅಂದರೆ, ಅದರಲ್ಲಿ ಅರ್ಧ, ಅಂದರೆ, ಐದು ಸಹಸ್ರ ವರ್ಷಗಳಲ್ಲಿ ಗಂಗಾದೇವಿಯು ಪೃಥ್ವಿಯನ್ನು ಪರಿತ್ಯಾಗಮಾಡಿ ಹೊರಟುಹೋದಾಳು. ಹಾಗೆ ಎರಡುವರೆ ಸಾವಿರ ವರ್ಷಗಳಾಗುವದ್ದರಿಂದ (ಗ್ರಾಮದೇವತಾಃ) ಅಂದರೆ,-ಗ್ರಾಮವಾಸಿಗಳಾಗಿ ಯಾವ ದೇವತೆಗಳಿರುವರೋ, ಅವರು ಹೊರಟು ಹೋಗುವರು ಎಂದು ಪ್ರಕಟಿಸಲ್ಪಟ್ಟಿರುವದು. ಮುಖ್ಯವಾಗಿ ಪಾಪಬಾಹುಳ್ಯವೆ ಹೇಳಲ್ಪಟ್ಟ ಸರ್ವವಾರ್ತೆಗಳ ಅಸಿದ್ಧಿಗೆ ಕಾರಣವೆಂದು ತಿಳಿಯತಕ್ಕದ್ದು. ,, ಮತ್ತು ಯಾವ ಸತ್ಪುರುಷರು ನಿಷ್ಪಾಪಿಯಾಗಿ ಕಾಣ್ಬರುತ್ತಿರುವರೋ, ಅವರಿಗೂ ಒಬ್ಬ ಇಬ್ಬರ ಸಂಸರ್ಗದಿಂ ಪಾಪ ಭಾಗಿಗಳಾಗುವದರಿಂದ ಜಪಾದಿ ಸಿದ್ಧಿಯಾಗಲಾರದು. ಈ ವಿಷಯವು ಮಹಾ ಭಾರತದಲ್ಲಿ ವ್ಯಾಸರು ನಿರೂಪಿಸಿರುವರು. “ ಅಸತಾಂದರ್ಶನಾತ್ ಸ್ಪರ್ಶನಾತ್ ಸಂಜಲ್ಪಾಚ್ಚ ಸಹಾಸನಾತ್ । ಧರ್ಮಾಚಾರಾಃ ಪ್ರಹೀಯಂತೆಸಿದ್ಧ್ಯಂತಿನ್ನೈವಮಾನವಾಃ ,, ಅರ್ಥ—ಪಾಪೀಪುರುಷರ ದರ್ಶನವೂ, ಮತ್ತು ಅವರೊಡನೆ ಸ್ಪರ್ಶನವೂ, ಹಾಗೆ ಅವರ ಜೊತೆಯಲ್ಲಿ ಸಂಭಾಷಣೆಯೂ, ಇನ್ನೂ ಅವರೊಡನೆಕೂತುಕೊಳ್ಳೋಣವು ಇವೇ ಮೊದಲಾದ ವ್ಯಾಪಾರಗಳಿಂದ ಧರ್ಮಾಚಾರಗಳ ಹಾನಿಯಾಗುವ ಕಾರಣ ಪುರುಷರಿಗೆ ಸಿದ್ಧಿ ಪ್ರಾಪ್ತಿಯಾಗುವದಿಲ್ಲವೆಂದು ನಿರೂಪಿಸಿರುವರು. ಆದ್ದರಿಂದ ವಿವೇಕೀ ಪುರುಷನು ಈ ಕಾಲದಲ್ಲೂ ಅನ್ಯವಾದ ಸರ್ವೋಪಾಯಗಳನ್ನು ಪರಿತ್ಯಾಗಮಾಡಿ (ವಿಚಾರೈಕ ಪರಾಯಣೋಭವೇತ್) ಅಂದರೆ,-ಕೇವಲವಾಗಿ ವಿಚಾರ ಒಂದರಲ್ಲೇ ತತ್ಪರನಾಗುವದು ಯೋಗ್ಯವು. ॥೩॥

ಅ—ಇನ್ನು ವಿಚಾರ ವಿಲ್ಲದಿರುವ ಪುರುಷನು ಪಶುವಿಗೆ ಸಮಾನವಾಗಿರುವನೆಂದು ವರ್ಣಿಸುತ್ತಾರೆ.

---

೧೦ ಕಳೆಯುತ್ತಾ ಬರುವಲ್ಲಿ.

೧೧ ಶ್ರೀಮನ್ನಾರಾಯಣನು.

— ಆಹಾರ ನಿದ್ರಾದಿಃ —

ಶ್ಲೋ॥ ಆಹಾರನಿದ್ರಾದಿಸಮಂ ಶರೀರಿಷು ।
ವೈಶೇಷ್ಯಮೇಕಂ ಹಿನರೇವಿಚಾರಣಮ್ ॥
ತೇನೋಜ್ಝಿತಃ ಪಕ್ಷಿಪಶೂಪಮಃಸ್ಮೃತ ।
ಸ್ತಸ್ಮಾದ್ವಿಚಾರೈಕಪರಾಯಣೋಭವೇತ್ ॥೪॥

ಟೀ॥ ಆಹಾನಿದ್ರಾದಿ ಅಂದರೆ,-ಆಹಾರ, ಯಾವಭೋಜನವಮಾಡು ವ್ರು, ಮತ್ತು ನಿದ್ರಾ-ಯಾವ ಶಯನಗೈಯ್ಯುವದು, ಆದಿಶಬ್ದದಿಂದ ಮೈಥುನಾದಿಗಳ ಗ್ರಹಣವಂ ತಿಳಿಹುಕೊಳ್ಳಬೇಕು. ಹಾಗೆ ಈ ಸರ್ವ ರ್ಮವು ಎಲ್ಲಾ ಪಶುಪಕ್ಷಿ ಮನುಷ್ಯಾದಿ ದೇಹಧಾರಿಗಳಲ್ಲಿ ಸಮಾನ ಾಗಿ ಕಾಣ್ಬರುತ್ತಿರುವದು. ಆದರೆ, ಅವುಗಳೊಳಗೆ ಮನುಷ್ಯರಲ್ಲಿ ಕೇ ು ಸತ್ತು ಅಸತ್ತುಗಳ ಯಾವ ವಿಚಾರವು ಮಾಡತಕ್ಕದ್ದೋ ಅದುಮಾ ತ (ವೈಶೇಷ್ಯಂ) ಅಂದರೆ,-ವಿಶೇಷವಾಗಿರುವದು. ಆದ್ದರಿಂದ ಯಾವ ರುಷನು ಆ ವಿಚಾರದಿಂ ಶೂನ್ಯನಾಗಿರುವನೋ, ಅವನೇ ಪಕ್ಷಿ ಮತ್ತು ಸುಗಳಿಗೆ ಸಮಾನವಾಗಿರುವಂಥಾವನು, ಈ ವಿಷಯವು ಹಿತೋಪ ಶದಲ್ಲಿಯು ನಿರೂಪಿಸಿ ಇರುವರು. “ ಅಹಿತ ಹಿತವಿಚಾರ ಶೂನ್ಯಬು ಃ ಶೃತಿಸಮಯೈರ್ಬಹುಭಿಸ್ತಿರಸ್ಕೃತಸ್ಯ । ಉದರ ಭರಣ ಮಾತ್ರ ವಲೇಚ್ಛೋಃ ಪುರುಷಪಶೋಶ್ಚ ಪಶೋಶ್ಚ ಕೋವಿಶೇಷಃ ,, ಅರ್ಥ- ಾವ ಪುರುಷನ ಬುದ್ಧಿಯು, ತನ್ನ ಹಿತ ಮತ್ತು ಅಹಿತ ವಸ್ತುವಿನ ವಿ ಾರದಿಂ ಶೂನ್ಯವಾಗಿರುವದೋ, ಮತ್ತು ಯಾವನು ವೇದದಲ್ಲಿ ಸಂಧ್ಯಾ ರ್ಪಣ ಅಗ್ನಿ ಹೋತ್ರಾದಿ ನಿತ್ಯನೈಮಿತ್ತಕಗಳಾದ ಕರ್ಮವಿಧಾನವು ಳಲ್ಪಟ್ಟಿರುವದೋ, ಅವುಗಳೆಲ್ಲದರಿಂದಲೂ ವರ್ಜಿತನಾಗಿರುವನೋ, ಮ ು ಯಾವನು ಕೇವಲ ತನ್ನದೇ (೧) ಉದರವನ್ನು ಪೂ (೨) ರ್ಣಮಾಡಿ ಕ್ಕೊಳ್ಳುವ ಇಚ್ಛೆಯುಳ್ಳವನಾಗಿರುವನೋ, ಆಪುರುಷರೂಪವಾದ ಪಶುವಿನ ುಯೂ, ಮತ್ತು ಎರಡನೆಯದಾದ ಯತ್ತು ಎಮ್ಮೆಗಳಲ್ಲಿಯೂ ಯೇನು

---

೧ ಹೊಟ್ಟೆ.
೨ ತುಂಬಿಕೊಳ್ಳುವ.

ಭೇದವಿರುವದು. ಅಂದರೆ,- ಯಾವಭೇದವೂ ಇಲ್ಲವೆಂದು ತಾತ್ಪರ್ಯವು. ಆದ್ದರಿಂದಲೇ (ವಿಚಾರೈಕ ಪರಾಯಣೋಭವೇತ್) ಅಂದರೆ,- ವಿವೇಕಿ(ಪು) ರುಷರು ಅವಶ್ಯವಾಗಿ ಸರ್ವಕಾಲದಲ್ಲೂ ವಿಚಾರದಲ್ಲೇ ಪರಾಯಣರಾಗುವದು ಯೋಗ್ಯವು.

ಅ—ಇನ್ನು ವಿಚಾರವಿನಃ ವನಕ್ಕೆ ಹೋಗುವದರಿಂದಲೂ, ಪುರುಷನಿಗೆ ಸುಖದ ಪ್ರಾಪ್ತಿಯಾಗುವದಿಲ್ಲವೆಂದು ನಿರೂಪಿಸುತ್ತಾರೆ.

—ವಿ ಚಾ ರ ಹೀ ನ ಸ್ಯೇ ತಿ—

ಶ್ಲೋ॥ ವಿಚಾರಹೀನಸ್ಯವನೇಪಿಬಂಧನಂ
ಭವೇದವಶ್ಯಂಭರತಾದಿವದ್ಧ್ರುವಂ ॥
ಗೃಹೇಪಿಮುಕ್ತೋಜನಕಾದಿವದ್ಭವೇ
ತ್ತತೋವಿಚಾರೈಕಪರಾಯಣೋಭವೇತ್॥ ೫॥

ಟೀಕಾ—(ವಿಚಾರಹೀನಸ್ಯ) ಅಂದರೆ,- ಸತ್ತು ಅಸತ್ತುಗಳ ವಿಚಾರದಿಂ ಹೀನನಾಗಿ ಯಾವ ಪುರುಷನಿರುವನೋ ಅವನಿಗೆ (ವನೇಪಿ) ಅಂದರೆ,— ಹಿಮಾಲಯಾದಿ ಪರ್ವತಗಳಿಂಗ ಹನವಾದ ವನಗಳಲ್ಲಿ ಹೋಗುವದ್ದರಿಂದಲೂ, ಜಡಭರತ,ಶೃಂಗೀಋಷಿ, ಅಗ್ನೀದ್ರಾದಿಗಳಂತೆ ಅವಶ್ಯವಾಗಿ ಬಂಧನ ಪ್ರಾಪ್ತಿಯಾಗುವದು. ಮತ್ತು (ಗೃಹೇಪಿ) ಅಂದರೆ,-ವಿಚಾರವುಳ್ಳ ಪುರುಷನು ತನ್ನ ಸ್ತ್ರೀ,ಪುತ್ರಾದಿಗಳಿಂದ ಸಂಯುಕ್ತವಾದ ಮನೆಯಲ್ಲೇ ಇದ್ದಾಗ್ಯೂ ರಾಜಾಜನಕ, ಪ್ರತರ್ದನ, ಅಜಾತ ಶತೃಗಳಾದಿಯಾದವರಂತೆ, ಮುಕ್ತಸ್ವರೂಪನಾಗುವನು, ಹಾಗೆ ಈಪ್ರಕಾರವಾದ ಅನ್ವಯವ್ಯತಿರೇಕದಿಂದಲೂ, (ವಿಚಾರೈಕಪರಾಯಣೋಭವೇತ್) ಅಂದರೆ,-ವಿವೇಕಿ ಪುರುಷರು, ಕೇವಲ ವಿಚಾರದಲ್ಲೇ ಪರಾಯಣರಾಗುವದು ಯೋಗ್ಯವು ॥೫॥

ಅ—ಇನ್ನು ವಿಚಾರವಿನಹ ಆತ್ಮಜ್ಞಾನದ ಪ್ರಾಪ್ತಿಯಾಗುವದಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸುತ್ತಾರೆ.

—ಪ ಠ ಂ ತ್ವಿ ತಿ—

ಶ್ಲೋ॥ ಪಠಂತುಶಾಸ್ತ್ರಾಣಿ ಯಜಂತುವಾಧ್ವರೈ
ರಟಂತುತೀರ್ಥಾನಿ ತಪಂತುತಾಪಕೈಃ ॥

ವಿದಂತಿನಾತ್ಮಾನ ಮೃತೇವಿಚಾರಣಂ।
ತತೋವಿಚಾರ್ಯೈಕ ಪರಾಯಣೋಭವೇತ್ ॥೬॥

ಟೀಕಾ-(ಪಠಂತುಶಾಸ್ತ್ರಾಣಿ) ಅಂದರೆ,-ಯಾವ ಈಪುರುಷನು ನ್ಯಾಯಮೀಮಾಂಸ, ವೇದಾಂತಾದಿ ಅನೇಕ ಶಾಸ್ತ್ರಗಳನ್ನು, ಅರ್ಥಸಹಿತ, ಕ್ರಮಪ್ರಕಾರವಾಗಿ, ಅಧ್ಯಯನವಂ ಮಾಡಿದರೂ, ಮತ್ತು (ಯಜಂತುಯಾಧ್ವರೈಃ) ಎಂದು ಹೇಳಿದರೆ, ಅಶ್ವಮೇಧರಾಜಸೂಯಾದಿ ಅನೇಕ ಯಜ್ಞಗಳನ್ನು ವಿಧಿ ಪೂರ್ವಕವಾಗಿ ಯಜನಮಾಡಿದರೂ, ಹಾಗೆ (ತಪಂತುತಾಪಕ್ಕೈಃ)ಎಂದು ಹೇಳಿದರೆ,-ಪಂಚಾಗ್ನಿ ಆದಿ ಅನೇಕ ಪ್ರಕಾರವಾದ ತಪಗಳಿಂದ, ದೀರ್ಘಕಾಲಪರ್ಯಂತ, ಹಠಪೂರ್ವಕವಾಗಿ ಆಚರಣೆಯಂ ಮಾಡಿದರೂ, ಇವೇ ಆದಿಯಾಗಿ ಇತರವನ್ನು ಅನೇಕ ಪ್ರಕಾರವಾದ ಯತ್ನವಂ ಮಾಡಿದರೂ ಮುಖ್ಯವಾಗಿ (ವಿದಂತಿನಾತ್ಮಾನಮೃತೆ ವಿಚಾರಣಂ) ಅಂದರೆ,- ವಿಚಾರ ಮಾಡುವದರಿಂದಲ್ಲದೆ ಆಪುರುಷನು ಆತ್ಮಸ್ವರೂಪವಂ ತಿಳಿಯಲು ಶಕ್ಯನಾಗುವದಿಲ್ಲ. ಯಾಕಂದರೆ,-ನಾರದಮುನಿಗೆ ಚತುರ್ದಶ ವಿದ್ಯೆಗಳ ಅಧ್ಯಯನವಂ ಮಾಡಿದ್ದರೂ, ಸನತ್ಕುಮಾರರ ಉಪದೇಶದಿಂದುಂಟಾದ ವಿಚಾರದಿಂದಲ್ಲದೆ, ಆತ್ಮಸ್ವರೂಪದ ಪ್ರಾಪ್ತಿಯಾಗುತ್ತಿರಲಿಲ್ಲ. ಈ ವಾರ್ತೆಯು ಛಾಂದೋಗ್ಯೋಪನಿಷತ್ತಿನಲ್ಲಿ ಪ್ರಸಿದ್ಧವಾಗಿರುವದು. ಹಾಗೆ ಆ ಅಶ್ವಮೇಧ ಯಜ್ಞವನ್ನು ಅನುಷ್ಠಾನಮಾಡಿ ಇಂದ್ರನ ಪದವಿಯನ್ನು ಪಡಕೊಂಡಾಗ್ಯೂ, ದೇವತೆಗಳ ಪತಿಯಾದ ಇಂದ್ರನಿಗೆ, ಬ್ರಹ್ಮದೇವನ ಉಪದೇಶದಿಂದುಂಟಾದ ವಿಚಾರದಿಂದಲ್ಲದೆ ಆತ್ಮಪದದ ಪ್ರಾಪ್ತಿಯಾಗುತ್ತಿರಲಿಲ್ಲ. ಈ ವಾರ್ತೆಯೂ ಅಲ್ಲಿಯೆ ಪ್ರಸಿದ್ಧವಾಗಿರುವದು. ಹಾಗೆ ಅನೇಕ ತೀರ್ಥಗಳ ಸೇವನೆಯಂ ಮಾಡಿದ್ದರೂ, ರಾಮಚಂದ್ರನಿಗೆ ವಸಿಷ್ಠಮುನಿಯ ಉಪದೇಶದಿಂದುಂಟಾದ ವಿಚಾರದಿಂದಲ್ಲದೆ ಆತ್ಮಪದದ ಪ್ರಾಪ್ತಿಯಾಗುತ್ತಿರಲಿಲ್ಲ. ಈ ವಿಷಯವು ಯೋಗವಾಸಿಷ್ಠದ ನಿರ್ವಾಣ ಪ್ರಕರಣದಲ್ಲಿ ಪ್ರಸಿದ್ಧವಾಗಿರುವದು. ಹಾಗೆ ಹುಟ್ಟಿದಾರಭ್ಯದಿಂದಲೂ ವನದಲ್ಲಿ ಹೋಗಿ ಇದ್ದುಕೊಂಡು ಅನೇಕ ವರ್ಷಪರ್ಯಂತ ಉಗ್ರತಪವನ್ನು ಮಾಡಿದ್ದರೂ, ಶುಕದೇವನಿಗೆ, ರಾ

ಜಾಜನಕನ ಉಪದೇಶದಿಂದುಂಟಾದ ವಿಚಾರದಿಂದಲ್ಲದೆ ಆತ್ಮಪದದ ಪ್ರಾಪ್ತಿಯಾಗುತ್ತಿರಲಿಲ್ಲ. ಈ ವಾರ್ತೆಯೂ ಯೋಗವಾಸಿಷ್ಠಾದಿ ಗ್ರಂಥಗಳಲ್ಲಿ ಪ್ರಸಿದ್ಧವಾಗಿರುವದು. ಆದ್ದರಿಂದಲೇ ವಿವೇಕೀ ಪುರುಷರು (ವಿಚಾರೈಕ ಪರಾಯಣೋಭವೇತ್) ಅಂದರೆ, ಸರ್ವದಾ ಕೇವಲ ವಿಚಾರ ಒಂದರಲ್ಲೇ ಪರಾಯಣರಾಗುವದು ಯೋಗ್ಯವು. ॥೬॥

ಅ—ಈ ಪ್ರಕಾರವಾಗಿ ವಿಚಾರದ ಅವಶ್ಯ ಕರ್ತವ್ಯತೆಯನ್ನು ನಿರೂಪಣವಮಾಡಿ, ಈಗ ಆ ವಿಚಾರವು ಯಾವ ಪ್ರಕಾರ ಮಾಡತಕ್ಕದ್ದೆಂಬ ಈ ಪರಿಯಾದ ಆಕಾಂಕ್ಷೆಯುಂಟಾದರೆ, ಆವಿಚಾರದ ಸ್ವರೂಪವನ್ನು ಪ್ರತಿಪಾದಿಸುವದಕ್ಕೆ ಗ್ರಂಥಕಾರನು ಪ್ರತಿಜ್ಞೆಯಂ ಮಾಡುತ್ತಾನೆ,

—ತಸ್ಯೇತಿ.—

ಮೂ—ತಸ್ಯಸ್ವರೂಪಂತು ಸಮಾಸತಃಸ್ಫುಟಂ।
ಶಾಸ್ತ್ರಾಂತರಾದತ್ರ ವಿಕೃಷ್ಯಯತ್ನತಃ॥
ಸಂದರ್ಶ್ಯತೇ ಶಿಷ್ಯಗುರುಪ್ರಸಂಗತೋ।
ಯುಕ್ತ್ಯೈಕಯಾಪೀಹಹಿಬೋಧ್ಯತೇಬುಧೈಃ॥೭॥

ಟೀಕಾ-(ತಸ್ಯ) ಅಂದರೆ,-ಆಪ್ರಸ್ತುತ ವಿಚಾರದ ಯಾವ ಯಥಾರ್ಥ ಸ್ವರೂಪವುಂಟೋ, ಅದಕ್ಕೆ (ಶಾಸ್ತ್ರಾಂತರಾತ್) ಅಂದರೆ, ಭಗವದ್ಗೀತಾ, ಮತ್ತು ಉಪನಿಷತ್ತು ಹಾಗೆ ಶಾರೀರಕ ಭಾಷ್ಯಾದಿ ಅನ್ಯ ಯಾವ ವೇದಾಂತ ಶಾಸ್ತ್ರಗಳಿರುವವೋ, ಅವುಗಳಿಂದಲೂ ಪ್ರಯತ್ನಪೂರ್ವಕವಾಗಿ ಆಕರ್ಷಣವಮಾಡಿ ಅಲ್ಪಬುದ್ಧಿಯುಳ್ಳ ಪುರುಷರಿಗೆ ಸುಖಪೂರ್ವಕ ಬೋಧಾರ್ಥವಾಗಿ ಶಿಷ್ಯ ಮತ್ತು ಗುರುಗಳ ಸಂವಾದ ದ್ವಾರಾ, (ಸಮಾಸತಃ) ಅಂದರೆ,-ಸಂಕ್ಷೇಪದಿಂ ಸ್ಫುಟೀಕರಿಸಿ ಗ್ರಂಥಕಾರನು ಈ ಗ್ರಂಥದಲ್ಲಿ ದರ್ಶಿಸಿ ಇರುವನು. ಯಾತಕ್ಕೆಂದರೆ,(ಯುಕ್ತ್ಯಾ) ಅಂದರೆ,-ವಿದ್ವಾನ್ ಪುರುಷರಿಗೆ ಇದು ಸ್ವಾಭಾವಿಕ ಧರ್ಮವಾಗಿರುವದು. ಅದೇನೆಂದರೆ-ಯಾವ ಯಾವ ಯುಕ್ತಿಗಳಿಂದಾದರೂ,

ಅಜ್ಞಾನ ರೂಪವಾದ ನಿದ್ರೆಯಲ್ಲಿ ಸುಪ್ತರಾಗಿರುವ ಜೀವಿಗಳಿಗೆ, ಬೋಧೆ ನಮಾಡುವಂಥಾದ್ದು. ... ... ॥೩॥

ಅ—ಈ ಪ್ರಕಾರದಿಂದ ವಿಚಾರದ ಪ್ರತಿಜ್ಞೆಯಂ ಮಾಡಿ ಈಗ ಅದನ್ನು ವಿಸ್ತಾರ ಪೂರ್ವಕ ನಿರೂಪಣ ಮಾಡುವದಕ್ಕಾಗಿ, ಉಪೋದ್ಘಾತ ರೀತಿಯಿಂದ ಕಥೆಯು ಉತ್ಥಾನ ಮಾಡುತ್ತಾರೆ.

॥ ದೃಷ್ಟ್ವೇತಿ ॥

ಮೂ—ದೃಷ್ಟ್ವಾಜರಾಜನ್ಮವಿಪತ್ತಿಸಂಕುಲಂ।
ಸರ್ವಂಜಗಚ್ಚಾಂಬುತರಂಗಭಂಗುರಮ್॥
ಭೀತಃಕಿಲಾಗಮ್ಯಜನೋಜ್ಝಿತಂಸ್ಥಲಂ।
ಕಶ್ಚಿನ್ಮುಮುಕ್ಷುಃಕಿಲಚಿಂತಯತ್ವಿದಮ್॥೪॥

ಟೀಕಾ—(ಕಶ್ಚಿತ್) ಅಂದರೆ,-ಯಾವನಾನೊಬ್ಬ (ಮುಮುಕ್ಷುಃ) ಅಂದರೆ, ಜನ್ಮಮರಣ ರೂಪವಾದ ಸಂಸಾರ ಬಂಧನದಿಂದ ಮುಕ್ತನಾಗಬೇಕೆಂಬ ಇಚ್ಛೆಯುಳ್ಳ ಶಮದಮಾದಿ ಸಾಧನ ಸಂಯುಕ್ತನಾದ ಪುರುಷನು ಈ ಚರಾಚರ ರೂಪವಾದ ಸರ್ವಜಗತ್ತನ್ನು ಜನ್ಮ ಮತ್ತು ಜರಾ, ಹಾಗೆ ಮರಣ, ಇನ್ನು ವಿಪತ್ತಿಯೆಂದಂಥಾ ಯಾವ ಅಧ್ಯಾತ್ಮಿಕಾದಿ ತ್ರಿವಿಧ ತಾಪವುಂಟೋ ಅವುಗಳಿಂದ ಯಲ್ಲಾ ಭಾಗಗಳಲ್ಲಿಯೂ, ವ್ಯಾಪ್ತವಾಗಿ, ಮತ್ತು (ಅಂಬುತರಂಗ ಭಂಗುರಂ) ಅಂದರೆ,-ಜಲದ ತರಂಗದಂತೆ ಕ್ಷಣ ಭಂಗುರವಾದದ್ದೆಂದು, ವಿವೇಕರೂಪ ನೇತ್ರದಿಂ ನೋಡಿದವನಾಗಿ, (ಭೀತಃ) ಅಂದರೆ,-ಅತ್ಯಂತ ಭಯವಂ ಹೊಂದಿದವನಾಗಿ, ಸರ್ವಜನಗಳಿಂ ರಹಿತವಾದ ಯಾವದೋಒಂದು ಏಕಾಂತ ಸ್ಥಾನದೊಳ್ ಪೋದವನಾಗಿ, ಪೂರ್ವದಲ್ಲಿ ಪ್ರಕಟಿಸಿದ ರೀತಿಯಿಂದ ತನ್ನ ಚಿತ್ತದಲ್ಲಿ (ಅಚಿಂತಯತ್) ಅಂದರೆ, ಚನ್ನಾಗಿ(೧) ಕ್ರಮ ಪ್ರಕಾರದಿಂ ಚಿಂತನೆ ಗೈಯುತ್ತಿದ್ದನು. ॥೪॥

ಅ—ಈ ಪ್ರಕಾರ ಕಥೆಯನ್ನು ಉಪಕ್ರಮಿಸಿದವರಾಗಿ ಈಗ ಯಾವದು ಅವನಿಂದ ಅಲ್ಲಿ ಹೋಗಿ ವಿಚಾರವಮಾಡಲ್ಪಟ್ಟಿತೋ, ಅದನ್ನು

---

೧ ವೈರಾಗ್ಯ ಪೂರ್ವಕವಾಗಿ ವಿಚಾರ ಮಾಡುತ್ತಿದ್ದನು.

(ಅಹೋ ವಿಚಿತ್ರಾಃ) ಈ ಶ್ಲೋಕದಿಂದ ಆರಂಭಮಾಡಿ, (ಇತ್ಥಂಸು ಧೀಃ) ಇಲ್ಲಿಯ ಪರ್ಯಂತವೂ ಇಪ್ಪತ್ತಾರು ಶ್ಲೋಕಗಳಿಂದ ವರ್ಣಿಸುತ್ತಾರೆ.

—॥ ಅ ಹೋ ಇ ತಿ ॥—

ಶ್ಲೋ॥ ಅಹೋವಿಚಿತ್ರಾಃ ಖಲುಮೋಹಶಕ್ತಯಃ
ಪ್ರಚೋದಿತೋಯಾಭಿರಹಂನಿರಂತರಮ್ ॥
ಜನುರ್ಜರಾದುಃಖನಿಪೀಡಿತೋಪಿನೊ
ಕದಾಪಿಪಶ್ಯಾಮಿಹಿತಂಯದಾತ್ಮನಃ॥೯॥

ಟೀಕಾ॥ ಅಹೋ-ಮಹದಾಶ್ಚರ್ಯವಾಗಿ, ಮತ್ತು ಬಹುವಿಚಿತ್ರವಾದಂಥಾ (ಮೋಹಶಕ್ತಯಃ) ಅಂದರೆ,- ಅಜ್ಞಾನದ ಶಕ್ತಿಯಿರುವದೇನು; ಇದರಿಂದ ಸರ್ವದಾ ಪ್ರೇರಿತನಾದ ನಾನು, ಅನೇಕ ಕಲ್ಪಕಲ್ಪಾಂತರಗಳಿಂದಲೂ, ಜನ್ಮ ಜರಾಮರಣಾದಿಯಾದ ನಾನಾ ಪ್ರಕಾರವಾದ ದುಃಖಗಳಿಂದ (ನಿಪೀಡಿತಃ) ಅಂದರೆ,-ಅತ್ಯಂತ ಪೀಡಿತನಾಗಿ, ಯಾವಕಾಲದಲ್ಲಿಯೂ, (ಹಿತಂಯದಾತ್ಮನಃ) ಅಂದರೆ ತನ್ನ ಆತ್ಮನಿಗೆ ಹಿತಕರವಾದ ಯಾವ ವಸ್ತುವುಂಟೋ ಅದನ್ನು ಈಗಿನವರಿಗೂ ನೋಡದವನಾಗಿರುವೆನು. ಅಂದರೆ, ತನ್ನ ಆತ್ಮನಿಗೆ ಜನ್ಮ ಮರಣ ರೂಪವಾದ ಸಂಸಾರ ಬಂಧನದಿಂದ ಮುಕ್ತನಂ ಮಾಡಿಕೊಳ್ಳಲೋಸುಗ ಯಾವ ಉಪಾಯವನ್ನೂ ಮಾಡದೆ ಇರುವೆನು. ॥೯॥

ಅ॥ ಇಂತೆಂಬ ಸಮಯದಲ್ಲಿ ಯಾವನಾನೊಬ್ಬನು ಹೇಳುವದೇನಂದರೆ, ಹಿಂದೆ ಯಾವವುಪಾಯವೂ ಮಾಡದಿದ್ದರ ಈಗಲಾದರೂ ಮಾಡಿಕೊಳ್ಳುವನಾಗು ಎಂದರೆ ಅದಕ್ಕೆ ಹೀಗೆಂದು ಹೇಳುತ್ತಾನೆ.

—॥ ಬಾ ಲ್ಯ ಮಿ ತಿ ॥—

ಮೂ॥ ಬಾಲ್ಯಂಮಾಯಾಕೇಲಿಕಲಾಕಲಾಪೈ
ನೀತಂಚನಾರೀನಿರತೇನಯೌವನಂ ॥

ವೃದ್ಧೋಧುನಾಕಿಂನುಕರೋಮಿಸಾಧನಂ
ಮುಕ್ತೇರ್ವೃಥಾಮೇಖಲುಜೀವಿತಂಗತಮ್ ॥೧೦॥

ಟೀ॥ (ಬಾಲ್ಯಂ) ಅಂದರೆ, ಸಚ್ಛಾಸ್ತ್ರಗಳ ವಿಚಾರದಲ್ಲಿ ಉಪಯೋಗಿಯಾದ ವಿದ್ಯೆಗಳ ಅಧ್ಯಯನವಂ ಮಾಡುವದಕ್ಕೆ ಸಾಧನವಾದ ಯಾವ ಬಾಲ್ಯಾವಸ್ಥೆ ಇದ್ದಿತ್ತೋ ಅದನ್ನು ನಾನು (ಕೇಲಿಕಲಾಕಲಾಪಕೈಃ) ಅಂದರೆ,- ಬಾಲಕರ ಜೊತೆಯಲ್ಲಿ ನಾನಾಪ್ರಕಾರವಾದ ಆಟ, ಮತ್ತು (೧) ಕೌತುಕಗಳಿಂದ ಕಳೆದುಕೊಂಡೆನು. ಮತ್ತು ತೀರ್ಥಯಾತ್ರೆಗಳನ್ನೂ ಹಾಗೆ ತಪಸ್ಸನ್ನೂ ಇನ್ನು ಮಹಾತ್ಮರಾದ ಪುರುಷರ ಸೇವೆಯನ್ನೂ ಮಾಡುವದಕ್ಕೆ ಸಾಧನಭೂತವಾದ ಯಾವ ಯೌವನಾವಸ್ಥೆ ಇದ್ದಿತ್ತೋ, ಅದನ್ನು ನಾನು (ನಾರೀನಿರತೇನ) ಅಂದರೆ,—ಸರ್ವಕಾಲದಲ್ಲಿಯೂ ಸ್ತ್ರೀಯಲ್ಲಿ ಆಸಕ್ತನಾದ್ದರಿಂದನಿರಂತರವಾಗಿ ಅವರ ಚಿಂತನೆ ಅವರ ಭೋಗ ವಿಲಾಸಾದಿಗಳಿಂದಲೆ ವ್ಯರ್ಥಮಾಡಿಕೊಂಡೆನು. " ಮತ್ತು ಈಗ ಶಕ್ತಿಯಿಂದ ಹೀನನಾಗಿಯೂ, ಪರತಂತ್ರದ ಸ್ಥಾನವಾಗಿಯೂ, ಇನ್ನೂ ಸರ್ವಶರೀರಗಳನ್ನೂ ಶಿಥಿಲ ಮಾಡುತ್ತಿರುವ ಈ ವೃದ್ಧಾವಸ್ಥೆಯಂ ಹೊಂದಿರುವ ನಾನು ಸಂಸಾರ ಬಂಧನದಿಂ ಮುಕ್ತನಾಗುವದಕ್ಕೆ ಯೇನು ಸಾಧನೆಯಂ ಮಾಡಲೀ, ಯಾತಕ್ಕಂದರೆ,—ಹ್ಯಾಗೆ ಮನೆಗೆ ಬೆಂಕಿ ತಗಲಿದ ಬಳಿಕ ಭಾವಿ ತೋಡುವದು (೨) ವ್ಯರ್ಥವಾಗುವದೋ ಹಾಗೆಯೆ ವೃದ್ಧಾವಸ್ಥೆಯು ಪ್ರಾಪ್ತವಾದ

---

೧ ಅಪೂರ್ವವಾದ ಪದಾರ್ಥಗಳ ಅಪೇಕ್ಷೆ.

೨ ಇದಕ್ಕೆ ಭರ್ತೃಹರಿಯಲ್ಲಿ ಹೇಳಿರುವದೇನಂದರೆ,- ಶ್ಲೋ॥ ಯಾವತ್ಸ್ವಸ್ಥಮಿದಂಶರೀರಮರುಜಂ ಯಾವಜ್ಜರಾದೂರತಃ ಯಾವಚ್ಚೇಂದ್ರಿಯಶಕ್ತಿರಪ್ರತಿಹತಾ ಯಾವತ್ಕ್ಷಯೋನಾಯುಷಃ । ಆತ್ಮಶ್ರೇಯಸಿತಾವದೇವವಿದುಷಾ ಕಾರ್ಯಃಪ್ರಯತ್ನೋಮಹಾನ್ ಸಂದೀಪ್ತೇಭವನೇತುಕೂಪಖನನಂ ಪ್ರತ್ಯುದ್ಯಮಃಕೀದೃಶಃ ॥ ಅರ್ಥ-ಯಾವ ವರೆಗೆ ಈಶರೀರವು ರೋಗ ರಹಿತವಾಗಿರುವದೊ, ಮುಪ್ಪುಂಟಾಗುವದಿಲ್ಲವೋ, ಮತ್ತು ಇಂದ್ರಿಯಶಕ್ತಿ ಕಡಮೆಯಾಗದಿರುವದೊ, ಆಯುಸ್ಸು ಕ್ಷೀಣಿಸುವದಿಲ್ಲವೋ, ಅಷ್ಟರೊಳಗಾಗಿ ಸತ್ಪುರುಷನು ತನ್ನ ಮೋಕ್ಷ ವಿಷಯದಲ್ಲಿ ಪ್ರಯತ್ನಿಸಬೇಕೆಂತಲೂ, ಹಾಗೆ ಮಾಡದಿದ್ದಲ್ಲಿ ಮನೆಗೆ ಬೆಂಕಿ ಹತ್ತಿದಾಗ ಭಾವಿ ತೋಡುವವನು ಹ್ಯಾಗೆ ಮೂಢನೆನಿಸುವನೊ

ಮೇಲೆ ಜಪತಪಾದಿಗಳ ಆರಂಭಮಾಡುವಂಥಾದ್ದು (೩) ವ್ಯರ್ಥವಾಗುವದು. " ಆದ್ದರಿಂದ (ಖಲು)ಅಂದರೆ, ನಿಶ್ಚಯವಾಗಿ ನನ್ನ ಸರ್ವ ಆಯುಸ್ಸು (ವೃಥಾಗತಂ) ಅಂದರೆ-ವ್ಯರ್ಥವಾಗಿ ಹೊರಟುಹೋಯಿತು.

ಅ॥ ಈ ಪ್ರಕಾರವಾದ ಪಶ್ಚಾತ್ತಾಪಗೊಂಡು ಈಗ ಪುನಃ ಹೇಳುತ್ತಾನೆ.

—॥ ನಿ ದ್ರಾ ತಿ ॥—

ಮೂ॥ ನಿದ್ರಾವ್ಯವಾಯಾಶನ ತತ್ಪರೋಭವಂ
ನಿತ್ಯಂವಿವೇಕಾಪಗತೋಯಥಾಪಶುಃ ॥
ನಾತ್ಮಾನಮಂತಃಸ್ಥಮಪಿವ್ಯಲೋಕಯಂ
ಸರ್ವಂವೃಥಾಮೆ ಖಲುಜೀವಿತಂಗತಂ ॥೧೧॥

ಟೀಕಾ॥ (ನಿದ್ರಾವ್ಯವಾಯಾಶನತತ್ಪರೋಭವಂ) ಅಂದರೆ,- ಜನ್ಮಿಸಿದ್ದುಮೊದಲುಗೊಂಡು ಈಗಿನವರಿವಿಗೂ, ನಾನು ಸತ್ತು ಅಸತ್ತುಗಳ ವಿಚಾರದಿಂ ಶೂನ್ಯನಾಗಿ, ಯಾವಾಗಲೂ ಮಲಗುವದು, ಸ್ತ್ರೀ ಸಂಗವು ಮಾಡುವದು, ಭೋಜನ ಮಾಡುವದು ಎಂಬ ಇವುಗಳಲ್ಲಿಯೆ ತತ್ಪರನಾಗಿರುವೆನು. (ಯಥಾಪಶುಃ) ಅಂದರೆ,- ಹ್ಯಾಗೆ ಅಶ್ವಗರ್ದಭಾದಿ ಪಶುಗಳು ವಿವೇಕಶೂನ್ಯವಾಗಿರುವವ್ರೋ,ಅವುಗಳಿಗೆ ಸರಿಯಾಗಿರುವೆನು ಮತ್ತು (ಅಂತಸ್ಥಂ) ಅಂದರೆ,-ತನ್ನ ಶರೀರದಲ್ಲಿಯೆ, ಹೃದಯಕಮಲದಲ್ಲಿ ಸರ್ವದಾ ವಾಸವಾಗಿರುವ ಯಾವ ಆತ್ಮನುಂಟೋ,ಅವನನ್ನು ಯಾವಕಾಲದಲ್ಲಿಯೂ, ಜ್ಞಾನರೂಪ ನೇತ್ರದಿಂದ (ನವ್ಯಲೋಕಯಂ) ಅಂದರೆ,-ನೋಡದವನಾಗಿರುವೆನಲ್ಲವೇ,ಅವನಂ ನೋಡಿದ್ದರೆ, ಜನ್ಮಮರಣ ರೂಪವಾದ ಸಂಸಾರ ಬಂಧನದಿಂ ಮುಕ್ತವಾಗಿ ಪರಮಪದ ಪ್ರಾಪ್ತವಾಗುತ್ತಿದ್ದುದು. ಆದ್ದರಿಂದ (ಖಲು) ಅಂದರೆ,-ನಿಶ್ಚಯವಾಗಿ ನನ್ನ

ಅಂದರೆ ವ್ಯರ್ಥವೆನಿಸುವದೋ ಹಾಗೆ ಶ್ರೇಯಸ್ಸಂಪಾದನವಿಲ್ಲದ ಬಳಿಕ ಆಪುರುಷನ ಸರ್ವಾಯುಸ್ಸು ವ್ಯರ್ಥವೆಂದಾಶಯವು.

೩ ಚನ್ನಾಗಿ ನಡೆಯಲಾರವೆಂದು ತಾತ್ಪರ್ಯ,

ಸರ್ವಆಯುಸ್ಸು (ವೃಥಾಗತಂ) ಅಂದರೆ,- ನಿರರ್ಥಕವಾಗಿ ಕಳದು ಹೋಯಿತು ಎಂದನು. ॥೧೨॥

ಅ॥ ಅದಕ್ಕೆ ಆ ಪುರುಷನು ಹೇಳಿದ್ದೇನಂದರೆ,- ಆ ಆತ್ಮನನ್ನು ನೀನು ನೋಡದೆ ಇದ್ದರೆ, ಯಾವಾಗಲಾದರೂ ಸತ್ಸಂಗವನ್ನಾದರೂ ಮಾಡಿರಬಹುದು. ಆದ್ದರಿಂದದರ ಪ್ರಭಾವದಿಂದಲಾದರೂ ನಿನಗೆ ಕಲ್ಯಾಣವಾದೀತು, ಅಂದರೆ,-ಅದಕ್ಕೆ ಹೀಗೆನ್ನುತ್ತಾನೆ.

—ಭವಾಪಹ ಇತಿ—

ಮೂ॥ ಭವಾಪಹೋನ್ಯೈವ ಸತಾಂಸಮಾಗಮಃ
ಕೃತಃಶ್ರುತಾನಾಪಿ ಕಥಾಘ ಹಾರಿಣೀ ॥
ಹರೇರ್ನತೀರ್ಥಾನಿ ಗತಾನಿವೈಮಯಾ
ವೃಥಾಖಿಲಂ ಮೇಖಲುಜೀವಿತಂಗತಂ ॥೧೩॥

ಟೀಕಾ॥ (ಭವಾಪಹೋ) ಅಂದರೆ,-ಜನ್ಮಮರಣ ರೂಪ ಸಂಸಾರದ ನಾಶವಂ ಮಾಡುವಂಥಾ ಯಾವ (ಸತಾಂಸಮಾಗಮಃ) ಅಂದರೆ,- ತತ್ವವೇತ್ತರುಗಳಾಗಿ ಮಹಾತ್ಮರಾಗಿರುವ ಪುರುಷರ ಸಂಗವುಂಟೋ, ಅದನ್ನೂ ನಾನು ಯಾವ ಕಾಲದಲ್ಲಿಯೂ ಮಾಡಲಿಲ್ಲ " ಅದಕ್ಕೆ ಆಪುರುಷನು ಹೇಳಿದ್ದೇನಂದರೆ,-ಸತ್ಸಂಗವಂ ಮಾಡದಿದ್ದರೆ ಯಾವಾಗಲಾದರೂ ಹರಿನಾರಾಯಣನ ಯಶವನ್ನಾದರೂ ಶ್ರವಣ ಮಾಡಿರುವೆಯ ? ಎಂದರೆ,-ಅದಕ್ಕೆ ಹೇಳುತ್ತಾನೆ. (ಶೃತಾಕಥಾನಾಘಹಾರಿಣೀ) ಅಂದರೆ ಸಮಸ್ತ ಪಾಪಗಳನ್ನು ದೂರಮಾಡುವಂಥಾ ಯಾವ (ಹರೇಃ) ಅಂದರೆ, ನಾರಾಯಣನ ಯಶೋರೂಪವಾದ ಪವಿತ್ರವಾದ ಕಥೆಯುಂಟೋ, ಅದನ್ನು ನಾನು ಯಾವಾಗಲು ಶ್ರದ್ಧಾಪೂರ್ವಕವಾಗಿ ಕೂತುಕೊಂಡು ಶ್ರವಣ ಮಾಡಲಿಲ್ಲ ಎಂದನು ,,ಅದಕ್ಕೆ ಅವನು ಹೇಳಿದ್ದೇನಂದರೆ,— ಕಥೆಯನ್ನು ಶ್ರವಣ ಮಾಡದಿದ್ದರು ಯಾವಾಗಲಾದರು ಪ್ರಯಾಗಾದಿ ತೀರ್ಥಗಳ ಯಾತ್ರೆಯಾದರೂ ಮಾಡಿದ್ದೆಯೋ, ಎಂದರೆ ಅದಕ್ಕೆ ಇಂತೆಂದನು. (ನತೀರ್ಥಾನಿಗತಾನಿ) ಅಂದರೆ,-ಅಂತಃಕರಣದ ಶುದ್ಧಿ ದ್ವಾರಾ ಮೋಕ್ಷಪದವಂ ಕೊಡುವಂಥಾ ಯಾವ ಪ್ರಯಾಗ ಕಾಶೀ

ಮೊದಲಾದ ಪವಿತ್ರಗಳಾದ ಪ್ರಸಿದ್ಧ ತೀರ್ಥಗಳಿರುವವೋ ಅವುಗಳ ಸಮೀಪದಲ್ಲಿಯೂ ನಾನು ಯಾವಾಗಲೂ ಗಮನವಮಾಡಲಿಲ್ಲ, ಆದಕಾರಣ ಸರ್ವಪುರುಷಾರ್ಥಗಳಿಂ ಶೂನ್ಯನಾದ್ದರಿಂದ ನನ್ನ ಸರ್ವ ಆಯುಸ್ಸು (ವೃಥಾಗತಂ) ಅಂದರೆ,—ವ್ಯರ್ಥವಾಗಿ ಕಳದು ಹೋಯಿತು ಎಂದನು. ॥೧೨॥

ಅ॥ ಅದಕ್ಕೆ ಆಪುರುಷನು ಪೇಳಿದ್ದೇನಂದರೆ.-ನೀನು ಹೇಳಿದ ಪ್ರಕಾರ ಸತ್ಸಂಗಾದಿಗಳಂ ಮಾಡದಿದ್ದರೆ ಯಾವಾಗಲಾದರೂ ಏಕಾಂತವಾಗಿ ಕೂತುಕೊಂಡು ಹರಿಯ ಆರಾಧನೆಯನ್ನಾದರೂ ಮಾಡಿರಬಹುದು, ಹಾಗೆ ಮಾಡಿದ್ದರೆ ಅದರಿಂದಲಾದರೂ ನಿನಗೆ ಕಲ್ಯಾಣವಾದೀತು ಎಂದನು. ಆದಕ್ಕೆ ಅಲ್ಲಿ ಹೀಗೆಂದು ಪೇಳುತ್ತಾನೆ.

—ಚತುರ್ಭುಜ ಇತಿ—

ಮೂ॥ ಚತುರ್ಭುಜಶ್ಚಕ್ರಗದಾಯುಧಃಪ್ರಭು
ರ್ನಿರಂಜನಃಸರ್ವ ಭವಾರ್ತಿಭಂಜನಃ ॥
ಸ್ಮೃತಸ್ಸಕದಾಪೀ ಹಮಯಾನಮಾಧವೋ
ವೃಥಾಖಿಲಂಮೆ ಖಲುಜೀವಿತಂಗತಂ ।೧೩।

ಟೀ॥ (ಚತುರ್ಭುಜಃ) ಅಂದರೆ,- ಕೇಯೂರಕಟಕಾದಿ ಭೂಷಣಗಳಿಂದ ಶೋಭಾಯಮಾನನಾಗಿಯೂ, ಮತ್ತು ಜಾನುಪರ್ಯಂತ ಉದ್ದವಾಗಿಯೂ, ಚತುರ್ಭುಜಗಳಿಂದ ಯುಕ್ತನಾಗಿಯೂ, ಇನ್ನು (ಚಕ್ರಗದಾಯುಧಃ) ಅಂದರೆ,-ಚಕ್ರ ಮತ್ತು ಗದಾದಿಗಳಾದ ಆಯುಧಗಳನ್ನು ಧಾರಣೆ ಮಾಡುವಂಥಾ ಮತ್ತು (ಪ್ರಭುಃ) ಅಂದರೆ ಸರ್ವ ಚರಾಚರ ಜಗತ್ತಿನ ನಿಯಂತೃವಾಗಿಯೂ, ಇನ್ನು ಅವಿದ್ಯಾರೂಪವಾದ ಅಂಜನದಿಂ ರಹಿತನಾಗಿಯೂ ಹಾಗೆ (ಭವಾರ್ತಿಭಂಜನಃ) ಅಂದರೆ, ಜನ್ಮ ಮರಣರೂಪ ಸಂಸಾರ ಜನ್ಯವಾದ ಸರ್ವಕ್ಲೇಶಗಳನ್ನು ನಾಶ ಮಾಡುವಂಥಾ ಈ ಪ್ರಕಾರವಾದ ಯಾವ ಮಾಧವ ಅಂದರೆ,-ಲಕ್ಷ್ಮೀಪತಿಯಾದಂಥಾ ಭಗವಂತನಾದ ವಿಷ್ಣುವಿರುವನೋ ಅವನನ್ನು ಸ್ವಪ್ನದಲ್ಲಿಯೂ ನಾನು ಯಾವಾಗಲೂ ಸ್ಮರಣೆ ಮಾಡಿದವನಾಗಲಿಲ್ಲ. ಹಾಗೆ

ಮಾಡಿದ್ದರೆ ಅದರಿಂದ ನನಿಗೆ ಕಲ್ಯಾಣ ವಾಗುತ್ತಿದ್ದುದು. ಆದ್ದರಿಂದ (ವೃಥಾಖಿಲಂ) ಅಂದರೆ,- ನನ್ನ ಸರ್ವ ಆಯುವು ವ್ಯರ್ಥವಾಗಿ ಕಳದು ಹೋಗುತ್ತಿರುವದು. ॥೧೩॥

ಅ॥ ಈಪ್ರಕಾರ ಪಶ್ಚಾತ್ತಾಪಪಟ್ಟು ಈಗ ತನ್ನ ಬಂಧುಜನಗಳನ್ನು ಉದ್ದಿಶ್ಯಮಾಡಿ ಐದು ಶ್ಲೋಕಗಳಿಂದ ವಿಚಾರ ಮಾಡುತ್ತಾನೆ.

— ಇ ಹಾಂ ಗ ನೇ ತಿ —

ಮೂ॥ ಇಹಾಂಗನಾತಾತಸುತಾದಿಬಾಂಧವೈಃ
ಸಮಾಗಮೋಯಂ ಮಮಕಿಂನಿಬಂಧನಃ ॥
ಸಮಾಚಲೋವಾಂಬು ತರಂಗಚಂಚಲೋ
ಹಿತಾವಹೋಮೇ ಕಿಮುತಾಹಿತಾವಹಃ ॥೧೪॥

ಟೀ॥ (ಇಹ) ಅಂದರೆ,- ಈಸಂಸಾರದಲ್ಲಿ, ಅಂಗನಾ- ಯಾವಸ್ತ್ರೀಯು, ಮತ್ತು ತಾತ_ಯಾವಪಿತನು, ಹಾಗೆ ಸುತ - ಯಾವಪುತ್ರನು, ಇತ್ಯಾದಿ ಇನ್ನೂ ಅನ್ಯಗಳಾಗಿರುವ ಯಾವ ತಾಯಿ ಅಣ್ಣ, ಅಕ್ಕ, ತಂಗಿಗಳಾದಿಯಾದ ಬಾಂಧವರುಗಳುಂಟೋ, ಆ ಇವರುಗಳೊಡನೆ ಈ ನನ್ನ ಸಮಾಗಮವು ಅಂದರೆ,-ಸಂಯೋಗವು ಯಾವ ನಿಮಿತ್ತದಿಂದಾಗಿರುವದು, “ ಮತ್ತು ಯೇನು ? ಈ ಸಮಾಗಮವು ಸರ್ವದಾ(೧)ಅಚಲವಾಗಿದ್ದೀತೋ,ಅಲ್ಲದೆ ಯಾವದಾದರು ಒಂದುಕಾಲದಲ್ಲಿ (ಅಂಬುತರಂಗಚಂಚಲಃ) ಅಂದರೆ,-ನೀರಿನ ಅಲೆಗೆ ಸಮಾನವಾಗಿ ಕ್ಷಣಮಾತ್ರದಲ್ಲಿ ನಾಶವಾಗಿ ಹೋದೀತೋ,, ಹಾಗೆ ಯೇನು ಇವರ ಸಮಾಗಮವು ನನಿಗೆ ಹಿತವನ್ನುಂಟುಮಾಡುವದಾಗಿರುವದೋ ಅಲ್ಲದೆ (ಅಹಿತಾವಹಃ) ಅಂದರೆ,-ಅಹಿತ-ಅಂದರೆ, ಹಾನಿಯನ್ನುಂಟುಮಾಡುವದಾಗಿರುವದೋ ॥೧೪॥

ಅ—ಮತ್ತು.

— ಇಮೇಚೇತಿ —

ಮೂ—ಇಮೇಚದಾರಾತ್ಮಜ ಸೇವಕಾದಯಃ ।
ಸಮಾಶ್ರಿತಾಮಾಮಥಕರ್ಮಪಾನಿಜಂ ॥
ಗತಿಸ್ತ್ವಥೈಷಾಂನಸುಕಾಭವಿಷ್ಯತಿ ।

ಅ—ವೃತ್ತ.

—ಪಾಪೈರಿತಿ—

ಮೂ॥—ಪಾಪೈರನೇಕೈಸ್ತ್ರ್ಯಯದರ್ಥಮಾದರಾತ್ |
ವಿತ್ತಂಸಮಾನೀಯಕರೋಷಿಸಂವ್ಯಯಮ್ ॥
ತೇಬಾಂಧವಾಸ್ತ್ವಮಮದುಃಖಭಾಗಿನಃ |
ಕಿಂನಾಭನಿಷ್ಯಂತಿಗತಸ್ಯರೌರವಮ್ ।೧೬॥

ಟೀಕಾ—(ಯದರ್ಥಂ) ಅಂದರೆ,—ಯಾವ ಸ್ತ್ರೀ ಪುತ್ರಾದಿಯಾದ ಬಂಧುಜನಗಳಿಗೋಸುಗ, (ಪಾಪೈರನೇಕೈಃ) ಅಂದರೆ, ಅಸತ್ಯಭಾಷಣ, ಕಪಟ, ಛಲಾದಿಯಾದ ಅನೇಕ ಪಾಪಗಳಿಂದ, ವಿತ್ತ ಯಾವದ್ರವ್ಯ ಉಂಟೋ, ಅದನ್ನು ಎಲ್ಲೆಲ್ಲಿಂದಲೂ ತೆಗದುಕೊಂಡು ಬಂದು ನೀನು ಅತಿ ಆದರಪೂರ್ವಕವಾಗಿ, ಅವರುಗಳ ವಸ್ತ್ರ ಆಭರಣಾದಿಗಳಲ್ಲಿ (ಸಂವ್ಯಯಂ) ಅಂದರೆ,—ಸಮ್ಯಕ್ ಪ್ರಕಾರದಿಂದ ವ್ಯಯ ಮಾಡುತ್ತಿ

ವಂ ಮಾಡಿದಳು ಎಂದು ಹೇಳುವಲ್ಲಿ. ಶ್ಲೋ॥ ತಚ್ಛ್ರುತ್ವಾಲಕ್ಷ್ಮಣಃಪ್ರಾಹಸಖೇಶೃಣುವಚೋ
ಮಮ। ಕಃ ಕಸ್ಯಹೇತುರ್ದುಃಖಸ್ಯಕಶ್ಚಹೇತುಸ್ಸುಖಸ್ಯವಾ ।
ಸ್ವಪೂರ್ವಾರ್ಜಿತಕರ್ಮೈವಕಾರಣಂ ಸುಖದುಃಖಯೋಃ ॥೪॥
ಸುಖಸ್ಯದುಃಖಸ್ಯನಕೋಪಿದಾತಾಪರೋದದಾತೀತಿಕುಬುದ್ಧಿರೇಷಾ ।
ಅಹಂಕರೋಮೀತಿವೃಥಾಭಿಮಾನಸ್ಸ್ವಕರ್ಮಸೂತ್ರಗ್ರಥಿತೋಹಿಲೋಕಃ॥

ಟೀ॥ ಆ ಮಾತಂ ಕೇಳಿದ ಲಕ್ಷ್ಮಣನು ಹೇಳಿದನು, ಎಲೈ ಸಖನೇ, ಎನ್ನ ವಚನವಂ ಕೇಳು, ಯಾವ ಪುರುಷನು ಯಾವನ ದುಃಖಕ್ಕೆ ಕಾರಣವಾಗುವನು, ಯಾವನ ಸುಖಕ್ಕಾದರೂ ಕಾರಣವಾಗುವನು, ಆವನಿಗಾಗಲೀ ಅವನ ಪೂರ್ವಾರ್ಜಿತ ಕರ್ಮವೇ ಅವನ ಸುಖದುಃಖಗಳಿಗೆ ಕಾರಣವಾಗುವದು, ॥೪॥ ಸುಖಕ್ಕಾಗಲೀ ದುಃಖಕ್ಕಾಗಲೀ ಕೊಡುವಂಥಾವನು ಯಾವನೂ ಇಲ್ಲವಾದ್ದರಿಂದ ಇನ್ನೊಬ್ಬನಿಂದಾಯಿತೆಂಬೀ ಜ್ಞಾನವು ಕುತ್ಸಿತವಾದ ಬುದ್ಧಿ ಎನಿಸುವದು, ಸಮಸ್ತ ಪ್ರಪಂಚವು ಸ್ವಕೀಯವಾದ ಕರ್ಮವೆಂಬ ಸೂತ್ರದಿಂದ ಕಟ್ಟಲ್ಪಟ್ಟಿರುವದಲ್ಲವೇ, ಅದರಿಂದ ನಾನು ಈ ಕಾರ್ಯವಂ ಮಾಡುವೆನು ಎಂಬ ಅಭಿಮಾನವು ವ್ಯರ್ಥವೆನಿಸುವದು, ಹಾಗಲ್ಲದೆ ಇನ್ನೊಬ್ಬನಿಂದಾಯಿತು ಎನುವಲ್ಲಿ ಅವನು ನಿಮಿತ್ತವಾಗುವನು, ಅದಕ್ಕೂ ಕರ್ಮಸಂಬಂಧವೇ ಕಾರಣವೆಂದು ತಿಳಿಯತಕ್ಕದ್ದು ಎಂದನು, ಈ ವಿಷಯವು ಇನ್ನೂ ಅಧಿಕವಾಗಿ ಹೇಳಲ್ಪಟ್ಟಿರುವದು, ಪ್ರಕೃತದಲ್ಲಿ ಎಷ್ಟು ಉಪಯೋಗಸ್ತೋ ಅಷ್ಟು ಬರೆಯಲ್ಪಟ್ಟಿರುವದು,

ರುವೆನು. ಆದರೆ-ಯಾವ ಕಾಲದಲ್ಲಿ ಆ ಪಾಪಗಳ ಫಲವನ್ನು ಭೋಗಿಸುವದಕ್ಕೋಸ್ಕರ, ನಾನು ರೌರವ ನರಕದಲ್ಲಿ ಹೋಗುವೆನೋ, ಆಗ ಯೇನು ಅಕಾಲದಲ್ಲಿ (ಮಮದುಃಖಭಾಗಿನಃ) ಅಂದರೆ, ಆ ಬಂಧುಜನಗಳು ನನ್ನ ದುಃಖಕ್ಕೆ ಭಾಗಿಗಳಾಗುವರೋ, ಅಥವಾ ಇಲ್ಲವೋ, ಅಂದರೆ ಆಗುವದೇ ಇಲ್ಲವೋ ಯಾತಕ್ಕಂದರೆ, ಇಲ್ಲಿಯೆ ಪ್ರತ್ಯಕ್ಷವಾಗಿ, ಯಾವ ನಿಮಿತ್ತದಿಂದಲೋ, ನನಿಗೆ ಅಲ್ಪಜ್ವರಾದಿಯಿಂದುಂಟಾದ ದುಃಖವಾಗುವಲ್ಲಿ, ಆ ಸರ್ವ ಬಂಧುಜನಗಳು ಸಮೀಪದಲ್ಲಿಯೇ ಇರುತ್ತಿದ್ದರೂ, ಅದನ್ನು ಹಂಚಿಕೊಳ್ಳುವದಕ್ಕೆ ಅಥವಾ ನಿವೃತ್ತಿ ಮಾಡುವದಕ್ಕೆ ಸಮರ್ಥರಾಗದಮೇಲೆ, ನರಕದಲ್ಲಿ ಹ್ಯಾಗೆ ಹಂಚಿಕೊಂಡಾರು ? ಹಾಗೆ ಈ ವಾರ್ತೆಯು ಅಥರ್ವವೇದದ ಗರ್ಭೋಪನಿಷತ್ತಿನಲ್ಲಿ ಯುಪೇಳಲ್ಪಟ್ಟಿರುವದು. “ ಯನ್ಮಯಾಪರಿಜನಸ್ಯಾರ್ಥೇಕೃತಂಕರ್ಮಶುಭಾಶುಭಮ್ । ಏಕಾಕೀತೇನದಹ್ಯೇಹಂ ಗತಾಸ್ತೇಫಲಭೋಗಿನಃ ,, ಅರ್ಥ॥ ತಾಯಿಯ ಉದರದಲ್ಲಿ ಬಾಲಕನು ಪೇಳುತ್ತಾನೆ, ಯೇನಂದರೆ,-ಹೇ ಈಶ್ವರ ತನ್ನ ಬಂಧುಜನಗಳಿಗೋಸುಗ, ಯಾವಯಾವ ಶುಭಾಶುಭ ಕರ್ಮಗಳು ಪೂರ್ವ ಜನ್ಮದಲ್ಲಿ ನಾನು ಮಾಡಿದ್ದೆನೋ. ಆದರಿಂದ ಈ ಕಾಲದಲ್ಲಿ ನಾನು ಒಬ್ಬನೇ ಈ ಮಾತೃವಿನ ನರಕ ತು(೧)ಲ್ಯವಾದ ಗರ್ಭದಲ್ಲಿ ಜ(೨)ಠರಾನಲದಿಂದ ಸುಡಿಸಿಕೊಳ್ಳುತ್ತಿರುವೆನು. ಮತ್ತು ಯಾವ ಫಲವನ್ನು ಭೋಗಿಸುವಂಥಾ ಬಂಧುಜನಗಳಿದ್ದರೋ ಅವರೆಲ್ಲರೂ ಹೊರಟುಹೋದರು. ಅದರಿಂದ ಈ ಕಾಲದಲ್ಲಿ ನನಿಗೆ ಯಾರೂ ಸಹಾಯಕರಿಲ್ಲ ಆದ್ದರಿಂದ ಈಗ ಈ ಬಂಧುಜನಗಳಿಗೋಸ್ಕರ ಪಾಪಕರ್ಮವು ಮಾಡುವದೂ ವ್ಯರ್ಥವೆನಿಸುವದು ... ... ॥೧೬॥

ಅ॥ ಮತ್ತು ಯೇನಂದರೆ, ಯಾವ ಜೀವನಿಗೆ ಯಾವದರೊಡನೆಯು ಪರಸ್ಪರ ಸಂಬಂಧವಿಲ್ಲ. ಆದ್ದರಿಂದಲೇ ನರಕದಲ್ಲಿಯಾರೂ ದುಃಖದ ಭಾಗಿಗಳಾಗುವದಿಲ್ಲ, ಈ ವಿಷಯುವನ್ನು ಇನ್ನುಮೇಲೆ ಕಥಿಸುತ್ತಾರೆ.

---

೧. ಸಮಾನ.

೨. ಹೊಟ್ಟೆಯೊಳಗಿರುವ ಅಗ್ನಿ.

—ಸಾಯಂನೀತಿ—

ಮೂ—ಸಾಯಂಸಮೇತ್ಯೈಕತರುಂವಿಹಂಗಮಾಃ|
ಪ್ರಾತಃಪ್ರಯಾಂತೀಹದಿಶಂಸ್ವಕಾಂಸ್ವಕಾಂ॥
ತ್ಯಕ್ತ್ವಾಯಥಾನ್ಯೋನ್ಯಮಗಂಚತಂತಥಾ |
ಸರ್ವೇಸಮಾಯಾಂತಿಚಯಾಂತಿಬಾಂಧವಾಃ ॥೧೭॥

ಟೀಕಾ॥ (ಸಾಯಂಸಮೇತ್ಯ) ಅಂದರೆ,-ಯಾವ ಪ್ರಕಾರ ಸಾಯಂಕಾಲದಲ್ಲಿ ಯಲ್ಲಾ ದಿಕ್ಕುಗಳಿಂದ ಬಂದು ಬಂದಂಥಾ ಪಕ್ಷಿಗಳು, ಒಂದು ವೃಕ್ಷದಮೇಲೆ ಒಟ್ಟುಗೂಡಿಕೊಂಡು, ರಾತ್ರಿಪರ್ಯಂತವು ನಿವಾಸಮಾಡಿ. ಪುನಃ ಪ್ರಾತಃಕಾಲ ಪ್ರಾಪ್ತವಾಗುವಾಗ್ಯೆ, ಆ ವೃಕ್ಷವನ್ನೂ ಹಾಗೆ ಒಂದೆರಡು ಪಕ್ಷಿಗಳನ್ನೂ ಬಿಟ್ಟುಬಿಟ್ಟು, (ದಿಶಂಸ್ವಕಾಂಸ್ವಕಾಂ) ಅಂದರೆ,-ತಮತಮಗೆ ಅಭಿಮತವಾದ ದಿಕ್ಕುಗಳಿಗೆ ಹೊರಟುಹೋಗುವವ್ರೋ ಹಾಗೆಯೇ ತಾಯಿ, ತಂದೆ, ಹೆಂಡತಿ, ಮಕ್ಕಳಾದಿಯಾದ ಸರ್ವಬಾಂಧವ ಜನಗಳು ಸ್ವರ್ಗ ನರಕಾದಿ ರೂಪವಾದ ದಿಕ್ಕುಗಳಿಂದ ಬಂದು, ಜನ್ಮರೂಪವಾದ ಸಾಯಂಕಾಲ ಮೊದಲುಗೊಂಡು, ಪ್ರಾರಬ್ಧಕರ್ಮರೂಪವಾದ ರಾತ್ರಿಪರ್ಯಂತವು, ಗೃಹರೂಪವಾದ ವೃಕ್ಷದಮೇಲೆ, ಗುಂಪುಕೂಡಿದ್ದು, ಪುನಃ ಮೃತ್ಯುರೂಪವಾದ ಪ್ರಾತಃಕಾಲವಾಗುತ್ತಲೆ, ಆ ಗೃಹವನ್ನು ಹಾಗೆ ಒಂದೆರಡು ಬಂಧುಜನಗಳನ್ನೂ ಬಿಟ್ಟುಕೊಟ್ಟು, ತಮ್ಮತಮ್ಮ ಕರ್ಮಾನುಸಾರವಾಗಿ, ಸ್ವರ್ಗ ನರಕಾದಿರೂಪವಾದ, ಅಭಿಮತದಿಕ್ಕುಗಳಿಗೆ, ಹೊರಟುಹೋಗುವರು. ಹಾಗೆ ಈ ವಾರ್ತೆಯು ಅ(೧)ನ್ಯತ್ರದಲ್ಲೂ ಪ್ರಕಟಮಾಡಲ್ಪಟ್ಟಿರುವದು. “ಯಥಾಕಾಷ್ಠಂಚಕಾಷ್ಠಂಚಸಮೇಯಾತಾಂಮಹೋದಧೌ | ಸಮೇತ್ಯಚವ್ಯಪೇಯಾತಾಂತದ್ವದ್ಭೂತಸಮಾಗಮಃ „ ಅರ್ಥ ॥ ಹ್ಯಾಗೆ ಸಮುದ್ರದಲ್ಲಿ ನೀರಿನ ಅಲೆಗಳಿಂದ ಒಂದು ಯಾವದೋ ದಿಕ್ಕಿನಿಂದಲೂ, ಇನ್ನೊಂದು ಮತ್ತ್ಯಾವದೋ ದಿಕ್ಕಿನಿಂದಲೂ, ಬರಲ್ಪಟ್ಟ ಎರಡು ಕಾಷ್ಠಗಳು ಕ್ಷಣಮಾತ್ರದಲ್ಲಿ ಕೇರಿಕೊಂಡಿದ್ದು ಆ ಮೇಲೆ ಪುನಃ

೧. ಜ್ಞಾನವಾಸಿಷ್ಠದಲ್ಲಿ.

ಎರಡನೆ ಅಲೆಯು ವೇಗದಿಂದ ಅವು ಪರಸ್ಪರ ವಿಯೋಗವನ್ನು ಪಡದುಕೊಳ್ಳುತ್ತಿರುವವೋ ಹಾಗೆಯೆ ಸಂಸಾರ ರೂಪವಾದ ಸಮುದ್ರದಲ್ಲಿ ಪ್ರಾರಬ್ಧ ಕರ್ಮರೂಪವಾದ ಅಲೆಗಳ ವೇಗದಿಂದ ಬಂಧು ಜನಗಳು ಗುಂಪುಕೂಡಿಕೊಳ್ಳುವರು, ಅವರು ಪುನಃ ಯಾವಾಗ ಮೃತ್ಯುರೂಪವಾದ, ಎರಡನೆ ಅಲೆಯು ವೇಗವಾಗುವದೋ ಆಗ ಪರಸ್ಪರ ವಿಯೋಗವಂ ಪಡೆಯುತ್ತಿರುವರು. ಆದ್ದರಿಂದ ಇವರು ಮರಣವಾದ ಬಳಿಕ ದುಃಖಿಸುವದೂ ಕೂಡ ವ್ಯರ್ಥವೆನಿಸುವದು. ... ... ||೧೭||

ಅ—ಈ ಪ್ರಕಾರದಿಂದ ವಿಚಾರವಂ ಮಾಡಿ ಈಗ ವೈರಾಗ್ಯವಂ ಪೊಂದಿದವನಾಗಿ, ಪುನಃ ಇಂತೆಂದನು.

— ಯಥೇತಿ. —

ಮೂ—ಯಥಾಕಪೋತೋನ್ನಕಣಾಭಿಲಾಂಛಯಾ |
ಶಿಚಂಪ್ರವಿಶನ್ನೈತಿದುರಂತಬಂಧನಂ ||
ಕುಟುಂಬಜಾಲೇವಿಷಯಾಶಯಾಪಿಶಂ |
ತಥಾಪಿಮುಚ್ಯೇಯಕಥಂಜಗತ್ಪತೇ ||೧೮||

ಟೀಕಾ—(ಯಥಾ) ಅಂದರೆ,-ಹ್ಯಾಗೆ ಅ(೧)ನ್ನದ ಕಣಗಳ ಅಭಿಲಾಷೆಯಿಂದ ಕ(೨)ಪೋತಾದಿ ಪಕ್ಷಿಗಳು (ಶಿಚಂ) ಜಾ(೩)ಲದಲ್ಲಿ ಪ್ರವೇಶ ಮಾಡಿದ್ದರಿಂದ ಅತಿದೃಢವಾದ ಬಂಧನಕ್ಕೆ ಪ್ರಾಪ್ತವಾಗಿ, ಪುನಃ ಅನೇಕ ಪ್ರಕಾರವಾದ, ಶರೀರ ಛೇದನಾದಿ ಕ್ಲೇಶಗಳಂ ಪೊಂದುತ್ತಿರುವವೋ ಹಾಗೆಯೆ ನಾನು (ವಿಷಯಾಶಯಾ) ಅಂದರೆ,-ಸ್ತ್ರೀಸಂಗಾದಿ ವಿಷಯಗಳ ಆಶೆಯಿಂದ ಈ ಕುಟುಂಬ ರೂಪವಾದ, ಮಹಾ ಜಾಲದಲ್ಲಿ ಪ್ರವೇಶ ಮಾಡುತ್ತಿರುವೆನು. ಅದನ್ನು ನಾನು ತಿಳಿಯದವನಾಗಿರುವೆನು. ಯೇನಂದರೆ,-ನಾನು ಇದರಲ್ಲಿ ಸಿಕ್ಕಿಕೊಂಡರೆ ಯೇನು ದಶೆಯಾದೀತು ಎಂಬು

೧ ಭತ್ತ, ರಾಗಿ ಜೋಳ, ನವಣೆ ಮೊದಲಾದ ಕಾಳುಗಳ ಅಪೇಕ್ಷೆ

೨ ಪಾರಿವಾಳದ ಪಕ್ಷಿ, ಆದಿಶಬ್ದದಿಂದ ಗುಬ್ಬಚ್ಚಿ ಶುಕಪಿಕಾದಿಗಳನ್ನು ಗ್ರಹಿಸಿಕೊಳ್ಳತಕ್ಕದ್ದು.

೩ ಬಲೆ

ದನ್ನು, ಆದಕಾರಣಹೇ(ಜಗತ್ಪತೆ) ಅಂದರೆ,- ಸರ್ವಜಗತ್ತುಗಳಿಗೆ ಅಧಿಪತಿಯಾದಂಥಾ ಎಲ್ಲ ಅಂತರ್ಯಾಮಿಯಾದ ಈಶ್ವರನೆ ನಾನು ಈ ಕುಟುಂಬ ರೂಪವಾದ ಜಾಲದಿಂದ ಯಾವ ಪ್ರಕಾರವಾಗಿ, (ವಿಮುಚ್ಯೇಯೆ) ಅಂದರೆ,-ಮು(೮)ಕ್ತನಾದೇನು ? ಯಾತಕ್ಕಂದರೆ, ಈ ಜಾಲವು ಬಹು ದೊಡ್ಡದಾಗಿ ಮಹೋನ್ನತವಾಗಿರುವದು. ಆದರಿಂದ ಬಿಡಿಸಿಕೊಳ್ಳಲು ಅತ್ಯಂತ ದುಷ್ಕರವಾಗಿರುವದು. ಹಾಗೆ ಈ ವಾರ್ತೆಯು ಭಾಗವತದಲ್ಲಿಯೂ ನಿರೂಪಿಸಲ್ಪಟ್ಟಿರುವದು. “ ಲೋಹದಾರುಮಯೈಃಪಾಶೈರ್ದೃಢಬದ್ಧೋಪಿಮುಚ್ಯತೆ ,, ಸ್ತ್ರೀಧನಾದಿಷು ಸಂಸಕ್ತೋಮುಚ್ಯತೆನ ಕದಾಚನ ,, ಅರ್ಥ-ಅಜ್ಞಾನಿಯಾದ ಪುರುಷನು, ಲೋಹ ಮತ್ತು ಕಾಷ್ಠಾದಿಯಾದ ದೃಢಪಾಶಗಳಿಂದ ಒದ್ಧನಾದರೆ, ಯಾವದಾನೊಂದು ಕಾಲದಲ್ಲಿ ಯಾವದೋ ಒಂದು ಉಪಾಯದಿಂದ, ಮುಕ್ತನೂ ಆಗಬಹುದು. ಆದರೆ,-ಸ್ತ್ರೀಧನ ಪುತ್ರಾದಿ ರೂಪವಾದ ಯಾವ ಪಾಶವುಂಟೋ, ಅದರಲ್ಲಿ ಸಿಕ್ಕಿಕೊಂಡರೆ, ಒಂದುಕಾಲಕ್ಕೂ ಮುಕ್ತನಾಗಲು ಶಕ್ಯವಾಗುವದಿಲ್ಲ. ॥೧೮॥

ಅ—ಈ ಪ್ರಕಾರವಾಗಿ ಸಾಮಾನ್ಯದಿಂದ ಸರ್ವಬಂಧು ಜನಗಳಲ್ಲಿ ದೋಷ ದೃಷ್ಟಿಯನ್ನು ತೋರಿಸಿದವರಾಗಿ, ಈಗ ಪುನಃ ಎರಡುಶ್ಲೋಕಗಳಿಂದ ಪೃಥಕ್ಕಾಗಿ ಸ್ತ್ರೀಯಲ್ಲಿ ದೋಷ ದೃಷ್ಟಿವರ್ಣನೆಯಂ ಮಾಡುತ್ತಾರೆ.

ಇಯಮಿತಿ.

ಮೂ—ಇಯಂಚಮುಕ್ತಾವಲಿಲಸತ್ಪಯೋಧರಾ ।
ಕ್ವಣನ್ಮಣಿಮಾತ್ರಸಿತಂಬಮಂಡಲಾ ॥
ವಿಭಾತಿರಮ್ಯಾಲಲನಾವಿಚಾರತೊ ।
ವಿಚಾರದೃಷ್ಟ್ಯಾತುಕುಮಾಂಸಸ್ತ್ರಿಕಾ ॥೧೯॥

ಟೀಕಾ- (ಮುಕ್ತಾವಲಿಲ ಸತ್ಪಯೋಧರಾ) ಅಂದರೆ,-ಮುತ್ತುಗಳ ಹಾರವು ಧರಿಸುವದ್ದರಿಂದ, ಹ್ಯಾಗೆ ಶೋಭಾಯಮಾನವಾಗಿರುವದೋ,

---

೮ ಬಿಡಿಸಿಕೊಳ್ಳುವೆನು

ಹಾಗೆ ಅವಳ ಸ್ತನವು, ಮತ್ತು (ಮಣಿಪಾತ್ರ) ಅಂದರೆ- ಮಣಿಗಳ ಸಮೂಹದಂತೆ, ಅವಳ (ನಿತಂಬಮಂಡಲ) ಅಂದರೆ,—ಕಟಿಸ್ಥಾನದಲ್ಲಿ ಸುಂದರವಾದ ಝುಣತ್ಕಾರ ಶಬ್ದ ಮಾಡಲ್ಪಡುವದು, ಇವೇ ಮೊದಲಾಗಿ ಇನ್ನೂ ಅನೇಕ ಆಭೂಷಣಗಳಿಂದಲೂ ಪಟ್ಟಾದಿ ಸುಂದರ ವಸ್ತ್ರಗಳಿಂದಲೂ ಶೋಭಾಯಮಾನವಾದ ಯಾವ ಈ (ಲಲನಾ) ಅಂದರೆ, ನನ್ನ ಸ್ತ್ರೀ ಇರುವಳೋ ಅವಳು ಕೇವಲ ವಿಚಾರ ಮಾಡದಿರುವದ್ದರಿಂದ (ರಮ್ಯಾ) ಅಂದರೆ,- ರಮಣೀಯವಾಗಿ ಪ್ರತೀತವಾಗುತ್ತಿರುವಳು, ಇನ್ನು (ವಿಚಾರದೃಷ್ಟ್ಯಾತು) ಅಂದರೆ,-ಯಾವದು ಇಗಳ ಅವಯವಗಳಲ್ಲಿ ಸುಂದರವಾದದ್ದೆಂದು ವಿಚಾರ ದೃಷ್ಟಿಯಿಂದ ಭಿನ್ನ ಭಿನ್ನ ಮಾಡಿ ನೋಡಿದರೆ, ಕೇವಲವಾದ (ಕುಮಾಂಸಪುತ್ರಿಕಾ) ಅಂದರೆ,-ಒಂದು ಮಹಾ ಅಪವಿತ್ರವಾದ ಮಾಂಸದ ಪುತ್ತಳಿಯಂತೆ ದೃಷ್ಟವಾಗುತ್ತಿರುವದು. ಹಾಗೆ ಈ ವಿಷಯವು ಯೋಗವಾಸಿಷ್ಠದಲ್ಲೂ, ಪ್ರಸ್ತಾಪಿಸಿರುವದು. "ತ್ವಙ್ಮಾಂಸರಕ್ತ-ಬಾಷ್ಪಾಂಬು ಪೃಥಕ್-ಕೃತ್ವಾ ವಿಲೋಚನೆ ಸಮಾಲೋಕಯ ರಮ್ಯಂ ಚೇತ್ಕಿಮುಧಾ ಪರಿಮುಹ್ಯಸಿ,, ಅರ್ಥ- ಎಲೈ ಪುರುಷನೆ! ಸ್ತ್ರೀಶರೀರದಿಂದ ಚರ್ಮ, ಮಾಂಸ, ರಕ್ತ, ಮೇದಸ್ಸು ಮಜ್ಜಾ ಸ್ನಾಯ್ವಾದಿ ಅವಯವಗಳನ್ನು ನೀನು ಪೃಥಕ್ (೧) ಪೃಥಕ್ಕಾಗಿ ನೋಡು, ಯಾವದು ಅದರಲ್ಲಿ ಯೇನು ರಮಣೀಯವು, ಮತ್ತು ಪವಿತ್ರವಾದ ವಸ್ತುವಾವದೂ ಇಲ್ಲವು, ಯಾತಕ್ಕೆಂದರೆ, ವ್ಯರ್ಥವಾಗಿ ಮೇಲಿನ ಭಾವವನ್ನು ನೋಡುವದರಿಂದ ಮೋಹಕ್ಕೆ ಪ್ರಾಪ್ತವಾಗುವದು. ಎಂದು, ಆದ್ದರಿಂದ ಈಗ ಸ್ತ್ರೀಯಲ್ಲೂ ಆಸಕ್ತಿ ಮಾಡುವಂಥಾದ್ದು ವ್ಯರ್ಥವೆನಿಸುವದು. ... ||೧೯||

ಅ—ಮತ್ತು ಯೇನಂದರೆ,

ಪಷಾತ್ವಿತಿ.

ಮೂ—ಪಷಾತುಬದ್ಧಾವಲಕಥಾಮಭಿದ್ಯರ್ಥಾಂ |
ಕೃಷ್ಟ್ವಾ ವಿಚಾರಾಂಚಿತಲೋಲವೀಕ್ಷಣೈಃ ||

---

೧ ಬೇರೆ ಬೇರೆಯಾಗಿ ವಿಂಗಡಿಸಿ ನೋಡಿದರೆ, ಯಾವದೂ ಕ್ರೀಡೆಗೆ ಯೋಗ್ಯವಾಗಿಯೂ ಮತ್ತು ದೋಷರಹಿತವಾಗಿಯೂ ಇರುವ ವಸ್ತುವಿಲ್ಲವೆಂಬ ತಾತ್ಪರ್ಯ

ಮಾಮಂಗನಾನರ್ತಯತೀಹಸಂತತಂ |
ನಾದ್ಯಾಪಿಲಜ್ಜೇಕಪಿತುಲ್ಯತಾಂಗತಃ ॥೨೦॥

ಟೀಕಾ-ವಿಷಾ ಅಂದರೆ,-ಈ ಸ್ತ್ರೀಯು ನನಿಗೆ ಅಲಕ-ದಾಮಭಿಃ ಅಂದರೆ,-ತನ್ನ ಮನೋಹರವಾದ ಮುಂಗುರುಳು ರೂಪರಜ್ಜುವಿನಿಂದ, ದೃಢವಾಗಿ ಬಂಧಿಸುವದ್ದರಿಂದಲೂ, ಮತ್ತು (ಹಾವಾಂಚಿತ) ಅಂದರೆ, ಕಟಾಕ್ಷಗರ್ಭಿತವಾದ ನೇತ್ರಗಳನ್ನು ಕ್ಷಣೆಕ್ಷಣೆತಿರುಗಿಸುತ್ತಾ ನೋಡುವದ್ದರಿಂದಲೂ, ಆಕರ್ಷಣ ಅಂದರೆ, ಎಳದುಕೊಂಡು ಯಾವಾಗಲೂ, (ನರ್ತಯತಿ) ಅಂದರೆ,-ಕುಣಿಸುತ್ತಿರುವಳು. ಹ್ಯಾಗೆ ಆಟಗಾರನು ಕೋತಿಯನ್ನು ಕುಣಿಸುತ್ತಿರುವನೋ, ಅಂದರೆ, ಈ ವಸ್ತ್ರ ತೆಗದುಕೊಂಡುಬಾ ಈ ಭೂಷಣ ತೆಗದುಕೊಂಡುಬಾ, ಈ ವಸ್ತು ಮನೆಯಲ್ಲಿ ಇಲ್ಲ, ಇತ್ಯಾದಿ ಅನೇಕ ಪ್ರಕಾರವಾದ ಕಾರ್ಯಗಳಲ್ಲಿ ಸರ್ವದಾ ಭ್ರಮಣಗೊಳಿಸುತ್ತಿರುವಳು. ಆದ್ದರಿಂದ ನಾನು ಈ ಪ್ರಕಾರದಿಂ (ಕಪಿತುಲ್ಯತಾಂಗತಃ) ಅಂದರೆ-ಕೋತಿಗೆ ಸಮಾನತ್ವವಂ ಹೊಂದಿದ್ದಾಗ್ಯೂ ಈಗ ವೃದ್ಧಾವಸ್ಥೆಯಲ್ಲೂ ಲಜ್ಜೆಯಂ ಪಡೆಯುದವನಾಗಿರುವೆನು. ಅಹೋ-ಇದುಯೇನು ಆಶ್ಚರ್ಯದ ವಾರ್ತೆಯಾಗಿರುವದು. ತಾತ್ಪರ್ಯವೇನಂದರೆ ಹ್ಯಾಗೆ ಮಹಾವನದಲ್ಲಿ ಸ್ವತಂತ್ರವಾಗಿ ಚರಿಸುವಂಥಾ ಕೋತಿಗೆ ಸ್ವಲ್ಪರುಚಿಯ ಆಶೆಯನ್ನು ತೋರಿಸುವದ್ದರಿಂದ ಆಟಗಾರನು ಹಿಡಿದುಕೊಂಡು, ಬಳಿಕ ಸರ್ವ ಆಯುಷ್ಯ ಪರ್ಯಂತವು ಅದನ್ನು ಕುಣಿಸುತ್ತಾ ಹಾಗೆ ಮಹಾ ೨ ದೀನತೆಯನ್ನು ಮಾಡಿ ಬಿಡುವನೋ, ಹಾಗೆಯೇ ಬ್ರಹ್ಮರೂಪವಾದ ಮಹಾವನದಲ್ಲಿ ಸ್ವತಂತ್ರವಾಗಿ ಚರಿಸುವಂಥಾ ಯಾವ ನಾನಿರುವೆನೋ, ಅಂಥಾ ನನಿಗೆ ಸಂಭೋಗ ರೂಪವಾದ ರುಚಿಯ ಆಶೆಯನ್ನು ತೋರಿಸುವದರಿಂದ ಈ ಸ್ತ್ರೀಯು ಹಿಡಿದು ಅಂದರೆ ತನ್ನಾಧೀನವಮಾಡಿಕೊಂಡು ಸರ್ವ ಆಯುಷ ಪರ್ಯಂತವು, ನಾಟ್ಯವಾಡಿಸುತ್ತಿರುವಳು.

---

೧ ಕೋತಿಯ ಆಟಗಾರನು ವನದಲ್ಲಿ ಕೋತಿಯನ್ನು ಸ್ವಾಧೀನ ಪಡಿಸಿಕ್ಕೊಳ್ಳಲೋಸುಗ ಯಾವದಾದರೂ ಹಣ್ಣುಗಳನ್ನೂ, ಅಲ್ಲದೆ ಭಕ್ಷ್ಯಗಳನ್ನೂ, ಅಲ್ಪಸ್ವಲ್ಪವಾಗಿ ತಿನ್ನುವದಕ್ಕೆ ಕೊಟ್ಟು, ಅದನ್ನು ಸ್ವಾಧೀನಮಾಡಿ ಕೊಳ್ಳುವನು

೨ ಬಡವಾಗಿ

ಆದ್ದರಿಂದ ಈಗ ಇವಳ ಸಂಗದಿಂದ ಬಿಡಿಸಿಕೊಳ್ಳಲು ಅವಶ್ಯವಾಗಿ ಯಾವದಾದರೂ ಉಪಾಯ ಮಾಡುವದು ಉಚಿತವಾಗಿರುವದು. ||೨೦||

ಅ-ಈ ಪ್ರಕಾರವಾಗಿ ಸ್ತ್ರೀಯಲ್ಲಿ ದೋಷ ದೃಷ್ಟಿಯನ್ನು ತೋರಿಸಿದವರಾಗಿ, ಈಗ ಪುತ್ರನಲ್ಲಿ ತೋರಿಸುತ್ತಿರುವರು.

ಸೂನುರಿತಿ ...

ಮೂ—ಸೂನುರ್ಮಯಾಯಂಪರಿಪೂಜ್ಯದೇವತಾ ।
ಲಬ್ಧಃಪ್ರಯತ್ನೇನಚವರ್ಧಿತೋಧುನಾ ॥
ಮಾಮೇವಮೂರ್ಖಃಪರಿಶಿಕ್ಷಿತಃಸ್ತ್ರಿಯಾ ।
ದ್ವೇಷ್ಟಿತ್ಯಹೋಭಾಗ್ಯವಿಪರ್ಯಯೋಹಿಮೇ ॥೨೧॥

ಟೀಕಾ। (ಮಯಾ) ಅಂದರೆ,-ನಾನು ದುರ್ಗಾಭೈರವಾದಿ ಅನೇಕ ದೇವತೆಗಳನ್ನು ಬಹುಕಾಲಪರ್ಯಂತವೂ ವಿಧಿ ಪೂರ್ವಕವಾಗಿ ಪೂಜಿಸಿ ಅವರ ಪ್ರಸಾದದಿಂದ, ಈ (ಸೂನುಃ) ಅಂದರೆ, ಹ್ಯಾಗೂ ಒಬ್ಬ ಪುತ್ರನನ್ನು ಪಡೆದೆನು. ಮತ್ತು (ಪ್ರಯತ್ನೇನ) ಅಂದರೆ, ಅತಿಪ್ರಯತ್ನದಿಂದ ಇವನಿಗೆ ಪೋಷಣೆಯನ್ನು ಮಾಡಿ ವೃದ್ಧಿಗೊಳಿಸಿದೆನು, ಹಾಗೆ ಅತೀಕಷ್ಟದಿಂದ ಸಂಪಾದಿಸಿದಂಥಾ ದ್ರವ್ಯಗಳನ್ನು ವ್ಯಯಮಾಡಿ ಇವನಿಗೆ ಓದು ಕಲಿಸಿ ವಿವಾಹವನ್ನೂ ಮಾಡಿದೆನು. ಇಷ್ಟಾದರು ಇವನು ಕೃತಘ್ನ (ಪರಿಶಿಕ್ಷಿತಃ ಸ್ತ್ರಿಯಾ) ಅಂದರೆ,-ಈಗ ಸ್ತ್ರೀಯಿಂದ ಶಿಕ್ಷಿತನಾಗಿ, ಅಂದರೆ, ನಿನ್ನ ತಂದೆ ನನಗೆ ಹೀಗೆ ದುರ್ವಚನವಂ ಪೇಳುತ್ತಿದ್ದನು, ನಿನ್ನ ತಾಯಿ ನನಗೆ ಹೀಗೆನ್ನುತ್ತಿದ್ದಳು, ಇವೇ ಆದಿಯಾದ ಅವಳ ವಚನಗಳಲ್ಲಿ ಭಕ್ತಿ ಇಟ್ಟು, ಅವಳಿಗೆ ವಶೀ ಭೂತನಾದ ಮೂರ್ಖನು, (ಮಾಮೇವದ್ವೇಷ್ಟಿ) ಅಂದರೆ,-ನನ್ನ ಸಂಗಡಲೇ ದ್ವೇಷಭಾವ ಮಾಡಿರುವನು. ಆದ್ದರಿಂದ, ಅಹೋ-ಎಂದರೆ-ಇದು ಬಹುದೊಡ್ಡ ಆಶ್ಚರ್ಯವು. ಅಂದರೆ, ನನ್ನ ಭಾಗ್ಯದ ವಿಪರ್ಯಯವಾಗಿರುವದು. ಯಾತ್ತ

೧. ದಂತಪತನ ಶೀತೋಷ್ಣಾದಿ ಅನೇಕ ಪ್ರಕಾರವಾದ ರೋಗಗಳಿಗೆ ಔಷಧ ಪಾನಾದಿಗಳಿಂದ ಇವನಿಗೆ ರಕ್ಷಣೆಯಂ ಮಾಡಿದೆನು. ೨. ನನ್ನನ್ನು ಮನೆಯಿಂದ ಹೊರಹೊರಡಿಸಿ ತಾನೆ ಸ್ವಾಮಿಯಾಗಿ ಇದ್ದುಕೊಂಡಿರುವನು, ೩, ನನ್ನ ಪುಣ್ಯವು ತಳಕೆಳಗಾದುದು,

ಕ್ಕಂದರೆ,-ಸರ್ವ ಜನಗಳು ತಮ್ಮ ಸುಖಕ್ಕೋಸುಗ ಪುತ್ರರನ್ನಪೇಕ್ಷಿಸುತ್ತಿರುವರು. ಯಾಕಂದರೆ ವೃದ್ಧಾವಸ್ಥೆಯಲ್ಲಿ ನಮಗೆ ಸುಖವನ್ನು ಕೊಟ್ಟಾನೆಂದು ಅದು ಈಗಾದರೋ, ಸುಖಕ್ಕೆ ಬದಲಾಗಿ, ದುಃಖವನ್ನು ಕೊಡುವದಾಯಿತು. ಅದನ್ನು ತಿಳಿದು ನೋಡಿದರೆ,-ತನ್ನ ಕೈಯಿಂದಲೇ ಸರ್ಪಕ್ಕೆ ದುಗ್ಧಪಾನವಂ ಮಾಡಿಸಿ ಮನೆಯಲ್ಲಿ ಪಾಲಿಸಿದಂತಾಯಿತು. ಆದ್ದರಿಂದ ಈಗ ಈ ಪುತ್ರನನ್ನೂ ಅಪೇಕ್ಷಿಸುವಂಥಾದ್ದು ವ್ಯರ್ಥವೆಂದೆನ್ನಿಸುವದು. ಹಾಗಾದರೆ, ವೇದದಲ್ಲಿ "ನಾಪುತ್ರಸ್ಯಗತಿಃ" ಅಂದರೆ, ಪುತ್ರನಿಂದ ರಹಿತನಾದ ಪುರುಷನಿಗೆ, ಗ ೪ ತಿಯಾಗುವದಿಲ್ಲವೆಂದು ಬರೆಯಲ್ಪಟ್ಟಿರುವದೆಂದರೆ,-ಹಾಗೆ ವೇದದಲ್ಲಿನ ಈ ವಾಕ್ಯವು ವಿಷಯಾಸಕ್ತನಾದ ಗೃಹಸ್ಥ ಪುರುಷನ ಪರವಾಗಿರುವದು. ವಿರಕ್ತನಾದ ಮುಮುಕ್ಷು ಪುರುಷನ ಪರವಾಗಿಲ್ಲ. ಯಾತಕ್ಕಂದರೆ,-ವೇದದಲ್ಲಿಯೆ ಪುನಃ ಎರಡನೆ ಸ್ಥಲದಲ್ಲಿ ಬರೆಯಲ್ಪಟ್ಟಿರುವದೇನಂದರೆ,-"ನಕರ್ಮಣಾನ ಪ್ರಜಯಾಧನೇನತ್ಯಾಗೇನೈಕೇ ಅಮೃತತ್ವಮಾನಶುಃ" ಅರ್ಥ-ಯಜ್ಞಾದಿ ಕರ್ಮಗಳಿಂದಲೂ, ಮತ್ತು ಪುತ್ರಾದಿ ರೂಪವಾದ ಬಹು ಪ್ರಜೆಗಳಿಂದಲೂ, ಹಾಗೆ ವಿ ೫ ಸ್ತಾರವಾದ ಧನಗಳಿಂದಲೂ, ಕ ೬ ಲ್ಯಾಣ ವಾಗುವದಿಲ್ಲ. ಮತ್ತೇತರಿಂದ ಅಂದರೆ,-ತ್ಯಾಗದಿಂದಲೇ ಕೆಲವು ಋಷಿಜನಗಳು ಮೋಕ್ಷಪದವನ್ನು ಪಡದುಕೊಳ್ಳುತ್ತಿರುವರು. ಹಾಗೆ ಶುಕದೇವ, ಜಡಭರತಾದಿಗಳು ಪುತ್ರವಿನಃ ಮೋಕ್ಷಪದವಂ ಹೊಂದಿಕೊಂಡಿರುವರು. ಮತ್ತು ಯಾವ ಕೇವಲ ಪುತ್ರನಿಂದಲೇ ಕಲ್ಯಾಣ ವಾಗುವದಾದರೆ, ಸೂಕ ೭ ರಶ್ವಾನಾದಿಗಳಿಗೂ ಆಗಬೇಕಾದೀತು ? ಯಾಕಂದರೆ,- ಅವುಗಳಿಗೆ ಮನುಷ್ಯರಿಗಿಂತಲೂ, ಅಧಿಕವಾಗಿ ಪುತ್ರರಾಗುತ್ತಿರುವವು ಆದ್ದರಿಂದ ಮೋಕ್ಷಾ

---

೪ ಮೋಕ್ಷ ೫ ಅಧಿಕ ೬ ಮುಕ್ತಿ ೭ ಹಂದಿ ನಾಯಿ ಮೊದಲಾದವುಗಳು

ರ್ಥವಾಗಿ ಪುತ್ರರನ್ನಪೇಕ್ಷಿಸುವಂಥಾದ್ದು ವ್ಯರ್ಥವೆನಿಸುವದು. ॥೨೦॥

ಅ॥ ಈ ಪ್ರಕಾರದಿಂದ ಪುತ್ರನಲ್ಲಿ ದೋಷದೃಷ್ಟಿಯನ್ನು ತೋರಿಸಿದವರಾಗಿ, ಈಗ ಧನದಲ್ಲಿ ದೋಷವನ್ನು ತೋರಿಸುತ್ತಾರೆ.

—ಅನೇಕಯತ್ನೈರಿತಿ—

ಮೂ—ಅನೇಕಯತ್ನೈಃ ಸಮುಪಾರ್ಜ್ಯಸರ್ವತಃ ।
ಸದಾಪ್ತಿರಕ್ಷಾಕ್ಷತಿ ದುಃಖದಂಧನಂ ॥
ವ್ಯಯಂಕುಕಾರ್ಯೇಷು ಕರೋಮ್ಯಹೋಪದಂ ।
ಸ್ವಕಂಸ್ವಕೀಯೇನ ಕರೇಣಹನ್ಯತೇ ॥ ೨೨ ॥

ಟೀಕಾ॥ ಪ್ರಥಮದೊಳ್ ಧನಪ್ರಾಪ್ತಿ ಕಾಲದಲ್ಲಿ ಪರಾಧೀನತ್ವಾದಿ ಅನೇಕ ಪ್ರಕಾರವಾದ ಕ್ಲೇಶಗಳಾಗುತ್ತಿರುವವು. ಆ ಬಳಿಕ ಅದನ್ನು ರಕ್ಷಿಸುವದರಲ್ಲಿ, ಚೋರರಭಯ, ರಾಜರಭಯ, ಇವೇ ಆದಿಯಾಗಿ ಅನೇಕ ಕ್ಲೇಶಗಳುಂಟಾಗುತ್ತಿರುವವು. ಪುನಃ ಅದರ ವ್ಯಯ, ಅಥವಾ ನಷ್ಟವಾಗಿ ಹೋಗುವಲ್ಲಿ ಅತ್ಯಂತವಾದಕ್ಲೇ(೧)ಶವು ಪ್ರಾಪ್ತಿಯಾಗುವದು. ಈ ಪ್ರಕಾರವಾಗಿ (ಸದಾಪ್ತಿರಕ್ಷಾಕ್ಷತಿದುಃಖದಂ) ಅಂದರೆ,—ಯಾವಾಗಲೂ ಪಡೆಯುವದೂ, ಮತ್ತು ರಕ್ಷಿಸುವದೂ, ಹಾಗೆ ನಾಶವಾಗುವದೂ ಎಂಬ ಈ ಮೂರು ಕಾಲದಲ್ಲಿಯೂ, ಕ್ಲೇಶವಂ ಕೊಡುವಂಥಾ ಯಾವ ಧನ ವಿರುವದೋ, ಅದನ್ನು ನಾನು ಅನೇಕ ಪ್ರಕಾರವಾದ ಯ(೨)ತ್ನಗಳಿಂದ (ಸಮುಪಾರ್ಜ್ಯ) ಅಂದರೆ,—ಸಂಪಾದನೆಯನ್ನುಮಾಡಿ, ಬಳಿಕ (ಕುಕಾರ್ಯೇಷು) ಅಂದರೆ,—ವೇಶ್ಯಾನಾಟ್ಯ ಮಾಡಿಸುವದು, ಪರಸ್ತ್ರೀಗಮನ ಮಾಡುವದು. ಇತ್ಯಾ(೩)ದಿ ಕು(೪)ತ್ಸಿತ ಕಾರ್ಯಗಳಲ್ಲಿ ಸರ್ವವನ್ನು ವ್ಯಯ ಮಾಡುತ್ತಾ ಇರುವೆನು. ಆದರಿಂದ ಅಹೋ-ಅಂದರೆ ದೊಡ್ಡ ವ್ಯಸನದ ವಾರ್ತೆಯಾಗಿರುವದು ಯೋಚಿಸಿ ನೋಡುವಲ್ಲಿ ನಾನು ತನ್ನ ಕೈಯಿಂದಲೇ ತನ್ನ ಕಾಲುಗಳನ್ನು ಕತ್ತರಿಸಿಕೊಳ್ಳುವ ಉದ್ಯೋ

೧, ದುಃಖ, ೨, ಉದ್ಯೋಗ ವ್ಯಾಪಾರಾದಿ ಉಪಾಯುಗಳಿಂದ, ೩, ಆದಿ ಶಬ್ದದಿಂದ ಜೂಜು, ಸುರಾಪಾನ, ಅಭಕ್ಷ್ಯ ಭಕ್ಷಣಾದಿಗಳನ್ನೂ ಗ್ರಹಿಸಿಕೊಳ್ಳತಕ್ಕದ್ದು, ೪, ನಿಂದಾಸ್ಪದವಾದ,

ಗನಂ ಮಾಡಿದವನಾದೆನು. ಆದ್ದರಿಂದ ಈಗ ಈ ಧನವಂ ಸಂಪಾದಿಸು ವಂಥಾದ್ದು ವ್ಯರ್ಥವೇ ಆಗಿರುವದು ... ... ॥ ೨೦ ॥

ಅ॥ ಯಾರಾದರು ಧನದ ಸಂಪಾದನೆ ಮಾಡದೆ ಇದ್ದಮೇಲೆ ನಿನ್ನ ಭೋಜನಾದಿ ವ್ಯವಹಾರಗಳು ಯಾವ ಪ್ರಕಾರವಾಗಿ ನಡೆಯುವವು, ಎಂದು ಈ ಪ್ರಕಾರ ಶಂಕಿಸಿದರೆ, ಸಮಾಧಾನವಂ ಪೇಳುತ್ತಾನೆ.

—ಜಲ ಇತಿ—

ಮೂ—ಜಲೆಸ್ಥಲೆ ಯೋಪಿಚ ಶೈಲಮಸ್ತಕೆ ।
ಸದೈವಪುಷ್ಣಾತಿ ಜಗಚ್ಚರಾಚರಮ್ ॥
ಸಮೇನಕಿಂದಾಸ್ಯತಿ ವಿಶ್ವಪಾಲಕೋ ।
ಶನಂಕಿಮರ್ಥಂತುಗತೋಸ್ಮಿದೀನತಾಮ್ ॥ ೨೩ ॥

ಟೀಕಾ। ಯಾವ ಪರಮಾತ್ಮನು (ಜಲೆ) ಅಂದರೆ,—ಸಮುದ್ರದಲ್ಲಿ ಇರುವಂಥಾ, ಯೋಜನ ಯೋಜನ ಪ್ರಮಾಣವಾದ ಶರೀರ ಉಳ್ಳ ಮಕರ ಮತ್ಸ್ಯಾದಿಗಳಿಗೂ, ಮತ್ತು (ಸ್ಥಲೆ) ಅಂದರೆ,—ಭೂಮಿಯಲ್ಲಿ ಇರುವಂಥಾ ಮನುಷ್ಯ ಪಶ್ವಾದಿಗಳಿಗೂ ಹಾಗೆ (ಶೈಲಮಸ್ತಕೆ) ಅಂದರೆ,—ಹಿಮಾಲಯಾದಿ ಪರ್ವತಗಳ ಶಿಖರದಮೇಲೆ ಇರುವಂಥಾ ಮೃಗಪಕ್ಷಿ ಆದಿಗಳಿಗೂ, ಯಥಾಯೋಗ್ಯವಾದ ಅನ್ನಾದಿ ಪ್ರದಾನದ್ವಾರಾ, ಯಾವಾಗಲೂ ಪೋಷಣೆ ಮಾಡುತ್ತಿರುವನು. ಹಾಗೆ ವೃಕ್ಷ ಬಳ್ಳಿ ಆದಿಯಾದ ಅಚರ ಜೀವಿಗಳಿಗೂ, ವರ್ಷಾದಿ ದ್ವಾರಾ ಪೋಷಣೆ ಗೈಯ್ಯುತ್ತಿರುವನು. ಅಪಿ ಶಬ್ದದಿಂದ ಪಾತಾಳದಲ್ಲಿರುವಂಥಾ ನಾಗಗಳನ್ನೂ ಮತ್ತು ದೈತ್ಯಾದಿಗಳನ್ನೂ ಹಾಗೆ ಅಂತರಿಕ್ಷದಲ್ಲಿ ಇರುವಂಥಾ ದೇವತೆಗಳನ್ನೂ ಅಮೃತಪಾನಾದಿ ದ್ವಾರಾ, ಪೋಷಣೆ ಮಾಡುತ್ತಿರುವನು. ಈ ಪ್ರಕಾರವಾಗಿ (ವಿಶ್ವಪಾಲಕಃ) ಅಂದರೆ,—ಯಾವಾಗಲೂ ಚರಾಚರರೂಪವಾದ ವಿ(೧)ಶ್ವದ ಪಾಲನೆಯಂ ಮಾಡುವಂಥಾ ಯಾವ ಅಂತರ್ಯಾಮಿ ಎನಿಪ ವಿಶ್ವಂಭರನಾದ ಭಗವಂತನಿರುವನೋ, ಅವನುಯೇನು? ನನಿಗೆ(ಅಶನಂ)ಅಂದರೆ,-ಭೋಜನವನ್ನು ಕೊಡಲಾರನೋ, ಅಂದರೆ,- ಕೊಟ್ಟೇ ಕೊಡುವನು.

೧,ಪ್ರಪಂಚ-ಜಗತ್ತು.

ಹಾಗೆ ಪಾಂಡವಗೀತೆಯಲ್ಲಿ ಶೌನಕ ಋಷಿಯೂ, “ಭೋಜನಾಚ್ಛಾದನೆ ಚಿಂತಾಂವೃಥಾಕುರ್ವಂತಿವೈಷ್ಣವಾಃ ॥ ಯೋಸೌವಿಶ್ವಂಭರೋದೇವಃ ಸಭಕ್ತಾನ್ಕಿಮುಪೇಕ್ಷತೆ ,, ಎಂದು ಹೇಳಿರುವರು. ಇದರ ಅರ್ಥವೇನಂದರೆ ;—ವೈಷ್ಣವ(೧)ರ ಜನಗಳು ಅನ್ನ ವಸ್ತ್ರಾದಿಗಳಂ ಕುರಿತು, ಚಿಂತಿಸುವಂಥಾದ್ದು ವ್ಯರ್ಥವೆನಿಸುವದು. ಯಾತಕ್ಕಂದರೆ;—ಯಾವ ಭಗವಂತನು ಸರ್ವ ಚರಾಚರ ವಿಶ್ವವನ್ನು ಪೋಷಣೆ ಮಾಡುವಂಥಾವನಾಗಿರುವನೋ, ಅವನು ಯೇನು ? ತನ್ನ ಭಕ್ತಜನಗಳಿಗೆ ಭೋಜನಾದಿಗಳನ್ನು ಕೊಡಲರಿಯನೋ, ಹಾಗೆ ಈ ವಾರ್ತೆಯಮೇಲೆ ಒಬ್ಬ ಕ್ಷುಧೆ ಇಂದಾ(೩)ರ್ತನಾದ ಮಹಾತ್ಮನು ಹೇಳಿರುವದೇನಂದರೆ,—“ವಿಶ್ವಂಭರ ಭರತ್ವಂಮಾಂವಿಶ್ವತೋವಾಬಹಿಷ್ಕುರು ॥ ದ್ವಯೋರನ್ಯಸಮರ್ಥಶ್ಚೇತ್ತ್ಯಜವಿಶ್ವಂಭರಾಭಿದಾಂ ,, ಅರ್ಥ॥ ಎಲೈ ವಿಶ್ವಂಭರ, ನೀನು ನನ್ನನ್ನು ಭರ-ಅಂದರೆ, ಪೋಷಣೆಯನ್ನು ಮಾಡು, ಮತ್ತು ಯಾವ ನೀನು, ನನ್ನನ್ನು ಪೋಷಣೆಮಾಡುವಲ್ಲಿ ಸಮರ್ಥನಾಗದಿದ್ದರೆ, ನನಗೆ ನಿನ್ನ ವಿಶ್ವದಿಂದ ಹೊರಗೆ ಮಾಡಿಬಿಡು, ಮತ್ತು ಯಾವ ನೀನು ಹೇಳಿದ ಎರಡು ವಾರ್ತೆಗಳನ್ನು ಮಾಡುವದಕ್ಕೆ ಅಶಕ್ತನಾದರೆ, ನಿನ್ನ ವಿಶ್ವಂಭರ ಎಂಬ ಈ ನಾಮವನ್ನು ಬಿಟ್ಟುಬಿಡು ಎಂದು ಹೇಳಿರುವನು. ಆದ್ದರಿಂದ ಭೋಜನಾದಿಗಳಿಗೋಸುಗವಾಗಿ ನಾನು (ಗತೋಸ್ಮಿದೀನತಾಂ) ಅಂದರೆ,—ಧನಿಕ ಪುರುಷರುಗಳಲ್ಲಿ ದೀನತ್ವವನ್ನು ಪಡದುಕೊಂಡಿರ್ದೆನು. ಅಂದರೆ,—ಈಗ ಈಶ್ವರನ ವಿನಃ ಯಾರ ಅಧೀನವೂ ಆಗಲಾರೆನು ಎಂದನು ॥೧೩॥

ಅ॥ ಈ ಪ್ರಕಾರವಾಗಿ ಧನದಲ್ಲಿ ವಿರಾಗವಂ ತೋರಿಸಿದವರಾಗಿ, ಈಗ ತನ್ನ ಶರೀರವನ್ನು ಉದ್ದಿಶ್ಯ ಮಾಡಿಕೊಂಡು ಮೂರು ಶ್ಲೋಕಗಳಿಂದ ಶೋಚನ ಗೈಯುತ್ತಾನೆ.

—ಲಬ್ಧ್ವೇತಿ—

ಮೂ—ಲಬ್ಧ್ವಾಪಿದೇವೇಪ್ಸಿತಮಾನುಷಂವಪು |

೧, ಜಗವತ್ಪರಾಯಣರಾದ ಪುರುಷರು, ಅಂದರೆ,—ವ್ಯಾಪಕ ಚೇತನಸ್ವಭಾವನಾದ ಪರಮಾತ್ಮನ ಐಕೀಭಾವಬಲ್ಲನವ್ರುಳ್ಳ ಮುಕ್ತರು, ಶರೀರ ಪೋಷಣೆ ವಿಷಯದಲ್ಲಿ ಚಿಂತನೆ ಗೈಯುವದು ವ್ಯರ್ಥವೆಂದು ಭಾವವು, ೩, ಪೀಡಿತ,

ನಿರ್ಗತಂಸಮಸ್ತಂ ಗೃಹಕೃತ್ಯಕಲ್ಪನೈಃ॥
ಚಿಂತಾಮಣಿಂಹಸ್ತಗತಂವಿಹಾಯವೈ।
ಕ್ರೀತಂಮಯಾಕಾಚದಲಂಕುಬುದ್ಧಿನಾ ॥ ೨೪॥

ಟೀಕಾ॥ ದೇವೇಪ್ಸಿತ-ಅಂದರೆ,—ಈ ಮನುಷ್ಯ ದೇಹವನ್ನು ದೇವತೆಗಳೂ ಅಪೇಕ್ಷೆ ಮಾಡುತ್ತಾರೆ. ಯಾತಕ್ಕಂದರೆ, ನಮ್ಮಗಳಿಗೆ ಪ್ರಾಪ್ತವಾದರೆ, ನಾವೂ ಪುರುಷಾರ್ಥವನ್ನು ಮಾಡಿ, ದೇವಪದಕ್ಕಿಂತಲೂ ಶ್ರೇಷ್ಠವಾದ ಯಾವ ಮೋಕ್ಷಪದವುಂಟೋ, ಅದನ್ನು ಸಂಪಾದನೆಮಾಡಿಕೊಳ್ಳುವೆವು ಎಂದು ಈ ವಾರ್ತೆಯು ವಿಷ್ಣುಪುರಾಣದಲ್ಲೂ ಪ್ರಕಾಶಿಸಿ ಇರುತ್ತಾರೆ. "ಗಾಯಂತಿದೇವಾಃ ಕಿಲಗೀತಕಾನಿಧನ್ಯಾಸ್ತುಯೇಭಾರತಭೂಮಿಭಾಗೇ ॥ ಸ್ವರ್ಗಾಪವರ್ಗಸ್ಯಚಹೇತುಭೂತೇಭವಂತಿಭೂಯಃ ಪುರುಷಾಃ ಸುರತ್ವಾತ್", ಅರ್ಥ॥ ಸ್ವರ್ಗದಲ್ಲಿ ದೇವತಾಜನಗಳೂ ಕೂಡ ಈ ಪ್ರಕಾರವಾದ ಗೀತಾಗಾಯನ ಮಾಡುತ್ತಾರೆ. ಯೇನಂದರೆ,—ಆವ ಪುರುಷನು ಧನ್ಯನು· ಯಾವನು ಭೋಗ ಮತ್ತು ಮೋಕ್ಷಕ್ಕೆ ಸಾಧನಭೂತವಾದ ಭಾರತಖಂಡದಲ್ಲಿ ಜನ್ಮವಂ ಪಡದುಕೊಳ್ಳುವನೋ, ಇನ್ನು ಆ ಪುರುಷನು ನಮಗಿಂತಲೂ ಶ್ರೇಷ್ಠನಾಗಿರುವನು. ಅಂದರೆ,—ಯಾವ ಪುರುಷನು ಭೋಗ ಮೋಕ್ಷಗಳಿಗೆ ಸಾಧನಭೂತವಾದ ಭರತಖಂಡದಲ್ಲಿ ಮಾನುಷ ದೇಹವಂ ಪಡೆಯುವನೋ ಆವನೇ ಧನ್ಯನು. ಅವನೇ ನಮಗೆಲ್ಲರಿಗಿಂತಲೂ ಶ್ರೇಷ್ಠನೆನಿಸುವನು ಎಂದು ದೇವತೆಗಳ ಭಾವವು. ಹಾಗೆ ಈ ಪ್ರಕಾರವಾಗಿ ದುರ್ಲಭವೆನಿಪ ಮನುಷ್ಯಶರೀರವು (ಲಬ್ಧ್ವಾಪಿ) ಅಂದರೆ,-ಪ್ರಾಪ್ತವಾಗಿದ್ದರೂ, ನಾನು ಸಮಸ್ತವಾದ ಗೃಹದ ಕಾರ್ಯಗಳಲ್ಲೂ ನಾನಾಪ್ರಕಾರವಾದ ಕಲ್ಪನೆಗಳಲ್ಲೂ ವ್ಯ(೧)ತೀತಮಾಡಿಬಿಟ್ಟೆನು. ಅದನ್ನು ತಿಳಿಯುವಲ್ಲಿ (ಕುಬುದ್ಧಿನಾ) ಅಂದರೆ, ನಷ್ಟವಾದ ಬುದ್ಧಿಯುಳ್ಳ ನಾನು ಅನಾಯಾಸದಿಂದ ತನ್ನ ಕೈಯ್ಯಲ್ಲಿ ಪ್ರಾಪ್ತವಾದ ಅಮೋಲ್ಯ ಚಿಂತಾಮಣಿಯನ್ನು ಪರಿತ್ಯಾಗ ಮಾಡಿ, ಅದಕ್ಕೆ ಪ್ರತಿಯಾಗಿ, (ಕಾಚದಲಂ) ಅಂದರೆ,—ವ್ಯರ್ಥವಾದ ಗಾಜಿನ ಚೂರನ್ನು ಕೊಂಡುಕೊಂಡೆನು. ಹಾಗೆ ಈ ವಾರ್ತೆಯು,

---

೧. ಕಳೆದುಕೊಂಡೆನು,

ಗರುಡಪುರಾಣದಲ್ಲಿ ವಿಷ್ಣು ಭಗವಂತನು ಗರುಡನಂ ಕುರಿತು “ಯೋನೀಶತೇಷು ಲಭತೇ ಕಿಲ ಮಾನುಷತ್ವಂ ತತ್ರಾಪಿ ದುರ್ಲಭತರಂ ಖಗಭೋ ದ್ವಿಜತ್ವಂ॥ ಯಸ್ತತ್ರ ಪಾಲಯತಿ ಲಾಲಯತೀಂದ್ರಿಯಾಣಿ ತಸ್ಯಾಮೃತಂ ಕ್ಷರತಿ ಹಸ್ತಗತಂ ಪ್ರಮಾದಾತ್” ಅರ್ಥ॥ (ಭೋ ಖಗ) ಅಂದರೆ,—ಎಲೈ ಪಕ್ಷಿರಾಜನೇ! ಈ ಪುರುಷನಿಗೆ ಅನೇಕ ಯೋನಿಗಳಲ್ಲಿ ತಿರಿಗಿತಿರಿಗಿ, ಯಾವದೋ ಒಂದು ಕಾಲದಲ್ಲಿ ಪುಣ್ಯದ ಪ್ರಭಾವದಿಂದ, ಮನುಷ್ಯ ಶರೀರವು ಪ್ರಾಪ್ತಿಯಾಗುವದು. ಅದರಲ್ಲಿಯೂ ಪುನಃ (ದ್ವಿಜತ್ವಂ) ಅಂದರೆ,-ತ್ರೈವರ್ಣಿಕ ಶರೀರದ ಪ್ರಾಪ್ತಿಯಾಗುವಂಥಾದ್ದು ಅತ್ಯಂತ ದುರ್ಲಭವಾಗಿರುವದು. ಹಾಗೆ ಯಾವ ಪುರುಷನು ಅಂಥಾದ್ದನ್ನು ಪ್ರಾಪ್ತ ಮಾಡಿಕೊಂಡಿದ್ದರೂ ಪುನಃ ತನ್ನ ಇಂದ್ರಿಯಗಳನ್ನು ವಿಷಯಗಳಿಂದ ಪಾಲನೆ ಮತ್ತು ಲಾಲನೆ ಗೈಯ್ಯುತ್ತಿರುವನು. ಅದನ್ನು ಯೋಚಿಸಿದರೆ, ಅವನ ಕೈಯ್ಯಲ್ಲಿ ಪ್ರಾಪ್ತವಾದ ಅಮೃತವು ಕ್ಷ(೨)ರಿಸುತ್ತಾ ಹೊರಟುಹೋಗುತ್ತಿರುವದು ಎಂದು ಹೇಳಿರುವನು. ||೨೪||

೨೫|| ಈ ಪ್ರಕಾರವಾಗಿ ಶರೀರದ ದುರ್ಲಭತ್ವವನ್ನು ವರ್ಣನೆಯಂ ಮಾಡಿ, ಈಗ ಪುನಃ ಆ ಶರೀರದ ಕೃತಘ್ನತ್ವವನ್ನು ನಿರೂಪಣೆ ಮಾಡುತ್ತಾರೆ.

—ಇ ದ ಮಿ ತಿ—

ಮೂ—ಇದಂ ಸದಾಭ್ಯಂಗಸುತೈಲವಾಸಿತಂ ।
ವರಾಂಗನಾಲಿಂಗನಲಾಲಿತಂ ಮುಹುಃ ॥
ಹಿತಾನ್ನಪಾನೌಷಧಿವರ್ಧಿತಂ ವಪುಃ ।
ಕೃತಘ್ನಮಂತೇ ನ ಸಮಂ ಪ್ರಯಾಸ್ಯತಿ ॥೨೫॥

ಟೀಕಾ॥ (ಸದಾಭ್ಯಂಗಸ ತೈಲವಾಸಿತಂ) ಅಂದರೆ,-ಯಾವಾಗಲೂ ಅಭ್ಯಂಗಸ ಮತ್ತು ನಾನಾಪ್ರಕಾರವಾದಂಥಾ ಸು(೧)ಗಂಧಯುಕ್ತವಾದ ತೈಲಗಳಿಂದ ಸುವಾಸನೆ ಗೈಯಲ್ಪಟ್ಟದ್ದಾಗಿಯೂ, ಇನ್ನು (ವರಾಂಗನಾ) ಅಂದರೆ,-ಯಾವ ಯೌವನಾವಸ್ಥೆಯುಳ್ಳ ಸುಂದರಸ್ತ್ರೀಯರುಂಟೋ ಅವರನ್ನು ಪದೇಪದೇ ಗಾಢಾಲಿಂಗನದಿಂ (ಲಾಲಿತಂ) ಅಂದರೆ,-ಲಾ(೨)ಲಿಸಲ್ಪಟ್ಟದ್ದಾಗಿಯೂ, ಹಾಗೆ (ಹಿತ) ಅಂದರೆ,-ಪಥ್ಯ

೨. ಸೋರುತ್ತಾ,

೧. ಸಂಪಿಗೆ ಎಣ್ಣೆ, ಮಲ್ಲಿಗೆ ಎಣ್ಣೆ, ಗುಲಾಬಿ ಅತ್ತರ್, ಮತ್ತು ಮೃಗನಾಭಿ ಚರ್ಮದಿಂ ತೆಗೆಯಲ್ಪಟ್ಟ ತೈಲಗಳಿಂದ. ೨. ಕೇಳೀವಿಲಾಸ ಗೈಯ್ಯಲ್ಪಟ್ಟದ್ದಾಗಿಯೂ

ಯುಕ್ತವಾದ ಮಿಷ್ಟಾನ್ನ ಭೋಜನಗಳಿಂದಲೂ, ಮತ್ತು ಲಾಮಂಚಾದಿ ಸುಗಂಧಯುಕ್ತವಾದ ಜ(೩)ಲಪಾನಗಳಿಂದಲೂ, ಹಾಗೆ ಪು(೪)ಷ್ಟಿಕಾರಕವಾದ ಔ(೫)ಷಧಿಗಳಿಂದಲೂ, (ವರ್ಧಿತಂ) ಅಂದರೆ,-ವೃದ್ಧಿಹೊಂದಿಸಲ್ಪಟ್ಟದ್ದಾಗಿಯೂ, ಯಾವ ಈ ನನ್ನ (ವಪು) ಅಂದರೆ,-ಶರೀರವಿರುವದೋ, ಆ ಈ ಶರೀರವು ಹೇಗೆ ಕೃತಘ್ನವಾಗಿರುವದು. ಯೇನಂದರೆ,-ಪ್ರತಿನಿತ್ಯದಲ್ಲೂ ಹೇಳಲ್ಪಟ್ಟ ಸರ್ವ ಉಪಾಯಗಳನ್ನು ಮಾಡುತ್ತಿದ್ದಾಗ್ಯೂ ದಿನದಿನದಲ್ಲಿ ಕ್ಷೀಣತೆಯನ್ನು ಹೊಂದಿ ಹೋಗುತ್ತಿರುವದು. ಮತ್ತು (ಅಂತೆ) ಅಂದರೆ,-ಪ್ರಾಣಗಳ ಅಂತಕಾಲದಲ್ಲಿ ಪರಲೋಕದಲ್ಲಿಯೂ ನನ್ನೊಡನೆ ಹೊರಟು ಬರಲಾರದು. ಈ ವಾರ್ತೆಯು ಸರ್ವತ್ರ ಪ್ರಸಿದ್ಧವಾಗೇ ಇರುವದು. ಆದ್ದರಿಂದ ಈಗ ಈ ಶರೀರದಲ್ಲಿಯೂ ಆಸಕ್ತಿ ಮಾಡುವಂಥಾದ್ದು ವ್ಯರ್ಥವೆಂದೆನ್ನಿಸುವದು॥೨೫

ಅ॥ ಈ ಪ್ರಕಾರವಾಗಿ ಶರೀರದ ಕೃತಘ್ನತೆಯನ್ನು ವರ್ಣನೆಯಂ ಮಾಡಿ ಈಗ ಶರೀರದಲ್ಲಿ ಆಸಕ್ತಿಗೆ ಯಾವ ಹೇತು ಉಂಟೋ, ಅದನ್ನು ತೋರ್ಪಡಿಸುತ್ತಾರೆ.

ಮ ಲೀ ಮ ಸ ಇ ತಿ

ಮೂ—ಮಲೀಮಸೇನಾತ್ಮನಿನಾಶಶಾಲಿನಿ ।
ಶುಚಿತ್ವಮಾತ್ಮತ್ವಮಯೈಮಿನಿತ್ಯತಾಮ್ ।
ಅನಾದ್ಯವಿದ್ಯಾತಿಮಿರಾವೃತೇಕ್ಷಣಃ ॥
ಕಿಮಂಜನಂತಸ್ಯಭವೇನ್ನಿವರ್ತಕಮ್ ॥೨೬॥

ಟೀಕಾ॥ ಅನಾದಿಕಾಲದ ಅವಿದ್ಯಾರೂಪವಾದ ತಿಮಿರದಿಂದ, ಬುದ್ಧಿರೂಪವಾದ ನೇತ್ರವು ಆಚ್ಛಾದಿತವಾಗಿರುವದ್ದರಿಂದ (ಮಲೀಮಸೆ) ಅಂದರೆ,-ಮಲಮೂತ್ರಾದಿಗಳಿಗೆ ಸ್ಥಾನವಾಗಿರುವಂಥಾ ಅತ್ಯಂತ ಮಲಿನವಾದ ಯಾವ ಈ ನನ್ನ ಶರೀರವಿರುವದೋ, ಅದರಲ್ಲಿ ನಾನು ಪ(೧)ವಿ

---

೩. ಪನ್ನೀರು. ೪ ಶಕ್ತಿ ವೃದ್ಧಿಮಾಡುವ—ವೀರ್ಯ ವೃದ್ಧಿಪಡಿಸುವ. ೫. ಭಸ್ಮ, ಲೇಹ್ಯ, ಮಾತ್ರೆ, ಚೂರ್ಣಿಕಾದಿಗಳು.

ತ್ರಬುದ್ಧಿಯಂ ಮಾಡುತ್ತಿರುವೆನು. (ಅನಾತ್ಮನಿ) ಅಂದರೆ,-ಇಂಥಾ ಅನಾತ್ಮರೂಪವಾದ ದೇಹದಲ್ಲಿ ಆ(೧)ತ್ಮಬುದ್ಧಿಯಂ ಮಾಡುತ್ತಿರುವೆನು. ಹಾಗೆ (ನಾಶಶಾಲಿನಿ) ಅಂದರೆ,-ಪ್ರತಿ ಕ್ಷಣದಲ್ಲೂ ಪರಿಣಾಮಿಯಾಗಿ ಮತ್ತು ವಿನಾಶ ಉಳ್ಳ ಈ ಶರೀರದಲ್ಲಿ ನಿ(೩)ತ್ಯಬುದ್ಧಿಯಂ ಮಾಡುತ್ತಿರುವೆನು. ಮತ್ತೂ ಯೇನಂದರೆ, ಹಾಗೆಯೇ ಸ್ವರ್ಗಾದಿ ಅನಿತ್ಯ ಪದಾರ್ಥದಲ್ಲಿ ನಿತ್ಯಬುದ್ಧಿಯೂ, ಮತ್ತು ಅನರ್ಥರೂಪವಾದ ಧನದಲ್ಲಿ ಅರ್ಥಬುದ್ಧಿಯೂ, ಇನ್ನೂ ವ್ಯವಹಾರ ಪ್ರವೃತ್ತಿರೂಪ ದುಃಖದಲ್ಲಿ ಸುಖಬುದ್ಧಿಯನ್ನೂ ಸಹ, ಮಾಡುತ್ತಿರುವೆನು. ಈ ಪ್ರಕಾರದಿಂದ ಸರ್ವತ್ರ ವಿಪರೀತ ದರ್ಶನದಲ್ಲಿ ಹೇತುಭೂತವಾದ, ಯಾವ ಅನಾದಿಯಾದ ಅವಿದ್ಯಾರೂಪ ತಿಮಿರವಿರುವದೋ, ಅದನ್ನು ನಿವೃತ್ತ ಮಾಡುವಂಥಾ (ಕಿಮಂಜನಂ) ಅಂದರೆ,-ಹೀಗೆ ಯೇನು ಅಂಜನವಿರುವದೋ, ಅದನ್ನು ಬುದ್ಧಿರೂಪವಾದ ನೇತ್ರದಲ್ಲಿ ಹಾಕುವದ್ದರಿಂದ ನನ್ನ ಯಥಾರ್ಥ ದೃಷ್ಟಿ ಆಗಿಹೋದೀತು. ||೨೧||

ಅ|| ಈ ಪ್ರಕಾರದಿಂದ ಶರೀರದಲ್ಲಿ ದೋಷ ದೃಷ್ಟಿವರ್ಣನ ದ್ವಾರಾ ಅವಿದ್ಯೆಯ ಸ್ವರೂಪವಂ ನಿರೂಪಣ ಮಾಡಿ ಈಗ ಆಯುಷ್ಯವನ್ನು ಉದ್ದೇಶಿಸಿ ಹೇಳುತ್ತಾನೆ.

—ಶ್ಲೋ|| ಕ್ಷ ಣಂ ಕ್ಷ ಣ ಮಿ ತಿ ||ಶ್ಲೋ—

ಮೂ—ಕ್ಷಣಂಕ್ಷಣಂದೀಪಶಿಖೋಪಮಾಂದಧತ್ |
ಸರಂಧ್ರಕುಂಭಾಸ್ರವದಂಬುಸನ್ನಿಭಮ್ ||
ಪ್ರಯಾತ್ಯಶೇಷಂತುಮಮಾಯುರುತ್ತಮಂ |
ನಸೇಕ್ಷಣೋಪೀಹವಿಲೋಕಯಾಮ್ಯಹೋ ||೨೨||

---

೧. ನನ್ನ ಶರೀರವು ಕೆಂಪು ಬಣ್ಣ ಉಳ್ಳದ್ದಾಗಿ, ಮತ್ತು ಅತಿ ಸುಂದರವಾಗಿರುವದು. ಇನ್ನು ಉತ್ತಮಕುಲದಲ್ಲಿ ಉತ್ಪನ್ನವಾಗಿರುವದು ಎಂದು ಈ ಪ್ರಕಾರವಾಗಿ, ಶುಭವನ್ನೆಣಿಸುತ್ತಿರುವೆನು. ೨. ನಾನು ಧಷ್ಟನಾಗಿರುವೆನು, ನಾನು ಅತಿ ಕೃಶನಾಗಿರುವೆನು, ನಾನು ಅನ್ಯಜಾತಿಯವನಾಗಿರುವನು ಎಂದು ಈ ಪ್ರಕಾರವಾಗಿ ತಿಳಿಯುತ್ತಿರುವೆನು. ೩. ಎಂಥೆಂಥಾ ಕಾರ್ಯಗಳ ಆರಂಭ ಮಾಡುತ್ತಿರುವನು. ಯೇನು ? ಯೋಚಿಸಿದರೆ, ಯಾವಾಗಲೂ ಮರಣವಿಲ್ಲವೆಂದು ತಿಳಿಯುತ್ತಿರುವನು.

ಟೀಕಾ॥ (ಕ್ಷಣಂಕ್ಷಣಂ) ಅಂದರೆ,-ಹ್ಯಾಗೆ ದೀಪದ ಶಿಖೆಯು, ಕ್ಷಣಕ್ಷಣದಲ್ಲಿ ಚಂಚಲಿಸುತ್ತಾ ಊರ್ಧ್ವಕ್ಕೆ ಹೋಗುತ್ತಿರುವದೋ, ಮತ್ತು ಹ್ಯಾಗೆ (ಸರಂಧ್ರಕುಂಭ) ಅಂದರೆ,-ಛಿದ್ರಯುಕ್ತವಾದ ಘಟದಿಂದ ಕ್ಷಣಕ್ಷಣದಲ್ಲಿ ಎಲ್ಲಾಕಡೆಯಿಂದಲೂ, ಜಲವು ಸ್ರವಿಸುತ್ತಾ ಹೋಗುವದೋ, ಹಾಗೆಯೇ (ಮಮಾಯುಃ) ಅಂದರೆ,-ನನ್ನ ಶರೀರದ ಅಮೌಲ್ಯವಾದ ಸರ್ವ ಆಯುಷ್ಯವು, ಕ್ಷಣಕ್ಷಣದಲ್ಲಿ ಹೊರಟುಹೋಗುತ್ತಿರುವದು. ಅದನ್ನು ನಾನು (ನೇಕ್ಷೇಽಪಿ) ಅಂದರೆ,-ದೊಡ್ಡ ದೊಡ್ಡ ನೇತ್ರಗಳುಳ್ಳವನಾದರೂ, ಅದರಕಡೆ ನೋಡದವನಾಗಿರುವೆನು. ಅಹೋ ಅಂದರೆ, ಇದು ಏನು ಆಶ್ಚರ್ಯದ ವಾರ್ತೆಯಾಗಿರುವದು. ಹಾಗೆ ಈ ವಾರ್ತೆಯು ಯೋಗಾಭಿಜ್ಞರ ನಿರ್ವಾಣ ಪ್ರಕರಣದಲ್ಲಿ ತನ್ನ ಶಿಷ್ಯನಂ ಕುರಿತು ಒಬ್ಬ ಮುನಿಯು, "ಆಯುರ್ವಾಯುಸಮಿಟ್ಟಿತಾಭ್ರಪಟಲೀಲೀನಾಂಬುವದ್ಭಂಗುರಂ । ಭೋಗಾ ಮೇಘವಿತಾನಮಧ್ಯವಿಲಸತ್ಸೌದಾಮಿನೀಚಂಚಲಾಃ ॥ ಲೋಲಾಯೌವನಲಾಲನಾಜಲರಯಃ [illegible] । ಪುತ್ರತ್ರಾಸವು ಪೆತ್ಯಸಂಸ್ಕೃತಿವಿಶಾಸ್ತ್ರ[illegible] ॥" ಅರ್ಥ॥ ಹ್ಯಾಗೆ ವಾಯುವಿನ ವೇಗದಿಂದ ಛಿದ್ರವಾದ ಮೇಘಗಳ ಸಮೂಹದಲ್ಲಿ ತುಂಬಿಕೊಂಡಿರುವ ಜಲವು ಕ್ಷಣಭಂಗುರವಾಗಿರುವದೋ, ಹಾಗೆಯೇ ಈ ಪುರುಷನ ಆಯುಸ್ಸು ಕ್ಷಣಭಂಗುರವಾಗಿರುವದು. ಮತ್ತು ಹ್ಯಾಗೆ ಆಕಾಶದೊಳ್ ಮೇಲ್ಕಟ್ಟಿನಂತಿರುವ ಮೇಘದಲ್ಲಿ ಮಿಂಚು ಚಂಚಲವಾಗುತ್ತಿರುವದೋ, ಹಾಗೆ ಸಂಸಾರದಲ್ಲಿನ ಸರ್ವಭೋಗಗಳು ಚಂಚಲವಾಗಿರುವದು. ಮತ್ತು ಯೌವನಾವಸ್ಥೆಯು ಯೌವನಲಾಲನಾ-ಅಂದರೆ,-ವಿಲಾಸವುಂಟೋ,ಅದೂಕೂಡ, (ಲೋಲ) ಅಂದರೆ,ಸ್ವಲ್ಪದಿನಗಳಲ್ಲಿಯೆ ಹೊರಟು ಹೋಗುತ್ತಿರುವದು. ಇನ್ನು ಹ್ಯಾಗೆ ಮಹಾನದಿಯ ಜಲದ ವೇಗವು ಶೀಘ್ರವಾಗಿ ಹೊರಟು ಹೋಗುತ್ತಿರುವದೋ? ಹಾಗೆಯೆ ಈ ಶರೀರವು ಕ್ಷಣಕ್ಷಣದಲ್ಲಿ ಹೋಗುತ್ತಿರುವದು. ಆದಕಾರಣ ಎಲೈ ಪುತ್ರನೇ ! ನೀನು ಈ ಜನನ ಮರಣ ರೂಪವಾದ ಸಂಸಾರದಲ್ಲಿ ಭಯವಂ ಹೊಂದಿರುವದ್ದರಿಂದ, ನಿರ್ವಾಣವೆಂಬ ಯಾವ ಮೋಕ್ಷಪದವು

ಟೋ. ಅದರ ಪ್ರಾಪ್ತಿಗೋಸುಗ, ಯತ್ನವಂ ಮಾಡು ಎಂದು ಹೇಳಿರುವನು. ... ... ॥೨೩॥

ಅ—ಈ ಪ್ರಕಾರವಾಗಿ ಆಯುಷ್ಯದ ಕ್ಷಣ ಭಂಗುರತ್ವವನ್ನು ವರ್ಣನೆಯಂ ಮಾಡಿ, ಈಗ ಅದಕ್ಕೆ ವಿಪರೀತವಾದ ತನ್ನ ಸಿಶ್ಚಯವ ನ್ನು ತೋರಿಸುತ್ತಾನೆ.

—ಗತಾ ಇತಿ.—

ಮೂ—ಗತಾಮದೀಯಾಃಪಿತರೋಯಮಾಲಯಂ ।
ಪ್ರಯಾಂತಿಚಾನ್ಯೇಪಿ ದಿನಂ ದಿನಂ ಪ್ರತಿ ॥
ಅಹಂತ್ವಪಶ್ಯನ್ನಪಿತಾಸಹೋಶಠ ।
ಸ್ಪೃಹಾಪಿಮನ್ಯೇಸ್ಥಿತಿಮಾತ್ಮನೋಧ್ರುವಾಮ್ ॥೨೪॥

ಟೀ—(ಮದೀಯಾ) ಅಂದರೆ-ನನ್ನ ಯಾವ ವೃದ್ಧ ಪಿತಾ, ಪಿತಾ ಮಹರಾದಿ ಯಾದವರಿದ್ದರೋ, ಅವರೆಲ್ಲರೂ, ತಮ್ಮ ತಮ್ಮ ಶರೀರಗ ಳನ್ನು ಪರಿತ್ಯಾಗವಮಾಡಿ (ಯಮಾಲಯಂ) ಅಂದರೆ, ಯ೧ ಮರಾಜ ನ ಸ್ಥಾನಕ್ಕೆ ಹೊರಟು ಹೋದರು. ಹಾಗೆ (ಪ್ರಯಾಂತಿಚಾನ್ಯೇಪಿ) ಅಂದರೆ,-ಪ್ರತಿ ದಿನದಲ್ಲೂ ಗ್ರಾಮದ ನಿವಾಸಿಗಳಾದ ಅನ್ಯಜನಗಳೂ ಕೂಡ, ಸತ್ತು ಸತ್ತು ಹೋಗುತ್ತಿರುವರು. ಇನ್ನು ನಾನಾದರೋ (ಶಠಃ) ಅಂದರೆ, ಮೂರ್ಖನಾಗಿ ಅದನ್ನು ನಿತ್ಯ ಪ್ರತಿಯಲ್ಲೂ ತನ್ನ ನೇತ್ರದಿಂದ ಪ್ರತ್ಯಕ್ಷವಾಗಿ ನೋಡುತ್ತಿದ್ದರೂ, ಪುನಃ ಈ ಶರೀರದಲ್ಲಿ ಈ ಸಂಸಾರ ರೂಪವಾದ ಕಾಡಿನೊಳ್ ತನಿಗೆ (ಧ್ರುವಾಂ) ಅಂದರೆ,-ನಿಶ್ಚಿತ ಸ್ಥಿತಿ ತಿಳಿಯುತ್ತಿರುವೆನು. ಅಹೊ ಎಂದರೆ, ಇದು ಯೇನು ಮಹಾ ಆಶ್ಚರ್ಯದ ವಾರ್ತೆಯಾಗಿರುವದು. ಹಾಗೆ ಈ ವಿಷಯವು ಮಹಾ ಭಾರತದವನ ಪರ್ವದಲ್ಲಿ, ಯಕ್ಷ ಮತ್ತು ಯುಧಿಷ್ಠಿರನ ಸಂ ವಾದದಲ್ಲೂ ಪ್ರಸಿದ್ಧವಾಗಿರುವದು. “ ಅಹನ್ಯ ಹನಿ ಭೂತಾನಿಗಚ್ಛಂ ತೀಹಯಮಾಲಯಂ ॥ ಶೇಷಾಸ್ಸ್ಥಾವರ ಮಿಚ್ಛಂತಿಕಿ ಮಾಶ್ಚರ್ಯ ಮತಃಪರಂ ,, ಅರ್ಥ- ಯಕ್ಷನು ಪ್ರಶ್ನೆ ಮಾಡಿದ್ದೇನೆಂದರೆ,-ಎಲೈ ಯು

೧ ಮೃತ್ಯುವನ್ನು ಹೊಂದಿಕೊಂಡರು

ಧಿಷ್ಠಿರನೇ ! ಈ ಜಗತ್ತಿನಲ್ಲಿ ಆಶ್ಚರ್ಯದ ವಾರ್ತೆ ಯೇನಿರುವದು. ಆಗ ಯುಧಿಷ್ಠಿರನು ಹೇಳಿದನು,-ಎಲೈ ಯಕ್ಷನೆ (ಅಹನ್ಯಹನಿ) ಅಂದರೆ, ಪ್ರತಿ ನಿತ್ಯವೂ ದಿನ ದಿನದಲ್ಲಿ ಭೂತ ಪ್ರಾಣಿಗಳು ಸತ್ತು ಸತ್ತು ಯಮಲೋಕಕ್ಕೆ ಹೊರಟು ಹೋಗುತ್ತಿರುವರು. ಮತ್ತು ಅನ್ಯಪುರುಷನು ಅದನ್ನು ತನ್ನ ನೇತ್ರಗಳಿಂದ ನೋಡುತ್ತ ಇದ್ದರೂ, ಪುನಃ ಈ ಜಗತ್ತಿನಲ್ಲಿ ತಾನು ಸ್ಥಿರವಾಗಿರಲುಳ್ಳವನೆಂದು ತಿಳಿಯುತ್ತಿರುವನು. ಆದಕಾರಣ ಇದಕ್ಕಿಂತಲೂ ಬೇರೆಯಾಗಿ ಯೇನು ಆಶ್ಚರ್ಯವಿದ್ದೀತು, ಅಂದರೆ ಇದೇ ಪರಮಾಶ್ಚರ್ಯವಾಗಿರುವದೆಂದು ಭಾವವು. ॥೨೮॥

ಅ—ಈ ಪ್ರಕಾರವಾಗಿ ಶರೀರ ವಿಷಯದ ವಿರಾಗವಂ ತೋರಿಸಿದವನಾಗಿ, ಈಗ ಎರಡು ಶ್ಲೋಕಗಳಿಂದ ತನ್ನ ಇಂದ್ರಿಯಂಗಳ ದುಷ್ಟತೆಯನ್ನು ವರ್ಣನೆ ಮಾಡುತ್ತಾನೆ.

ಏತ ಇತಿ

ಮೂ—ಏತೇಚಜಿಹ್ವೇಕ್ಷಣನಾಸಿಕಾದಯ ।
ಶ್ಚೋರಾಸ್ತುಶಶ್ವನ್ಮಮದೇಹವಾಸಿನಃ ॥
ಲುಂಪಂತಿಸರ್ವಾತ್ಮಧನಂಪ್ರಮಾಥಿನೋ ।
ನಾದ್ಯಾಪ್ಯಪೇಕ್ಷೆಮಮಪಶ್ಯತಾಜ್ಞತಾಂ ॥ ೨೯ ॥

ಟೀಕಾ॥ (ಏತೆ) ಅಂದರೆ-ಈ ಯಾವ ಜಿಹ್ವಾನೇತ್ರನಾಸಿಕಾ೧ ದಿ ಇಂದ್ರಿಯಂಗಳುಂಟೋ, ಅವು (ಶಶ್ವತ್) ಅಂದರೆ,-ಯಾವಾಗಲೂ, ನನ್ನ ಶರೀರದಲ್ಲಿ ನಿವಾಸಮಾಡುವಂಥಾ ಚೋರರಾಗಿರುವರು. ಅಂದರೆ, ಚೋರರಿಗಿಂತಲೂ, ಅಧಿಕ ದುಷ್ಟರಾಗಿರುವರು. ಯಾತಕ್ಕಂದರೆ,-ಚೋರನು ಯಾವನ ಆಶ್ರಯವಂ ಮಾಡುತ್ತಿರುವನೋ, ಆವನ ವಸ್ತುಗಳನ್ನು ಪ್ರಾಯಃ ಚೌರ್ಯ ಮಾಡುವದಿಲ್ಲ. ಮತ್ತು ಈ ಇಂದ್ರಿಯರೂಪ ಚೋರನಾದರೋ, ಯಾವಾಗಲೂ ನನ್ನ ಆಶ್ರಯದಲ್ಲಿದ್ದುಕೊಂಡು, ನನ್ನದನ್ನೇ ಚೌರ್ಯ ಮಾಡುತ್ತಿರುವನು. ಅಲ್ಲಿ

೧ ಆದಿ ಶಬ್ದದಿಂದಶ್ರೋತ್ರತ್ವಕ್ಕುಗಳನ್ನೂ ಹಾಗೆ ವಾಕ್ಪಾಣಿ ಪಾದ ಪಾಯೂಪಸ್ಥಗಳನ್ನುಗ್ರಹಿಸಿಕೊಳ್ಳತಕ್ಕದ್ದು

ಯಾವ ಪ್ರಕಾರ ಚೋರನು ಧನವನ್ನು ಆ(೧)ಹರಣ ಮಾಡುತ್ತಿರುವ ನೋ, ಹಾಗೆಯೇ ಇಲ್ಲಿ ಇಂದ್ರಿಯರೂಪ ಚೋರನು, ನನ್ನ (ಸರ್ವಾತ್ಮಧನಂ) ಅಂದರೆ,-ಸರ್ವಾತ್ಮ ಭಾವರೂಪವಾದ ಯಾವ ಧನವುಂಟೋ, ಅದನ್ನು ಆ ೪ ಹರಣ ಮಾಡುತ್ತಿರುವನು. ಇನ್ನು ಚೋರನಾದರೋ, ಯಾವ ಉಪಾಯದಿಂದಲಾದರೂ, ಶೀಘ್ರವಾಗಿ ವಶವರ್ತಿಯೂ ಆಗುವನು. ಮತ್ತು ಯೇನಂದರೆ,-ಈ ಇಂದ್ರಿಯರೂಪ ಚೋರನಾದರೋ, (ಪ್ರಮಾಥಿನಃ) ಅಂದರೆ,-ಅಧಿಕ ಪ್ರಮಾಥಿ-ಅಂದರೆ, ಕ್ಲೇಶವಂ ಕೊಡುವಂಥಾವನಾಗಿರುವನು. ಯಾವ ಪ್ರಕಾರದಿಂದಲೂ ವಶಕ್ಕೆ ಬರುವಂಥಾದ್ದು ಅತ್ಯಂತ ಕಠಿಣವಾಗಿರುವದು. ಹಾಗೆ, ಈ ವಾರ್ತೆಯು, ಭಗವದ್ಗೀತೆಯ ಷಷ್ಠಾಧ್ಯಾಯದಲ್ಲೂ, “ ಇಂದ್ರಿಯಾಣಿ ಪ್ರಮಾಥೀ ನಿಹರಂತಿ ಪ್ರಸಭಂಮನಃ „ ಅರ್ಥ—ಎಲೆ ಅರ್ಜುನ, ಈ ಇಂದ್ರಿಗಳು ಬಹುದುರ್ಜಯವಾಗಿರುವವು. ಯಾತಕ್ಕಂದರೆ, ಈ ಯತ್ನಶೀಲನಾದ ಪುರುಷನ ಮನಸ್ಸನ್ನು ಕೂಡ. ಬಲಾತ್ಕಾರದಿಂದ ತನ್ನ ತನ್ನ ವಿಷಯದ ಕಡೆಗೆ ಎಳದುಕೊಂಡು ಹೋಗುವದು ಎಂದು ಶ್ರೀಕೃಷ್ಣನು ಹೇಳಿರುವನು. ಹಾಗೆ ಭಾಗವತದಲ್ಲೂ “ ಜಿಹ್ವೈಕತೋಮುಮುಪಕರ್ಷತಿ ಕರ್ಹಿತರ್ಷಾ ಶಿಶ್ನೋನ್ಯತಸ್ತ್ವಗುದರಂ ಶ್ರವಣಂಕುತಶ್ಚಿತ್॥ ಘ್ರಾಣೋನ್ಯತಶ್ಚಪಲದೃಕ್ ಕ್ವಚಕರ್ಮ ಶಕ್ತಿರ್ಬಹ್ವ್ಯಃಸಪತ್ನ್ಯ ಇವಗೇಹಪತಿಂಲುನಂತಿ „ ಅರ್ಥ-ಈ ಪುರುಷನನ್ನು ಜಿಹ್ವೇಂದ್ರಿಯವಾದರೋ ತನ್ನ ಯಾವ ರಸವಿಷಯ ಉಂಟೋ,ಆದರ ಕಡೆಗೆ ಎಳೆಯುತ್ತಿರುವದು. ಮತ್ತು ಪಿಪಾಸೆಯು ತ ೫ ನ್ನ ಕಡೆಗೆ ಎಳೆಯುತ್ತಿರುವದು. ಇನ್ನು ಲಿಂಗೇಂದ್ರಿಯವು ತನ್ನ ೬ ವಿಷಯದ ಕಡೆಗೆ ಎಳೆಯುತ್ತಿರುವದು. ಹಾಗೆ ತ್ವಚೆಯು ತ ೭ ನ್ನ ವಿಷಯದ ಕಡೆ ಎಳೆಯುತ್ತಿರುವದು. ಮತ್ತು

---

೧ ಕಳವು ೨ ನನ್ನ ಸಚ್ಚಿದಾನಂದ ಪರಿಪೂರ್ಣ ನಿತ್ಯ ಶುದ್ಧಬುದ್ಧ ಸ್ವರೂಪವನ್ನು ೪ ವಿಸ್ತರಣಪಡಿಸಿ ತುಚ್ಛನಾದ ಜೀವಭಾವವನ್ನು ಹೊಂದಿಸುವಂಥಾವನಾಗಿರುವನು, ೫ ಜಲದ ಕಡೆ ೬ ಸ್ತ್ರೀಸಂಭೋಗದ ಕಡೆ ೭ ಚರ್ಮ

ಉದರವು ತನ್ನ ೯ ಕಡೆಯು, ಇನ್ನು ಶೋತ್ರವು ತ ೧೦ ನ್ನ ಕಡೆಯು, ನಾಸಿಕವು ತ ೧೧ನ್ನ ಕಡೆಯು, ಚಪಲವಾದ ನೇತ್ರವು ತ ೧೨ ನ್ನ ಕಡೆಯು, ಹಸ್ತ ಮತ್ತು ಪಾದಗಳು ತಮ್ಮ ವಿ ೧೩ ಷಯದ ಕಡೆಗೂ ಎಳಿಯುತ್ತಿರುವವು. ಈ ಪ್ರಕಾರವಾಗಿ ಹ್ಯಾಗೆ ಯಾವನಾನೊಬ್ಬ ಪುರುಷನಿಗೆ, ಬಹುಮಂದಿ ಸ್ತ್ರೀರುಗಳುಂಟಾದರೆ, ಹಾಗೆ ಅವರೆಲ್ಲರೂ ತಮ್ಮತಮ್ಮ ಕಡೆಗೆ ಯಳಿಯುವದರಿಂದ, ಪುರುಷನಿಗೆ ಕ್ಲೇಶವಂ ಕೊಡುವರೋ, ಹಾಗೆಯೇ ಈ ಇಂದ್ರಿಯ ರೂಪ ಸ್ತ್ರೀಯರು ಆತ್ಮರೂಪನಾದ ಪುರುಷನಿಗೆ, ಕ್ಲೇಶವಂ ಕೊಡುತ್ತಿರುವರು. ಎಂದು ಪೇಳಲ್ಪಟ್ಟಿರುವದು. ಹಾಗೆ ಈ ಪ್ರಕಾರವಾಗಿ ಸರ್ವವಿ ನನ್ನ ದೇಹದಲ್ಲಿ ಇರುತ್ತಿದ್ದರೂ, ಚೋರರನ್ನು ನಾನು ಈಗಿನ ಪರ್ಯಂತಪ್ರೂ. ವಂದು ಕಾಲದಲ್ಲೂ ನೋಡದವನಾಗಿರುವೆನು. ಹಾಗೆ (ಮಮಪಶ್ಯತಾಜ್ಞತಾಂ) ಅಂದರೆ. ಎಲೈವಿವೇಕೀ ಪುರುಷನೇ ನೋಡು ಇದು ನನ್ನಯೇನು ಮೂರ್ಖತ್ವವಾಗಿರುವದು. ... ‖೨೯‖

ಅ...ಮತಕ್ಕೆ ಯೇನಂದರೆ,

...ಪತಂಗೇತಿ...

ಮೂ—ಪತಂಗಮೀನೇಭಮೃಗಾಲಯೋಲಯಂ ।
ಪ್ರಯಾಂತಿಪಂಚೇಂದ್ರಿಯ ಪಂಚಗೋಚರೈಃ ॥
ಮಯಾತುತತ್ಪಂಚಕಮೇವಸೇವ್ಯತೇ ।
ಗತಿರ್ನಜಾನೇಮಮಕಾಭವಿಷ್ಯತಿ ॥೩೦॥

ಟೀಕಾ-೧ ಪತಂಗವು ವಂದು ಚಕ್ಷುರಿಂದ್ರಿಯದ ವಿಷಯವಾದ. ಯಾವ ರೂಪಉಂಟೋ ಆದಕ್ಕೋಸುಗ ದೀಪಕದಲ್ಲಿ ಪತಿತವಾಗಿ ಮೃತ್ಯುವನ್ನು ಹೊಂದಿಕೊಳ್ಳುವದು. ಮತ್ತು ಮೀನ-ಯಾವ ಮತ್ಸ್ಯವು ಆದೂ ಜಿಹ್ವೇಂದ್ರಿಯದ ವಿಷಯವಾದ ಯಾವ ರಸಉಂಟೋ ಅದರ ಅಪೇಕ್ಷೆಯಿಂದ ಲೋಹದ ಕೊಂಡಿಯನ್ನು ಭಕ್ಷಣಮಾಡಿ, ಮೃ

---

೮ ಸ್ಪರ್ಶದಕಡೆ ೯ ಅನ್ನದ ಕಡೆ ೧೦ ಶಬ್ದದ ಕಡೆ- ಸಂಗೀತಾದಿ ಗಾನಗಳ ಕಡೆಗೆ ೧೧ ಗಂಧದ ಕಡೆ-ವಾಸನೆಗಳ ಕಡೆ ೧೨ ರೂಪದ ಕಡೆ-ಸ್ತ್ರೀಸೌಂದರ್ಯಾದಿ ರೂಪಗಳಲ್ಲಿ ೧೩ ಹಿಡಿಯುವದು-ನಡೆಯುವದು

ತ್ಯುವನ್ನು ಪಡೆದುಕೊಳ್ಳುವದು. ಹಾಗೆ ಇಭ-ಯಾವ ಆನೆಯು ಅದೂ ಕೂಡ, ಒಂದು ಲಿಂಗೇಂದ್ರಿಯದ ವಿಷಯವಾದ ಯಾವಸ್ಪರ್ಶವುಂಟೋ ಅದನ್ನಪೇಕ್ಷಿಸಿ ಮಿ೨ಥ್ಯಾಹ೩ಸ್ತಿನೀ ಹಿಂದಣಿಂ ಕಪ್ಪಲಲ್ಲಿ ಪತಿತವಾಗುವದ್ದರಿಂದ ನಾಶವಂ ಪಡೆದುಕೊಳ್ಳುವದು. ಹಾಗೆ ಮೃಗ ಯಾವ ಜಿಂಕೆಯು ಕೂಡ, ಒಂದು ಶ್ರೋತ್ರೇಂದ್ರಿಯದ ವಿಷಯವಾದ, ಯಾವ ಶಬ್ದವುಂಟೋ, ಅದಕ್ಕೋಸುಗ ವೀಣೆಯ ಶಬ್ದವಂ ಕೇಳುವದರಿಂದ ವ್ಯಾಧನವಶೀಭೂತವಾಗಿ, ಮೃತ್ಯುವಂ ಪಡೆದುಕೊಳ್ಳುವದು. ಹಾಗೆ ಅಲಿ-ಯಾವ ಭ್ರಮರವು,ಅದೂ ಒಂದು ಘ್ರಾಣೇಂದ್ರಿಯದ ವಿಷಯವಾದ ಯಾವ ಸುಗಂಧವುಂಟೋ, ಅದರ ಅಪೇಕ್ಷೆಯಿಂ ರಾತ್ರಿಯೊಳ್ ಕಮಲ ಸಂಕುಚಿತವಾದ್ದರಿಂದ ಕಂಟಕದೊಳ್ ಬಾಧಿಸಲ್ಪಟ್ಟು, ಮೃತ್ಯುವಂ ಹೊಂದಿಕೊಳ್ಳುವದು. ಹಾಗೆ ಈ ಪ್ರಕಾರವಾಗಿ (ಪಂಚೇಂದ್ರಿಯಗೋಚರೈಃ) ಅಂದರೆ,-ಐದು ಇಂದ್ರಿಯಗಳ ಸಂಬಂಧವಾದ ಒಂದೊಂದು ವಿಷಯವನ್ನು ಸೇವನೆ ಮಾಡಿದ್ದರಿಂದ ಹೇಳಲ್ಪಟ್ಟ ಐದೂ ನಾಶಕ್ಕೆ ಪ್ರಾಪ್ತವಾದವು. ಇನ್ನು (ಮಯಾತು) ಅಂದರೆ, ನಾನಾದರೋ, ಒಬ್ಬನೆ ಆ ಐದು ವಿಷಯಗಳನ್ನು ಯಾವಾಗಲೂ ಆದರ ಪೂರ್ವಕವಾಗಿ, ಸೇವನೆ ಮಾಡುತ್ತಿರುವೆನು. ಅದನ್ನು ನಾನು ತಿಳಿಯದವನಾಗಿರುವೆನು. ಹೀಗಾದರೆ ನನಗೆ (ಗತಿಃ) ಅಂದರೆ, ಯೇನು ದಶೆಯಾದೀತು ? ಹಾಗೆ ಈ ವಿಷಯವು ೪ ಅನ್ಯತ್ರದಲ್ಲೂ ಕಥನ ಮಾಡಲ್ಪಟ್ಟಿರುವದು. “ಕುರಂಗ ಮಾತಂಗ ಪತಂಗ ಭೃಂಗಮೀನಾಹತಾಃ ಪಂಚಭಿರೇವಪಂಚ| ಏಕಃ ಪ್ರಮಾದಿ ಸಕಥಂನ ಹನ್ಯತೆಯಃಸೇವತೆ ಪಂಚಭಿರೇವಪಂಚ ,, ಅರ್ಥ- ಮೃಗ, ಹಸ್ತಿ, ಪತಂಗ, ಭ್ರಮರ ಮೀನಗಳೆಂಬ ಈ ಐದೂ ಪಂಚವಿಷಯಗಳನ್ನು ಬೇರೆಬೇರೆಯಾಗಿ ಸೇವನೆಮಾಡಿ,ನಾಶವನ್ನು ಹೊಂದಿಕೊಂ

---

೧ ದೀಪದಲ್ಲಿ ಬೀಳುವ ರೆಕ್ಕೆ ಹುಳು ೨ ಹಂಬಿಸುವದಕ್ಕಾಗಿ ಬಿಡಲ್ಪಟ್ಟ, ೩ ಹೆಣ್ಣಾನೆ. ೪ ಛಾಂದೋಗ್ಯೋಪನಿಷತ್ತಿನ ಉಪದೇಶ ಪ್ರಕರಣದಲ್ಲಿ ಉದ್ದಾಲಕ ಋಷಿಯು ಹೇಳಿರುವದೇನಂದರೆ, ಎಲೈ, ವತ್ಸ, ಮನುಷ್ಯನೆ ಕಠಿಣವಾದ ಸಂಸಾರ ವೃತ್ತಿಗಳಲ್ಲಿ ನೀನೇಕೆ ಮೂರ್ಖತನವಂ ಹೊಂದುತ್ತೀಯೆ ಯಾರು ವಿವೇಕವಂ ಬಿಟ್ಟು ವಿಷಮವಾದ ಭೋಗಗಳಿಗೆ ಭ್ರಾಂತರಾಗಿ ಹೋಗುವರೋ, ಅವರು ಸಂಸಾರತ್ಯಾಗವಂ ಬಿಟ್ಟು ಸುಖಾದಿಗ

ಡವು. ಮತ್ತು ಯಾವನಾನೊಬ್ಬ ಪ್ರಮಾದವುಳ್ಳ ಪುರುಷನು ಆ ಐದನ್ನು ಸೇವಿಸುತ್ತಿರುವನೊ, ಅವನು ಯಾವ ಪ್ರಕಾರ ನಾಶವನ್ನು ಪಡೆಯದೆ ಇದ್ದಾನು, ಅಂದರೆ ಅವಶ್ಯವಾಗಿ ನಾಶವಾಗುವನೆಂದು ತಾತ್ಪರ್ಯವು. ... ... ॥೩೦॥

ಅ—ಈ ಪ್ರಕಾರವಾಗಿ ಹೇಳಲ್ಪಟ್ಟ ರೀತಿಯಿಂದ ಇಂದ್ರಿಯಗಳ ದುಷ್ಟತನವನ್ನು ವರ್ಣನೆಯಂ ಮಾಡಿ ಈಗ ತನ್ನ ಮನಸ್ಸಿನ ದುಷ್ಟತ್ವಾದಿಗಳನ್ನು ಕೆಲವು ಶ್ಲೋಕಗಳಿಂದ ನಿರೂಪಣ ಮಾಡುತ್ತಾನೆ.

—ಯಥೇತಿ.—

ಮೂ—ಯಥಾಹಿತುಂಡೆಪತಿತೋಪಿಮಂಡೂಕಃ ।
ಸವಿಹಾಹಠೇತ್ತುಂಮಶಕಾನಚೇತನಃ ॥
ತಥಾಂತಕಾಸ್ಯಾಂತರಿತಃಸಮಂತತ ।
ಸ್ತಥಾಪಿಕಾಂಕ್ಷೆವಿಷಯಾನಹೋಜಡಃ ॥೩೧॥

ಟೀಕಾ—ಹ್ಯಾಗೆ ಕಪ್ಪೆಯನ್ನು ಸರ್ಪವು ಪಿಡಿದುಕೊಂಡಿರುವದೋ, ಮತ್ತು ಆ ಮೂರ್ಖವಾದ ಕಪ್ಪೆಯು (ಅಹಿತುಂಡೆ ಪತಿತೋಪಿ) ಅಂದರೆ,-ಆಸರ್ಪದ ಮುಖದಲ್ಲಿ ಹಿಂಭಾಗದಿಂದ ಗ್ರಾಸವಾಗಿದ್ದರೂ, ಪ್ರು

ಹೋಗತಕ್ಕವರೆಂದು ತಿಳಿ, ನೀನು ಪಾತಾಳವಂ ಪ್ರವೇಶಿಸಿದರೂ, ಬ್ರಹ್ಮಲೋಕವಂ ಪ್ರೊಂದಿದರೂ, ಭೋಗ ಭ್ರಮೆಯಂ ಬಿಟ್ಟು ಉಪಶಾಂತಿಯಂ ಪಡೆಯದೆ, ಎಂದಿಗೂ ಅಖಂಡ ಸುಖದಲ್ಲಿ ವಿಶ್ರಾಂತಿ ಸಂಭವಿಸುವದಿಲ್ಲ. ಇಷ್ಟವಸ್ತುಗಳ ಗ್ರಹಣ ಅನಿಷ್ಟವಸ್ತುಗಳ ತ್ಯಾಗಗಳೆಂಬ ಕಲ್ಪನೆಗಳಿಂದ ದುಃಖವೇ ಹೊರತು ಸುಖವೆಂದಿಗೂ ಆಗಲಾರದು. ಆದ್ದರಿಂದ ನೀನು ಮಳೆಗಾಲದ ಕಪ್ಪೆಯಂತೆ ಶಬ್ದವೇ ಮೊದಲಾದ ವೃತ್ತಿಗಳಿಂದ ಯಾಕೆ ಭ್ರಮಿಸುತ್ತೀಯೆ, ಸುಖಪ್ರದವಾದ ಉಪಶಾಂತಿಯಂ ನೋಡದೆ ಶ್ರೋತ್ರಾದಿ ಇಂದ್ರಿಯರೂಪದಿಂದ ಶಬ್ದಾದಿ ವಿಷಯಗಳಿಗೆ ಅಲೆಯುವ ನಿನ್ನಿಂದ ಯೇನು ಸಂಪಾದಿಸಲ್ಪಟ್ಟಿತು. ಮೃಗ, ಗಜ, ಪತಂಗ ಮೀನ, ಭ್ರಮರಗಳು, ಶಬ್ದ ಸ್ಪರ್ಶ ರೂಪ ರಸ ಗಂಧಗಳಲ್ಲಿ,ಒಂದೊಂದರಿಂದಲೆ ಒಂದೊಂದು ನಷ್ಟವಾಯಿತು. ಈ ಐದು ವಿಷಯಗಳು ನಿನ್ನೊಬ್ಬನನ್ನೆ ಯೆಳೆಯುವೆಯಲ್ಲಿ ನಿನಗೆ ಹ್ಯಾಗೆ ಸುಖವಾದೀತು ಎಂದು ಹೇಳಿರುವನು. ಈ ಎಚ್ಚರ ತಪ್ಪಿರುವ ಮನುಷ್ಯನು.

ನಃ ಬಾಹ್ಯದಲ್ಲಿ ಯಾವ ಮ[೧]ಶಕಗಳು ಹಾರುತ್ತಿರುವವೊ, ಅದನ್ನು ಭಕ್ಷಣ ಮಾಡುವದಕ್ಕೋಸುಗ, ತನ್ನ ಮುಖದಿಂದ ಗ್ರಹಣ ಮಾಡುವದಕ್ಕೆ ಒಯ್ಸುತ್ತಿರುವದು. ಹಾಗೆಯೆ ಕಾಲರೂಪ ಸರ್ಪನು ಜೀವರೂಪವಾದ ಕಪ್ಪೆಯನ್ನು ಹಿಡಿದುಕೊಂಡಿರುವದು. ಅಂದರೆ,-ಯಾವಯಾವ ಪುರುಷನಿಗೆ ಎಷ್ಟೆಷ್ಟು ಆಯುಷ್ಯವು ವ್ಯತೀತವಾಗಿ ಹೋಗಿರುವದೊ, ಅವನವನಿಗೆ ಅಷ್ಟಷ್ಟು ಹಿಂಭಾಗದಿಂದ ಕಾಲರೂಪ ಸರ್ಪದ ಮುಖದಲ್ಲಿ ಗ್ರಾಸವಾಗುತ್ತಿರುವದು. ಹಾಗೆ ಈ ಪ್ರಕಾರದಿಂದ ನಾನು ಜಡ ಅಂದರೆ, ಮೂರ್ಖನಾಗಿ (ಸಮಂತತಃ) ಅಂದರೆ,-ಸರ್ವವಿಧದಿಂದಲೂ ಕಂಠಪರ್ಯಂತ (ಅಂತಕಾಸ್ಯಾಂತರಿತಃ) ಅಂದರೆ, ಕಾಲರೂಪ ಸರ್ಪದ ಮುಖದಲ್ಲಿ ಗ್ರಾಸವಾಗಿದ್ದರೂ, ಪುನಃ ವಿಷಯ ರೂಪವಾದ ಮಶಕಗಳನ್ನು ಭೋಗಿಸುವದಕ್ಕೆ ವಾಂ[೨]ಛಿಸುತ್ತಿರುವೆನು. ಅಹೊ-ಅಂದರೆ,-ಇದುಯೇನು ನನ್ನ ಮನದ ದುಷ್ಟತನವಾಗಿರುವದು. ॥೨೧॥

ಅ—ಈ ಪ್ರಕಾರವಾಗಿ ವರ್ಣನೆಯಂ ಮಾಡಿ ಈಗ ಪುನಃ ತನ್ನ ಮನದ ದುಷ್ಟತೆಯನ್ನು ನಿರೂಪಣ ಮಾಡುತ್ತಾನೆ.

—ಸಿತಂಶಿರಇತಿ—

ಮೂ—ಸಿತಂಶಿರಃಸಂಪತಿತಾರದಾವಲೀ ।
ಮುಖಂವಲಿವ್ರಾತವೃತಂಚಚಕ್ಷುಷೀ ॥
ಗತಪ್ರಭೆಮೆಶಿಥಿಲಾಯತೆವಪು ।
ಸ್ತಥಾಪಿಚೇತೋಯುವತಿಂಸ್ಮರತ್ಯಹೊ ॥೨೨॥

ಟೀಕಾ—(ಸಿತಂಶಿರಃ) ಅಂದರೆ,-ನನ್ನ ಶಿರವು ಎಲ್ಲಾ ಕೂದಲುಗಳಿಂದ ಬೆಳ್ಳಗಾಗಿ ಹೋಗಿರುವದು. ಮತ್ತು (ಸಂಪತಿತಾರದಾವಲೀ) ಅಂದರೆ,-ಮು[೧]ಖದಲ್ಲಿ ಇರುವಂಥಾ ಯಾವ ದಂ[೨]ತಗಳ ಪಂಕ್ತಿ[೩]ಗಳಿದ್ದವೊ, ಅವೂ ಎಲ್ಲವು ಪ[೪]ತಿತವಾಗಿ ಹೋಗಿರುವವು. ಹಾಗೆ ಮುಖವೂ ಕೂಡ, (ವಲಿವ್ರಾತ) ಅಂದರೆ-ಎಲ್ಲಾ ಕಡೆಯಿಂದಲೂ ನೆರಿಗಳ ಸಮೂಹದಿಂದ ಆ[೫]ಚ್ಛಾದಿತವಾಗಿರುವದು. ಹಾಗೆಯೇ ಎರಡು ನೇತ್ರವೂ (ಗ

---

೧ ಸೊಳ್ಳೆ　೨ ಇಚ್ಛೆಸುತ್ತ-ಕೋರುತ್ತಿರುವೆನು.

೧ ಬಾಯಿ　೨ ಹಲ್ಲುಗಳ　೩ ಸಾಲು　೪ ಬಿದ್ದು-ಉದುರಿ,　೫ ಮುಸುಕ

ತಪ್ರಭೆ) ಅಂದರೆ, ಪ್ರಕಾಶದಿಂದ ಹೀನ * ವಾಗಿ ಹೋಗಿರುವದು ಇನ್ನು (ಶಿಥಿಲಾಯತೆವಪುಃ) ಅಂದರೆ, ಶರೀರದ ಹಸ್ತಪಾದಾದಿಯಾದ ಸರ್ವಅವಯವವೂ ಶಿಥಿಲವಾಗಿ ಹೋಗುತ್ತಿರುವವು. ಈ ಪ್ರಕಾರವಾದ ದ ೬ ಶೆ ಉಂಟಾಗಿದ್ದರೂ, ನನ್ನ ಮಾವಚಿತ್ತವುಂಟೋ, ಅದು (ಯುವತಿಂಸ್ಮರತಿ) ಅಂದರೆ,-ಯೌವನಾವಸ್ಥೆಯುಳ್ಳ ಸುಂದರ ಸ್ತ್ರೀ ೭ ಯರ ಸ್ಮ ೮ ರಣೆಯಂ ಮಾಡುತ್ತಿರುವದು ಹಾಗೆ (ಅಹೋ ಅಂದರೆ-ಇದುಯೇನು, ಬಹು ದೊಡ್ಡ ಆಶ್ಚರ್ಯದ ವಾರ್ತೆಯಾಗಿರುವದು. ಹಾಗೆ ಈ ವಿಷಯವನ್ನು ಕುರಿತು ವಬ್ಬ ವೃದ್ಧನಾದ ಸಜ್ಜನನು, ಪ್ರಕಟಿಸಿರುವದೇನಂದರೆ, ‹‹ವಪುಃಕುಬ್ಜೀಭೂತಂಗತಿರಪಿತಥಾ ಯಷ್ಟಿಶರಣಾವಿಶೀರ್ಣಾದಂತಾಲಿಃಶ್ರವಣವಿಕಲಂಶ್ರೋತ್ರಯುಗಲಂ॥ ಶಿರಃಶುಕ್ಲಂಚಕ್ಷುಸ್ತಿಮಿರಪಟಲೈರಾವೃತಮಹೋಮನೋಮೇ ನಿರ್ಲಜ್ಜಂತದಪಿ ವಿಷಯೇಭ್ಯಃ ಸ್ಪೃಹಯತಿ ,,

ಅರ್ಥ-॥ ಶರೀರವಾದರೋ ನನ್ನದು ಕು ೯ ಬ್ಜವಾಗಿ ಹೋಗಿರುವದು. ಮತ್ತು ನಡಿಗೆಯುಕೂಡಾ, ಕೋಲಿನ ಆಶ್ರಯವಾಗಿರುವದು. ಹಾಗೆ ಮುಖದಿಂದ ಯಲ್ಲಾ ದಂತಗಳು ಬಿದ್ದುಹೋಗಿರುವವು. ಇನ್ನು ಎರಡು ಕಿವಿಗಳಿಂದ ಶಬ್ದವೂ ಶ್ರವಣವಾಗುವದಿಲ್ಲವು. ಹಾಗೆ ತಲೆ ಕೂದಲುಗಳೂಕೂಡ, ಎಲ್ಲವೂ ಬೆಳ್ಳಗಾಗಿ ಹೋಗಿರುವವು. ನೇತ್ರವೂ ತಿಮಿ ೧೦ ರಪಟದಿಂದ ಆ ೧೧ ಚ್ಛಾದಿತವಾಗಿರುವದು. ಇಷ್ಟಾದರೂ, ಅಹೋ-ಅಂದರೆ,-ಇದು ಬಹು ಆಶ್ಚರ್ಯವಾದ ವಾರ್ತೆಯಾಗಿರುವದು. ಯೇನಂದರೆ,-ನನ್ನ ನಿರ್ಲಜ್ಜವಾದ ಮನವು ವಿಷಯಗಳನ್ನೇ ವಾಂಛಿಸುತ್ತಾ ಇರುವದು ಎಂದು ಹೇಳಿರುವನು. ... ॥೩೨॥

ಲ್ಪಟ್ಟು- ಆವರಿಸಲ್ಪಟ್ಟು * ಅದರಿಂದ ಚನ್ನಾಗಿ ಪದಾರ್ಥಗಳನ್ನು ನೋಡುವದಕ್ಕೆ ಆಗದಿರುವದು. ೬ ಅವಸ್ಥೆ, ೭ ಇಲ್ಲಿ ಸ್ತ್ರೀಶಬ್ದದಿಂದ ಸ್ತ್ರೀಯು ಮತ್ತು ಅವಳ ಭೋಗಕ್ಕೆ ಬೇಕಾದ ಗಂಧ ಮಾಲ್ಯವಸ್ತ್ರಭೂಷಣ, ಶಯ್ಯ, ತಾಂಬೂಲಗಳಾದ ವಸ್ತುಗಳನ್ನೂ ಇನ್ನೂ ಭೋಜ್ಯಪದಾರ್ಥಗಳನ್ನೂ ಸಹಗ್ರಹಿಸಿಕೊಳ್ಳತಕ್ಕದ್ದು.

೮ ಭೋಗಿಸುವದಕ್ಕೆ ಇಚೆವಡುತ್ತಿರುವದು.

೯. ಗೂನು-ಅಥವಾ-ಬೊಗ್ಗು. ೧೦. ಕತ್ತಲೆ, ಪರೆ, ಅಲ್ಲದೆ ಕಣ್ಣಿನ ನಾಡಿಯು ಬಲಕಡಮೆಯಾಗಿ ನೇತ್ರ ಪ್ರಕಾಶ ತಪ್ಪುವದ್ದರಿಂದ ಉಂಟಾಗುವ ದೋಷ-ಅಂದರೆ, ರೋಗ. ೧೧. ಮುಚ್ಚಿಹೋಗುವಿಕೆ.

ಅ॥ ಈ ಪ್ರಕಾರವಾಗಿ ಮನದ ದುಷ್ಟತನವನ್ನು ನಿರೂಪಣಮಾಡಿ, ಈಗ ಈಶ್ವರನ ಮಾಯೆಯ ಪ್ರಬಲತೆಯನ್ನು ತೋರ್ಪಡಿಸುತ್ತಾನೆ.

—ಅಧಃ ಶಿರಕ್ಸ್ನೇನೆತಿ—

ಮೂ—ಅಧಃಶಿರಕ್ಸ್ನೆನದುರಂತಸಂಕಟೆ ।
ಮಾಯಾಯುದಂಬಾಜಠರೆವಿನಿಶ್ಚಿತಮ್ ॥
ಸ್ಮರಾಮಿನಾದ್ಯಾಪಿ ತದುದ್ಧತಾಶಯೊ ।
ಮುರಾರಿಮಾಯಾಖಲುದುಸ್ತರಾಯತಃ ॥ ೩೩॥

ಟೀ॥ (ದುರಂತಸಂಕಟೆ) ಅಂದರೆ,-ಮಲ, ಮೂತ್ರ, ಜಠರಾನಲ ಕ್ರಿಮಿ ಆದಿಗಳಿಂದ ಪೂರ್ಣವಾಗಿ, ಮಹಾ ೧ ಸಂಕಟಸ್ಥಾನಭೂತವಾದ ಮಾತೃವಿನ ಉದರದಲ್ಲಿ ಯಾವ ಕಾಲದಲ್ಲಿ ನಾನು (ಅಧಃಶಿರಕ್ಸ್ನೆನ) ಅಂದರೆ,-ಕೆಳಕ್ಕೆಶಿರವು ಮತ್ತು ಮೇಲಕ್ಕೆಪಾದವು ಮಾಡಿಕೊಂಡು ಆಯಾಸ ಪಡುತ್ತಿದ್ದೆನೋ ಆಗ ಅಲ್ಲಿ ಯಾವ೨ಯಾವ ವಾರ್ತೆಗಳನ್ನುನಾನು ನಿಶ್ಚಯಿಸಿದ್ದೆನೊ ಅಂದರೆ,-ಇಲ್ಲಿಂದ ಹೊರಗೆ ಹೊರಟು ಹೀಗೆಹೀಗೆ ಮಾಡೇನು? ಅದೆಲ್ಲವನ್ನು ನಾನು ಸ್ತ್ರೀಯಾದಿ ವಿಷಯಗಳಲ್ಲಿನಿರಂತರ ಆಸಕ್ತನಾದ್ದರಿಂದ ವಿವೇಕದಿಂ ಭ್ರಷ್ಟನಾಗಿ(ಅದ್ಯಾಪಿ) ಅಂದರೆ,-ಈಗ ವೃದ್ಧಾವಸ್ಥೆಯನ್ನು ಹೊಂದಿದ್ದಾಗ್ಯೂ ಆ ವಾರ್ತೆಗಳನ್ನುಸ್ಮರಣೆ ಗೈಯ್ಯದವನಾಗಿರುವೆನು. ಆದ್ದರಿಂದ (ಮುರಾರಿಮಾಯಾ, ಅಂದರೆ,-ಈಗ ತಿಳುವಳಿಕೆಯಲ್ಲಿ ಬಂದಿರುವದು. ಯೇನಂದರೆ,-ಮುರಾರಿ ಯಾವ ಭಗವಂತನಾದ ನಾರಾಯಣನಿರುವನೋ ಅವನ ಮಾಯೆಯು ಬಹು ದುಸ್ತರವಾಗಿರುವದು. ಅವನು ನನ್ನನ್ನು ಈ ಸಂಸಾರದ ಮಿಥ್ಯಾವ್ಯವಹಾರದಲ್ಲಿ ಶಿಕ್ಕುಗೊಳಿಸಿ ಮರಸಿಬಿಟ್ಟಿರುವನು. ಹಾಗೆ ಗೀತೆಯಲ್ಲೂ ಹೇಳಲ್ಪಟ್ಟಿರುವದು " ದೈವೀಹ್ಯೇಷಾಗುಣಮಯೀ ಮಮಮಾಯಾದುರತ್ಯಯಾ ,, ಅರ್ಥ॥ ಎಲೇ, ಅರ್ಜುನ! ಈ ಯಾವ ತ್ರಿಗುಣರೂಪವಾದ, ನನ್ನ ದೈವೀ ಶಕ್ತಿಮಾಯೆ ಇರುವದೋ, ಹಾಗೆ ಅದರ ದಾಟುವಿಕೆಯು ಬ ೨ ಹು ಕಠಿ * ನವಾಗಿರುವದು ಎಂದು ಶ್ರೀ ಕೃಷ್ಣನು ಅಪ್ಪಣೆಗೈದಿರುವನು. ಈಗ ತಾಯಿಯ ಉದರದಲ್ಲಿರುವಂಥಾ ಬಾಲಕನು ಯಾವ ಯಾವದನ್ನು ನಿಶ್ಚಯಮಾಡಿದ್ದನೋ, ಆ ಸರ್ವವೂ, ಅಥರ್ವವೇದದ ಗರ್ಭೋಪನಿಷತ್ತಿನಲ್ಲಿ ಬರೆ

೧, ಇಕ್ಕಟ್ಟು, ೨, ಅಧಿಕ, * ಪ್ರಯಾಸ,

ಯಲ್ಪಟ್ಟಿರುವದು. ಆ ವಿಷಯವನ್ನು ಪ್ರಸಂಗದಿಂದ ಇಲ್ಲಿ ಸಂಕ್ಷೇಪ ವಾಗಿ ತೋರಿಸುತ್ತಿರುವರು. ಅಲ್ಲಿ ಯಾವ ಪ್ರಕಾರ ಬರೆಯಲ್ಪಟ್ಟಿರುವ ದೆಂದರೆ,-ಋತುಕಾಲದಲ್ಲಿ ಸ್ತ್ರೀಪುರುಷರ ಸಂಯೋಗವಾಗುವದ್ದರಿಂದ, ಯಾವ ವೀರ್ಯವು ಗರ್ಭದಲ್ಲಿ ನಿಲ್ಲಲ್ಪಡುವದೋ, ಬಳಿಕ ಆ ವೀರ್ಯವು ಒಂದು ರಾತ್ರಿಯಲ್ಲಿ ಕ ೩ ಲಲವಾಗುವದು. ಅದು ಬಳಿಕ ಸಪ್ತ ರಾತ್ರಿ ಯಲ್ಲಿ ಜಲ ಬುದ್ಬುದಕ್ಕೆ ಸಮಾನವಾಗುವದು. ಅಲ್ಲಿಂದ ಮುಂದೆ ಅರ್ಧ ಮಾಸದಲ್ಲಿ ಪಿಂಡಾಕಾರವಾಗುವದು. ಮಾಸಾಭ್ಯಂತರದಲ್ಲಿ ಅಧಿಕ ಕಠಿಣ ವಾಗುವದು. ಮಾಸದ್ವಯದಲ್ಲಿ ಅದರೊಳ್ ಶಿರ ಉಂಟಾಗುವದು. ತ್ರಿ ಮಾಸದಲ್ಲಿ ಎರಡು ಪಾದ ಪ್ರದೇಶಗಳು ಉಂಟಾಗುವವು. ಚತುರ್ಥಮಾ ಸದಲ್ಲಿ ಗು ೪ ಲ್ಫ, ಕಟಿ, ಉದರಗಳೆಂಬ ಈಮೂರು ಉತ್ಪನ್ನವಾಗುವ ವು. ಪಂಚಮ-ಅಂದರೆ ಐದನೇ ಮಾಸದಲ್ಲಿ ಪೃ ೬ ವ೭ ವಂಶವಾಗುವ ದು. ಇನ್ನು ಆರನೇ ಮಾಸದಲ್ಲಿ ಮುಖ, ನಾಸಿಕ, ನೇತ್ರಶ್ರೋತ್ರಗಳು ಉತ್ಪನ್ನವಾಗುವವು. ಏಳನೇ ಮಾಸದಲ್ಲಿ ಅದರೊಳ್ ಚೇತನತ್ವ ಪ್ರಕಟವಾಗುವದು. ಎಂಟನೇಮಾಸದಲ್ಲಿ ಸರ್ವಲಕ್ಷಣಗಳಿಂ ಸಂಪೂರ್ಣ ವಾಗುವದು. ಬಳಿಕ ಒಂಭತ್ತನೇ ಮಾಸದಲ್ಲಿ ಸರ್ವಜ್ಞಾನದಿಂದ ಸಂಪನ್ನ ವಾಗುವದು. ಅದರಬಳಿಕ ತನ್ನ ಎಲ್ಲಾ ಜನ್ಮಗಳನ್ನು ಮತ್ತುಶುಭಾಶುಭ ಕರ್ಮಗಳನ್ನು ಸ್ಮರಣೆಗೈಯ್ಯುತ್ತಾ ಅತ್ಯಂತ ವಿರಾಗವಂ ಹೊಂದಿದವ ನಾಗಿ, ಈ ಪ್ರಕಾರ ಈಶ್ವರನಂ ಪ್ರಾರ್ಥಿಸುತ್ತಿರುವನು. " ಪೂರ್ವಯೋ ನಿಸಹಸ್ರಾಣಿ ದೃಷ್ಟ್ವಾಚೈವತತೋಮಯಾ| ಆಹಾರವಿವಿಧಾ ಭುಕ್ತಾಃ ಪೀತಾನಾನಾವಿಧಾಃಸ್ತನಾಃ|| ಜಾತಶ್ಚಾಹಂಮೃತಶ್ಚಾಹಂಮೃತೋಜಾತಃ ಪುನಃಪುನಃ| ಅಹೋದುಃಖೋದಧೌಮಗ್ನೋ ನಪಶ್ಯಾಮಿಪ್ರತಿಕ್ರಿಯಾಂ|| ಯದಿಯೋನ್ಯಾಃಪ್ರಮುಚ್ಯೇಹಂತತ್ಪ್ರಪದ್ಯೇಮಹೇಶ್ವರಂ || ಯದಿಯೊ ನ್ಯಾಃಪ್ರಮುಚ್ಯೇಹಂ ತತ್ಸಾಂಖ್ಯಂಯೋಗಮಭ್ಯಸೇ | ಯದಿಯೊನ್ಯಾಃ ಪ್ರಮುಚ್ಯೇಹಂ ಧ್ಯಾಯೆಬ್ರಹ್ಮಸನಾತನಂ || ,, ಅರ್ಥ|| ಎಲೈ ಪರಮೇ ಶ್ವರ ಪೂರ್ವಯುಗದಲ್ಲಿ ನಾನು ಸಾವಿರಾರು ನೀ ೭ ಚ ಊ ೮ ಚಯೋ

೩, ಕಿಂಚಿತ್ ಮೃದು ಕಿಂಚಿತ್ ಗಟ್ಟಿಯಾಗಿರುವ ಕೆಸರು, ೪, ಪಾದದ ಎರಡುಕಡೆ ಗಿಣ್ಣು, ೫, ಸೊಂಟ, ೬, ಕೊನೆ ಬೆನ್ನು, ೭, ಅಧಮ, ೮, ಉತ್ತಮ,

ಗಳನ್ನು ನೋಡಿರುವೆನು. ಮತ್ತು ಅನೇಕ ಪ್ರಕಾರವಾದ ಆಹಾರ
ಕ್ಷಣೆ ಮಾಡಿರುವೆನು. ಹಾಗೆ ನಾನಾಪ್ರಕಾರವಾಗಿ ಸಾವಿರಾರು ಮಾ
ಗಳ ಸ್ತನ ಪಾನಮಾಡಿರುವೆನು. ಇನ್ನೂ ಅನೇಕ ಪ್ರಕಾರವಾದ
ನ್ಮ ಮತ್ತು ಮರಣ, ಪುನರ್ಜನ್ಮ ಪುನಃ ಮರಣವೆಂದು ಈ ಪ್ರಕಾರ
ದೇಪದೇ ಹುಟ್ಟುತ್ತಾ ಸಾಯುತ್ತಾ ಇರುವೆನು. ಆದ್ದರಿಂದ ಈಗ
ಈ ಗರ್ಭರೂಪವಾದ ದುಃಖಸಮುದ್ರದಲ್ಲಿ ಬಿದ್ದಿರುವ ನಾನು ತನ್ನನ್ನು
ುದ್ಧಾರ ಮಾಡುವಂಥಾ ಯಾವ ಉಪಾಯವನ್ನೂ ನೋಡದವನಾಗಿರ.ವೆ
ು. ಆದಕಾರಣ ಎಲೇ, ಈಶ್ವರಾ ಹ್ಯಾಗೆ ಈವಾಗ ಈ ಯೋನಿ
ುಂದ ಹೊರಗೆ ಹೊರಟೇನು; ನಂತರ ಮಹೇಶ್ವರ-ಯಾವ ಮಹಾದೇ
, ಅಥವಾ ವಿಷ್ಣು ಭಗವಂತನುಂಟೋ. ಕೇವಲವಾಗಿ ಅವರುಗಳನ್ನೇ
ರಾಧನೆ ಮಾಡೇನು? ಹಾಗೆ ಸಾಂಖ್ಯ ಇನ್ನುಯೋಗಗಳನ್ನೂ ಅಭ್ಯಾ
ಗೈದೇನು? ಮತ್ತು ಕೇವಲ ಸನಾತವಾದ ಯಾವ ಪರಿಪೂರ್ಣ ಬ್ರಹ್ಮ
ುಂಟೋ, ಅದನ್ನೇ ಅಹರ್ನಿಶವಾಗಿ ಧ್ಯಾನವಂ ಮಾಡೇನು ಎಂದು ಈ
ಪ್ರಕಾರ ಪ್ರಾರ್ಥನೆಯುಂ ಮಾಡುತ್ತಿರುವ ಆ ಜೀವನು ಯಾವಾಗ ಗರ್ಭ
ಂದ ಹೊರಗೆ ಬರುವನೋ, ಆಗ ಆ ಸರ್ವ ಜ್ಞಾನವನ್ನು ಮರತುಬಿಡು
ನು. ಇದೇ ಕಾರಣದಿಂದ ರೋದನ ಮಾಡುವನು ಈ ವಾರ್ತೆಯೂ
ಲ್ಲಿಯೇ ಪ್ರಕಟಿಸಿ ಇರುವದು. "ಜಾತಮಾತ್ರಸ್ತು ವೈಷ್ಣವೇನವಾ
ಯುನಾ ಸಂಸ್ಪೃಷ್ಟಸ್ತದಾನಸ್ಮರತಿಜನ್ಮಮರಣಾನಿ ನಚಕರ್ಮಶು
ಾಶುಭಂವಿಂದಂತಿ ॥" ಅರ್ಥ॥ (ಜಾತಮಾತ್ರಃ) ಅಂದರೆ,-ತಾಯಿಗ
ರ್ಭದಿಂದ ಹೊರಗೆ ಬಂದಕೂಡ್ಲೆ ಯಾವಾಗ ಅವನಿಗೆ ವೈಷ್ಣವನಾಮ
ವಾದ, ಬಾಹ್ಯ ವಾಯುವಿನೊಡನೆ ಸ್ಪರ್ಶವಾಗುವದೋ, ಆಗಲೇ ಆ
ಜೀವನು ತನ್ನ ಪೂರ್ವದ ಜನ್ಮ ಮರಣ, ಮತ್ತು ಶುಭಾಶುಭ ಕರ್ಮಗ
ನ್ನು ಸ್ಮರಣೆ ಮಾಡದೆ ಇರುವನು ಅಂದರೆ,-ಎಲ್ಲವನ್ನು ಮರತು
ಡುವನು. ... ... ॥೩೩॥

ಅ॥ ಈ ಪ್ರಕಾರದಿಂದ ಗರ್ಭದ ನಿಶ್ಚಯವನ್ನು ತೋರಿಸಿದವನಾ
, ಈಗ ಅದಕ್ಕೆ ವಿಪರೀತವಾದ ತನ್ನ ಆಚರಣೆಯನ್ನು ವರ್ಣನೆ
ಮಾಡುತ್ತಾನೆ.

—॥ ಕ ರೊ ಮಿ ತಿ ॥—

ಮೂ—ಕರೋಮಿದುಷ್ಕರ್ಮಸದಾಪ್ರಯತ್ನಃ ।
ಫಲಂತುವಾಂಛಾಮಿಸುಖಂಸುಕರ್ಮಣಃ ॥
ಕರಂಜವೃಕ್ಷಾರೋಪ್ಯತುಕೇನಭುಜ್ಯತೇ ॥
ಫಲಂರಸಾಲಸ್ಯಬತೆಯುಮುಜ್ಞಾತಾ ॥೩೪॥

ಟೀಕಾ॥ (ಸದಾ) ಅಂದರೆ,-ಹುಟ್ಟಿದ್ದು ಮೊದಲುಗೊಂಡು ಈಗಿನ ವರಿವಿಗೂ, ನಾನು ಪ್ರಯತ್ನಪೂರ್ವಕವಾಗಿ, (ದುಷ್ಕರ್ಮ) ಅಂದರೆ,-ಕೂಟವ್ಯಾಪಾರ, ಪರಸ್ತ್ರೀಗಮನ, ಇತ್ಯಾದಿ ದುಃಖಕ್ಕೆ ಕಾರಣಭೂತವಾದ, ಪಾಪಕರ್ಮಗಳನ್ನೇ ಆಚರಣೆ ಮಾಡುತ್ತಿರುವೆನು, ಮತ್ತು ಅದಕ್ಕೆ ವಿಪರೀತವಾಗಿ ಈಗ ಈ ಲೋಕ ಮತ್ತು ಪರಲೋಕದಲ್ಲಿ ಪುಣ್ಯಕರ್ಮಗಳ ಫಲಭೂತವಾದ ಯಾವ ಸುಖ ಉಂಟೋ ಅದನ್ನು ಅಪೇಕ್ಷೆ ಮಾಡುತ್ತಿರುವೆನು, ಆದರೆ ಈ ವಾರ್ತೆಯು ಹ್ಯಾಗೆ ಸಮ್ಮತವಾದೀತು ? ಯಾತಕ್ಕಂದರೆ, (ಕರಂಜವೃಕ್ಷಾರೋಪ್ಯ) ಅಂದರೆ, ಮೊದಲು ಕ೧ರಂಜವೃಕ್ಷವನ್ನು ಹುಟ್ಟಿಹಾಕಿ, ಬಳಿಕ ಯಾವ ಪುರುಷನು ಅ೨ಮ್ರಫ * ಲವನ್ನು ಭಕ್ಷಣೆ ಮಾಡಿರುವನು ? ಅಂದರೆ-ಯಾವನೂ ಮಾಡಲಿಲ್ಲವು. ಆದ್ದರಿಂದ (ಬತೆಯುಮುಜ್ಞಾತಾ) ಅಂದರೆ-ಅದರಂತೆಯೇ ಈ ನನ್ನ ಮಹದಾಶ್ಚರ್ಯವಾದ ಮೂರ್ಖತ್ವ ವಿರುವದು. ಹಾಗೆ ಜೀವನ್ಮುಕ್ತಿ ಪ್ರಕರಣದಲ್ಲೂ ಹೇಳಲ್ಪಟ್ಟಿರುವದು. “ ಪುಣ್ಯಸ್ಯಫಲಮಿಚ್ಛಂತಿಪುಣ್ಯಂನೇಚ್ಛಂತಿಮಾನವಾಃ। ನಪಾಪಫಲಮಿಚ್ಛಂತಿ ಪಾಪಂಕುರ್ವಂತಿ ಯತ್ನತಃ॥ „ ಅರ್ಥ॥ ಸ್ವಭಾವದಿಂದಲೇ ಸರ್ವಪ್ರಾಣಿಗಳು ಪುಣ್ಯಕರ್ಮದ ಫಲವಾದ ಯಾವ ಸುಖವುಂಟೋ, ಅದನ್ನು ಸರ್ವದಾ ಅಪೇಕ್ಷೆ ಮಾಡುತ್ತಿರುವರು. ಮತ್ತು ಕ್ರಿಯಃ ಪುಣ್ಯದ ಆಚರಣೆಯನ್ನು ಮಾಡುವದಿಲ್ಲ. ಹಾಗೆ ಪಾಪದ ಫಲವಾದ ಯಾವ ದುಃಖವುಂಟೊ, ಅದನ್ನು ಯಾರೂ ಬಯಸುವದಿಲ್ಲ. ಮತ್ತೇನಂದರೆ, ಯಲ್ಲಾ ಕಾಲದಲ್ಲೂ ಪ್ರಯತ್ನಪೂರ್ವಕವಾಗಿ, ಪಾಪಗಳ ಆಚರಣೆಯಂ ಮಾಡುತ್ತಿರುವರು. ಇದು ಯೇನು ಆಶ್ಚರ್ಯದ ವಾರ್ತೆಯಾಗಿರುವದು. ... ॥೩೪॥

೧, ಹೊಂಗೆ-ಹುಲಿಗಿಲಿಮರ, ೨, ಮಾವಿನ, * ಹಣ್ಣು,

ಅ—ಈ ಪ್ರಕಾರವಾಗಿ ಪೂರ್ವೋಕ್ತವಾದ ರೀತಿಯಿಂದ ಮನದ ಮೂರ್ಖತೆಯನ್ನು ನಿರೂಪಣಮಾಡಿ ಈಗ ಆ ಮನದಿಂದ ಬೇರೆಯಾದ ತನ್ನ ಆತ್ಮನ ಸ್ವರೂಪವನ್ನು ತಿಳಿಯುದ್ದರಿಂದ ಹೇಳುತ್ತಾನೆ.

—ಶ್ಲೋಕೋಹಮಿತಿ—

ಮೂ-ಕೋಹಂಕಥಂಕೇನಕುತಃಸಮುದ್ಗತೋ |
ಯಾಸ್ಯಾಮಿಚೇತಃಕ್ವಶರೀರಸಂಕ್ಷಯೇ ॥
ಕಿಂಮೇಸ್ತಿಚೇಹಾಗಮನೇಪ್ರಯೋಜನಂ |
ವಾಸೋತ್ರಮೇಸ್ಯಾತ್ಕತಿವಾಸರಾಣಿವಾ ॥೩೫॥

ಟೀಕಾ—(ಕೋಹಂ) ಅಂದರೆ,-ನಾನು ಯಾರು? ಮತ್ತು ಯಾವ ಪ್ರಕಾರದಿಂದ ಉತ್ಪನ್ನವಾಗಿರುವೆನು ? ಹಾಗೆ (ಕೇನ) ಅಂದರೆ,- ನಾನು ಯಾವ ಕಾರಣದಿಂದ ಉತ್ಪನ್ನನಾಗಿರುವೆನು; ಮತ್ತು (ಕುತಃಸಮುದ್ಗತಃ) ಅಂದರೆ,-ಯಾವ ವಸ್ತುವಿನಿಂದ ಉತ್ಪನ್ನವಾಗಿರುವೆನು ? ಹಾಗೆ ಈ ಶರೀರವು ನಾಶವಾಗಿ ಹೋದನಂತರ ಇಲ್ಲಿಂದ ನಾನು ಪುನಃ ಎಲ್ಲಿಗೆ ಹೋದೇನು ? ಹಾಗೆ (ಕಿಂಮೇಸ್ತಿಚೇಹಾಗಮನೆ ಪ್ರಯೋಜನಂ) ಅಂದರೆ,-ಈ ಮನುಷ್ಯಲೋಕದಲ್ಲಿ ನಾನು ಬರುವದಕ್ಕೆ ಯೇನು ಪ್ರಯೋಜನವಿದ್ದೀದು. ಮತ್ತು ಈಗ ಈ ಲೋಕದಲ್ಲಿ (ಕತಿವಾಸರಾಣಿ) ಅಂದರೆ,-ಎಷ್ಟು ದಿನದವರಿಗೆ ನನ್ನ ನಿವಾಸವಿದ್ದೀತು ? ಎಂದು ಹೇಳುತ್ತಿದ್ದನು. ॥೩೫॥

ಅ—ಇಲ್ಲಿನ ಪರ್ಯಂತವು ಗ್ರಂಥಕಾರನು ಮುಮುಕ್ಷು ಪುರುಷನ ವಿಚಾರ ರೂಪವಾದ ವ್ಯಾಜದಿಂದ, ವೇದಾಂತ ಶಾಸ್ತ್ರದಲ್ಲಿ ಆತ್ಮಜ್ಞಾನದ ಅಧಿಕಾರಿಯಾದ ಪುರುಷನ ಯಾವ ಯಾವ ಲಕ್ಷಣಗಳು ನಿರೂಪಿಸಲ್ಪಟ್ಟಿರುವವೋ,ಅವೆಲ್ಲವನ್ನು ಸೂಚನೆ ಮಾಡಿರುವನು.

ಎಂತೆಂದರೆ,-ಮಂಭತ್ತನೇಶ್ಲೋಕದಲ್ಲಿ ಯಾವದಂ ಹೇಳಿದನೊ, ಅಂದರೆ, ನಾನು ಅಜ್ಞಾನದ ಶಕ್ತಿಯಿಂದ ಪ್ರೇರಿತನಾಗಿ, ಈಗಿನ ಪರ್ಯಂತವೂ ತನ್ನ ಆತ್ಮನಿಗೆ ಹಿತಕಾರಕವಾದ ವಸ್ತುವನ್ನು ನೋಡದವನಾಗಿರುವೆನು. ಹಾಗೆ ಪುನಃ ಹನ್ನೊಂದನೆ ಶ್ಲೋಕದಲ್ಲಿ ಯಾವದನ್ನು ಹೇಳಿರುವನೋ,ಅಂದರೆ,-ನಾನು ಆಹಾರ ನಿದ್ರಾದಿಗಳಲ್ಲಿ ತತ್ಪರನಾಗಿರುತ್ತಾ, ಪಶುವಿನಂತೆ ವಿಚಾರದಿಂ ಶೂನ್ಯನಾಗಿ, ತನ್ನ ಶರೀರದಲ್ಲಿಯೇ ಇರುತ್ತಿ

ರುವ ಆತ್ಮನನ್ನು ನೋಡದವನಾಗಿರುವೆನು. ಹಾಗೆ ಆತ್ಮಾದಿಗಳಿಂದ ಜ್ಞಾನದ ಪ್ರಥಮ ಸಾಧನವಾದ, ಯಾವ ಆತ್ಮಾ ಮತ್ತು ಅನಾತ್ಮದ ವಿವೇಕವುಂಟೋ ಅದನ್ನು ಸೂಚನೆ ಗೈದಿರುವನು. ಹಾಗೆ ಪುನಃ ಕುಟುಂಬ, ಸ್ತ್ರೀಪುತ್ರ ಮತ್ತು ಧನಗಳಲ್ಲಿ ದೋಷ ದೃಷ್ಟಿ ನಿರೂಪಣದ್ವಾರಾ, ಜ್ಞಾನದ ದ್ವಿತೀಯ ಸಾಧನವಾದ ಯಾವ ಈ ಲೋಕ ಮತ್ತು ಪರಲೋಕದ, ಭೋಗಗಳಲ್ಲಿ ಹರ್ಷಕ್ಷಯ ರೂಪವಾದ ವೈರಾಗ್ಯವುಂಟೋ. ಅದನ್ನು ಸೂಚನೆ ಮಾಡಿರುವನು. ಯಾತಕ್ಕಂದರೆ, ಪರಲೋಕದಲ್ಲಿನ ಸ್ವರ್ಗಾದಿ ಭೋಗಗಳ ಪ್ರಾಪ್ತಿಯೂ, ಇಲ್ಲಿನ ಸ್ತ್ರೀ ಪುತ್ರಧನಾದಿಗಳಿಂದ ಆಗುವವು. ಎಂತೆಂದರೆ, ಸ್ತ್ರೀಪುತ್ರಾದಿಗಳ ಸಹಾಯದಿಂದ ಧನವಂ ಯಜ್ಞಾದಿಗಳಲ್ಲಿ ವ್ಯಯಮಾಡುವದ್ದರಿಂದಲೂ, ಸ್ವರ್ಗಾದಿಗಳ ಪ್ರಾಪ್ತಿಯಾಗುವದು. ಹಾಗೆ ಪುನಃ ಜಿಹ್ವಾದಿ ಇಂದ್ರಿಯಗಳ ದುಷ್ಟತನದ ವರ್ಣನೆಯಂ ಮಾಡಿದ್ದರಿಂದ ಅಲ್ಲಿ ಭೋಗ ಮಾತ್ರದಿಂದಲೂ, ವಿರಾಗ ತೋರಿಸಿ ಇರುವನು. ಯಾತಕ್ಕಂದರೆ,-ಯಾವನ್ಮಾತ್ರ ಬ್ರಹ್ಮಲೋಕ ಪರ್ಯಂತವೂ, ಭೋಗವಿರುವದೋ, ಆ ಸರ್ವವೂ ಇಂದ್ರಿಯಗಳಿಂದಲೇ ಭೋಗಿಸಲ್ಪಡುವದು. ಹಾಗೆ ಈ ನಿರೂಪಣೆಯದ್ವಾರಾ, ಇಂದ್ರಿಯಗಳ ನಿಗ್ರಹ ರೂಪವಾದ ಯಾವದಮವುಂಟೋ, ಆದನ್ನು ಸೂಚನೆ ಮಾಡಿರುವನು. ಹಾಗೆ ಮನದ ದುಷ್ಟತೆಯ ವರ್ಣನ ದ್ವಾರಾ ಮನದ ನಿಗ್ರಹ ರೂಪವಾದ ಯಾವ ಶಮವುಂಟೋ,ಅದನ್ನು ಸೂಚನೆ ಗೈದಿರುವನು. ಹಾಗೆ ಇಪ್ಪತ್ತು ಮೂರನೆ ಶ್ಲೋಕದಲ್ಲಿ ಯಾವದನ್ನು ಹೇಳಲ್ಪಟ್ಟಿರುವದೋ,ಅಂದರೆ,-ಯಾವ ವಿಶ್ವಂಭರನಾದ ಪರಮಾತ್ಮನು ಚರಾಚರ ಜಗತ್ತಿನ ಪೋಷಣೆ ಗೈಯ್ಯುತ್ತಿರುವನೋ,ಅವನು ಯೇನು; ನನಗೆ ಅನ್ನಾದಿಗಳನ್ನು ಕೊಡಲಾರನೋ,ಎಂಬುವದರಿಂದ ಕ್ಷು[೧]ಧಾ ಪಿ[೨]ಪಾಸಾದಿಯಾದ ದ್ವಂದ್ವಗಳ ಸಹನರೂಪವಾದ ಯಾವ ತಿತಿಕ್ಷಾ ವುಂಟೋ, ಆದನ್ನು ಸೂಚಿಸಲ್ಪಟ್ಟಿರುವನು. ಹಾಗೆ ಆದಕ್ಕೆ ಸಮೀಪದಲ್ಲಿ ಹೇಳಿದ ಮೂವತ್ತೈದನೆ ಶ್ಲೋಕದಲ್ಲಿ ಯಾವದನ್ನು ಹೇಳಲ್ಪಟ್ಟಿರುವದೊ, ಅಂದರೆ,-

೧ ಹಸಿವು ೨ ಬಾಯಾರಿಕೆ-ಜಲಾಪೇಕ್ಷೆ ಆದಿಶಬ್ದದಿಂದ ಶೀತೋಷ್ಣಾದಿಗಳನ್ನು ಗ್ರಹಿಸಿಕೊಳ್ಳತಕ್ಕದ್ದು.

ನಾನು ಯಾರು ? ಮತ್ತು ಎಲ್ಲಿಂದ ಉತ್ಪನ್ನನಾಗಿರುವೆನು ? ಹೀಗೆಂಬ ಪ್ರಕಾರದಿಂದ ಅಭ್ಯಂತರ ವಿಚಾರದ್ವಾರಾ ಮನಸ್ಸಿನ ಸ್ಥಿರತಾರೂಪವಾದ ಯಾವ ಸಮಾಧಾನವುಂಟೋ ಅದನ್ನು ಸೂಚನೆ ಪಡಿಸಿರುವನು. ಹಾಗೆ ಶ್ರದ್ಧಾ ಮತ್ತು ವಿಶ್ವಾಸಗಳಿಂದ ಮುಂದೆಗುರುವಿನ ಸಮೀಪಕ್ಕೆ ಹೋಗುವದೂ ಕೂಡ ಸೂಚಿತವಾಗಿರುವದು. ಈ ಪ್ರಕಾರದಿಂದ ಶಮ, ದಮ, ಶ್ರದ್ಧಾ, ಸಮಾಧಾನ, ತಿತಿಕ್ಷಾ, ವಿಶ್ವಾಸಗಳೆಂಬ ಈ ಆರರ ಸಮೂಹರೂಪವಾದ ಯಾವ ಜ್ಞಾನದ ಮೂರನೆ ಸಾಧನ ವೆನಿಪ ಷಟ್ ಸಂಪತ್ತಿಯುಂಟೋ ಅದನ್ನು ಸೂಚನೆ ಮಾಡಿರುವನು. ಹಾಗೆ ಹದಿನೆಂಟನೆ ಶ್ಲೋಕದಲ್ಲಿ ಯಾವದನ್ನು ಪೇಳಿರುವನೋ, ಅಂದರೆ,-ಎಲೆ ಈಶ್ವರ ನಾನು ಕಪೋತದಂತೆ ಕುಟುಂಬ ರೂಪವಾದ ಬಲೆಯಲ್ಲಿ ಸಿಕ್ಕಿರುವೆನು, ಯಾವ ಪ್ರಕಾರ ಬಿಡಲ್ಪಡುವೆನು "ಎಂಬುವದರಿಂದಲೂ, ಅಲ್ಲಿಂದ ಪುನಃ ಇಪ್ಪತ್ತಾರನೆ ಶ್ಲೋಕದಲ್ಲಿ ಯಾವದನ್ನು ಪೇಳಲ್ಪಟ್ಟತೋ ಅಂದರೆ,- ಅನಾದಿಯಾದ ಅವಿದ್ಯಾರೂಪ ತಿಮಿರದಿಂದ ನನ್ನ ಜ್ಞಾನರೂಪವಾದ ನೇತ್ರವು ಆಚ್ಛಾದಿಸಲ್ಪಟ್ಟಿರುವದು. ಹಾಗೆ ಆ ತಿಮಿರ ನಿವೃತ್ತಿ ಮಾಡುವಂಥಾ ಅಂಜನವೇನಿರುವದು ಇಂತೆಂಬುವ ದಾರಿಯಾದ ಮಾರ್ಗದಿಂದ ಜ್ಞಾನದ ಚತುರ್ಥ ಸಾಧನವೆನಿಪ ಯಾವ ಮುಮುಕ್ಷುತ್ವ ವುಂಟೋ ಅದನ್ನು ಸೂಚನೆ ಮಾಡಿರುವನು. ಹಾಗೆ ಈ ಪ್ರಕಾರದಿಂದ ಅಧಿಕಾರಿಯ ಸರ್ವಲಕ್ಷಣಗಳನ್ನು ಸೂಚನೆಯಂ ಮಾಡಿ, ಈಗ ಅದರ ಒಳಿಕ ಯಾವ ಗುರುವಿನ ಸಮೀಪಕ್ಕೆ ಪ್ರೋಗತಕ್ಕದ್ದಾದ ಜ್ಞಾನದ ಅಂತರಂಗ ಸಾಧನವುಂಟೋ ಅದನ್ನು ಆ ಮುಮುಕ್ಷು ಪುರುಷನ ವ್ಯಾಜದಿಂದಲೇ ತೋರಿಸುತ್ತಿರುವರು.

—ಅಥ ಮಿತಿ.—

ಮೂ—ಇತ್ಥಂಸುಧೀಃಶುದ್ಧಧಿಯಾನಿರಂತರಂ |
ಸಂಚಿಂತಯನ್ನಪ್ಯಗಮನ್ನನಿಶ್ಚಯಮ್ ||
ಖಿನ್ನಾಂತರಂಗಸ್ತುತತಃ ಸಮಿತ್ಕರೋ |
ಗತ್ವಾಭ್ಯಗಾಚಾತ್ಮವಿದಾಂವರಂಗುರುಮ್ || ೩೮ ||

೨ ಸಿದ್ಧ

ಟೀಕಾ__(ಇತ್ಥಂ) ಅಂದರೆ,-ಈ ಪೂರ್ವೋಕ್ತ ಪ್ರಕಾರವಾಗಿ ನವಮ ಶ್ಲೋಕದಿಂದ ಆರಂಭಮಾಡಿ, ಇಲ್ಲಿನ ಪರ್ಯಂತವು ಆ ಶ್ರೇಷ್ಠ ಬುದ್ಧಿಯುಳ್ಳ ಮುಮುಕ್ಷು ಪುರುಷನು ತನ್ನ ಶುದ್ಧ ಬುದ್ಧಿಯಿಂದ ನಿರಂತರದಲ್ಲಿಯೂ, ಭಾರಿ ಭಾರಿಗೂ (ಸಂಚಿಂತಯನ್) ಅಂದರೆ,- ವಿಚಾರ ಮಾಡುತ್ತಾ ಇದ್ದರೂ ತನ್ನ ಸ್ವರೂಪದ ನಿಶ್ಚಯವನ್ನು ಹೊಂದದವನಾಗಿದ್ದನು, ಹಾಗೆ ಯಜುರ್ವೇದದ ಕಠೋಪನಿಷತ್ತಿನಲ್ಲೂ ಹೇಳಲ್ಪಟ್ಟಿರುವದು. ನೈಷಾತರ್ಕೇಣಮತಿರಾಪನೇಯಾ ಪ್ರೋಕ್ತಾನ್ಯೇನೈವಸುಜ್ಞಾನಾಯಶ್ರೇಷ್ಠ ||

ಅರ್ಥ|| ಎಲೈ ಪ್ರಿಯತಮನಚಿಕೇತನೇ! ಈ ಆತ್ಮಜ್ಞಾನ ರೂಪವಾದ ಮತಿಯು ಕೇವಲ ತನ್ನ ಬುದ್ಧಿಯಿಂದಲೇ ವಿಚಾರಿಸುವದರಿಂದ ಪ್ರಾಪ್ತವಾಗುವದಿಲ್ಲ. ಮತ್ತೇನಂದರೆ,-ತತ್ವವೇತ್ತನಾದ ಗುರುವಿನ ಉಪದೇಶದ್ವಾರದಿಂದಲೇ ಆ ಜ್ಞಾನದ ಪ್ರಾಪ್ತಿಯಾಗುವದು. ಎಂದು ಹೇಳಲ್ಪಟ್ಟಿರುವದು. ಅಲ್ಲಿಂದಮುಂದೆ ಆಮುಮುಕ್ಷುವು (ಖಿನ್ನಾಂತರಂಗಃ) ಅಂದರೆ,-ಚಿತ್ತದಲ್ಲಿ ಖಿನ್ನ ೧ ತೆಯಂ ಪಡೆದವನಾಗಿ (ಸಮಿತ್ಕರಃ) ಅಂದರೆ,--ವಿಧಿಪೂರ್ವಕವಾಗಿ ಹಸ್ತದಲ್ಲಿ ಪೂಜಾದ್ರವ್ಯಗಳನ್ನು ತೆಗದುಕೊಂಡು ಯಾವನಾನೊಬ್ಬ (ಆತ್ಮವಿದಾಂವರಂ) ಅಂದರೆ,- ಆತ್ಮ ತತ್ವವನ್ನು ತಿಳಿಯಲ್ಪಟ್ಟ ಜ್ಞಾನೀ ಪುರುಷರುಗಳಲ್ಲಿ ಶ್ರೇಷ್ಠನಾದ ಅಂದರೆ,-ಬ್ರಹ್ಮಶ್ರೋತ್ರಿಯ ಮತ್ತು ಬ್ರಹ್ಮ ನಿಷ್ಠನಾದ ಗುರುವಿನ ಸವಿಸಾಪವಂ ಪೊಂ ೨ ದಿ ಮುಂಬೆ

---

೧ ಅತಿ ಉತ್ಕಟ ಜಿಜ್ಞಾಸದಿಂ ಸಂಯುಕ್ತವಾಗಿ. ೨ ಯಾತಕ್ಕಂದರೆ,- ಒಂದೇ ಬ್ರಹ್ಮಶ್ರೋತ್ರಿಯ ಗುರುವಾಗಿ ಇನ್ನು ಬ್ರಹ್ಮನಿಷ್ಠನಲ್ಲದಿದ್ದರೆ ಶಿಷ್ಯನಿಗೆ ಅವನ ವಾಕ್ಯದಲ್ಲಿ ಸರಿಯಾಗಿ ವಾಸ್ತವವಾದ ಶ್ರದ್ಧೆಯುಂಟಾಗುವದಿಲ್ಲ, ಮತ್ತು ಯಾವನು ಬ್ರಹ್ಮನಿಷ್ಠನಾಗಿ ಇನ್ನು ಶ್ರೋತ್ರಿಯನಲ್ಲದಿರುವನೊ ಅವನು ಶಿಷ್ಯನ ಸರ್ವಸಂಶಯಗಳನ್ನು ಚನ್ನಾಗಿ ಛೇದನ ಮಾಡುವದಕ್ಕೆ ಶಕ್ತನಾಗುವದಿಲ್ಲ, ಆದಕಾರಣ ಹೇಳಲ್ಪಟ್ಟ ಎರಡು ವಿಶೇಷಣಗಳಿಂದ ಯುಕ್ತನಾದ ಗುರುವಿನ ಸನ್ನಿಧಿಯಲ್ಲಿಯೆ ಶಿಷ್ಯನು ಹೋಗಬೇಕು. ಈಪ್ರಾರ್ಥಯು ಅಥರ್ವವೇದದ ಮುಂಡಕೋಪನಿಷತ್ತಿನಲ್ಲಿಯೂ ನಿರೂಪಿಸಲ್ಪಟ್ಟಿರುವದು. “ ತದ್ವಿಜ್ಞಾನಾರ್ಥಂಸಗುರುಮೇವಾಭಿಗಚ್ಛೇತ್‌ಸಮಿತ್ಪಾಣಿಃಶ್ರೋತ್ರಿಯಂಬ್ರಹ್ಮನಿಷ್ಠಂ ,, ಅರ್ಥ || ಜಿಜ್ಞಾಸುಪುರುಷನು ಆತ್ಮನಜ್ಞಾನದ ಪ್ರಾಪ್ತಿಗೋಸುಗ ಹಸ್ತಗಳಲ್ಲಿಪಿನನ್ನಾದರೂ ನಿಗ್ಗಲವಾದ ವಸ್ತುಗಳನ್ನು ತೆಗದುಕೊಂಡು ಬ್ರಹ್ಮಶ್ರೋತ್ರಿಯ ಮತ್ತು ಬ್ರಹ್ಮನಿಷ್ಠನಾದ ಗುರುವಿನ ಸನ್ನಿಧಿಯಲ್ಲಿ ಹೋಗಬೇಕೆಂಬುದು.

ಹೇಳಲ್ಪಡುವ ರೀತಿಯಿಂದ ಪ್ರಶ್ನೆಯಂ ಮಾಡುತ್ತಾನೆ. ॥೩೬॥

ಅ॥ ಈಪ್ರಕಾರವಾಗಿ ಆ ಮುಮುಕ್ಷು ಪುರುಷನು ಗುರುವಿನ ಸಮಿಾಪಕ್ಕೆ ಹೋದದ್ದನ್ನು ವರ್ಣನೆಯಂಮಾಡಿ, ಈಗ ಗ್ರಂಥದ ಸಮಾಪ್ತಿ ಪರ್ಯಂತವೂ ಅವರ ಸಂವಾದದ್ವಾರಾ ವೇದಾಂತಶಾಸ್ತ್ರದಸರ್ವರಹಸ್ಯಗಳನ್ನು ಸಂಕ್ಷೇಪದಿಂದ ನಿರೂಪಿಸುತ್ತಿದಾರೆ.

ಅಲ್ಲಿ ಪ್ರಥಮಶಿಷ್ಯನ ಪ್ರಶ್ನೆಯು ಉತ್ಥಾನ ಮಾಡುತ್ತಾರೆ.

— ಶಿಷ್ಯ ಉವಾಚ —

ಭವಾರ್ಣವೇಜನ್ಮಜರಾತಿಮಿಂಗಿಲೆ
ತೃಷಾನಲೇಮೋಹ ವಿವರ್ತಸಂಕುಲೆ ॥
ನಿಮಜ್ಜತೋಮೇಕಿಮುತಾರಕಂದೃಢಂ
ವದಾರ್ತಬಂಧೊಮಯಿಚೇದನುಗ್ರಹಃ ॥ ೩೭॥

ಟೀಕಾ॥ "ಭವಾರ್ಣವಇತಿ,, ಎಲೈ (ಆರ್ತಬಂಧೊ) ಅಂದರೆ,- ದೀನಪುರುಷರಿಗೆ ಸಹಾಯಮಾಡುವಂಥಾ ಗುರುವೇ ! (ಭವಾರ್ಣವೆ) ಅಂದರೆ- ಈಸಂಸಾರ ರೂಪವಾದ ಒಂದು ಮಹಾಸಮುದ್ರವಿರುವದು. ಯಾತಕ್ಕಂದರೆ,-ಹ್ಯಾಗೆ ಅಡಗಿಲ್ಲದೆ ಸಮುದ್ರವನ್ನು ದಾಟುವದು ಅತಿ ಕಠಿನವಾಗಿರುವದೊ, ಹಾಗೆಯೇ ಈ ಸಂಸಾರ ರೂಪ ಸಮುದ್ರದ ಪಾ೧ರವು ಅತ್ಯಂತ ಕಠಿನವಾಗಿರುವದು. ಅಲ್ಲಿ ಹ್ಯಾಗೆ ಸಮುದ್ರದಲ್ಲಿ ಜೀವಿಗಳಿಗೆ ಕ್ಲೇಶವಂ ಕೊಡುವಂಥಾ ನಾನಾ ಪ್ರಕಾರವಾದ ಗ್ರಾ೨ಹಮತ್ಸ್ಯಮ೩ ಕರಾದಿ ಕ್ರೂರಜಂತುಗಳು ಯಾವಾಗಲೂ ಇರುತ್ತಿರುವವೋ,ಹಾಗೆಯೇ ಸಂಸಾರರೂಪ ಸಮುದ್ರದಲ್ಲಿ (ಜನ್ಮಜರಾತಿಮಿಂಗಿಲೆ) ಅಂದರೆ-ಜನ್ಮ ಮತ್ತು ಜರಾರೂಪವಾದ ಕ್ರೂರಜಂತುಗಳು ಇರುತ್ತಿರುವವು. ಇಲ್ಲಿ ಜನ್ಮಜರಾ ಈ ಎರಡು ಮರಣ, ಶೀತ, ಉಷ್ಣ, ಕ್ಷುಧಾ, ಪಿಪಾಸಾ, ರಾಗದ್ವೇಷಾದಿಗಳುಕೂಡ ಉಪಲಕ್ಷಣವಾಗಿರುವದು. ಮತ್ತು ಹ್ಯಾಗೆ ಸಮುದ್ರದಲ್ಲಿ ಜಲವನ್ನು ಶೋಷಣೆ ಮಾಡುವಂಥಾ ಬಡವಾ೪ನಲವು ಸರ್ವದಾ ಇರುತ್ತಿರುವದೋ ಹಾಗೆ ಸಂಸಾರರೂಪ ಸಮುದ್ರದಲ್ಲಿ (ತೃಷಾನಲೆ) ಅಂದರೆ,- ತೃಷ್ಣಾರೂಪವಾದ ಬಡವಾನಲ ವಿರುತ್ತಿರುವದು. ಇನ್ನು ಹ್ಯಾ

---

೧ ದಾಟುವಿಕೆ. ೨ ಹಾವಿನ ಆಕಾರವಾದ ಮಿಾನು. ೩ ಮೊಸಳೆ. ೪ ನೀರಿನೊ

ಗೆ ಸಮುದ್ರದಲ್ಲಿ ಜಳಿಲದ ಮ*ಹಾಚಕ್ರಗಳುಂಟಾಗಿರುವದೋ ಹಾಗೆಯೆ ಸಂಸಾರರೂಪವಾದ ಸಮುದ್ರವು (ಮೋಹವಿವರ್ತಸಂಕುಲೆ) ಅಂದರೆ,- ಅಜ್ಞಾನರೂಪವಾದ ಮಹಾಚಕ್ರದಿಂದ ವ್ಯಾಪ್ತವಾಗಿರುವದು. ಯಾಕಂದರೆ, ಹ್ಯಾಗೆ ಜಲದ ಚಕ್ರದಲ್ಲಿ ಬಿದ್ದಿರುವ ಜೀವಿಯು ಕೆಳಗಣಿಂದ ಕೆಳಕ್ಕೆ ಹೊರಟು ಹೋಗುತ್ತಿರುವದೋ ಹಾಗೆಯೇ ಅಜ್ಞಾನರೂಪವಾದ ಚಕ್ರದಲ್ಲಿ ಬಿದ್ದಿದ್ದಾಗ್ಯೂ ಕೆ ೬ ಳಗಣಿಂದ ಕೆಳಕ್ಕೆಹೊರಟು ಹೋಗುತ್ತಿರುವರು. ಹಾಗೆ ಎಲೈ ಭಗವಂತನೇ ಈಪ್ರಕಾರವಾಗಿ ಘೋರವಾಗಿರುವ ಸಂಸಾರರೂಪವಾದ ಸಮುದ್ರದಲ್ಲಿ ನಾನು ಮುಳುಗಿಕೊಂಡು ಹೊರಟು ಹೋಗುತ್ತಿರುವೆನು, ಆದಕಾರಣ ಇದರಲ್ಲಿ (ಕಿಮುತ್ತಾರಕಂದೃಢಂ) ಅಂದರೆ-ಹೀಗೆ ಯೇನು ದಾಟಿಸುವಂಥಾ ದೃಢವಾದ ಸಾಧನವಿರುವದೋ? ಅಂದರೆ ಯಾವದರ ಆಶ್ರಯವಾಗುವದ್ದರಿಂದ ನಾನುಇದರಿಂದ ಪಾರವಾಗಿ ಹೋಗುವೆನೊ ಹಾಗೆ (ಮಯಿಚೇದನುಗ್ರಹಃ) ಅಂದರೆ,- ಎಲೈ ಭಗವಂತನೆ ಯಾವದು ನನ್ನಮೇಲೆ ತಮ್ಮ ಅನುಗ್ರಹ ವಾಗಲಿ, ಮತ್ತು ತಾವು ನನ್ನನ್ನು ಅಧಿಕಾರಿ ಎಂದು ಗ್ರಹಿಸಲ್ಪಟ್ಟರೆ ಕೃಪೆಮಾಡಿ ಇದರ ಉತ್ತರವನ್ನು ನನ್ನಂಕುರಿತು ನಿರೂಪಿಸಬೇಕು ಎಂದನು. ||೩೭||

ಅ|| ಈಪ್ರಕಾರವಾಗಿ ಶಿಷ್ಯನ ವಿನಯಪೂರ್ವಕವಾದ ಪ್ರಶ್ನೆಯಂ ಕೇಳಿದವರಾಗಿ ಈಗ ಗುರುವು ಅದನ್ನು ಅನುವಾದಮಾಡಿ ಉತ್ತರವಂ ಹೇಳುತ್ತಾರೆ.

— ಗುರುರುವಾಚ —

ಸಂಸಾರದುಷ್ಪಾರ ಮಹೋದಧೌನೃಣಾಂ
ತ್ರಂಬೀವದೇವೋರ್ಧ್ವ ಮಧಶ್ಚಮಜ್ಜತಾಂ||
ಗೋವಿಂದಪಾದಾಂಬುರುಹೈಕಚಿಂತನಂ
ಪೋತಂವದಂತೀಹ ದೃಢಾವಿಪಶ್ಚಿತಃ ||೩೮||

ಟೀಕಾ|| ‘‘ಸಂಸಾರೇತಿ,, ಎಲೈಶಿಷ್ಯನೇ ! ಈಸಂಸಾರವೆಂಬ (ದು

ಳಗಿರುವ ಅಗ್ನಿ- ಬೆಂಕಿ. * ನೀರಿನ * ದೊಡ್ಡ * ಸುಳಿ. ೬ ಪದೇಪದೇ ಸರ್ಪ, ಶ್ವಾನ ಸೂಕರಾದಿ ಯೋನಿಗಳಲ್ಲಿ ಭ್ರಮಿಸುತ್ತಾ ಇರುವರು.

ಷ್ಪಾರ) ಅಂದರೆ, ಅತ್ಯಂತ ದುಸ್ತರವಾದ ಮಹಾ ಸಮುದ್ರದಲ್ಲಿ ತುಂ ೧ ಬೀಳಲದಂತೆ ಯಾವಾಗಲೂ (ನಿಮಜ್ಜತಾಂ) ಅಂದರೆ, ಕೆ ೨ ಳಗೆಮೇಲೆ ಯಾಗುತ್ತಿರುವ ಪುರುಷರಿಗೆ, ಕೇವಲ (ಗೋವಿಂದಪಾದಾಂಬುರುಹೈಕ ಚಿಂತನಂ) ಅಂದರೆ,-ಗೋವಿಂದ-ಭಗವಂತನ ಚರಣಕಮಲಗಳನ್ನು ಯಾವದು ಏಕಾಗ್ರಚಿತ್ತದಿಂದ ಚಿಂತನೆಮಾಡಲ್ಪಡುವದೋ,ಅದನ್ನು ವಿದ್ವಾಂಸಜನಗಳು ನಾ ೩ ವೆ ಎಂದು ಹೇಳುವರು. ಆದ್ದರಿಂದ ಈ ನಾವೆಯು (ದೃಢಂ) ಅಂದರೆ, ಅತಿ ದೃ ೪ ಢವಾಗಿರುವದು. ಮತ್ತು ಯಾವದು ಭಗವದ್ಭಕ್ತಿಯಿಂದ ರಹಿತವಾಗಿ ಕೇವಲ ಕರ್ಮಕಾಂಡ ರೂಪವಾದ ನಾವೆಯುಂಟೋ ಅದು ಸಂಸಾರರೂಪವಾದ ಸಮುದ್ರದಿಂ ಪಾರುಮಾಡುವಲ್ಲಿ ಸಮರ್ಥವಾಗುವದಿಲ್ಲ. ಈ ವಿಷಯವು ಅಥರ್ವವೇದದ, ಮುಂಡಕೋಪನಿಷತ್ತಿನಲ್ಲಿ ಹೇಳಲ್ಪಟ್ಟಿರುವದು. "ಪ್ಲವಾಹ್ಯೇತೆ ಅದೃಢಾಯಜ್ಞರೂಪಾಃ ,, ಅರ್ಥ॥ ಯಾವ ಈ ಯಜ್ಞಾದಿ ರೂಪವಾದ ಕರ್ಮವಿರುವದೋ ಅದು, ಅದೃಢಾ-ಅಂದರೆ, ಒಡದುಹೋಗಿರುವ ಅಲ್ಪವಾದ ನಾವೆಗೆ ಸಮಾನವಾಗಿರುವದು. ಆದ್ದರಿಂದ ಸಂಸಾರರೂಪವಾದ ಸಮುದ್ರದ ಪಾರನ್ನು ಹೊಂದಲಿಚ್ಛಿಯುಳ್ಳ ಪುರುಷನು ಅನ್ಯ ಸರ್ವೋಪಾಯಗಳನ್ನು ಪರಿತ್ಯಾಗ ಮಾಡಿ, ಕೇವಲ ಭಗವಂತನ ಚರಣ ಕಮಲಗಳನ್ನೇ, ಸರ್ವ ಪ್ರಯತ್ನಗಳಿಂದಾಶ್ರೈಸುವಂತ್ಹಾದ್ದು ಯೋಗ್ಯವೆನಿಸುವದು. ಹಾಗೆ ಈ ವಾರ್ತೆಯು ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು ಅರ್ಜುನನಂ ಕುರಿತು "ಸರ್ವಧರ್ಮಾನ್ಪರಿತ್ಯಜ್ಯ ಮಾಮೇಕಂಶರಣಂವ್ರಜ । ಅಹಂತ್ವಾಸರ್ವಪಾಪೇಭ್ಯೋಮೋಕ್ಷಯಿಷ್ಯಾಮಿಮಾಶುಚಃ ,, ಅರ್ಥ॥ ಎಲೆ ಅರ್ಜುನ ! ನೀನು ನನ್ನ ಭಕ್ತಿಯಿಂದ ಶೂನ್ಯವಾಗಿರುವ ಅನ್ಯ ಸರ್ವ

೧, ಸೋರಿಬುರುಡೆ, ೨, ದೇವ, ಮನುಷ್ಯ, ಪಶು ಪಕ್ಷಿ ಸರ್ಪಾದಿ ನಾನಾ ಪ್ರಕಾರವಾದ ನೀಚ ಊಚಯೋನಿಗಳಲ್ಲಿ ಮುಳುಗಿ ತೇಲುತ್ತಿರುವ ಜೀವಿಗಳಿಗೆ, ೩, ಜ್ಞಾನೈಶ್ವರ್ಯಗಳಿಂ ಯುಕ್ತನಾದ ಶ್ರೀ ಪರಮೇಶ್ವರನ ಧ್ಯಾನವೇ ಸಂಸಾರ ಸಮುದ್ರದಿಂದ ಪಾರಾಗುವಂಥಾ ಸಾಧನವು, ೪, ಮಾರ್ಗದಲ್ಲಿ ಯಾವದಾದರೂ ವಿಘ್ನರೂಪವಾದ ವಾಯುವಾದಿಗಳಿಂದ ತೂರಿ ಹೋಗುವದಲ್ಲ, ಮತ್ತು ಮಗುಚಿಕೊಳ್ಳುವದೂ ಇಲ್ಲ, ಇನ್ನು ಒಡೆದುಹೋಗತಕ್ಕದೂ ಅಲ್ಲವಾದ್ದರಿಂದ ದೃಢವೆನಿಸಿಕೊಳ್ಳುವದು,

ಧರ್ಮಗಳನ್ನು ಪರಿತ್ಯಾಗಮಾಡಿ ಕೇವಲ ನನ್ನನ್ನೇ ಶರ* ಣುಹೊಂದು. ಮತ್ತು ನೀನು ಯಾವದನ್ನು ಹೇಳುವೆಯೋ ಸರ್ವ ಧರ್ಮಗಳ ಪರಿತ್ಯಾಗ ಮಾಡುವದರಿಂದ ಪ್ರತ್ಯವಾಯ ಸಂಭವಿಸುವದು, ಎನ್ನುವೆಯಾದರೆ, ಅದನ್ನೂ ಕುರಿತು ಇಲ್ಲಿ ಶೋಚಿಸಬೇಡ, ಯಾತಕ್ಕಂದರೆ, ನಾನು ನಿನ್ನನ್ನು ಸರ್ವ ಪಾಪಗಳಿಂದ ಮುಕ್ತನನ್ನಾಗಿ ಮಾಡಿ ಬಿಡುವೆನು ಎಂದು ಅಪ್ಪಣೆ ಗೈದಿರುವನು. ಹಾಗೆ ಅನ್ಯತ್ರದಲ್ಲೂ ಹೇಳಿರುವದು. "ರೇಚಿತ್ತಚಿಂತಯಚಿರಂ ಚರಣೌಮುರಾರೇಃ ಪಾರಂಗಮಿಷ್ಯಸಿಯತೋಭವಸಾಗರಸ್ಯ । ಪುತ್ರಾಃಕಲತ್ರಮಿತರೇ ನಹಿತೇಸಹಾಯಾಃ ಸರ್ವಂವಿಲೋಕಯಸಖೇ ಮೃಗತೃಷ್ಣಿಕಾಭಮ್ ॥,, ಅರ್ಥ॥ ಎಲೈ ಚಿತ್ತವೇ! ನೀನು ಬಹುಕಾಲಪರ್ಯಂತವು ಮುರಾರಿ-ಯಾವ ನಾರಾಯಣನಿರುವನೋ, ಅವನ ಚರಣವನ್ನೇ ಚಿಂತನೆಯಂ ಮಾಡು, ಯಾವದರಿಂ ನೀನು ಈ ಸಂಸಾರರೂಪಸಮುದ್ರದಿಂದ ಪಾರವಾಗಿ ಹೋದೀಯ್ಯೋ, ಯಾಕಂದರೆ-ಅಂತಕಾಲದಲ್ಲಿ ಈ ಸ್ತ್ರೀಪುತ್ರ ಮತ್ತು ಇತರರಾದ ಸಂಬಂಧಿ ಜನಗಳು ಯಾರೂ ನಿನಗೆ ಸಹಾಯಕರಾಗುವದಿಲ್ಲ. ಆದ್ದರಿಂದ ಎಲೈ ಸಖನೇ! ಈ ಸರ್ವ ಜಗತ್ತನ್ನು ನೀನು ಮೃಗತೃಷ್ಣಾಜಲಕ್ಕೆ ಸಮಾನವಾಗಿ ಮಿಥ್ಯಾರೂಪವೆಂದು ನೋಡು, ... ॥೩೮॥

ಅ॥ ಈ ಪ್ರಕಾರವಾಗಿ ಗುರುವಿನ ಮುಖದಿಂದ ಹ್ಯಾಗೋ ಹಾಗೆ ಉತ್ತರವಂ ಕೇಳಿ, ಈಗ ಪುನಃ ಶಿಷ್ಯನು ಎರಡನೇ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಮೂ—ಇತ್ಥೈವಸಂತ್ಯಜ್ಯಗೃಹಂಸಬಾಂಧವಂ ।
ಧನಂಶರೀರಂಚಗತಸ್ಯದೇಹಿನಃ ॥
ಭವೇದಮುತ್ರಾಸ್ಯಸಹಾಯಕಸ್ತುಕಃ ।
ಸುಹೃದ್ವದೆತದ್ವದವೇದವಿದ್ವಿಭೋ ॥ ॥೩೯॥

ಟೀಕಾ॥ ಇತ್ಥೈವೇತಿ ಎಲೈ (ವೇದವಿದ್ವಿಭೋ) ಅಂದರೆ- ಸರ್ವ ವೇದಗ

* , ಇಲ್ಲಿ ತತ್ಪದ ಲಕ್ಷ್ಯವಾದ ನಿರುಪಾಧಿಕ ಬ್ರಹ್ಮದಲ್ಲಿ ತ್ವಂಪದ ಲಕ್ಷ್ಯವಾದ ಕೂಟಸ್ಥಾತ್ಮನನ್ನು ಐಕ್ಯವೆಂದು ತಿಳಿಯುವದಕ್ಕೆ ಶರಣು ಶಬ್ದವು, ಇದು ಜ್ಞಾನಪರ, ೬, ಮಾರ್ಗ,

ಳನ್ನು ತಿಳಿಯಲ್ಪಟ್ಟ ಭಗವಂತನೇ ! ಯಾವಕಾಲದಲ್ಲಿ (ಇಹೈವಸಂತ್ಯಜ್ಯ) ಅಂದರೆ- ಮೃತ್ಯುವಶನಾದ ಪುರುಷನು, ಬಂಧುಜನ ಸಹಿತವಾಗಿ ತನ್ನ ಗೃಹ ಮತ್ತು ಧನಹಾಗೆ ಶರೀರ ಇವುಗಳೆಲ್ಲವನ್ನು ಪರಿತ್ಯಾಗಮಾಡಿ ಪರಲೋಕಕ್ಕೆ ಹೊರಟು ಹೋಗುವನೋ, ಆಗ ಆಕಾಲದಲ್ಲವನಿಗೆ (ಸುಹೃದ್ವತ್) ಅಂದರೆ,--ಮಿತ್ರನಂತೆ ಯಾವದು ಸಹಾಯವಾಗುವದು ? ಅದನ್ನು ಇಲ್ಲಿ ಕೃಪೆಮಾಡಿ ನನ್ನಂ ಕುರಿತು ನಿರೂಪಿಸಬೇಕುಎಂದನು ||೩೯||

ಅ|| ಈಪ್ರಕಾರದಿಂದ ಶಿಷ್ಯನ ಪರಲೋಕ ಸಂಬಂಧಿಯಾದ ಪ್ರಶ್ನೆಯನ್ನು ಕೇಳಿ ಈಗ ಗುರುವು ಅದರ ಉತ್ತರವನ್ನು ಹೇಳುತ್ತಾರೆ.

— ಗುರುರುವಾಚ —

ವಧೂರ್ಜನಿತ್ರೀಜನಕಃಸಹೋದರಃ
ಸುತಃಧನಂಮಿತ್ರಮಮುತ್ರಗಚ್ಛತಃ॥
ಸಮೇತಿಸಾಕಂನಸಹಾಯಕೋಪಿಕೊ
ವಿನಾಸ್ವಧರ್ಮೇಣನರೇಣವೈಕ್ವಚಿತ್ ||೪೦||

ಟೀಕಾ|| ವಧೂರಿತಿ-ಎಲೈ ಶಿಷ್ಯನೇ ! (ಅಮುತ್ರಗಚ್ಛತಃ) ಅಂದರೆ,-ಯಾವಕಾಲದಲ್ಲಿ ಈ ಪುರುಷನು ಮರಣವಂ ಪಡದು ಪರಲೋಕಕ್ಕೆ ಹೋಗುವನೋ, ಆಗ ವಧೂ-ಯಾವಸ್ತ್ರೀಯು, ಮತ್ತು ಜನಿತ್ರಿ-ಯಾವಮಾತೆಯೂ, ಹಾಗೆ ಜನಕ- ಯಾವಪಿತನು, ಇನ್ನು ಸಹೋದರ- ಯಾವ ಒಡಹುಟ್ಟಿದವರು, ಹಾಗೆ ಧನ - ಯಾವ ವಿಪುಲೈಶ್ವರ್ಯವು, ಮತ್ತು ಮಿತ್ರ-ಯಾವ ತನ್ನ ಸ್ನೇಹಿತರುಂಟೋ, ಆ ಈ ಸರ್ವರೂ ಆಕಾಲದಲ್ಲಿ ಈ ಪುರುಷನಿಗೆ (ನಸಹಾಯಕೋಪಿಕಃ) ಅಂದರೆ,- ಯಾವದೂ ಸಹಾಯಮಾಡುವದಕ್ಕಾಗಿ ಜೊತೆಯಲ್ಲಿ ಹೋಗುವದಿಲ್ಲ. ತಾನು ಅನುಷ್ಠಾನಮಾಡಲ್ಪಟ್ಟ ಧರ್ಮವಿನಹ ಮತ್ತಾವುದೂ ಸಹಾಯ ವಾಗುವದಿಲ್ಲ ಅಂದರೆ,- ತಾನು ಮಾಡಿರುವ ಧರ್ಮವೆ ಈ ಪುರುಷನೊಡನೆ ಪರಲೋಕದಲ್ಲಿ ಸಹಾಯಕ್ಕಾಗಿ ಹೋಗುವದು. ಈವಾರ್ತೆಯು ಮನುಸ್ಮೃತಿಯಲ್ಲಿಹೇಳಲ್ಪಟ್ಟಿರುವದು. ನಾಮುತ್ರಹಿಸಹಾಯಾರ್ಥಂ ಪಿತಾಮಾತಾಚತಿಷ್ಠತಃ||ನಪುತ್ರದಾರಾನಜ್ಞಾತಿ ರ್ಧರ್ಮಸ್ತಿಷ್ಠತಿ ಕೇವಲಃ ಅರ್ಥ-ಪುರುಷನೊಡನೆ ಪರಲೋಕದಲ್ಲಿ ಸಹಾಯಮಾಡುವಂಥಾದ್ದು ಪಿತನೂಇಲ್ಲ ಮಾತೃವೂಇಲ್ಲ.

ಪುತ್ರನೂಇಲ್ಲ. ಸ್ತ್ರೀಯೂಅಲ್ಲ ಮತ್ತು ಇತರರಾದ ಜ್ಞಾತಿಜನಗಳುಯಾರೂ ಆಗುವದಿಲ್ಲ. ಆನ್ನೇನಂದರೆ—ಕೇವಲಸ್ವಧರ್ಮಮಾತ್ರಪೆಸ್ಥಿತವಾಗಿರುವದು ಆದ್ದರಿಂದಎಲೈಶಿಷ್ಯನೆ. ಪರಲೋಕದಲ್ಲಿ ಸಹಾಯೇಚ್ಛೆಯುಳ್ಳ ಪುರುಷನು. ಯಾವಾಗಲೂ ಧರ್ಮವನ್ನೇಆಚರಿಸುವದು ಯೋಗ್ಯವು. ಹಾಗೆಈವಿಷಯವು ತೈತ್ತಿರೀಯಉಪನಿಷತ್ತಿನಲ್ಲೂ ಧರ್ಮಂಚರ ಧರ್ಮಾನ್ನಪ್ರಮದಿತವ್ಯಂ ಅರ್ಥ—ಎಲೈಪುರುಷನೇ ನೀನುಯಾವಾಗಲೂ ಧರ್ಮವನ್ನೇ ಆಚರಣೆಯಂ ಮಾಡು ಧರ್ಮದಿಂದೊಂದು ಕಾಲದಲ್ಲಿಯೂ ಪ್ರಮಾದವಂ ಪಡೆಯಬೇಡ ಎಂದು ಹೇಳಲ್ಪಟ್ಟಿರುವದು. ಹಾಗೆ ಮಹಾ ಭಾರತದ ಅಂತದಲ್ಲೂ ನಜಾತುಕಾಮಾನ್ನಭಯಾನ್ನಲೋಭಾದ್ಧರ್ಮಂತ್ಯಜೇಜ್ಜೀವಿತಸ್ಯಾಪಿಹೇತೋಃ ॥ ಧರ್ಮೋನಿತ್ಯಃ ಸುಖದುಃಖೇತ್ವನಿತ್ಯೇಜೀವೋನಿತ್ಯೋಹೇತುರಸ್ಯತ್ವನಿತ್ಯಃ ॥ ಅರ್ಥ—ಪುರುಷನು ಯಾವದಾನೊಂದುಕಾಲದಲ್ಲಾದರೂ, ಪರಸ್ತ್ರೀಯಾದಿ ವಿಷಯಕವಾದ ಕಾಮಕ್ಕೆ ವಶೀಭೂತನಾಗುವದರಿಂದಲಾದರೂ, ಅಥವಾ ರಾಜಾದಿಗಳ ಭಯದಿಂದಲಾದರೂ, ಅಲ್ಲದೆ ಧನಾದಿಗಳ ಲೋಭದಿಂದಲಾದರೂ, ಅದೂ ಅಲ್ಲದೆ ತನ್ನ ಜೀವನಾರ್ಥವಾಗಿ ಯಾದರೂ ಧರ್ಮದ ಪರಿತ್ಯಾಗವನ್ನು ಮಾಡಕೂಡದು ಯೆಂದು ನಿರೂಪಿಸಲ್ಪಟ್ಟಿರುವದು. ಯಾತಕ್ಕಂದರೆ,-ಧರ್ಮವು (ನಿತ್ಯ) ಅಂದರೆ,-ಸದಾ ಸಂಗದಲ್ಲಿ ಇರುವಂಥಾದ್ದು. ಇನ್ನು ಸಾಂಸಾರಿಕ ಸುಖದುಃಖಾದಿಗಳಾದರೆ, ಅನಿತ್ಯ ಪದಾರ್ಥವಾಗಿರುವದು. ಹಾಗೆ ಸುಖದುಃಖಾದಿಗಳ ಹೇತುವೂ ಕೂಡ, ಅನಿತ್ಯವೆಂದು ಹೇಳಿಸಿಕೊಳ್ಳುವದು. ಮತ್ತು ಜೀವ (ನಿತ್ಯ) ಅಂದರೆ, ಅವಿನಾಶಿ ಎಂದು ಹೇಳಲ್ಪಡುವದು. ಆದ್ದರಿಂದ ಅನಿತ್ಯ ಪದಾರ್ಥಕ್ಕೋಸುಗ ನಿತ್ಯವಾದ ಧರ್ಮವನ್ನು ಪರಿತ್ಯಾಗಮಾಡಕೂಡದು. ... ... ॥೪೦॥

ಅ—ಈ ಪ್ರಕಾರವಾಗಿ ಶಿಷ್ಯನು ಧರ್ಮದ ಪ್ರಶಂಸೆಯನ್ನು ಕೇಳಿ, ಪುನಃ ಪ್ರಶ್ನೆಯನ್ನು ಮಾಡುತ್ತಾನೆ.

—ಶಿಷ್ಯ ಉವಾಚ—

ಧರ್ಮಸ್ಯಮಾರ್ಗಾಬಹವೋಮಹರ್ಷಿಭಿಃ ।
ಸಂದರ್ಶಿತಾಭುಕ್ತಿವಿಮುಕ್ತಿಸಿದ್ಧಯೆ ॥

ಕಸ್ತೇಷುಗಮ್ಯಸ್ತುಮಯಾತ್ಮಶುದ್ಧ್ಯೈ |
ನಿಃಶೇಷಧರ್ಮೈಕರಹಸ್ಯವಿದ್ಗುರೋ ||೪೦||

ಟೀಕಾ—ಧರ್ಮಸ್ಯೇತಿ|| ಎಲೈ ಗುರುವೆ ಯಾವ ಈ ಪುರುಷನಿಗೆ ಪರಲೋಕದಲ್ಲಿ ಧರ್ಮ ಒಂದೇ ಸಹಾಯವಾಗುವದೆಂತಲೂ, ಅನ್ಯಯಾವದೂ ಇಲ್ಲವೆಂತಲೂ ತಾವು ಹೇಳಿದಿರಲ್ಲವೆ ೧ ಆ (ಧರ್ಮಸ್ಯ) ಅಂದರೆ,-ಧರ್ಮಮಾರ್ಗವು ವ್ಯಾಸಾದಿ ಪೂರ್ವದ ಮಹರ್ಷಿಗಳು ಭೋಗ ಮತ್ತು ಮೋಕ್ಷದ ಪ್ರಾಪ್ತಿಗೋಸುಗ, ಅನೇಕ ಪ್ರಕಾರವಾಗಿ ಮಹಾ ಭಾರತಾದಿಗಳಲ್ಲಿ (ಸಂದರ್ಶಿತಾ) ಅಂದರೆ,-ಸಮ್ಯಕ್ ಪ್ರಕಾರದಿಂದ ತೋರಿಸಿ ಇರುವರು. ಅಂದರೆ,-ಪ್ರತಿಪಾದನ ಮಾಡಿರುವರು. ಆದ್ದರಿಂದ ಎಲೈ (ನಿಃಶೇಷಧರ್ಮೈಕ ರಹಸ್ಯವಿತ್) ಅಂದರೆ, ಸರ್ವ ಧರ್ಮ ರಹಸ್ಯಗಳನ್ನು ತಿಳಿದಂಥಾ ಗುರುವೆ ! ಅವುಗಳಲ್ಲಿ ತನ್ನ ಅಂತಃಕರಣ ೧ ದ ಶುದ್ಧ್ಯರ್ಥವಾಗಿ ನಾನು ಯಾವ ಮಾರ್ಗದ ಧರ್ಮವಂ ಗ್ರಹಣ ಮಾಡತಕ್ಕದ್ದು ಅದನ್ನು ತಾವು ಕೃಪೆಮಾಡಿ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ... ||೪೦||

ಆ -ಈ ಪ್ರಕಾರವಾದ ಶಿಷ್ಯನ ಮೂರು ಪ್ರಶ್ನೆಗಳನ್ನು ಕೇಳಿ ಈಗ ಗುರು ಅವುಗಳ ಉತ್ತರವನ್ನು ಹೇಳುತ್ತಾರೆ.

—ಗುರು ರುವಾಚ—

ವಾಚಾಚಚಿತ್ತೇನಚ ಕರ್ಮಣಾಪಿಯತ್ |
ಸಂಪಾಲನಂನಿತ್ಯಮವೇಕ್ಷ್ಯಶಾಸ್ತ್ರತಃ ||
ಸತ್ಯಸ್ಯತದ್ಧರ್ಮವಿಹೋತ್ತಮಂಬುಧಾಃ |
ಪ್ರಾಹುಸ್ತತಸ್ತಂಹಿಸಮಾಶ್ರಯಾಚಿರಮ್ ||೪೧||

ಟೀಕಾ—ವಾಚೇತಿ ಎಲೈ ಶಿಷ್ಯನೇ ! (ವಾಚಾ) ಅಂದರೆ,-ವಾಣಿಯಿಂದಲೂ, ಮತ್ತು (ಚಿತ್ತೇನ) ಅಂದರೆ,-ಚಿತ್ತದಿಂದಲೂ, ಹಾಗೆ (ಕರ್ಮಣಾ) ಅಂದರೆ,-ಶರೀರದಿಂದಲೂ ಕೂಡ ಯಾವಾಗಲೂ ಶಾಸ್ತ್ರದಿಂದ ವಿಚಾರ ಮಾಡಿ ಯಾವ ಸತ್ಯವನ್ನು ಚನ್ನಾಗಿ ಪಾಲನ ಮಾಡಲ್ಪಡುವದೋ, ಅದನ್ನು (ಬುಧಾಃ) ಅಂದರೆ,-ವಿದ್ವಾಂಸ ಜನಗಳು ಯಲ್ಲಾ ಧರ್ಮಗಳ

೧ ಚಿತ್ತದ-ಮನಸ್ಸಿನ

ಗಿಂತಲೂ ಉತ್ತಮ ಧರ್ಮವೆಂದು ಪ್ರಕಟ ಪಡಿಸುತ್ತಿರುವರು. ಅದರಲ್ಲಿ ಹ್ಯಾಗೆ ನೋಡಿದನೊ, ಅಥವಾ ಆಪ್ತ ಪುರುಷನ ಮುಖದಿಂದ ಹ್ಯಾಗೆ ಶ್ರವಣಮಾಡಿರುವನೊ, ಹಾಗೆಯೆ ಮಾತನಾಡುವದು, ಇನ್ನು ಸರ್ವಪ್ರಾಣಿಗಳ ಹಿತಕಾರಕವಾಗಿಯೂ, ಮತ್ತು ಪ್ರಿಯವಾಗಿ ಮಾತನಾಡುವದುಯಾತಕ್ಕಂದರೆ. —ಯಾವಸತ್ಯದಮಾತಿನಿಂದ ಯಾವದಾನೊಂದುಪ್ರಾಣಿಗೆ ಕ್ಲೇಶಪ್ರಾಪ್ತವಾದರೆ ಆಸತ್ಯವು ಅಸತ್ಯಕ್ಕೆ ಸಮಾನವೆನಿಸುವದು. ಆದ್ದರಿಂದ ಸತ್ಯಪ್ರಿಯವಾಗಿ, ಮತ್ತು ಹಿತಕಾರಕವಾಗಿ. ಯಾವ ಭಾಷಣಮಾಡಲ್ಪಡುವದೋ ಅದು ವಾಚಾಸತ್ಯವೆನ್ನಲ್ಪಡುವದು. ಹಾಗೆ ಚಿತ್ತದಿಂದ ಯಾವ ಪ್ರಾಣಿಗೂ, ಯಾವ ಅನಿಷ್ಟಚಿಂತನೆಯೂ ಮಾಡದಿರುವದು, ಮತ್ತು ಸರ್ವರೊಡನೆ ಸುಹೃದ್ಭಾವದಿಂದಿರುವದು ಯಾವದೋ ಅದು ಚಿತ್ತದ ಸತ್ಯವೆನಿಸಿಕೊಳ್ಳುವದು. ಹಾಗೆ ತನ್ನ ಶರೀರದಿಂದ ಯಾವ ಪ್ರಾಣಿಗೂ ಯಾವಕ್ಲೇಶವೂ ಕೊಡದಿರುವದು, ಮತ್ತು ಪರಸ್ತ್ರೀಗಮನಾದಿ ಅಶುಭ ಕರ್ಮಗಳನ್ನಾಚರಣೆ ಮಾಡದಿರುವದು ಸಹ ಶರೀರದ ಸತ್ಯವೆನಿಸಿಕೊಳ್ಳುವದು. ಹಾಗೆ ಸತ್ಯಪಾಲನೆಯೆ ಸರ್ವಧರ್ಮಗಳಿಗಿಂತ, ಉತ್ಕೃಷ್ಟವೆಂದು ಮಹಾ ಭಾರತದ ಮೋಕ್ಷಪರ್ವದಲ್ಲಿ ದೇವತೆಗಳಿಂ ಕುರಿತು ಹಂಸರೂಪನಾದ ಪ್ರಜಾಪತಿಯು ಅಪ್ಪಣೆಗೈದಿರುವನು. ಸತ್ಯಂಸ್ವರ್ಗಸ್ಯ ಸೋಪಾನಂ ಪಾರಾವಾರಸ್ಯನೌರಿವ ॥ ನಚಪಾವನತಮಂಕಿಂಚಿತ್ಸತ್ಯಾದ ಧ್ಯಾಗಮಂಕ್ವಚಿತ್ ,,

ಅರ್ಥ॥ ಎಲೈ ದೇವತೆಗಳಿರಾ, ಸತ್ಯವೇ ಸ್ವರ್ಗದಲ್ಲಿ ಆರೋಹಣ ಮಾಡುವಂಥಾ ಯೇಣಿಯು, ಮತ್ತು ಸತ್ಯವೇ ಸಂಸಾರರೂಪ ಸಮುದ್ರದಿಂದ ಪಾ ೧ ರಮಾಡುವಂಥಾ ನಾ ೩ ವೆಯು, ನಾನು ಚತುರ್ದಶಭುವನದಲ್ಲಿ ಹುಡುಕಿದಾಗ್ಯೂ ಸತ್ಯಕ್ಕಿಂತ (ಪರೆ) ಅಂದರೆ-ಅನ್ಯವಾದ ಪವಿತ್ರಧರ್ಮವು ಯಾವದನ್ನೂ ನೋಡದಿರುವೆನು ಎಂದು. ಹಾಗೆ ಅಥರ್ವವೇದದ ಮುಂಡಕೋಪನಿಷತ್ತಿನಲ್ಲೂ ಹೇಳಲ್ಪಟ್ಟಿರುವದು. “ ಸತ್ಯಮೇವಜಯತೆ ನಾನೃತಂಸತ್ಯೇನಪಂಥಾ ವಿತತೋದೇವಯಾನಃ ,, ಅರ್ಥ॥ಸತ್ಯವೇ ಸರ್ವತ್ರ ಜೈಸುವದು ಅಸತ್ಯವಲ್ಲ. ಮತ್ತು ಸತ್ಯದಿಂದಲೇ ಉಪಾ

---

೧ ದುಃಖ

೨. ಪಾಟಿಸುವಂಥಾ. ೩. ಹಡಿಗೋಲು, ದೋಣಿ, ಜಹಜು.

ಸಕಲ ಜನಗಳು ದೇವಯಾನ ಮಾರ್ಗದಿಂದ ಬ್ರಹ್ಮಲೋಕಕ್ಕೆ ಹೋಗುತ್ತಿರುವರು. ಅಥವಾ ಅಲ್ಲಿ ಸತ್ಯಶಬ್ದದಿಂದ ಬ್ರಹ್ಮವನ್ನು ತಿಳಿಯಬೇಕು ಯಾತಕ್ಕೆಂದರೆ—" ಸತ್ಯಂಜ್ಞಾನಮನಂತಂಬ್ರಹ್ಮ ,, ಈ ಯಜುರ್ವೇದದ ವಾಕ್ಯದಲ್ಲಿ ಬ್ರಹ್ಮದ ನಾಮವೂ ಸ ೪ ತ್ಯವೆಂದು ಹೇಳಲ್ಪಟ್ಟಿರುವದು ಆದಕಾರಣ ವಾಕ್ಕಿನಿಂದ ಬ್ರಹ್ಮವನ್ನೇ ಪ್ರಕಟಿಸಬೇಕು. ಅಂದರೆ-ಮುಮುಕ್ಷು ಪುರುಷರಂ ಕುರಿತು ಉಪದೇಶ ಮಾಡಬೇಕು. ಇನ್ನು ಚಿತ್ತದಿಂದ ಬ್ರಹ್ಮವನ್ನೇ ವೇದಾಂತ ಶಾಸ್ತ್ರದ ಯುಕ್ತಿಗಳಿಂದ ಮನನವಂ ಮಾಡಬೇಕು. ಹಾಗೆ ಶರೀರದಿಂದ ಸ್ತ್ರೀ ಆದಿವಿಷಯಗಳ ಪರಿತ್ಯಾಗವೂ, ಏಕಾಂತ ಸೇವನಾದಿಯಿಂದ ಅದಕ್ಕೆ ಸರಿಯಾಗಿ ವ್ಯವಹರಿಸಬೇಕು. ಅಂತು ಹೇಳಲ್ಪಟ್ಟ ಪ್ರಕಾರವಾಗಿ ಮನವಾಣಿಗಳಿಂದಲೂ, ಹಾಗೆ ಶರೀರದಿಂದಲೂ, ಯಾವ ಸತ್ಯದ ಪಾಲನೆ ಮಾಡಲ್ಪಡುವದೋ ಅದೇ ಎಲ್ಲಾ ಧರ್ಮಗಳಿಗಿಂತಲೂ ಶ್ರೇಷ್ಠಧರ್ಮವೆನಿಸುವದು. ಈ ವಾರ್ತೆಯು ಗೀತೆಯಲ್ಲೂ " ಸರ್ವಂಕರ್ಮಾಖಿಲಂಪಾರ್ಥ ಜ್ಞಾನೇಪರಿಸಮಾಪ್ಯತೆ ,, ಅರ್ಥ॥ ಹೇ ಪಾರ್ಥ-ಅಂದರೆ, ಎಲೇ ಅರ್ಜುನ, ಶ್ರುತಿಸ್ಮೃತಿ ವಿಹಿತವಾದ ಸರ್ವ ಕರ್ಮಗಳು ಬ್ರಹ್ಮಜ್ಞಾನದಲ್ಲಿ ಸಮಾಪ್ತವಾಗುವವು ಎಂದು ಹೇಳಲ್ಪಟ್ಟಿರುವದು. ಆದ್ದರಿಂದೆಲೈ ಶಿಷ್ಯನೇ ! (ತತಸ್ತಂಹಿ ಸಮಾಶ್ರಯಾಚಿರಂ) ಅಂದರೆ,-ಯಾವ ಕಾರಣದಿಂದ ಸತ್ಯವೇ ಸರ್ವಧರ್ಮಗಳಿಗಿಂತ ಶ್ರೇಷ್ಠಧರ್ಮವಾದುದೋ ಆ ಕಾರಣದಿಂದಲೇ ನೀನು (ಅಚಿರಂ) ಅಂದರೆ,-ಶೀಘ್ರವಾಗಿ ಅದನ್ನು ಆಶ್ರಯಿಸುವನಾಗು. ॥೪೨॥

ಅ॥ ಈ ಪ್ರಕಾರದಿಂದ ಧರ್ಮ ವಿಷಯವನ್ನು ನಿರ್ಣಯವಂ ಮಾಡಿ ಈಗ " ತತ್ವಮಸಿ ,, ಎಂಬ ಸಾಮವೇದದ ಛಾಂದೋಗ್ಯೋಪನಿಷತ್ತಿನ ಯಾವ ಮಹಾ ವಾಕ್ಯವುಂಟೋ ಆ ಇದರಲ್ಲಿ ತತ್,ತ್ವಂ-ಅಸಿ, ಎಂಬ ಈ ಮೂರು ಪದವಿರುವದು. ಅವುಗಳಲ್ಲಿ ಪ್ರಥಮ ತತ್ಪದ ಈಶ್ವರವಾಚಕವಾಗಿಯೂ, ಮತ್ತು ತ್ವಂಪದ ಜೀವವಾಚಕವಾಗಿಯೂ, ಹಾಗೆ ಅಸಿ

---

೪. ಶ್ಲೋ॥ ಬ್ರಹ್ಮೈವಸತ್ಯಶಬ್ದಾರ್ಥಃ ಸತ್ಯಂಜ್ಞಾನಮಿತಿಶ್ರುತೇಃ ॥ ಬ್ರಹ್ಮವೇ ಸತ್ಯ ಶಬ್ದಕ್ಕೆ ಅರ್ಥವೆಂತಲೂ, ಸತ್ಯಂ ಜ್ಞಾನವೆಂದು ಶ್ರುತಿ ಹೇಳುವದೆಂತಲೂ ಆಚಾರ್ಯಸ್ವಾಮಿಗಳು ಮಹಾ ವಾಕ್ಯದರ್ಪಣದಲ್ಲಿ ಅಪ್ಪಗೆ ಕೊಡಿಸುವರು. ೫, ಅಭ್ಯಂತರವಾಗಿ ಹೋಗುವವು.

ಪದ ಅವೆರಡರ ಏಕತೆಯುವಾಚಕವಾಗಿಯೂ ಇರುವದು. ಅವುಗಳನ್ನು ಚನ್ನಾಗಿ ತಿಳಿಯುವದಕ್ಕೆ ನಾವು ಬ್ರಹ್ಮಜ್ಞಾನವೆನ್ನಲ್ಪಡುವದು. ಅದೇ ಜನ್ಮಮರಣರೂಪವಾದ ಸಂಸಾರ ಬಂಧನದ ಮುಕ್ತಿಗೆ ಕಾರಣವಾಗಿರುವದು, ಅದು ಯಾವ ಪರ್ಯಂತ ಜಿಜ್ಞಾಸು ಪುರುಷನಿಗೆ ಮೊದಲು ತತ್, ಬಳಿಕ ತ್ವಂಪದದ ಭಿನ್ನ ಭಿನ್ನ ಯಥಾರ್ಥಜ್ಞಾನ ಉಂಟಾಗದಿರುವದೋ ಆ ಪರ್ಯಂತವು, ಅವೆರಡರ ಏಕತ್ವ ಜ್ಞಾನವಾಗುವಂಥಾದ್ದು ಅಸಂಭವವೆನಿಸುವದು. ಆದ್ದರಿಂದ ಅವೆರಡರ ಏಕತೆಯು ಸಿದ್ಧಿಗೋಸುಗ ಗ್ರಂಥಕಾರನು ಗುರು ಮತ್ತು ಶಿಷ್ಯನ ಸಂವಾದದ್ವಾರಾ, ಮೊದಲು ಆ ಎರಡು ಪದಗಳ ನಿರೂಪಣೆಯಂ ಮಾಡುತ್ತಾರೆ, ಅದರಲ್ಲಿಯೂ ಮುಖ್ಯವಾದ್ದರಿಂ ಮೊದಲು ಸಪ್ತದಶ ಶ್ಲೋಕಗಳಿಂದ ತತ್ಪದದ ವಿವೇಚನೆಯಂ ಮಾಡುತ್ತಾರೆ, ಅಲ್ಲಿ ಪ್ರೊಕ್ತವಾದ ಧರ್ಮದ ನಿರ್ಣಯಶ್ರವಣದಿಂದ ಈಗ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಇದಂಜಗಚ್ಚಿತ್ರಚರಿತ್ರಚಿತ್ರಿತಂ ।
ವಿನಿರ್ಮಿತಂಕೇನಕಥಂಕುತಸ್ತಥಾ ॥
ಮೃಷಾವ್ಯಮೃಷಾವಾಪಿತತೋವಿಲಕ್ಷಣಂ ।
ಭವೇದಥಾನಾದಿಕಿಮಾದಿಮನ್ಮುನೇ ॥ ॥೪೩॥

ಟೀಕಾ॥ "ಇದಮಿತಿ,, ಹೇ ಮುನೇ ಅಂದರೆ, ಆತ್ಮತತ್ವದ ಮನನವಂ ಮಾಡುವಂಥಾ ಗುರುವೇ! ಈ ಯಾವ (ಚಿತ್ರಚರಿತ್ರಚಿತ್ರಿತಂ) ಅಂದರೆ,-ನಾನಾಪ್ರಕಾರವಾದ ವಿಚಿತ್ರವ್ಯವಹಾರಗಳಿಂದ ಸಂಯುಕ್ತವಾಗಿಯೂ, ಮತ್ತು ಚತುರ್ದಶಭುವನಗಳಿಂದ ಶೋಭಾಯಮಾನವಾಗಿಯೂ, ಹಾಗೆ ದೇವತಾ, ಮನುಷ್ಯ, ಪಶು, ಪಕ್ಷಿ, ಸರ್ಪ, ವೃಕ್ಷ, ನದಿ, ಸಮುದ್ರಾದಿ ನಾನಾಪ್ರಕಾರವಾದ ವಿಚಿತ್ರ ಪದಾರ್ಥಗಳಿಂದ ಪರಿಪೂರ್ಣವಾಗಿ ಸರ್ವಜಗತ್ತಿರುವದಲ್ಲವೆ? ಅದು (ಕೇನವಿನಿರ್ಮಿತಂ) ಅಂದರೆ,-ಯಾರಿಂದ ನಿರ್ಮಾಣ ಮಾಡಲ್ಪಟ್ಟಿರುವದು? ಹಾಗೆ ಯಾವ ಪ್ರಕಾರದಿಂದ ನಿರ್ಮಾಣಮಾಡಲ್ಪಟ್ಟಿರುವದು? ಮತ್ತು (ಕುತಃ) ಅಂದರೆ,-ಯಾವ ವಸ್ತುವಿನಿಂದ ನಿರ್ಮಾಣ ಮಾಡಲ್ಪಟ್ಟಿರುವದು? ಹಾಗೆ (ಮೃ

ಷಾವ್ಯೈಷಾವಾ) ಅಂದರೆ,-ಈ ಸರ್ವ ಜಗತ್ತು ಯೇನು ಸತ್ಯವಾಗಿರುವ ದೊ ಅಲ್ಲದೇ ಅಸತ್ಯವಾಗಿರುವದೋ ? ಅಥವಾ ಸತ್ಯ ಮತ್ತು ಅಸತ್ಯವೆಂಬ ಎರಡರಿಂದ ವಿಲಕ್ಷಣವಾಗಿರುವದೊ ಹಾಗೆ ಈ ಜಗತ್ ಆದಿಮತ್ ಅಂದರೆ,-ಆದಿಯಲ್ಲೇ ನಿರ್ಮಾಣ ಮಾಡಿ ಹೋಗಿರುವದೊ ಅಲ್ಲದೇ ಅನಾದಿಯಿಂದಲೂ, ನಡದುಬರುತ್ತಿರುವದೋ ಆ ಈ ಸರ್ವವನ್ನು ಬೇರೆಬೇರೆಯಾಗಿ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ||೪೩||

ಅ|| ಈ ಪ್ರಕಾರವಾಗಿ ಜಗದ್ವಿಷಯದಲ್ಲಿ ಶಿಷ್ಯನ ಐದು ಪ್ರಶ್ನೆಗಳನ್ನು ಕೇಳಿ ಈಗ ಗುರುವು ಅವಕ್ಕೆ ಒಂದು ಶ್ಲೋಕದಿಂದಲೇ ಉತ್ತರವಂ ಪೇಳುತ್ತಾರೆ.

—ಗುರುರುವಾಚ—

ಯಃಸರ್ವಗಃಸರ್ವವಿದಕ್ಷರಪ್ರಭು |
ರ್ಮಾಯಾಧಿಪಸ್ತಂತುರಿವೋರ್ಣನಾಭಿತಃ |
ತಸ್ಮಾದನಿರ್ವಾಚ್ಯಮಿದಂಪ್ರಜಾಯತೇ ||
ವೇಗಾತ್ಮನಃಚೇದಮನಾದ್ಯುದಾಹೃತಮ್^೧|| ೪೪||

ಟೀಕಾ|| "ಯಇತಿ,, ಹಿಂದಣ ಶ್ಲೋಕದಲ್ಲಿ ಯಾವದನ್ನು ಶಿಷ್ಯನು ಪ್ರಥಮ ಪ್ರಶ್ನೆಯಂ ಮಾಡಿರುವನೋ ಅಂದರೆ, ಈ ಜಗತ್ತು ಯಾರಿಂದ ನಿರ್ಮಾಣ ಮಾಡಲ್ಪಟ್ಟಿರುವದು ? ಇಂತೆಂಬ ಆ ಪ್ರಶ್ನೆಗೆ ಉತ್ತರವಂ ಪೇಳುತ್ತಾರೆ. ಎಲೈ ಶಿಷ್ಯನೇ ! (ಯಃಸರ್ವಗಃ ಅಂದರೆ,-ಯಾವ ಪರಮಾತ್ಮನು ಸರ್ವತ್ರವ್ಯಾಪಕನಾಗಿರುವನೊ ಯಾತಕ್ಕೆಂದರೆ,-ಈನಿಯಮವಿರುವದು ಅದೇನಂದರೆ,-ಕಾರ್ಯಕ್ಕಿಂತಲೂ ಕಾರಣ ದೊಡ್ಡದಾಗಿರುವದು. ಅದರಂತೆ ಈ ಬ್ರಹ್ಮಾಂಡದ ಅಂತರ ಮತ್ತು ಬಾಹ್ಯದಲ್ಲಿ ವ್ಯಾಪಕನಾದ್ದರಿಂದ ಪರಮಾತ್ಮನು ಸರ್ವಗತನೆನಿಸುವನು. ಹಾಗೆ ಈ ವಾರ್ತೆಯು ಶೃತಿಯಲ್ಲೂ ಪೇಳಲ್ಪಟ್ಟಿರುವದು. " ಆಕಾಶವತ್ಸರ್ವಗತಶ್ಚನಿತ್ಯಃ ,, ಅರ್ಥ|| ಆ ಪರಮಾತ್ಮನು ಆಕಾಶದಂತೆ ಸರ್ವಗತನಾಗಿ ಮತ್ತು ನಿತ್ಯನಾಗಿರುವನು. ಹಾಗೆ ಯಾವ ಪರಮಾತ್ಮನು (ಸರ್ವವಿ

೧, ವೇಗಶಬ್ದೋತ್ರಪ್ರವಾಹವಾಚಿಃ | ವೇಗಪ್ರವಾಹಜನಯೋರಪೀತ್ಯಮರಃ ||

ತ್ರ) ಅಂದರೆ,-ಭೂ ೧ ತ, ಭವಿ ೨ ಷ್ಯದ್ವರ್ತಮಾ ೩ ನಗಳನ್ನೂ, ಸೂಕ್ಷ್ಮವಾದವುಗಳನ್ನು ಸಮೀಪ ಮತ್ತು ದೂರದಲ್ಲಿರುವ ಸರ್ವ ಪದಾರ್ಥಗಳನ್ನು ಕರಾಮಲ ೪ ಕದಂತೆ ಸರ್ವದಾ ತಿಳಿಯುವಂಥಾವನಾಗಿರುವನು. ಯಾಕಂದರೆ,-ಇಲ್ಲಿಯೂ ಒಂದು ನಿಯಮವಿರುವದು. ಯೇನಂದರೆ,-ಯಾವನುಯಾವಕಾಲದಲ್ಲಿ ಯಾವವಸ್ತುವನ್ನು ನಿರ್ಮಾಣಮಾಡುವನೊ ಅವನಿಗೆಅಕಾಲದಲ್ಲಿ ಮೊದಲು ಆ ವಸ್ತುವಿನಜ್ಞಾನವಾವಶ್ಯಕವಾಗುವದು. ಆದ್ದರಿಂದ ಅತ್ಯಂತ ವಿಸ್ತೃತವಾಗಿಯೂ, ಇನ್ನೂ ವಿಚಿತ್ರವಾದ ಚರಾಚರ ಜಗತ್ತಿನ ಕಾರಣನಾದ್ದರಿಂದ ಪರಮಾತ್ಮನು ಸರ್ವಜ್ಞನಾಗಿರುವನು. ಹಾಗೆ ಶ್ರುತಿಯಲ್ಲೂ ಪ್ರತಿಪಾದಿಸಲ್ಪಟ್ಟಿರುವದು. ಯಃಸರ್ವಜ್ಞಃ ಸರ್ವವಿದ್ಯಸ್ಯಜ್ಞಾನಮಯಂತಪಃ ಅರ್ಥ—ಯಾವಪರಮಾತ್ಮನು ಸಾಮಾನ್ಯ ಮತ್ತು ವಿಶೇಷರೂಪದಿಂದ ಸರ್ವವನ್ನುತಿಳಿಯುವಂಥಾವನಾಗಿರುವನೋ ಇನ್ನು ಯಾವನಜ್ಞಾನ ರೂಪವೇ ತಪವಾಗಿರುವದೊ ಎಂದು. ಹಾಗೆ ಯಾವ ಪರಮಾತ್ಮನು (ಅಕ್ಷರಃ) ಅಂದರೆ ಕ್ಷರ ಯಾವವಿನಾಶವು ಅದರಿಂದ ರಹಿತನಾದವನು ಈ ವಾರ್ತೆಯು ಕೈವಲ್ಯೋಪನಿಷತ್ತಿನಲ್ಲೂ ಪ್ರಕಟಿಸಲ್ಪಟ್ಟಿರುವದು. (ಸೋಕ್ಷರಃ ಪರಮಃ ಸ್ವರಾಟ್ ॥) ಅರ್ಥ — ಆ ಪರಮಾತ್ಮನು ಅಕ್ಷರನು ಮತ್ತು ಪರಮ ಸ್ವತಂತ್ರನು, ಹಾಗೆ ‘ಪ್ರಭುಃ, ಅಂದರೆ, ಬ್ರಹ್ಮ ಮೊದಲುಗೊಂಡು ಸ್ಥಾಣು ಪರ್ಯಂತವಾದ ಚರಾಚರ ಜಗತ್ತಿನ ನಿಯಂತೃನಾಗಿ ಸರ್ವಶಕ್ತಿಯುಳ್ಳವನಾಗಿರುವನು. ಅದರಿಂದೆಲೈ ಶಿಷ್ಯನೇ! ಆ ಪರಮಾತ್ಮನೇ ಈ ಸರ್ವ ಜಗತ್ತನ್ನು ನಿರ್ಮಾಣ ಮಾಡಿರುವನು. ಈ ವಾರ್ತೆಯು ಋಗ್ವೇದದ ಐತರೆಯೋಪನಿಷತ್ತಿನಲ್ಲು ಪ್ರಕಟಿಸಲ್ಪಟ್ಟಿರುವದು. “ಆತ್ಮಾವಾ ಇದಮೇಕ ಏವಾಗ್ರ ಆಸೀನ್ನಾನ್ಯತ್ ಕಿಂಚಿನ್ಮಿ

೧, ಹಿಂದಣ ಕಾಲ, ೨, ಮುಂದಣ ಕಾಲ, ೩, ಈಗಿನ ಕಾಲ, ೪, ಅಂಗೈಯೊಳಗಣ ನೆಲ್ಲೀಕಾಯಿನಂತೆ, ಆದರೆ ಅನೇಕವಾದ ಕಾಯಿಗಳು, ಮತ್ತು ಹಣ್ಣುಗಳು ಲೋಕದೊಳ್ ಪ್ರತ್ಯಕ್ಷಸಿದ್ಧವಾಗಿರುವಲ್ಲಿ ಈ ಧಾತ್ರೀ ಫಲವನ್ನೇ ಯಾಕೆ ಈ ದೃಷ್ಟಾಂತವಾಗಿ ತೆಗದುಕೊಂಡಿರುವರೆಂದು ಯೋಚಿಸಿದರೆ ಇದರೊಳಗಣ ಬೀಜಕ್ಕೆ ಎಷ್ಟು ಮುಖಗಳುಂಟೋ ಅಷ್ಟೇ ರೇಖೆಗಳು ಫಲದಲ್ಲಿ ಕಾಣ್ಬರುತ್ತಿರುವದ್ದರಿಂದ ಒಳಹೊರಗೆ ಏಕ ಸಮವೆಂಬ ಮಾತಿಗೆ ದೃಷ್ಟಾಂತವಾಗಬಹುದೆಂದು ತಿಳಿಯಬರುತ್ತೆ.

ಷತ್ ಸಈಕ್ಷತಲೋಕಾನ್ನುಸೃಜಾ ಇತಿಸ ಇಮಾಂಲ್ಲೋಕಾನಸೃಜತ,,
ಅರ್ಥ॥ ಜಗತ್ತಿನ ಆದಿಕಾಲದಲ್ಲಿ ಮೊದಲು ಈ ಸರ್ವವು ಒಬ್ಬ ಪರಮಾ ತ್ಮನೇ ಆಗಿದ್ದನು ಅನ್ಯವಸ್ತು ಸ್ವಲ್ಪವಾದರೂ ಇರಲಿಲ್ಲ. ಆ ಪರಮಾ ತ್ಮನು ಜಗತ್ತನ್ನು ರಚಿಸುವಂಥಾ ಸಂಕಲ್ಪವಂ ಮಾಡುತ್ತಿದ್ದನು. ಆ ಬಳಿಕ ಸಂಕಲ್ಪದಿಂದ ಈ ಸರ್ವ ಲೋಕಗಳನ್ನು ಉತ್ಪನ್ನ ಮಾಡಿ ದನು ಎಂದು. ಈ ಪ್ರಕಾರದಿಂದ ಪ್ರಥಮ ಪ್ರಶ್ನೆಯ ಉತ್ತರವಂ ನಿರೂಪಿಸಿ ಈಗ ಆ ಜಗತ್ತನ್ನು ಯಾವ ಪ್ರಕಾರದಿಂದ ನಿರ್ಮಾಣ ಮಾಡಲ್ಪಟ್ಟಿರುವದು ಇಂತೆಂಬ ಈ ಯಾವ ಶಿಷ್ಯನ ಎರಡನೆ ಪ್ರಶ್ನೆ ಇರುವದೋ ಅದಕ್ಕೆ ಉತ್ತರವಂ ಹೇಳುತ್ತಾರೆ. (ಮಾಯಾಧಿಪಃ) ಅಂದರೆ-ಎಲೈ ಶಿಷ್ಯನೇ! ಯಾವ ಪರಮಾತ್ಮನು ಅಘಟಿತಘಟನಾ ಪಟೀ ಯಸೀ ಮತ್ತು ಅನಿರ್ವಚನೀಯವಾದ ಯಾವ ಮಾಯಾಶಕ್ತಿ ಇರುವ ದೋ ಅದಕ್ಕೆ ಅಧಿಪತಿಯಾಗಿರುವನು. ಅಂದರೆ ಆ ಪರಮಾತ್ಮನು ಮಾಯೆಯನ್ನು ಆಶ್ರಯಮಾಡಿ ಈ ಜಗತ್ತಿನ ನಿರ್ಮಾಣ ಮಾಡಿರುವ ನು. ಈ ಪ್ರಮಾಣವು ಕೃಷ್ಣ ಯಜುರ್ವೇದದ ಶ್ವೇತಾಶ್ವತರೋಪ ನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. "ಮಾಯಾಂತುಪ್ರಕೃತಿಂವಿ ದ್ಯಾನ್ಮಾಯಿನಂತುಮಹೇಶ್ವರಮ್॥,, ಅರ್ಥ॥ ಸರ್ವಜಗತ್ತಿನ ನಿರ್ಮಾ ಣದಲ್ಲಿ ಹೇತುಭೂತವಾದ ಮಾಯೆ ಇರುವದೋ ಇನ್ನು ಅದರ ಅಧಿಷ್ಠಾ ನವಾದವನು ಪರಮಾತ್ಮನು ಎಂದು ತಿಳಿದುಕೊಳ್ಳಬೇಕು. ಹಾಗೆ ಗೀ ತೆಯಲ್ಲಿ ಶ್ರೀ ಕೃಷ್ಣಸ್ವಾಮಿಯು "ಪ್ರಕೃತಿಂಸ್ವಾಮವಷ್ಟಭ್ಯವಿಸೃ ಜಾಮಿಪುನಃಪುನಃ। ಭೂತಗ್ರಾಮಮಿಮಂಕೃತ್ಸ್ನಮವಶಂಪ್ರಕೃತೇರ್ವ ಶಾತ್॥,, ಅರ್ಥ॥ ಎಲೈ ಅರ್ಜುನಾ! ನಾನು ಸ್ವಕೀಯವಾದ ಮಾ ಯಾಶಕ್ತಿಯನ್ನು ಆಶ್ರಯಣ ಮಾಡಿ, ಪ್ರಕೃತಿಗೆ ಪರವಶನಾಗಿ ಈ ಸರ್ವ ಭೂತ ಪ್ರಾಣಿಗಳ ಸಮೂಹವನ್ನು ಪುನಃಪುನಃ ಪ್ರಕೃತಿಕಲ್ಪದಲ್ಲಿಯೂ ನಿರ್ಮಾಣ ಮಾಡುತ್ತಿರುವೆನು ಎಂದು ಅಪ್ಪಣೆ ಕೊಟ್ಟಿರುವನು. ಈ ಪ್ರಕಾರದಿಂದ ಎರಡನೇ ಪ್ರಶ್ನೆಗೆ ಉತ್ತರವಂ ಹೇಳಿದವರಾಗಿ, ಈಗ ಯಾವ ವಸ್ತುವಿನಿಂದ ನಿರ್ಮಾಣ ಮಾಡಲ್ಪಟ್ಟಿರುವದು ಹೀಗೆಂಬ ಯಾವ ಶಿಷ್ಯನ ಮೂರನೇ ಪ್ರಶ್ನೆ ಇರುವದೋ ಅದರ ಉತ್ತರವನ್ನು ಪ್ರಕಟ ಪಡಿಸುತ್ತಾರೆ. (ತಾಂತುರಿಪ್ರೋರ್ಣನಾಭಿತಃ) ಅಂದರೆ-ಎಲೈ ಶಿಷ್ಯನೇ!

ಹ್ಯಾಗೆ ಊ[೬]ರ್ಣನಾಭಿ ನಾಮಕವಾದ ಜಂತುವು ಬಾಹ್ಯದಲ್ಲಿ ಯಾವದೊಂದು ವಸ್ತುವನ್ನೂ ಗ್ರಹಿಸದೆ ಕೇವಲ ತನ್ನ ಶರೀರದಿಂದಲೇ ತಂತುಗಳನ್ನು ವಿಸ್ತಾರಪಡಿಸುವದೋ ಹಾಗೆಯೇ ಪರಮಾತ್ಮನಕೂಡ ಯಾವ ವಸ್ತುವನ್ನೂ ಬಾಹ್ಯದಲ್ಲಿ ಅಪೇಕ್ಷಿಸದೇ ಈ ಜಗತ್ತನ್ನು ನಿರ್ಮಾಣ ಮಾಡಿರುವನು. ಈ ವಿಷಯವು ಯಜುರ್ವೇದದ ತೈತಿರೀಯೋಪನಿಷತ್ತಿನಲ್ಲಿಯೂ ಬರೆಯಲ್ಪಟ್ಟಿರುವದು. "ಸೋಕಾಮಯತಬಹುಸ್ಯಾಂಪ್ರಜಾಯೆಯೆತದಾತ್ಮಾನಂಸ್ವಯಮಕುರುತ ,, ಅರ್ಥ ॥ ಜಗತ್ತಿನ ಆದಿಕಾಲದಲ್ಲಿ ಆ ಪರಮಾತ್ಮನು ನಾನು ಒಬ್ಬನೇ ಅನೇಕ ರೂಪನಾಗಿ ಉತ್ಪನ್ನನಾಗುವೆನು ಎಂದು ಈ ಪ್ರಕಾರವಾದ ಸಂಕಲ್ಪವಂ ಮಾಡಿ, ಬಳಿಕ ಆ ಪರಮಾತ್ಮನು ತನ್ನಿಂದತಾನೇ ಜಗದ್ರೂಪವಾಗುತ್ತಿರ್ದನು. ಈ ಪ್ರಕಾರವಾಗಿ ಮೂರನೇ ಪ್ರಶ್ನೆಯು ಉತ್ತರವಂ ಪೇಳಿ, ಈಗ ಈ ಜಗತ್ತು ಸತ್ಯವಾಗಿರುವದೋ ಅಲ್ಲದೆ ಅಸತ್ಯವಾಗಿರುವದೋ ಅಥವಾ ಸತ್ಯಾಸತ್ಯವೆಂಬ ಎರಡರಿಂದ ವಿಲಕ್ಷಣವಾಗಿರುವದೋ ಇಂತೆಂಬ ಈ ಯಾವ ಶಿಷ್ಯನ ನಾಲ್ಕನೇ ಪ್ರಶ್ನೆ ಇರುವದೋ ಅದಕ್ಕೆ ಉತ್ತರವನ್ನು ನಿರೂಪಿಸುತ್ತಾರೆ. (ತಸ್ಮಾದನಿರ್ವಾಚ್ಯಮಿದಂಪ್ರಜಾಯತೆ) ಅಂದರೆ, ಎಲೈ ಶಿಷ್ಯನೇ ! ಆ ಪರಮಾತ್ಮನಿಂದ ಈ ಸರ್ವ ಜಗತ್ತು ಅನಿ[೭]ರ್ವಚನೀಯವಾಗಿ ಉತ್ಪನ್ನವಾಗಿರುವದು. ಹಾಗೆ ಪಂಚದಶಿಯಲ್ಲಿನ ಚಿತ್ರದೀಪದಲ್ಲಿ ವಿದ್ಯಾರಣ್ಯಸ್ವಾಮಿಗಳುಕೂಡ ಪೇಳಿರುವರು. "ಯುಕ್ತಿದೃಷ್ಟ್ಯಾತ್ವನಿರ್ವಾಚ್ಯಂನಾಸದಾಸೀದಿತಿಶ್ರುತೇಃ । ನಾಸದಾಸೀದ್ವಿಭಾತತ್ವಾನ್ನೋಸದಾಸೀಚ್ಚಬಾಧನಾತ್ ॥ ,, ಅರ್ಥ॥ ಯುಕ್ತಿ ದೃಷ್ಟಿಯಿಂದಾದರೆ ಈ ಜಗತ್ತು ಅನಿರ್ವಚನೀಯವೆಂದು ಸಿದ್ಧವಾಗುವದು ಯಾತಕ್ಕಂದರೆ,-"ನಾಸದಾಸೀನ್ನೋಸದಾಸೀತ್ ,, ಈ ಶ್ರುತಿಯಲ್ಲಿ ಪೇಳಿರುವದೇನಂದರೆ,-ಈ ಜಗತ್ತು ಉತ್ಪತ್ತಿಗೆ ಪೂರ್ವ ಅಸತ್ತಾಗಿರಲಿಲ್ಲ. ಮತ್ತು ಸತ್ಯವಾಗಿಯೂ ಇರಲಿಲ್ಲ, ಅದು ವರ್ತಮಾನದಲ್ಲಿ ಪ್ರತ್ಯಕ್ಷವಾಗಿರುವ

---

೬. ನೇಯಿಗೆ ಹುಳು, ಜಾಡರ ಹುಳು. ೭. ಅಂದರೆ, ಪ್ರತ್ಯಕ್ಷ ಪ್ರತೀತವಾಗುವದ್ದರಿಂದ ಅಸತ್ಯವೆಂದು ಪೇಳುವದಕ್ಕಾಗದು. ಮತ್ತು ಜ್ಞಾನಕಾಲದಲ್ಲಿ ಅಭಾವವಾಗುವದರಿಂದ ಸತ್ಯವೆಂತಲೂ ಪೇಳುವದಕ್ಕಾಗದು. ಆದ್ದರಿಂದ ಅನಿರ್ವಚನೀಯವೆನಿಸಿಕೊಳ್ಳುವದು.

ದು. ಆದ್ದರಿಂದ ಅಸತ್ಯವಲ್ಲ. ಮತ್ತು ಜ್ಞಾನಕಾಲದಲ್ಲಿ ಬಾಧಿಸಿ ಹೋಗುವದು. ಆದ್ದರಿಂದ ಸತ್ಯವೂ ಅಲ್ಲವೆಂಬುದು. ಇನ್ನು ವಾಸ್ತವ ದೃಷ್ಟಿಯಿಂದ ನೋಡಿದ್ದಾದರೆ ಎಲ್ಲವೂ ಮಿಥ್ಯವೇ ಆಗಿರುವದು. ಈ ವಾರ್ತೆಯುಕೂಡ ಅಲ್ಲಿಯೇ ಪ್ರಕಟಸಲ್ಪಟ್ಟಿರುವದು. "ತುಚ್ಛಾನಿರ್ವಚನೀಯಾಚವಾಸ್ತವೀಚೇತ್ಯಸೌತ್ರಿಧಾ|ಜ್ಞೇಯಾಮಾಯಾತ್ರಿಭಿರ್ಬೋಧೈಃ ಶ್ರೌತಯೌಕ್ತಿಕಲೌಕಿಕೈಃ ,, ಅರ್ಥ|| ಈಜಗದೂಪವಾದ ಮಾಯೆಯನ್ನು ಮೂರುಪ್ರಕಾರವಾಗಿ ತಿಳಿಯಬೇಕು. ಅದರಲ್ಲಿ ಲೌಕಿಕ ದೃಷ್ಟಿಯಿಂದಾದರೋ ಸತ್ಯವೆನಿಸುವದು. ಇನ್ನು ಯುಕ್ತಿಯಿಂದ ವಿಚಾರಿಸಿ ನೋಡಿದ್ದಾದರೆ, ಅನಿರ್ವಚನೀಯವೆಂದು ಸಿದ್ಧವಾಗುವದು. ಮತ್ತು ವೇದಾಂತ ಶಾಸ್ತ್ರದ ದೃಷ್ಟಿಯಿಂದಾದರೆ ಮೃಗತೃಷ್ಣಿಕಾಜಲದಂತೆಯೂ, ಆಕಾಶದ ನೀಲತ್ವದಂತೆಯೂ, ಶಶಶೃಂಗದಂತೆಯೂ, ಪ್ರತ್ಯಕ್ಷವಾಗಿ ಪ್ರತೀತವಾಗುತ್ತಿದ್ದರೂ ಮಿಥ್ಯವೇ ಆಗಿರುವದು. ಈ ಪ್ರಕಾರವಾಗಿ ಜಗತ್ತಿನ ಮಿಥ್ಯತ್ವವನ್ನು ಸಿದ್ಧಪಡಿಸಿ, ಈಗ ಈ ಜಗತ್ತು ಆದಿಯುಳ್ಳದ್ದಾಗಿರುವದೋ ಅಲ್ಲದೆ ಅನಾದಿಯಾಗಿರುವದೋ ಎಂಬ ಈಯಾವ ಶಿಷ್ಯನ ಐದನೇಪ್ರಶ್ನೆ ಇರುವದೋ ಅದರಲ್ಲಿ ಮೊದಲನೇದನ್ನು ನಿಷೇಧಪಡಿಸುತ್ತಾ, ಎರಡನೇ ಪಕ್ಷವನ್ನು ಅಂಗೀಕರಿಸಿ ಉತ್ತರವನ್ನು ಹೇಳುತ್ತಾರೆ (ವೇಗಾತ್ಮನಾಚೇದಮನಾದ್ಯುದಾಹೃತಮ್) ಅಂದರೆ,-ಎಲೈ ಶಿಷ್ಯನೇ ! ವೇಗ-ಅಂದರೆ,-ಪ್ರವಾಹರೂಪದಿಂದ ಈ ಜಗತ್ತು ಅನಾದಿ ಎಂದು ವಿದ್ವಾಂಸ ಜನಗಳು ಪ್ರಕಟಪಡಿಸಿರುವರು. ಹಾಗೆ ಯಜುರ್ವೇದದ ಕಠೋಪನಿಷತ್ತಿನಲ್ಲೂ ಬರೆಯಲ್ಪಟ್ಟಿರುವದು. "ಏಷೋಶ್ವತ್ಥಃಸನಾತನಃ ,, ಅರ್ಥ|| ಈ ಸಂಸಾರರೂಪವಾದ ವೃಕ್ಷವು ಅನಾದಿಕಾಲದ್ದಾಗಿರುವದು ಎಂದು. ಹಾಗೆ ಋಗ್ವೇದದ ಮಂತ್ರಭಾಗದಲ್ಲಿಯೂ, ಲಿಖಿಸಲ್ಪಟ್ಟಿರುವದು. "ಸೂರ್ಯಾಚಂದ್ರಮಸೌಧಾತಾ ಯಥಾಪೂರ್ವಮಕಲ್ಪಯತ್|ದಿವಂಚಪೃಥಿವೀಂಚಾಂತರಿಕ್ಷಮಥೋಸ್ವಃ ,, ಅರ್ಥ|| ಯಾವಪ್ರಕಾರದಿಂದ ಪೂರ್ವಕಲ್ಪದಲ್ಲಿ ಸೂರ್ಯ, ಚಂದ್ರ, ಮತ್ತು ಆಕಾಶ, ಪೃಥಿವೀ, ಅಂತರಿಕ್ಷ, ಸ್ವರ್ಗಾದಿಯಾದವುಗಳಿದ್ದವೋ ಅದೇ ಪ್ರಕಾರ ಸ್ಮರಣೆಯಿಂ ಮಾಡಿ ಈ ಕಲ್ಪದಲ್ಲಿ ಬ್ರಹ್ಮದೇವನು ರಚಿಸುತ್ತಿರುವನು

ಎಂದು. ಹಾಗೆ ಭಗವದ್ಗೀತೆಯಲ್ಲಿಯೂ "ನರೂಪಮಸ್ಯೇಹತಥೋಪಲಭ್ಯತೆನಾಂತೋನಚಾದಿರ್ನಚಸಂಪ್ರತಿಷ್ಠಾ,, ಅರ್ಥ॥ ಎಲೈ ಅರ್ಜುನ! ಈ ಜಗದಾಕಾರವಾದ ವೃಕ್ಷದ ರೂ[೮]ಪ ಮತ್ತು ಅಂ[೯]ತ ಆ[೧೦]ದಿ ಹಾಗೆ ಸ್ಥಿ[೧೧]ತಿಯೂ ಸಹಾ ಸಿಕ್ಕುವದಿಲ್ಲವೆಂದು ಹೇಳಲ್ಪಟ್ಟಿರುವದು॥೪೪

ಅ—ಈ ಪ್ರಕಾರವಾಗಿ ಗುರುವಿನ ಮುಖದಿಂದ ಯಥಾರ್ಥವಾದ ಉತ್ತರವನ್ನು ಶ್ರವಣಮಾಡಿ, ಈಗ ಪುನಃ ಶಿಷ್ಯನು ಅಪರ ವಿಷಯದಲ್ಲಿ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಸ್ವಕೀಯಮುದ್ದಿಶ್ಯಕಿಮುತೇತರಸ್ಯವಾ ।
ಪ್ರಯೋಜನಂಕಿಂಮುವಿನಾಪ್ರಯೋಜನಮ್ ॥
ವಿನಿರ್ಮಿಮೀತೇಜಗದೇತದೀಶ್ವರೋ ।
ವದೈತದಜ್ಞಾನತಮೋನಭೋಮಣೇ ॥೪೫॥

ಟೀಕಾ—ಸ್ವಕೀಯಮಿತಿ॥ ಎಲೈ (ಅಜ್ಞಾನತಮೋನಭೋಮಣೇ) ಅಂದರೆ,-ಅಜ್ಞಾನ ರೂಪವಾದ ತಮದ ನಾಶಮಾಡುವದರಲ್ಲಿ ಸೂರ್ಯನಿಗೆ ಸಮಾನವಾದ ಗುರುವೇ! ತಾವು ಹೇಳಿದ್ದೇನಂದರೆ,-ಈ ಜಗತ್ತನ್ನು ಈಶ್ವರನು ನಿರ್ಮಾಣ ಮಾಡಿರುವನು ಎಂದು, ಆ ಈಶ್ವರನು ಈ ಜಗತನ್ನು (ಸ್ವಕೀಯ) ಅಂದರೆ, ತನ್ನ ಪ್ರಯೋಜನಾರ್ಥವಾಗಿ ನಿರ್ಮಾಣಮಾಡಿರುವನೊ, ಅಲ್ಲದೆ (ಇತರಸ್ಯ) ಅಂದರೆ, ಯಾವನೋ ಎರಡನೆಯವನಿಗೋಸ್ಕರ; ನಿರ್ಮಾಣ ಮಾಡಿರುವನೊ, ಅಥವಾ (ವಿನಾಪ್ರಯೋಜನಂ) ಅಂದರೆ,-ಪ್ರಯೋಜನವಾವುದೂ ಇಲ್ಲದೆ ಮಾಡಿರುವನೊ, ಹಾಗೆ (ವದ) ಅಂದರೆ-ಈ ವಿಷಯವನ್ನು ಕೃಪಾದೃಷ್ಟಿಯಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ... ॥೪೫॥

ಅ—ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರುವು ಅವಕ್ಕೆ ಉತ್ತರವಂ ಹೇಳುತ್ತಾರೆ.

---

೮. ಆಕಾರ. ೯. ಕೊನೆ-ಕಡೆ. ೧೦. ಮೊದಲು-ಬುಡ. ೧೧. ಮಧ್ಯಭಾಗ-ಇರುವಿಕೆ.

—ಗುರುರುವಾಚ—

ಸದಾಪ್ತಕಾಮಸ್ಯತುನಾತ್ಮಹೇತವೇ ।
ನಚೇತರಸ್ಯಾಪಿನಚಾಪ್ಯಹೇತುಕಾ ॥
ಜಗತ್ಕ್ರಿಯಾಕ್ರೀಡನಮೇವಕೇವಲಂ ।
ವಿಭೋರ್ವದಂತೀಹತುವೇದವಾದಿನಃ ॥೪೬॥

ಟೀಕಾ—ಸದೇತಿ । ಎಲೈ ಶಿಷ್ಯನೆ, (ಸದಾಪ್ತಕಾಮಸ್ಯ) ಅಂದರೆ ಈಶ್ವರನು ಯಾವಾಗಲೂ ಆಪ್ತಕಾಮನಾಗಿರುವನು. ಅಂದರೆ,-ಅವನಿಗೆ ಯಾವ ವಸ್ತುವಿನ ಕಾಮನೆಯೂ ಇಲ್ಲ. ಈ ವಾರ್ತೆಯು ಶ್ರುತಿಯಲ್ಲೂ ಹೇಳಲ್ಪಟ್ಟಿರುವದು. "ಆಪ್ತಕಾಮಸ್ಯ ಕಾಸ್ಪೃಹಾ", ಅರ್ಥ- ಈಶ್ವರನಿಗೆ ಆಪ್ತ ೧ ಕಾಮನಾದ್ದರಿಂದ ಯಾವ ಇಚ್ಛೆ ಸಂಭವಿಸುವದು, ಅಂದರೆ-ಯಾವದೂ ಇಲ್ಲವೆಂಬುದು. ಹಾಗೆ ಗೀತೆಯಲ್ಲಿಯೂ ಹೇಳಲ್ಪಟ್ಟಿರುವದು. "ನಮಾಂಕರ್ಮಾಣಿ ಲಿಂಪಂತಿ ನಮೇಕರ್ಮಫಲೇಸ್ಪೃಹಾ" ಅರ್ಥ- ಎಲೆ ಅರ್ಜುನ ನನ್ನನ್ನು ಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಾದಿಯಾದ ಕರ್ಮಗಳು ಲೇಪಿಸಲಾರವು. ಯಾತಕ್ಕಂದರೆ-ಆ ಕರ್ಮಫಲದ ಇಚ್ಛೆಯಿಂದ ನಾನು ರಹಿತನಾಗಿರುವೆನು ಎಂದು ಆದ್ದರಿಂದ ಎಲೈಶಿಷ್ಯನೆ ಈಶ್ವರನು ನಿಸ್ಪೃಹನಾದ್ದರಿಂ ತನ್ನ ಪ್ರಯೋಜನಾರ್ಥವಾಗಿ ಯಾದರೂ, ಜಗತ್ತಿನ ನಿರ್ಮಾಣ ಸಂಭವಿಸಲಿಲ್ಲ. ಹಾಗೆ ಯಾವದನ್ನು ಶಿಷ್ಯನು ಹೇಳಿದನೋ, ಅಂದರೆ-ಯಾವನಾನೊಬ್ಬ ಎರಡನೆಯವನ ಪ್ರಯೋಜನಾರ್ಥವಾಗಿ, ಈಶ್ವರನು ನಿರ್ಮಾಣ ಮಾಡಿರುವನೆ? ಎಂಬುವದಕ್ಕೆ ಹೇಳುತ್ತಾರೆ. (ನಚೇತರಸ್ಯಾಪಿ) ಅಂದರೆ- ಎಲೈ ಶಿಷ್ಯನೆ, ಹಾಗೆಯೆ- ಇತರ-ಅಂದರೆ, ಯಾವ ಎರಡನೆಯವನಿಗೋಸುಗವೂ ಈಶ್ವರನು ಜಗತ್ತಿನ ನಿರ್ಮಾಣವಂ ಮಾಡಲಿಲ್ಲ. ಯಾಕಂದರೆ,— ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿ ಬರೆಯಲ್ಪಟ್ಟಿರುವದು. ಏನಂದರೆ,- "ಸದೇವಸೌಮ್ಯೇದಮಗ್ರಆಸೀದೇಕ ೨ ಮೇವಾ ೩ ದ್ವಿತೀ

---

೧. ನಿತ್ಯತೃಪ್ತ. ೨ ಏಕಂ-ಅಂದರೆ ಸಜಾತೀಯ ದ್ವಿತೀಯ ರಹಿತವಾದದ್ದು.
೩. ಏವ-ಅಂದರೆ-ಸರ್ವಧರ್ಮರಹಿತವಾದದ್ದು.

೪ ಯಂ ,, ಅರ್ಥ—ಉದ್ದಾಲಕ ಋಷಿ ಹೇಳುತ್ತಾನೆ, ಎಲೈ ಪ್ರಿಯದರ್ಶನನಾದ ಶ್ವೇತಕೇತುವೇ ಈ ಜಗತ್ತಿನ ಉತ್ಪತ್ತಿಯಿಂದ ಪೂರ್ವ ಏಕಸದ್ರೂಪನಾದ ಪರಮಾತ್ಮನೇ ಅದ್ವಿತೀಯನಾಗಿದ್ದನು. ಅನ್ಯ ಯಾವದೂ ಎರಡನೇ ಪದಾರ್ಥವಿರಲಿಲ್ಲ. ಆದಕಾರಣ ಜಗತ್ತಿನ ಆದಿಕಾಲದಲ್ಲಿ ಈಶ್ವರನ ವಿನಹ ದ್ವಿತೀಯವಸ್ತು ಅಭಾವವಾದ್ದರಿಂದ ಯಾವ ಎರಡನೇಯವನಿಗೋಸುಗವೂ ಈಶ್ವರನಿಂದ ಜಗತ್ತಿನ ನಿರ್ಮಾಣ ಮಾಡಲು ಸಂಭವಿಸಲಿಲ್ಲ. ಹಾಗೆ ಯಾವದನ್ನು ಶಿಷ್ಯನು ಹೇಳಿದನೋ, ಅಂದರೆ- ಪ್ರಯೋಜನವಿಲ್ಲದೆ ನಿರ್ಮಾಣ ಮಾಡಿರುವನೆ, ಎಂಬುವದಕ್ಕೆ ಉತ್ತರವಂ ಹೇಳುತ್ತಾರೆ.-(ನಚಾಪ್ಯಹೇತುಕಾ) ಅಂದರೆ,-ಎಲೈ ಶಿಷ್ಯನೇ ! ಈ ಯಾವ ಜಗತ್ಕ್ರಿಯಾ- ಅಂದರೆ.- ಜಗತ್ತಿನ ನಿರ್ಮಾಣ ಮಾಡತಕ್ಕದ್ದೋ, ಅದು ಪ್ರಯೋಜನವಿಲ್ಲದೆಯೂ ಸಂಭವಿಸಲಿಲ್ಲ. ಯಾತಕ್ಕಂದರೆ,-ಈಲೌಕಿಕ ನ್ಯಾಯವಿರುವದು, ಅದೇನಂದರೆ,— " ಪ್ರಯೋಜನಮನುದ್ದಿಶ್ಯ ಮಂದೋಪಿನಪ್ರವರ್ತತೆ ,, ಅರ್ಥ—ಪ್ರಯೋಜನ ವಿಲ್ಲದಿದ್ದರೆ ಮಂದ ಬುದ್ಧಿಯುಳ್ಳ ಪುರುಷನೂ ಕೂಡ ಯಾವಕಾರ್ಯದಲ್ಲು ಪ್ರವೃತ್ತನಾಗುವದಿಲ್ಲವೆಂಬುದು. ಆ ಸರ್ವಜ್ಞನಾದ ಯಾವ ಈಶ್ವರನಿರುವನೋ, ಅವನೂ, ಎಂದರೆ,- ಇಂಥಾ ಮಹತ್ಕಾರ್ಯದಲ್ಲಿ ಹ್ಯಾಗೂ ಪ್ರವೃತ್ತನಾಗಿರುತ್ತಿರುವನು. ಹಾಗೆ ಈ ಪ್ರಕಾರವಾಗಿ ಹೇಳಿದ ಮೂರು ಪಕ್ಷಗಳು ಅಸಂಭವವಾದ್ದರಿಂದ ಈಗ ಗುರು ಸಮಾಧಾನವಂ ಹೇಳುತ್ತಾರೆ. (ಕ್ರೀಡನಮೇವಕೇವಲಂವಿಭೋಃ) ಅಂದರೆ-ಎಲೈ ಶಿಷ್ಯನೆ! ಈಜಗತ್ತಿನ ಉತ್ಪತ್ತಿ, ಸ್ಥಿತಿ, ಪ್ರಳಯಗಳಂ ಮಾಡುವಂಥಾದ್ದು, ಕೇವಲ ಆ ವಿಭುವೆನಿಪ ಪರಮಾತ್ಮನ ಕ್ರೀಡೆ ೫ ಯಾಗಿರುವದು. ಹೀಗೆ (ವೇದವಾದಿನಃ) ಅಂದರೆ-ವೇದವನ್ನು ತಿಳಿದಂಥಾ ವ್ಯಾಸಾದಿಯಾದ ಮುನಿಜನಗಳು ಪ್ರಕಟ ಪಡಿಸುತ್ತಾರೆ. ಈ ವಾರ್ತೆಯು ಶಾರೀರಕ ಸೂತ್ರದ ದ್ವಿತೀಯಾಧ್ಯಾಯದಲ್ಲಿ ವ್ಯಾಸ ಮುನಿಗಳೂ ವರ್ಣಿಸಿ ಇದ್ದಾರೆ. " ಲೋಕವತ್ತು ಲೀಲಾಕೈವಲ್ಯಂ ,, ಅರ್ಥ- ಯಾವ ಪ್ರಕಾರದಿಂದ ಈಲೋಕದಲ್ಲಿ ರಾಜಾದಿಗಳಾದವರು ಪೂರ್ಣಕಾ

೪ ಅದ್ವಿತೀಯವೆಂದರೆ-ವಿಜಾತೀಯವಾದ ದ್ವಿತೀಯವಸ್ತುರಹಿತವಾದದ್ದು, ೫. ಆಟ.
೬, ಧನಧಾನ್ಯಪ್ರಜಾ, ಬೊಕ್ಕಸ, ಭಂಡಾರ, ರಾಜ್ಯಕೋಶ ಮಂತ್ರಿಮನ್ನೆಯರಾದಿಗಳಂ

ಮರಾಗಿದ್ದಾಗ್ಯೂ ಕೇವಲಲೀಲಾರ್ಥವಾಗಿ ಬೇಟೆಖೇಲನಾದಿ ಕ್ರಿಯೆಗಳನ್ನು ಮಾಡುವರೋ‌ ಹಾಗೆಯೇ ಈಶ್ವರನೂ ಕೂಡ ಕೇವಲ ಲೀಲಾರ್ಥವಾಗಿಯೇ ಈಜಗತ್ತಿನ ನಿರ್ಮಾಣಾದಿಗಳನ್ನು ಮಾಡುತ್ತಿರುವನು ಎಂದು.

ಅ॥ ಈ ಪ್ರಕಾರದಿಂದ ಜಗತ್ತಿನ ಕಾರಣನಾದ ಪರಮಾತ್ಮನನ್ನು ಶ್ರವಣಮಂಮಾಡಿ ಈಗ ಜಗತ್ತಿನ ಸ್ಥಿತಿವಿಷಯಮಂ ಕುರಿತು ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ನಿಶಾಕರೇಂದ್ರಾರ್ಕಯಮಾನಲಾನಿಲಾ
ಧರಾಧರಾಧಾರನದೀನದೀಶ್ವರಾಃ ॥
ಭಯೇನಕಸ್ಯಾಖಿಲ ಶಕ್ತಿಧಾರಿಣಃ
ಸದೈವಭೀತಾನಿಯಂತ್ರಿತಂತ್ಯಜಂತಿನೊ ॥ ೪೭॥

ಟೀಕಾ॥ ನಿಶಾಕಾರ ಇತಿ-ಎಲೈ ಗುರುವೇ, ನಿಶಾಕರ-ಯಾವಚಂದ್ರಮನಿರುವನೋ ಮತ್ತು ಇಂದ್ರ-ಯಾವ ದೇವತೆಗಳ ರಾಜನಿರುವನೋ ಹಾಗೆ ಅರ್ಕ-ಯಾವ ಸೂರ್ಯನಿರುವನೋ ಇನ್ನು ಯಮ-ಅಂದರೆ,—ಯ೧ಮ ರಾಜನಿರುವನೋ ಮತ್ತು ಅನಲ-ಯಾವ ಅಗ್ನಿದೇವತೆ ಇರುವದೋ ಹಾಗೆ ಅನಿಲ-ಯಾವ ವಾಯುವಿರುವದೋ ಇನ್ನು ಧರಾ-ಯಾವ ಪೃಥ್ವಿಯೂ, ಹಾಗೆ ಧರಾಧರಾ-ಯಾವ ಹಿಮಾಲಯಾದಿ ಪರ್ವತಗಳೂ, ಮತ್ತು ನದೀ-ಯಾವ ಗಂಗಾ ಯಮುನಾದಿನದಿಗಳೂ, ಹಾಗೆ ನದೀಶ್ವರ-ಅಂದರೆ-ಯಾವ ನದಿಗಳ ಪತಿಯಾದ ಸಮುದ್ರರಾಜನಿರುವನೋ, ಆ ಈ ಸರ್ವವೂ ಎಲೈ ಭಗವಂತನೇ ! (ಭಯೇನಕಸ್ಯ) ಅಂದರೆ,-ಹೀಗೆ ಯಾಪನು ಸರ್ವಶಕ್ತಿಗಳನ್ನು ಧಾರಣಮಾಡುವಂಥಾ ಪುರುಷನಿರುವನೋ ಅಂದರೆ, ಯಾರ ಭಯದಿಂದ ಯಾವಾಗಲೂ ಭಯಭೀತಿಯುಳ್ಳವರಾಗಿ ತಂ

ದ ಸಂಮೃದ್ಧರಾಗಿರುವದಕ್ಕೆ ಪೂರ್ಣಕಾಮರೆಂದು ಹೆಸರು, ೭, ಚೆಂಡಿನ ಆಟ ಮೊದಲಾದವುಗಳು,

೧ ನಿಗ್ರಹಿಸತಕ್ಕವನು,

ಮತ್ತವನ್ನು (ನಿಯಂತಿಂ) ಅಂದರೆ,-ಮರ್ಯಾದೆಗಳಂ ಬಿಡದವರಾಗಿರುವ ರೋ ಅದನ್ನು ಕೃಪೆಯಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ... ॥೪೭॥

ಅ॥ ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯಂ ಕೇಳಿ, ಈಗ ಗುರುವು ಅದಕ್ಕೆ ಉತ್ತರವಂ ಹೇಳುತ್ತಾರೆ.

—ಗುರುರುವಾಚ—

ಯಮೀಶ್ವರಾಣಾಂಪರಮಂಮಹೇಶ್ವರಂ ।
ತಥೋದ್ಯತಂವಜ್ರಮಿವಶ್ರುತಿರ್ಜಗೌ ॥
ಭಯೇನತಸ್ಯಾಖಿಲಮೇವಕಂಪತೇ ।
ಯಥೇಹರಾಜ್ಞೋನುಚರಾದಿಕಂಜಗತ್ ॥ ॥೪೮॥

ಟೀಕಾ॥ ಯಮಿತಿ - ಎಲೈ ಶಿಷ್ಯನೇ ! (ಯಮೀಶ್ವರಾಣಾಂಪರಮಂಮಹೇಶ್ವರಂ) ಅಂದರೆ,-ಯಾವನು ಬ್ರಹ್ಮಾದಿಯಾದ ಯಾವ ಜಗತ್ತಿಗೆ ಈ೧ ಶ್ವರನಾಗಿರುವನೋ ಅವನಿಗಿಂತಲೂ ಉತ್ಕೃಷ್ಟವಾದ ಮಹಾ ಈಶ್ವರದೇ೨ ವನೆಂದು ಪ್ರಸಿದ್ಧಿಯಾಗಿರುವರು. ಹಾಗೆ ಶ್ವೇತಾಶ್ವತರೋಪನಿಷತ್ತಿನಲ್ಲಿ ಬರೆಯಲ್ಪಟ್ಟಿರುವದು. “ತಮೀಶ್ವರಾಣಾಂಪರಮಂಮಹೇಶ್ವರಂತಂದೇವತಾನಾಂಪರಮಂಚದೈವತಮ್ । ಪತಿಂಪತೀನಾಂಪರಮಂಪರಸ್ತಾದ್ವಿದಾಮದೇವಂಭುವನೇಶಮೀಡ್ಯಂ ॥” ಅರ್ಥ॥ ಯಾವ ಪರಮಾತ್ಮನಾದ ದೇವನು ಬ್ರಹ್ಮಾದಿಯಾದ ಸರ್ವ ಈಶ್ವರರುಗಳಿಗೂ ಪರಮ ಈಶ್ವರನಾಗಿರುವನೋ, ಇನ್ನು ಅಗ್ನಿ ಆದಿದೇವತೆಗಳಿಗೂ, ಪರಮದೈವತನಾಗಿರುವನೋ, ಹಾಗೆ ಕಶ್ಯಪ ದಕ್ಷಾದಿ ಪ್ರಜಾಪತಿಗಳಿಗೂ, ಪತಿಯಾಗಿರುವನೋ, ಮತ್ತು ಚತುರ್ದಶ ಭುವನಗಳಿಗೆ, ಅಧಿಪತಿಯಾಗಿಯೂ, ಇನ್ನು ಸರ್ವದರಿಂದ ಪೂಜನೀಯನಾಗಿರುವನೋ, ಆದೇವನನ್ನು ನಮ್ಮ ಋಷಿಜನಗಳು ತಿಳಿಯುತ್ತಿರುವರು ಎಂದು. ಹಾಗೆ (ಉದ್ಯತಂವಜ್ರಮಿವ) ಅಂದರೆ,-ಎಲೈ ಶಿಷ್ಯನೆ ! ಯಾವ ಪರಮಾತ್ಮನನ್ನು ವೇದದಲ್ಲಿ ಉದ್ಯತವಜ್ರದ ಸಮಾನವಾಗಿ ಯಾದರೂ ಪ್ರಕಟ ಪಡಿಸಿರುವದೊ, ಹಾಗೆ ಯಜುರ್ವೇದದ ಕಠೋಪನಿಷತ್ತಿನಲ್ಲಿ ಹೇಳಲ್ಪಟ್ಟಿರುವದು. “ಮಹದ್ಭಯಂ

---

೧ ನಿಯಾಮಕ ೨ ದಿವ್ಯಪ್ರಕಾಶ

ವಜ್ರಮುದ್ಯತಂ ಯ ಏತದ್ವಿದುರಮೃತಾಸ್ತೇ ಭವಂತಿ ,, ಅರ್ಥ- ಆ ಪರಮಾತ್ಮನು ಸರ್ವ ಚರಾಚರ ಜಗತ್ತಿನ ಭಯಕ್ಕೆ ಹೇತುವು, ಅಂದರೆ, —ದಂಡಿಸುವಂಥಾವನಾಗಿರುವನು. ಮತ್ತು ಯಾವಾಗಲೂ ಶಿರಸ್ಸಿನಮೇಲೆ ಇರುತ್ತಿರುವ ಭಯಾನಕ-ವಜ್ರದಂತಿರುವನು. ಯಾವ ಪುರುಷನು ಅವನನ್ನು ತಿಳಿಯುವನೋ ಅವನು ಮೋಕ್ಷವಂ ಪಡದುಕೊಳ್ಳುವನು ಎಂದು. ಹಾಗೆ (ಭಯೋನತಸ್ಯ) ಅಂದರೆ, ಎಲೈ ಶಿಷ್ಯನೇ ! ಆ ಪರಮಾತ್ಮನ ಭಯದಿಂದಲೇ (ಅಖಿಲಂ) ಅಂದರೆ- ಈ ಸೂರ್ಯ ಚಂದ್ರಾದಿಗಳೇ ಮೊದಲಾಗಿ ಸರ್ವ ಚರಾಚರ ಜಗತ್ತು ಕಂ೩ಪಿಸುತ್ತಿರುವದು. ಹ್ಯಾಗೆ ಈ ಲೋಕದಲ್ಲಿ ಪ್ರತ್ಯಕ್ಷವಾಗಿ, (ರಾಜ್ಞೋನುಚರಾದಿಕಂ) ಅಂದರೆ- ರಾಜನ ಭಯದಿಂದ ಸಮಸ್ತ ಅನುಚರರಾದ ಜನಗಳು ಕಂಪಿಸುತ್ತಿರುವರೋ ಹಾಗೆ ಈ ವಾರ್ತೆಯು ಯಜುರ್ವೇದದ ತೈತಿರೀಯೋಪನಿಷತ್ತಿನಲ್ಲಿಯೂ ಬರಿಯಲ್ಪಟ್ಟಿರುವದು. " ಭೀಷಾಸ್ಮಾದ್ವಾತಃ ಪವತೆ ಭೀಷೋದೇತಿ ಸೂರ್ಯಃ ಭೀಷಾಸ್ಮಾ ದಗ್ನಿಶ್ಚೇಂದ್ರಶ್ಚ ಮೃತ್ಯುರ್ಧಾವತಿ ಪಂಚಮಃ ,,

ಅರ್ಥ ॥ ಈ ಪರಮಾತ್ಮನ ಭಯದಿಂದ ಆಕಾಶದಲ್ಲಿ ವಾಯು ನಡಿಯುತ್ತಿರುವದು, ಮತ್ತು ಭಯದಿಂದಲೇ ಸೂರ್ಯನುದಯಿಸುತ್ತಿರುವನು ಹಾಗೆ ಭಯದಿಂದಲೇ ಅಗ್ನಿ ಜ್ವಲಿಸುತ್ತಿರುವದು. ಇನ್ನೂ ಭಯದಿಂದ ಇಂದ್ರ ೪ ನು ವರ್ಷಿಸುತ್ತಿರುವನು. ಹಾಗೆ ಭಯದಿಂದಲೇ ಇವುಗಳಲ್ಲಿ ಐದನೆಯದಾದ ಮೃತ್ಯುವು ಪ್ರಾಣಿಗಳನ್ನು ಸಂಹರಿಸುವದಕ್ಕೆ ಓಡುತ್ತಿರುವದು ಎಂದು. ಹಾಗೆ ಬೃಹದಾರಣ್ಯಕೋಪನಿಷತ್ತಿನಲ್ಲೂ ಬರೆಯಲ್ಪಟ್ಟಿರುವದು. " ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಗಾರ್ಗಿ ಸೂರ್ಯಾ ಚಂದ್ರಮಸೌ ವಿಧೃತೌ ತಿಷ್ಠತಃ ,, ಓ ಗಾರ್ಗಿ ಈ ಕ್ಷಯರಹಿತನಾದ ಪರಮಾತ್ಮನ ಆಜ್ಞೆಯಲ್ಲಿದ್ದುಕೊಂಡು, ಸೂರ್ಯ ಮತ್ತು ಚಂದ್ರಮನು ಸಹಾ ಆಕಾಶದಲ್ಲಿ ಭ್ರಮ ೫ ಣ ಮಾಡುತ್ತಿರುವರು ಎಂದು. ॥೪೮॥

ಅ—ಈ ಪ್ರಕಾರದಿಂದ ಶ್ರುತಿ ಸಮ್ಮತವಾಗಿ ಯಥಾರ್ಥವಾದ ಉತ್ತರವಂ ಕೇಳಿ, ಈಗ ಪುನಃ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಜಡಾನಿ ಕರ್ಮಾಣಿ ಪೃಥಕ್ ಪೃಥಗ್ಜನ್ಯೈಃ ।

೩ ನಡಗುವದಕ್ಕೆ ಕಂಪನವೆಂದು ಪೆಸರು. ೪ಮೇಘ. ೫ ಸುತ್ತುವದಕ್ಕೆ ಭ್ರಮಣವೆಂದು ಪೆಸರು

ಕೃತಾನಿಚಿತ್ರಾಣಿಸದಾಸಮಂತತಃ ॥
ವಿಬುದ್ಧ್ಯಕಾಲೇನತುಕೋಽಖಿಲಾರ್ಥವಿತ್ |
ಫಲಂದಯಾಲುರ್ಭಗವಾನ್ಪ್ರಯಚ್ಛತಿ ॥೪೯॥

ಟೀಕಾ—ಜಡಾನೀತಿ-ಎಲೈ ಭಗವಂತನ ಈ ಬ್ರಹ್ಮಾಂಡದಲ್ಲಿ ಅಂತರ್ಗತವಾಗಿ ದೈತ್ಯರು, ದೇವತೆಗಳು, ಮನುಷ್ಯರು, ನಾಗಗಳು, ಪಶುಗಳು, ಪಕ್ಷಿಗಳು ಇವೇ ಆದಿಯಾಗಿ, ಇನ್ನೂ ಯಾವ ಯಾವ ಜೀವಿಗಳಿರುವವೋ, ಆ ಸರ್ವವು (ಪೃಥಕ್ ಪೃಥಕ್) ಅಂದರೆ-ಪರಸ್ಪರ ಭಿನ್ನಭಿನ್ನ ಕರ್ಮಗಳಂ ಮಾಡುತ್ತಿರುವವು. ಮತ್ತು (ಚಿತ್ರಾಣಿ) ಅಂದರೆ- ಅವುಗಳಲ್ಲಿ ಒಂದೊಂದು ಜೀವಕ್ಕೆ ನಾನಾ ಪ್ರಕಾರವಾದ ವಿಚಿತ್ರ ಕರ್ಮಗಳಾಗಿರುವವು. ಇನ್ನು ಆಸರ್ವ ಕರ್ಮಗಳು (ಜಡಾನಿ) ಅಂದರೆ-ಜ ೧ ಡವಾಗಿರುವವು. ಆದ್ದರಿಂದ ಅವುಗಳಿಗೆ ಹೀಗೆ ಯಾವನು (ಅಖಿಲಾರ್ಥವಿತ್) ಅಂದರೆ,- ಭೂತಭವಿಷ್ಯದ್ವರ್ತಮಾನಗಳಲ್ಲಿನ ಸರ್ವಪದಾರ್ಥಗಳನ್ನು ಅಖಂಡಿತವಾಗಿ ತಿಳಿಯುತ್ತಿರುವವನಾಗಿ, ಮತ್ತು ದಯಾಳುವಾದ ಪುರುಷನಿರುವನೋ, ಅಂದರೆ,-ಯಾವನು ಯಾವಾಗಲೂ (ಸಮಂತತಃ) ಅಂದರೆ-ಸರ್ವವಿಧದಿಂದಲೂ,ಆ ಎಲ್ಲಾ ಜೀವಿಗಳ ಕರ್ಮಗಳನ್ನು ಸಮ್ಯಕ್ಪ್ರಕಾರದಿಂದ ಬೇರೆ ಬೇರೆ ತಿಳಿದವನಾಗಿ (ಕಾಲೇನ) ಅಂದರೆ,- ಬಹುಕಾಲದಿಂ ಹೊಂದಲ್ಪಡುವದ್ದರಿಂದ ಜನ್ಮಜನ್ಮಾಂತರಗಳಲ್ಲಿಯೂ, ಹಾಗೆ ಸ್ವರ್ಗನರಕಾದಿ ದೇಶಾಂತರಗಳಲ್ಲಿಯೂ, ಬೇರೆಬೇರೆ ಯಥಾ ಯೋಗ್ಯವಾಗಿ ಜೀವಿಗಳಿಗೆ ಆಯಾಯ ಕರ್ಮಗಳ ಸುಖದುಃಖಾದಿ ರೂಪವಾದ ಫಲವಂ ಕೊಡುವನೋ, ಅವನನ್ನು ಕೃಪೆಯಿಂದ ನನ್ನಂ ಕುರಿತು ತಿಳಿಯಪಡಿಸಬೇಕು ಎಂದನು. ... ... ॥೪೯॥

ಅ—ಈ ಪ್ರಕಾರದಿಂದ ಶಿಷ್ಯನ ಕರ್ಮ ವಿಷಯಕವಾದ ಪ್ರಶ್ನೆಯಂ ಕೇಳಿದವರಾಗಿ, ಈಗ ಗುರುವು ಅದರ ಉತ್ತರವನ್ನು ಪ್ರಕಟಪಡಿಸುತ್ತಾರೆ.

—ಗುರುರುವಾಚ—

ಯೇನೇಶ್ವರೇಣ ಸರ್ವಮಿದಂ ತತಂ ...

ಯೇನೈತತ್ಸರ್ವಮಿಹಾಂತರಾತ್ಮನಾ |

೧ ಅಂದರೆ-ಸ್ವತಃ ಯಾವಗುಣವನ್ನು ಕೊಡುವದಕ್ಕೂ ಸಮರ್ಥವಾಗದಿರುವದು.

ಲೋಕೇಶ್ವರಾಯಸ್ಯನಿದೇಶಕಾರಿಣಃ ॥
ತೇನಾಖಿಲಂಕರ್ಮಫಲಂಪ್ರಸೂಯತೇ |
ವರ್ಷಾಂಬುನಾಸಸ್ಯಮಿವಾವಿರೋಧತಃ ॥೫೦॥

ಟೀಕಾ— ಯೇನೇತಿ ॥ ಎಲೈಶಿಷ್ಯನೆ (ಯೇನೇಶ್ವರೇ) ಅಂದರೆ-ಯಾವ ಪರಮಾತ್ಮನು. ಈ ಜಗದ್ಗತವಾದ ಭೂತಪ್ರಾಣಿಗಳ ಅಂತರದಲ್ಲಿದ್ದು ಕೊಂಡು ಅಂತರ್ಯಾಮಿ ರೂಪದಿಂದ ಪ್ರೇರಣೆಯಂ ಮಾಡುವನೋ. ಈ ವಾರ್ತೆಯು ಬೃಹದಾರಣ್ಯಕೋಪನಿಷತ್ತಿನಲ್ಲಿ ಪ್ರಕಟಿಸಲ್ಪಟ್ಟಿರು ವದು. “ಯಃಸರ್ವೇಷು ಭೂತೇಷು ತಿಷ್ಠನ್ ಸರ್ವೇಭ್ಯೋಭೂತೇಭ್ಯೋಂತರೋಯಮ್ ಸರ್ವಾಣಿ ಭೂತಾನಿನವಿದುಃಯಸ್ಯ ಸರ್ವಾಣಿ ಭೂತಾನಿ ಶರೀರಂಯಃ ಸರ್ವಾಣಿ ಭೂತಾನ್ಯಂತರೋಯ ಮಯತ್ಯೇಷತ ಆತ್ಮಾಂತರ್ಯಾಮ್ಯಮೃತಃ „ ಅರ್ಥ-ಯಾಜ್ಞವಲ್ಕ್ಯಮುನಿಹೇಳುತ್ತಾರೆ,-ಎಲೈ ಉದ್ದಾಲಕನೆ ! ಯಾವ ಪರಮಾತ್ಮನು ಸಕಲ ಚರಾಚರ ಭೂತಗಳಲ್ಲಿ ಇದ್ದುಕೊಂಡು ಸರ್ವಭೂತಗಳ ಅಂತರವಾಗಿರುವನೋ, ಮತ್ತು ಯಾವನನ್ನು ಸರ್ವಭೂತಗಳು ತಿಳಿಯಲಾರವೋ, ಇನ್ನು ಯಾವನಿಗೆ ಸರ್ವ ಭೂತಗಳು ಶರೀರವಾಗಿರುವದೋ ಮತ್ತು ಯಾವನು ಸರ್ವಭೂತಗಳನ್ನು ಅಂತರದಿಂದ ಪ್ರೇರಣೆಯಂ ಮಾಡುವನೋ ಅವನೆ ನಿನ್ನಿಂದ ಕೇಳಲ್ಪಟ್ಟ ನಿತ್ಯಮುಕ್ತಸ್ವರೂಪನಾದ ಅಂತರ್ಯಾಮಿ ಎನಿಪ ಪರಮಾತ್ಮನಾಗಿರುವನು ಎಂದು. ಹಾಗೆ ಗೀತೆಯ ಹದಿನೆಂಟನೆ ಅಧ್ಯಾಯದಲ್ಲಿ ಶ್ರೀಕೃಷ್ಣಸ್ವಾಮಿಯೂ “ಈಶ್ವರಃ ಸರ್ವಭೂತಾನಾಂ ಹೃದ್ದೇಶೇರ್ಜುನತಿಷ್ಠತಿ „ ಎಲೆ ಅರ್ಜುನ ಸರ್ವಭೂತ ಪ್ರಾಣಿಗಳ ಹೃದಯಕಮಲದಲ್ಲಿ ಈಶ್ವರನು ಸ್ಥಿತನಾಗಿರುವನು ಎಂದು ಹೇಳಿರುವನು. ಆದ್ದರಿಂದೆಲೈ ಶಿಷ್ಯನೇ ! ಈ ಪ್ರಕಾರವಾದ ಯಾವ ಅಂತರ್ಯಾಮಿಯಾಗಿ ಸರ್ವಜ್ಞನಾದ ಈಶ್ವರ ನಿರುವನೋ (ತೇನಾಖಿಲಂ ಕರ್ಮಫಲಂ ಪ್ರಸೂಯತೇ) ಅಂದರೆ,-ಅವನೇ ಸರ್ವಜೀವಿಗಳಿಗೂ, ಕರ್ಮಗಳ ಫಲವನ್ನು ಭಿನ್ನ ಭಿನ್ನವಾಗಿ ಉತ್ಪನ್ನಮಾಡಿರುವನು. ಅಂದರೆ ಕೊಡುವನು. ಈ ವಾರ್ತೆಯು ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಪ್ರಸಿದ್ಧವಾಗಿರುವದು. “ರಾತೆರ್ದಾತುಃ ಪರಾಯಣಂ „ ಅರ್ಥ—ಆ ಪರಮಾತ್ಮನೆ ಧನ

ದದಾನಮಾಡುವಂಥಾ ಪುರುಷನ ಪರಾ[೧]ಯಣನು. “ಹಾಗೆ ಈ ಶಾವಾಸ್ಯೋಪನಿಷತ್ತಿನಲ್ಲು ಹೇಳಲ್ಪಟ್ಟಿರುವದು. “ಯಾಥಾತಥ್ಯತೋರ್ಥಾನ್ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ,,

ಅರ್ಥ॥ ಆ ಪರಮಾತ್ಮನು ನಿರಂತರದಲ್ಲಿಯೂ ಅನೇಕ ವರ್ಷಗಳಿಂದ ಯಥಾಯೋಗ್ಯವಾಗಿ ಕರ್ಮಗಳ ಫಲರೂಪವಾದ ಅ[೨]ರ್ಥಗಳ ವ್ಯವಸ್ಥೆಯಂ ಮಾಡಿರುವನು. ಮತ್ತು ಯಾರೋ ಕೆಲವರು ಮೀಮಾಂಸ[೩]ಕಾದಿಗಳು ಹೀಗೆ ಗ್ರಹಿಸುತ್ತಿರುವರು. ಯೇನೆಂದರೆ,—ಈಶ್ವರನು ಕರ್ಮಗಳ ಫಲವನ್ನು ಕೊಡತಕ್ಕವನಾಗಿಲ್ಲ. ಮತ್ತೇನೆಂದರೆ,-ಕರ್ಮವೇ ಸ್ವತಂತ್ರ ಫಲವನ್ನು ಕೊಡುವದು ಎಂಬರು. ಅವರ ಈ ವಾರ್ತೆಯು ಅಸಂಭವವೆನಿಸುವದು. ಯಾತಕ್ಕಂದರೆ,-ಕರ್ಮಗಳೋ ಜಡ, ತತ್ಕಾಲ ವಿನಾಶಿರೂಪವಾದ್ದರಿಂದ ಕಾಲಾಂತರದಲ್ಲಿ ಫಲವಂ ಕೊಡುವದಕ್ಕೆ ಸಮರ್ಥವಾಗುವದಿಲ್ಲ. ಈ ವಿಷಯವನ್ನು ಪುಷ್ಪದಂತ ಗಂಧರ್ವನೂ ಹೇಳಿರುವನು. “ಕ್ವಕರ್ಮಪ್ರಧ್ವಸ್ತಂಫಲತಿಪುರುಷಾರಾಧನಮೃತೆ ,, ಅರ್ಥ॥ ತತ್ಕಾಲದಲ್ಲಿ ವಿನಷ್ಟವಾಗುವ ಕರ್ಮ, ಈಶ್ವರನ ಆರಾಧ[೪]ನವಿಲ್ಲದೇ ಎಲ್ಲಿ ಫಲವನ್ನು ಕೊಡುವದು ? ಅಂದರೆ,-ಎಲ್ಲಿಯೂ ಇಲ್ಲವೆಂಬುದು. ಹಾಗೆ ಶಾರೀರಕ ಸೂತ್ರದಲ್ಲಿ ವ್ಯಾಸರೂ ಹೇಳಿರುವರು. “ಫಲಮತ ಉಪಪತ್ತೇಃ ,, ಅರ್ಥ॥ ಈಶ್ವರನ ಸಕಾಶದಿಂದಲೇ ಸರ್ವಕರ್ಮಗಳ ಫಲವಾಗುವದು. ಯಾತಕ್ಕಂದರೆ,-(ಉಪಪತ್ತೇಃ) ಅಂದರೆ,-ಈಶ್ವರನಲ್ಲಿಯೇ ಸರ್ವಜ್ಞ ಸರ್ವಶಕ್ತಿಯುಳ್ಳವನಾದ್ದರಿಂದ ಕರ್ಮಗಳ ಫಲದ ದಾತೃತ್ವವು ಸಂಭವಿಸುವದು. ಕರ್ಮಗಳಾದರೋ ಜಡವಾದ್ದರಿಂದ ಅದರಲ್ಲಿ ಸಂಭವಿಸಲರಿಯದು ಎಂದು ಸೂತ್ರಾಭಿಪ್ರಾಯವು. ಮತ್ತು ಯಾವದೋ ಈ ಸ್ಥಲದಲ್ಲಿ ಶಿಷ್ಯನು ಈ ಪ್ರಕಾರವಾಗಿ ಶಂಕೆಯಂ ಮಾಡುತ್ತಾನೆ. ಯೇನೆಂದರೆ,-ಗರುಡಪುರಾಣದಲ್ಲಿ ಪಾಪಪುಣ್ಯಕರ್ಮಗಳ ಫಲ ಯಮರಾಜ ಕೊಡುವನೆಂತಲೂ, ಇನ್ನು ಯಜ್ಞಾದಿಗಳ ಫಲ ವರ್ಷಾದಿದ್ವಾರಾ-ಇಂದ್ರನು ಕೊಡುವನೆಂತಲೂ, ಬರೆಯಲ್ಪಟ್ಟಿ

---

೧ ಅಂದರೆ-ಅವನೇ ಅವರಿಗೆ ಪ್ರೀತಿಯಾಗಿ ನಾನಾವಿ ಕರ್ಮಗಳ ಫಲವಂ ಕೊಡುವನು.
೨. ಪ್ರಯೋಜನಗಳ. ೩. ಜೈಮಿನಿ ಮತವನ್ನನುಸರಿಸಿದರು, ೪. ಅನುಗ್ರಹ.

ರುವದು ಎಂದರೆ,-ಅದಕ್ಕೆ ಗುರು ಸಮಾಧಾನವಂ ಪೇಳುತ್ತಾರೆ. (ಲೋಕೇಶ್ವರಾಯಸ್ಯ) ಅಂದರೆ,-ಎಲೈ ಶಿಷ್ಯನೇ! ಯಾವ ಪರಮಾತ್ಮನ ಇಂದ್ರ, ಕುಬೇರ, ಯಮ, ವರುಣಾದಿಯಾಗಿ, ಯಾವ ಲೋಕಪಾಲಕರಿರುವರೋ ಅವರೆಲ್ಲರೂ (ನಿದೇಶಕಾರಿಣಃ) ಅಂದರೆ,-ಆ ೫ ಜ್ಞೆಯಲ್ಲಿರುವರು ಸ್ವತಂತ್ರವಿಲ್ಲ. ಆದ್ದರಿಂದ ಮುಖ್ಯವಾಗಿ ಪರಮಾತ್ಮನೇ ಕರ್ಮಗಳ ಫಲವಂ ಕೊಡತಕ್ಕವನಾಗಿರುವನು. ಶಂಕಾ॥ ಯಾವಾಗ ಪೇಳಲ್ಪಟ್ಟ ರೀತಿಯಿಂದ ಈಶ್ವರನನ್ನೇ ಕರ್ಮಫಲದ ದಾತನನ್ನಾಗಿ ಗ್ರಹಿಸಿದರೆ ಆಗ ಅವನಲ್ಲಿ ವಿಷಮತ್ವಾದಿ ದೋಷಗಳ ಪ್ರಾಪ್ತಿಯಾದೀತು ? ಯಾತಕ್ಕಂದರೆ,-ಯಾವದೋ ಒಂದು ಜೀವಿಗೆ ದೇವತ್ವವಂ ಮಾಡಿಬಿಟ್ಟನು, ಮತ್ತೊಂದಕ್ಕೆ ಮನುಷ್ಯ, ಇನ್ನೊಂದಕ್ಕೆ ಸರ್ಪ, ಬೇರೊಂದಕ್ಕೆ ಧನಿಕ, ಮತ್ತು ಬೇರೆ ಒಂದಕ್ಕೆ ದರಿದ್ರ ಇವೇ ಆದಿಯಾದ ಕಾರ್ಯಗಳು ವಿಷಮತ್ವವಿಲ್ಲದೆಹ್ಯಾಗೆಸಂಭವಿಸುವದು ? ಮತ್ತು ಯಾವಾಗಈಶ್ವರನಲ್ಲಿ ವಿಷಮತ್ವವುಂಟಾಯಿತೋ ? ಆಗ ಅವನಿಗೆ ಈಶ್ವರತ್ವವೂ ಸಂಭವಿಸಲಾರದು. ಈ ಪ್ರಕಾರವಾದ ಶಿಷ್ಯನ ಶಂಕೆಯಾದ್ದರಿಂದ ಗುರು ಸಮಾಧಾನವಂ ಪೇಳುತ್ತಾರೆ. ಎಲೈ ಶಿಷ್ಯನೇ! ಈಶ್ವರನಲ್ಲಿ ವಿಷಮತ್ವಾದಿ ದೋಷ ಸಂಭವಿಸಲಾರದು. ಯಾತಕ್ಕಂದರೆ,-ಈಶ್ವರನಾದರೆ ವ ೬ ರ್ಷಜಲ*ದಂತಿರುವನು. ಹ್ಯಾಗೆ ವರ್ಷಜಲವು ಸರ್ವಕ್ಷೇತ್ರದಲ್ಲಿ ಸಮವಾಗಿ ಬೀಳುವದೋ ಮುಖ್ಯವಾಗಿ ಯಾವಯಾವ ಕ್ಷೇತ್ರದಲ್ಲಿ ಯಾವಯಾವ ಗೋಧಿ, ನವಣೆ, ತಂಡುಲಾದಿ ವಸ್ತುಗಳ ಮೇಲೆ ಬೀಳುವಾಗ ಅವುಗಳು ಅಲ್ಲಿ ಉತ್ಪನ್ನವಾಗುವವು. ಆದ್ದರಿಂದ ಆ ವರ್ಷಜಲದಲ್ಲಿ ಯಾವ ವಿಷಮತ್ವಾದಿ ದೋಷವು ಸಂಭವಿಸಲಿಲ್ಲವೋ ಹಾಗೆಯೇ ಈಶ್ವರನೂಕೂಡ ಕರ್ಮಗಳ ಫಲವಂ ಕೊಡುವಲ್ಲಿ ಸಾಧಾರಣ ನಿಮಿತ್ತನಾಗಿರುವನು. ಪೂರ್ವ ಯಾವಯಾವ ಜೀವಿಗಳಿಂದ ಹ್ಯಾಗೆಹ್ಯಾಗೆ ಕರ್ಮಗಳು ನಡದಿರುವವೋ ಹಾಗೆಹಾಗೆಯೇ ಅವುಗಳಿಗೆ ಫಲಪ್ರಾಪ್ತವಾಗುವವು. ತನ್ನ ಕಡೆಯಿಂದ ಈಶ್ವರನು ಯಾವ ನೂತನಫಲವನ್ನೂ ಕೊಡುವದಿ

---

೫ ಹ್ಯಾಗೆ ಲೋಕದಲ್ಲಿ ಪ್ರಸಿದ್ಧವಾಗಿ ರಾಜನ "ಆಜ್ಞೆಯಿಂದ ಮಂತ್ರಿ ಮೊದಲಾದವರು ಚೋರಾದಿಗಳಿಗೆ ದಂಡನಾದಿಗಳಂ ಕೊಡುವರೋ ಹಾಗೆಯೇ ಪರಮಾತ್ಮನ ಆಜ್ಞಾನುಸಾರವಾಗಿ ಯಮ ರಾಜಾದಿಗಳು ಜೀವರಿಗೆ ಕರ್ಮಗಳ ಫಲವಂ ಕೊಡುವರು. ೬. ಮಳೆ* ನೀರು.

ಶ್ಲ. ಈ ವಾರ್ತೆಯು ಶಾರೀರಿಕ ಸೂತ್ರದಲ್ಲಿ ವ್ಯಾಸರು ಪ್ರಕಟಪಡಿಸಿರುವರು. " ವೈಷಮ್ಯನೈರ್ಘೃಣ್ಯೇನಸಾಪೇಕ್ಷತ್ವಾತ್ತಥಾಹಿದರ್ಶಯತಿ ,, ಅರ್ಥ|| ಈಶ್ವರನಲ್ಲಿ ವಿಷಮತ್ವವು ಮತ್ತು ನಿರ್ದಯತಾದಿ ದೋಷಗಳು ಸಂಭವಿಸುವದಿಲ್ಲ. ಯಾತಕ್ಕಂದರೆ,-(ಸಾಪೇಕ್ಷತ್ವಾತ್) ಅಂದರೆ, ಜೀವರುಗಳ ಕರ್ಮಗಳನ್ನು ಅಪೇಕ್ಷೆ ಮಾಡಿಕೊಂಡೇ ಈಶ್ವರನು ಶುಭಾಶುಭ ಫಲವನ್ನು ಕೊಡುವನು. ಈ ವಾರ್ತೆಗೆ ಶ್ರುತಿಯು ತೋರಿಸುತ್ತಾರೆ. ಅಂದರೆ, ನಿರೂಪಣ ಮಾಡುತ್ತಾರೆ. ... ||೫೦||

ಅ|| ಈ ಪ್ರಕಾರವಾಗಿ ಗುರುವಿನ ಮುಖದಿಂದ ಯುಕ್ತಿಯುಕ್ತವಾದ ಉತ್ತರವನ್ನು ಶ್ರವಣವಂ ಮಾಡಿ, ಈಗ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ದಿವಾಕರೋದಾಹಕರೋನಿಶಾಕರ |
ಸ್ತಡಿದ್ಗಣಶ್ಚೋಡುಗಣಸ್ತಥಾನಿಶಮ್ ||
ವಿಭಾಂತಿಕಸ್ಯಾಮಿತದೀಪ್ತಿದೀಪಿತಾ |
ಬ್ರವೀತುಮೇಸಂಶಯಶೈಲದೇವರಾಟ್ || ||೫೧||

ಟೀಕಾ || ದಿವಾಕರ ಇತಿ—ಎಲೈ (ಸಂಶಯಶೈಲದೇವರಾಟ್) ಅಂದರೆ,-ಸರ್ವ ಸಂಶಯರೂಪವಾದ ಪರ್ವತಗಳನ್ನು ಛೇದನ ಮಾಡುವದರಲ್ಲಿ ಇಂದ್ರನಿಗೆ ಸಮಾನವಾಗಿರುವ ಗುರುವೆ! ದಿವಾಕರ-ಯಾವ ಸೂರ್ಯನಿರುವನೋ, ಮತ್ತು ದಾಹಕರ-ಯಾವ ಅಗ್ನಿ ಇರುವದೋ, ಹಾಗೆ ನಿಶಾಕರ-ಯಾವ ಚಂದ್ರಮನಿರುವನೋ, ಇನ್ನು ತಡಿದ್ಗಣ-ಯಾವ ಮಿಂಚುಗಳ ಸಮೂಹವೂ, ಮತ್ತು ಉಡುಗಣ-ಯಾವತಾರಾಸಮೂಹವಿರುವದೋ, ಆ ಈ ಸರ್ವವೂ (ಕಸ್ಯಾಮಿತದೀಪ್ತಿದೀಪಿತಾಃ) ಅಂದರೆ,-ಹೀಗೆ ಯಾವ ಪುರುಷನ ಅಮಿತ ಪ್ರಕಾಶದಿಂದೊಡಗೂಡಿರುವವೋ, ಅಂದರೆ,-ಯಾವದರ ಪ್ರಕಾಶದಿಂದ ಯಾವಾಗಲೂ ಪ್ರಕಾಶ ಉಳ್ಳವುಗಳಾಗಿರುವವೋ ಅದನ್ನು ಕೃಪೆಯಿಂದ ನನ್ನಂಕುರಿತು ನಿರೂಪಿಸಬೇಕು ಎಂದನು||೫೧

ಅ|| ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ಗು

---

೧. ನಕ್ಷತ್ರಗಳು.

ರುವು ಅದಕ್ಕೆ ಶ್ರುತಿಸಮ್ಮತವಾದ ಉತ್ತರವಂ ಪ್ರಕಟ ಪಡಿಸಿರುತ್ತಾರೆ.

—॥ ಗು ರು ರು ವಾ ಚ ॥—

ನಯತ್ರಸೂರ್ಯೋನನಿಶಾಕರಸ್ತಥಾ ।
ನಚಾಪಿವಿದ್ಯುಜ್ಜ್ವಲನಃಪ್ರಕಾಶತೇ ॥
ಶ್ರುತೌಸ್ವಯಂಜ್ಯೋತಿರುದೀರ್ಯತೇಚಯೋ ।
ವಿಭಾತಿತಸ್ಯಾಖಿಲಮೇವತೇಜಸಾ ॥ ॥೫೬॥

ಟೀಕಾ॥ ನಯತ್ರೇತಿ—ಎಲೈ ಶಿಷ್ಯನೇ! ಯಾವದರಲ್ಲಿ (ಸೂರ್ಯ) ಅಂದರೆ,-ಈ ಸರ್ವ ಬ್ರಹ್ಮಾಂಡವನ್ನು ಪ್ರಕಾಶಪಡಿಸುವಂಥಾ ಸೂರ್ಯನು ಪ್ರಕಾಶ ಮಾಡಲ್ಪಡದಿರುವನೋ ಮತ್ತು (ನನಿಶಾಕರಃ) ಅಂದರೆ,-ರಾತ್ರಿಯನ್ನು ಪ್ರಕಾಶಪಡಿಸುವಂಥಾ ಯಾವ ಚಂದ್ರನುಇರುವವನೋ ಅವನೂ ಪ್ರಕಾಶ ಮಾಡದಿರುವನೋ ಹಾಗೆ ವಿದ್ಯುತ್-ಯಾವ ಮಿಂಚು ಇರುವದೋ ಅದೂಕೂಡ ಪ್ರಕಾಶ ಮಾಡದೆ ಇರುವದೋ ಇನ್ನು ಜ್ವಲನ-ಯಾವ ಅಗ್ನಿದೇವತೆಯುಂಟೋ ಅದೂ ಪ್ರಕಾಶಮಾಡುವಲ್ಲಿ ಸಮರ್ಥವಾಗಲಿಲ್ಲವೋ ಹಾಗೆ (ಶ್ರುತೌಸ್ವಯಂಜ್ಯೋತಿರುದೀರ್ಯತೆ) ಅಂದರೆ,-ಎಲೈ ಶಿಷ್ಯನೇ! "ತದ್ದೇವಾಜ್ಯೋತಿಷಾಂಜ್ಯೋತಿರಾಯುರ್ಹೋಪಾಸತೆಮೃತಂ", "ಅತ್ರಾಯಂಪು೧ರುಷಃ ಸ್ವಯಂಜ್ಯೋತಿರ್ಭವತಿ", ಇವೇ ಆದಿಯಾದ ವೇದದ ವಾಕ್ಯಗಳಲ್ಲಿ ಯಾವ ಸ್ವಯಂಜ್ಯೋತಿಸ್ವರೂಪವನ್ನು ಪ್ರತಿಪಾದನ ಮಾಡಲ್ಪಟ್ಟಿರುವದೋಅದೇ ಪರಮಾತ್ಮನ (ತೇಜಸಾ) ಅಂದರೆ,-ಚೇತನಮಯವಾದ ಪ್ರಕಾಶದಿಂದ ಈ ಸೂರ್ಯಚಂದ್ರಮಾದಿಯಾದ ಸರ್ವವೂ ಪ್ರಕಾಶ ಉಳ್ಳವುಗಳಾಗಿರುವವು. ಈ ವಾರ್ತೆಯು ಯಜುರ್ವೇದದ ಕಠೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. "ನತತ್ರಸೂರ್ಯೋಭಾತಿನಚಂದ್ರತಾರಕಂನೇಮಾವಿದ್ಯುತೊಭಾಂತಿಕುತೋಯಮಗ್ನಿಃ। ತಮೇವಭಾಂತಮನುಭಾತಿಸರ್ವಂತಸ್ಯಭಾಸಾಸರ್ವಮಿದಂವಿಭಾತಿ", ಅರ್ಥ॥ ಆ ಪರಮಾತ್ಮನಲ್ಲಿ ಸೂರ್ಯನು ಪ್ರಕಾಶಿಸುವದಿಲ್ಲ. ಮತ್ತು ಚಂದ್ರಮನೂ ಪ್ರಕಾಶಿಸುವದಿಲ್ಲ.

---

೧ ಹ್ಯಾಗೂ ಈ ಬೃಹದಾರಣ್ಯಕದ ವಾಕ್ಯದಲ್ಲಿ ಅಲ್ಲ ಜೀವಾತ್ಮನ ಪ್ರಸಂಗವಾಗಿರುವದು. ಹಾಗಾದರೂ ಅಭೇದಾಭಿಪ್ರಾಯದಿಂದ ಇಲ್ಲಿ ಪರಮಾತ್ಮನ ಕಥನವೆಂದು ತಿಳಿಬೇಕು.

ಹಾಗೆ ತಾರಾಗಣವೂ ಪ್ರಕಾಶಿಸುವದಿಲ್ಲ. ಇನ್ನು ಮಿಂಚುಗಳೂ ಕೂಡ ಪ್ರಕಾಶಿಸುವದಿಲ್ಲ. ಅ೧ಲ್ಲಿ ಈ ಅಗ್ನಿಯಾದರೂ ಹ್ಯಾಗೆ ಪ್ರಕಾಶಿಸುತ್ತಲಿದ್ದೀತು ? ಇಷ್ಟೇ ಅಲ್ಲ. ಆ ಪರಮಾತ್ಮನ ಪ್ರಕಾಶಮಾದುದರಿಂದಲೇ ಹಿಂದಣಿಂದ ಈ ಸೂರ್ಯ ಚಂದ್ರಮಾದಿಗಳು ಪ್ರಕಾಶಿಸುತ್ತಲಿರುವರು. ಮತ್ತು ಅವನ ಪ್ರಕಾಶದಿಂದ ಈ ಸರ್ವ ಚರಾಚರ ಜಗತ್ತು ಪ್ರಕಾಶಮಾನವಾಗಿರುವದು ಎಂದು. ಹಾಗೆ ಗೀತೆಯ ಹದಿನೈದನೇ ಅಧ್ಯಾಯದಲ್ಲೂ "ಯದಾದಿತ್ಯಗತಂತೇಜೋ ಜಗದ್ಭಾಸಯತೇಖಿಲಂ । ಯಚ್ಚಂದ್ರಮಸಿಯಚ್ಚಾಗ್ನೌತತ್ತೇಜೋವಿದ್ಧಿಮಾಮಕಂ ,, ಅರ್ಥ॥ ಎಲೇ ಅರ್ಜುನಾ, ಯಾವ ತೇಜವು ಸೂರ್ಯಮಂಡಲದಲ್ಲಿದ್ದುಕೊಂಡು ಸರ್ವ ಜಗತ್ತನ್ನು ಪ್ರಕಾಶಿಸುವದೋ ಮತ್ತು ಯಾವ ತೇಜಸ್ಸು ಚಂದ್ರನಲ್ಲಿ ಇದ್ದುಕೊಂಡು ಪ್ರಕಾಶಿಸುದದೋ ಇನ್ನು ಯಾವ ತೇಜವು ಅಗ್ನಿಯಲ್ಲಿದ್ದುಕೊಂಡು ಬೆಳಗುತ್ತಿರುವದೋ ಆ ಸರ್ವ ತೇಜಸ್ಸನ್ನು ನೀನುನನ್ನದೇ ಎಂದು ತಿಳಿ ಎಂದು ಶ್ರೀ ಕೃಷ್ಣನು ಅಪ್ಪಣೆಗೈದಿರುವನು. ॥೫೨॥

ಅ॥ ಈ ಪ್ರಕಾರದಿಂದ ಸೂರ್ಯ ಚಂದ್ರಮಾದಿಗಳನ್ನು ನಿಯಮದಿಂದ ನಡಿಸುವದು, ಮತ್ತು ಸರ್ವಜೀವಿಗಳಿಗೂ ಕರ್ಮಗಳ ಫಲವಂ ಕೊಡುವದು, ಇವೇ ಮೊದಲಾದ ಕಾರ್ಯಗಳಿಂದ ಪರಮಾತ್ಮನೇ ಜಗತ್ತಿನ ಸ್ಥಿತಿಗೆ ಕಾರಣನಾದವನೆಂದು ಕೇಳಿ, ಈಗ ಶಿಷ್ಯನು ಜಗತ್ತಿನ ಪ್ರಳಯ ವಿಷಯಕವಾದ ಪ್ರಶ್ನೆಯಂ ಮಾಡುತ್ತಾನೆ-

॥ಶಿಷ್ಯಉವಾಚ॥

ಸದೇವನಾಗಾಸುರಸಿದ್ಧಮಾನವಂ
ಜಗಂತ್ಸಮಗ್ರಂಪ್ರಲಯೋಲಯೋನ್ಮುಖಂ॥
ವಿಲೀಯತೇತ ಸ್ಮತ ನಾವನಾಶಿನೋ॥
ಜಗತ್ಪತೇಬ್ರೂಹಿ ವಿಪಶ್ಚಿತಾಂಪತೇ॥ ॥೫೩॥

ಟೀಕಾ—ಸದೇವೇತಿ॥ ಎಲೈ (ವಿಪಶ್ಚಿತಾಂಪತೆ) ಅಂದರೆ,—ಸರ್ವವಿದ್ವಾಂಸುಗಳಪತಿ ಅಂದರೆ ಶ್ರೇಷ್ಟನಾದ ಗುರುವೇ ದೇವತೆಗಳು, ನಾಗಗಳು ದೈತ್ಯರು ಸಿದ್ಧರು ಇನ್ನುಮನುಷ್ಯಾದಿ ಚರಾಚರ ಭೂತಮಾ

೧.ಬಿಪ್ಪಿದಲ್ಲಿ-ಪರಮಾತ್ಮನಲ್ಲಿ.

ಣಿಗಳಸಹಿತವಾದ(ಜಗತ್ಸಮಗ್ರಂ)ಅಂದರೆ-ಈಯಾವಚತುರ್ದಶ ಭುವನಾ ತ್ಮಕ ವೆನಿಸುವಸಂಪೂರ್ಣಜಗತ್ತಿರುವದೊಅದು(ಪ್ರಲಯೆ)ಅಂದರೆ-ಪ್ರಲಯ ಕಾಲದಲ್ಲಿ ನಾಶಕ್ಕೆಸನ್ಮುಖವಾಗಿ ಹೀಗೆಯಾವನು ಅವಿನಾಶಿಯಾಗಿಯೂ, ಮತ್ತು ಸರ್ವಜಗತ್ತಿನ ಸ್ವಾಮಿಯಾದ ಪುರುಷನಿರುವನೋ।ಅಂದರೆ-ಯಾ ವನ ಶರೀರದಲ್ಲಿ(ವಿಲೀಯತೆ)ಅಂದರೆ ಹೋಗಲ್ಪಟ್ಟು ಲೀನವಾಗಿ ಹೋಗು ವದೊ ಅವನನ್ನು ಕೃಪೆಯಿಂದ ನನ್ನಂಕುರಿತು ಅಪ್ಪಣೆಕೊಡಿಸಬೇಕು ಎಂದನು. ... ... ॥೫೩॥

ಅ—ಈಪ್ರಕಾರವಾದ ಶಿಶ್ಯನಪ್ರಶ್ನೆಯಂಕೇಳಿ ಈಗುರುವು ಆದರಪ್ರುತ್ತರ ವಂ ಪೇಳುತಾತ್ತರೆ. ... ...

॥ಗುರುರುವಾಚ॥

ಯಸ್ಯೋದರೇನಂತತನೋರ್ಮಹಾತ್ಮನೊ
ಬ್ರಹ್ಮಾಂಡಲಕ್ಷಾಣಿಪರಿಸ್ಫುರಂತ್ಯಲಂ॥
ಖದ್ಯೋತಕಾ ಭಾಂತಿಯಥಾನಭೊಂಗಣೆ
ತಸ್ಮಿನ್ನಿದಂಯಾತಿಲಯಂಲಯೇ।ಖಿಲಮ್ ।೫೪॥

ಟೀಕಾ—ಯಸ್ಯೆತಿ॥ ಎಲೈ ಶಿಷ್ಯನೆ (ಅನಂತತನೋಃ) ಅಂದರೆ,— ಯಾವ ಪರಮಾತ್ಮನ ಅನಂತ-ಅಂದರೆ,-ಅಂತದಿಂದ ರಹಿತವಾದ ಶರೀ ೧ ರ ವಿರುವದೊ, ಹಾಗೆ ಯಜುರ್ವೇದದ ತೈತ್ತಿರೀಯೊಪನಿಷತ್ತಿನಲ್ಲೂ ಪೇ ಳಲುವದು " ಸತ್ಯಂಜ್ಞಾನಮನಂತಂ ಬ್ರಹ್ಮ ,, ಅರ್ಥ—ಆ ಪರಮಾತ್ಮ ನು ಸ ೨ ತ್ಯಸ್ವರೂಪ, ಮತ್ತು ಜ್ಞಾ ೩ ನಸ್ವರೂಪ, ಹಾಗೆ ಅನಂ ೪ ತ ಸ್ವರೂಪನಾಗಿರುವನು ಎಂದು ಹಾಗೆ (ಮಹಾತ್ಮನಃ) ಅಂದರೆ,-ಎಲೈ ಶಿ ಷ್ಯನೇ ! ಯಾವ ಪರಮಾತ್ಮನು ಎಲ್ಲಕ್ಕಿಂತಲೂ ದೊಡ್ಡವನಾಗಿರುವ ನೊ ಈ ವಾರ್ತೆಯು ಕಠೋಪನಿಷತ್ತಿನಲ್ಲಿ ಪೇಳಲ್ಪಟ್ಟಿರುವದು "ಅಣೋ ರಣೀಯಾನ್ ಮಹತೋಮಹೀಯಾನ್ ,, ಅರ್ಥ—ಆ ಪರಮಾತ್ಮನು ಪ ರಮಾಣ್ವಾದಿ ಅತ್ಯಂತ ಸೂಕ್ಷ್ಮಕ್ಕಿಂತಲೂ ಸೂಕ್ಷ್ಮವಾಗಿರುವನು. ಮ ತ್ತು ಆಕಾಶಾದಿ ದೊಡ್ಡ ಪದಾರ್ಥಕ್ಕಿಂತಲೂ ದೊಡ್ಡವನಾಗಿರುವನು

೧ ಸ್ವರೂಪ ೨ ನಾಶರಹಿತ ೩ ಸ್ವಯಂಪ್ರಕಾಶ ೪ ಅಪರಿಚ್ಛಿನ್ನ-ಪೂರ್ಣ

ಎಂದು ಹಾಗೆ ಎಲೈ ಶಿಷ್ಯನೆ ! ಯಾವನ ಉದರ ೫ ದಲ್ಲಿ (ಬ್ರಹ್ಮಾಂಡ ಲಕ್ಷಾಣಿ) ಅಂದರೆ,-ಲಕ್ಷಾಧಿಕ ಬ್ರಹ್ಮಾಂಡಗಳು ಈ ಪ್ರಕಾರದಿಂ ಸ್ಫುರಣವಾಗುವವೋ ಅದೆಂತೆಂದರೆ ಹ್ಯಾಗೆ ಆಕಾಶದಲ್ಲಿ ರಾತ್ರಿಯೋಳ್ ಅನೇಕ ಖದ್ಯೋ ೬ ತಗಳು ಸ್ಫುರಣವಾಗುತ್ತಿರುವವೋ ಹಾಗೆ ಈ ವಾರ್ತೆಯು ಯೋಗವಾಸಿಷ್ಠದ ನಿರ್ವಾಣ ಪ್ರಕರಣದಲ್ಲೂ "ಬ್ರಹ್ಮಾಂಡಾನಾಂ ತಾದೃಶಾನಾಂ ದೂರೆ ದೂರೆ ಪುನಃ ಪುನಃ ‖ ವಿಘೂಲಕ್ಷಾಣಿ ಲಕ್ಷಾಣಿಕ ಚಿಂತ್ಯ್ಂಪರಮಂತಿಚ ,, ಅರ್ಥ-ಎಲೈ ಶ್ರೀರಾಮ ಚಂದ್ರನೆ! ಆಚಿದಾಕಾಶ ರೂಪನಾದ ಪರಮಾತ್ಮನಲ್ಲಿ ಕಿಂಚಿತ್ ದೂರ ದೂರವಾಗಿ ತಿರುತಿರಿಗಿ ಲಕ್ಷ ಲಕ್ಷಾಧಿಕ ಪ್ರಕಾರವಾದ ಬ್ರಹ್ಮಾಂಡಗಳು ಸ್ಫುರಣ ವಾಗುತ್ತಿರುವವು. ಮತ್ತು ನಾಶವನ್ನೂ ಹೊಂದುತ್ತಿರುವವು ಎಂದು‖ ವಶಿಷ್ಠರು ಪೇಳಿರುವರು. ಹಾಗೆ ವ್ಯಾಸರೂ ಕೂಡ ಯೋಗಭಾಷ್ಯದಲ್ಲಿ ಬರೆಯಲ್ಪಟ್ಟಿರುವರು. "ಪಂಚಾಶತ್ ಕೋಟಿ ಪರಿ ಸಂಖ್ಯಾತಾಸ್ತದೆ ತತ್ಸರ್ವಂ ಸುಪ್ರತಿಷ್ಠಿತ ಸಂಸ್ಥಾನ ಮಂಡಮಧ್ಯೇವ್ಯೂಢಂ ಅಂಡಂಚ ಪ್ರಧಾನ ಸ್ಯಾಣುರವಯವೋ ತಥಾಕಾಶೆ ಖದ್ಯೋತ ಇತಿ ,, ಅರ್ಥ-ಜಂಬುವಾದಿಸಪ್ತದ್ವೀಪಗಳು ಮತ್ತು ಲವಣಾದಿ ಸಪ್ತಸಮುದ್ರಗಳು, ಈ ಸರ್ವವೂ ಪೊಟ್ಟುಗೂಡಿ, ಪಂಚಾಶತಕೋಟಿ ಯೋಜನ, ಪೃಥಿವೀ ಮಂಡಲದ ವಿಸ್ತಾರವಾದುದು. ಅದು ಈ ನಾನಾ ಪ್ರಕಾರವಾದ ರಚನೆಯಿಂದೊಡಗೂಡಿ, ಸರ್ವ ವಿಸ್ತಾರವಾದ ಬ್ರಹ್ಮಾಂಡದ ಮಧ್ಯದಲ್ಲಿರುವದು. ಆ ಸರ್ವ ಬ್ರಹ್ಮಾಂಡವು ಮಾಯೆಯ ಯಾವದೊ ಒಂದವಯ ೭ ವದಲ್ಲಿರುತ್ತಿರುವದು. ಹ್ಯಾಗೆಂದರೆ,-ಆಕಾಶದ ಯಾವದೊ ಒಂದಂಶದಲ್ಲಿ ಖದೊ್ಯೋತಗಳು ಯೋಳುತ್ತಿರುವ ಪೊಹಾಗೆ ‖ ಆದರೆ-ಈಪ್ರಕಾರವಾದ ಮಾಯೆಯುಕೂಡ ಯಾವಪರಮಾತ್ಮನಯಾವದೊ ಒಂದಂಶದಲ್ಲಿ ಇರುತ್ತಿರುವದೊ, ಅಂಥಾ ಅವನ ಮಹ ೮ ತ್ವವನ್ನು ಯೇನೆಂದು ಮಾತಿನಲ್ಲಿ ವರ್ಣಿಸಬೇಕು. ಆದಕಾರಣ ಎಲೈ ಶಿಷ್ಯನೇ ಹೀಗೆ ಯಾವನು ಸರ್ವೋನ್ನತ ನೆನಿಪ, ಪರಮಾತ್ಮನಾದ ದೇವನಿರುವನೊ, (ತಸ್ಮಿನ್ನಿದಂ ಯಾತಿ ಲಯಂ) ಅಂದರೆ,- ಅವನಲ್ಲಿಯೇ ಈ ಸರ್ವ ಚರಾಚರ ರೂಪವಾದ ಜಗತ್ತು ಪ್ರಲಯಕಾಲದಲ್ಲಿ ಲೀನವಾಗಿ ಹೋಗುವದು. ಹಾಗೆ ಈ ವಾರ್ತೆ

೫ ಅಭ್ಯಂತರ. ೬ ನಕ್ಷತ್ರಾದಿಗಳು ೭ ಅಂಶ ೮ ದೊಡ್ಡತನ.

ಯು ತೈತ್ತಿರೀಯೋಪನಿಷತ್ತಿನಲ್ಲೂ ವರ್ಣಿಸಲ್ಪಟ್ಟಿರುವದು. “ಯತೋ ವಾ ಇಮಾನಿ ಭೂತಾನಿ ಜಾಯಂತೇ ಯೇನ ಜಾತಾನಿ ಜೀವಂತಿ ಯತ್ಪ್ರಯಂತ್ಯಭಿಸಂವಿಶಂತಿ ತದ್ಬ್ರಹ್ಮ” ಅರ್ಥ-ಯಾವದರಿಂದ ಸರ್ವಭೂತ ಪ್ರಾಣಿಗಳು ಉತ್ಪನ್ನವಾಗಿರುವವೋ ಮತ್ತು ಯಾವದರಲ್ಲಿ ಉತ್ಪನ್ನವಾದದ್ದು ಸರ್ವದಾ ಜೀವಿಸುತ್ತಿರುವವೋ ಅನ್ನು ಯಾವದರೊಳಗೆ ಪುನಃ ಪ್ರಲಯ ಕಾಲದಲ್ಲಿ ಲೀನವಾಗುವವೋ ಅದೇ ಬ್ರಹ್ಮವು. ||೫೪||

ಅ--ಈ ಪ್ರಕಾರವಾಗಿ ಪೂರ್ವೋಕ್ತವಾದ ರೀತಿಯಿಂದ ಪರಮಾತ್ಮನನ್ನೇ ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯದ ಕಾರಣನೆಂದು ನಿರೂಪಣೆಯಂ ಮಾಡಿ, ಈಗ ಆ ಪರಮಾತ್ಮನ ಆರಾಧನ ಮಾಡುವದರಿಂದಲೇ ಮೋಕ್ಷಪದ ಪ್ರಾಪ್ತಿಯಾಗುವದು. ಅಂತೆಂಬೀ ವಾರ್ತೆಯನ್ನು ಮೂರು ಶ್ಲೋಕಗಳಿಂದ ವರ್ಣನೆಯಂ ಮಾಡುತ್ತಾರೆ. ಅದಕ್ಕೆ ಪುನಃ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

ಶಿಷ್ಯ ಉವಾಚ

ಇಹಾಸ್ತಿದೇವಃಖಲುಕಸ್ತುಪೂಜ್ಯತಾಂ |
ಗತಃಕಥಂತಸ್ಯಭವೇಚ್ಚಪೂಜನಮ್ ||
ಸುಪೂಜಿತೇನಾಪಿಚತೇನಕಿಂಫಲಂ |
ಭವೇದಿಹಾಮುತ್ರವದಾಶುಮೇವಿಭೋ ||೫೫||

ಟೀಕಾ||ಇಹೇತಿ ಎಲೈ (ವಿಭೋ) ಅಂದರೆ,-ಆತ್ಮಸ್ವರೂಪದಿಂದ ಸರ್ವತ್ರ ವ್ಯಾಪಕನಾದ ಗುರುವೆ! ಈ ಸರ್ವ ಜಗತ್ತಿನಲ್ಲಿ ಎಲ್ಲಾ ದೇವತೆಗಳಿಗಿಂತಲೂ, ಉತ್ಕೃಷ್ಟನಾಗಿ, ಪೂಜಿಸಲು ಯೋಗ್ಯನಾದ ಯಾವದೇವನಿರುವನು ? ಮತ್ತು (ಕಥಂತಸ್ಯಭವೇಚ್ಚಪೂಜನಂ) ಅಂದರೆ,-ಆ ದೇವನ ಪೂಜೆಯು ಯಾವಪ್ರಕಾರವಾಗಿ ಆಗುವದು, ಹಾಗೆ ಅವನನ್ನು ವಿಧಿಪೂರ್ವಕವಾಗಿ ಪೂಜಿಸುವದ್ದರಿಂದ (ಕಿಂಫಲಂ) ಅಂದರೆ-ಈ ಲೋಕ ಮತ್ತು ಪರಲೋಕದಲ್ಲಿ ಯಾವ ಫಲದ ಪ್ರಾಪ್ತಿಯಾಗುವದು. ಆ ಈ ಸರ್ವ ವಿಷಯವನ್ನು ನನಗೆ ಕೃಪೆಯಿಂದ ಅಪ್ಪಣೆಕೊಡಿಸಬೇಕು ಎಂದನು. ... ||೫೫||

ಅ-ಈ ಪ್ರಕಾರವಾಗಿ ಶಿಷ್ಯನ ದೇವ ಪೂಜಾ ವಿಷಯಕವಾದ ಪೂ

ರು ಪ್ರಶ್ನೆಗಳನ್ನು ಕೇಳಿದವರಾಗಿ ಈಗ ಗುರುವು ಅದಕ್ಕೆ ಎರಡು ಶ್ಲೋಕಗಳಿಂದ ಉತ್ತರವಂ ಪೇಳುತ್ತಾರೆ.

—॥ ಗು ರು ರು ವಾ ಚ ॥—

ಯಃಸರ್ವಗೋವ್ಯಕ್ತವಪುಃಸ್ವಸಂಸ್ಥಿತಿ |
ರ್ಯನ್ಮಾತ್ರಯಾಬ್ರಹ್ಮಮಹೇಶಪಾರ್ಥವಾಃ ||
ಸರ್ವೇಶ್ವರಂವೇದವಚಾಂಸಿಯಂಜಗು |
ರ್ದೇವಾಧಿದೇವಂತಮುಪೇಹಿಸನ್ಮತೇ॥ ॥೫೭॥

ಟೀಕಾ ॥ ಯಇತಿ—ಎಲೈ ಶಿಷ್ಯನೇ ! ಯಾವ ಪರಮಾತ್ಮನು (ಸರ್ವಗಃ) ಅಂದರೆ,-ಸರ್ವ ಜಗತ್ತಿನಲ್ಲಿ ವ್ಯಾಪಕನೋ ಹಾಗೆ ಈ ವಾರ್ತೆಯು ಕೃಷ್ಣ ಯಜುರ್ವೇದದ ಶ್ವೇತಾಶ್ವತರೋಪನಿಷತ್ತಿನಲ್ಲೂ ವರ್ಣಿಸಲ್ಪಟ್ಟಿರುವದು. “ ಯೊದೇವೊಗ್ನೌಯೊಪ್ಸುಯೊವಿಶ್ವಂಭುವನಮಾವಿವೇಶ ,, ಅರ್ಥ॥ ಯಾವ ಪರಮಾತ್ಮನಾದ ದೇವನು ಅಗ್ನಿಯಲ್ಲಿರುವನೋ, ಮತ್ತು ಯಾವನು ಜಲದಲ್ಲಿ ಇರುವನೋ, ಹಾಗೆ ಯಾವ ದೇವನು ಈ ಚರಾಚರರೂಪವಾದ ವಿಶ್ವದಲ್ಲಿಯೂ ಇನ್ನೂ ಚತುರ್ದಶ ಭುವನದಲ್ಲಿಯೂ ಪ್ರವೇಶಗೊಂಡಿರುವನೋ ಎಂದು॥ಹಾಗೆ ಎಲೈ ಶಿಷ್ಯನೇ ! ಯಾವ ಪರಮಾತ್ಮನು (ಅವ್ಯಕ್ತವಪುಃ) ಅಂದರೆ.—ಅವ್ಯಕ್ತಸ್ವರೂಪನೋ, ಅಂದರೆ ಸ್ಥೂಲಶರೀರಾದಿ ವ್ಯಕ್ತಿಯಿಂದ ರಹಿತನಾಗಿರುವನೋ, ಹಾಗೆ ಮುಂಡಕೋಪನಿಷತ್ತಿನಲ್ಲಿಯೂ ಬರೆಯಲ್ಪಟ್ಟಿರುವದು. “ ದಿವ್ಯೋಹ್ಯಮೂರ್ತಃಪುರುಷಃ ಸಬಾಹ್ಯಾಭ್ಯಂತರೋಹ್ಯಜಃ ,, ಅರ್ಥ॥ ಆ ಪರಮಾತ್ಮರೂಪನಾದ ಪುರುಷನು ದಿವ್ಯನು. ಮತ್ತು ಅಮೂರ್ತ ಅಂದರೆ-ಮೂರ್ತಿಯಿಂದ ರಹಿತನಾದವನು. ಹಾಗೆ ಸರ್ವ ಜಗತ್ತಿನ ಹೊರಗೆ ಇನ್ನೂ ಒಳಗೆ ಸಹ ವ್ಯಾಪಕನಾಗಿಯೂ ಮತ್ತು ಅಜನ್ಮನಾಗಿರುವನು ಎಂದು॥ ಹಾಗೆ ಯಾವ ಪರಮಾತ್ಮನು(ಸ್ವಸಂಸ್ಥಿತಿಃ) ಅಂದರೆ. ಯಾವಾಗಲೂ ತನ್ನ ಸ್ವರೂ೧ಪದಲ್ಲೇ ಸ್ಥಿತನಾಗಿರತಕ್ಕವನೋ, ಈ ವಾರ್ತೆಯು ಛಾಂದೋಗ್ಯೋಪನಿಷತ್ತಿನಲ್ಲೂ ನಿರೂಪಿಸಲ್ಪಟ್ಟಿರುವದು. “ ಸಭಗವಃ ಕಸ್ಮಿನ್‌ಪ್ರತಿಷ್ಠಿತ ಇತಿಸ್ವೇಮಹಿಮ್ನಿ ಇತಿ ,, ಅರ್ಥ॥ ನಾ

---

೧. ಅಂದರೆ, ಯಾವ ಎರಡನೇದರ ಆಶ್ರಯವು ಇಲ್ಲದವನಾಗಿರುವನು.

ರದಮುನಿಯು ಸನತ್ಕುಮಾರನಲ್ಲಿ ಪ್ರಶ್ನೆಯಂ ಮಾಡಿದ್ದೇನಂದರೆ,-ಎಲೈ ಭಗವಂತನೇ ! ಆ ಪರಮಾತ್ಮನು ಯಾವದರಲ್ಲಿ ಪ್ರತಿಷ್ಠಿತನಾಗಿರುವನು; ಅದಕ್ಕೆ ಸನತ್ಕುಮಾರನು ಹೇಳಿದ್ದೇನಂದರೆ,-ಅವನು ಯಾವಾಗಲೂ ತನ್ನ ಮಹಿಮೆ ಅಂದರೆ, ಸ್ವಭಾವದಲ್ಲಿಯೇ ಇರುತ್ತಿರುವನು, ಎರಡ[೧]ನೆಯಾವದರಲ್ಲಿಯೂ ಇಲ್ಲವೆಂದನು. ಹಾಗೆ (ಯಸ್ಮಾತ್ತರ್ನಾಯೊ) ಅಂದರೆ,-ಯಾವನದು ಬ್ರಹ್ಮ-ಮತ್ತು ಮಹಾದೇವ, ಹಾಗೆ ವಿಷ್ಣು ಈ ಮೂರು ಮುಖ್ಯಮೂರ್ತಿಗಳಿರುವವೋ ಇಲ್ಲಿ ಬ್ರಹ್ಮ,ಮಹಾದೇವ,ಇನ್ನು ವಿಷ್ಣು ಈ ಸೂರ್ಯ ಹಾಗೆ ಶಕ್ತಿ ಮತ್ತು ಗಣೇಶ ಇವುಗಳಿಗೂ ಉಪಲಕ್ಷಣವಿರುವದು. ಯಾತಕ್ಕಂದರೆ,-ಸೂರ್ಯಾದಿಗಳಿಗೂ ವೇದದಲ್ಲಿ ಈಶ್ವರತ್ವವನ್ನು ಪ್ರಕಟಿಸಿರುವದು ಹ್ಯಾಗಾದರೂ ಪರಮಾತ್ಮನು ಸ್ವಭಾವದಿಂ ಸರ್ವಮೂರ್ತಿಗಳಿಲ್ಲದವನಾಗಿರುವನು. ಹಾಗಾದರೂ ಉಪಾಸಕಜನಗಳ ಅನುಗ್ರಹಾರ್ಥವಾಗಿ ಅವನ ಮಹಾದೇವಾದಿ ವ್ಯಕ್ತಿಗಳು ಸ್ವೇಚ್ಛೆಯಿಂದ ನಿರ್ಮಾಣವಾಗಿರುವವು. ಹಾಗೆ ಕೈವಲ್ಯೋಪನಿಷತ್ತಿನಲ್ಲಿ ಹೇಳಲ್ಪಟ್ಟಿರುವದು. “ಸಬ್ರಹ್ಮಾಸಶಿವಃಸೇಂದ್ರಃ ಸೋಽಕ್ಷರಃಪರಮಃಸ್ವರಾಟ್.” ಅರ್ಥ॥ ಅವನೇ ಬ್ರಹ್ಮನು, ಅವನೇ ಶಿವನು, ಅವನೇ ಇಂದ್ರನು, ಅವನೇ ಪರಮಾತ್ಮನು,ಅವಿನಾಶಿ ಮತ್ತು ಪರಮಸ್ವತಂತ್ರನು ಎಂದು॥ ಹಾಗೆ ಎಲೈ ಶಿಷ್ಯನೇ ! (ಸರ್ವೇಶ್ವರಂವೇದವಚಾಂಸಿಯಂಜಗುಃ) ಅಂದರೆ,-ಯಾವ ಪರಮಾತ್ಮನನ್ನು ವೇದವಾಕ್ಯಗಳು ಸರ್ವ ಜಗತ್ತಿನ ಈಶ್ವರನೆಂದು ಪ್ರಕಟಪಡಿಸುತ್ತಿರುವದೋ ಹಾಗೆಯಜುರ್ವೇದದ ಶ್ವೇತಾಶ್ವತರೋಪನಿಷತ್ತಿನಲ್ಲೂ ಹೇಳಿರುವದು. “ತಮೀಶ್ವರಾಣಾಂಪರಮಂಮಹೇಶ್ವರಂ,” ಅರ್ಥ॥ ಆ ಪರಮಾತ್ಮನು ಬ್ರಹ್ಮಾದಿಗಳಾದ ಈಶ್ವರರಿಗೂ ಮಹತ್ತಾದ ಈಶ್ವರನಾಗಿರುವನು ಎಂದು॥ಆದ್ದರಿಂದೆಲೈ (ಸನ್ಮತೆ) ಅಂದರೆ, ಶ್ರೇಷ್ಠಬುದ್ಧಿಯುಕ್ತ ಶಿಷ್ಯನೇ ! ಹೀಗೆ ಹೇಳಲ್ಪಟ್ಟ ವಿಶೇಷಣಗಳಿಂ ಯುಕ್ತನಾದ ಯಾವ ಪರಮಾತ್ಮನಿರುವನೋ ಅವನನ್ನು ನೀನು (ದೇವಾಧಿದೇವಂ) ಅಂದರೆ,-ಪೂಜಿಸುವದಕ್ಕೆ ಯೋಗ್ಯನಾದ ಸರ್ವ ದೇವತೆಗಳಿ

೧ ಜಗತ್ತಿನಲ್ಲಿ ಇಲ್ಲವೆಂದು ಅರ್ಥವಾಗುವದ್ದರಿಂದ ಸರ್ವವ್ಯಾಪಕ ಸರ್ವಾಂತರ್ಯಾಮಿ ಎಂಬ ವಾಕ್ಯಗಳಿಗೆ ಲೋಪ ಬರುವದು. ಆದ್ದರಿಂದ ಪೂರ್ಣದಲ್ಲಿ ಕಲ್ಪಿತದ್ವೈತವನ್ನು ನಿಷೇಧಿಸಿ ಇರುವರೆಂದು ತಿಳಿಯತಕ್ಕದು .

ಗಿಂತಲೂ ಪರಮ ದೇವನೆಂದು ತಿಳಿ. ಹಾಗೆ ಈ ವಾರ್ತೆಯೊಕೂಡೆ ಶ್ವೇತಾಶ್ವತರೋಪನಿಷತ್ತಿನಲ್ಲಿಯೇ ವರ್ಣಿಸಲ್ಪಟ್ಟಿರುವದು. "ತಂದೇವತಾನಾಂಪರಮಂಚದೈವತಂ" ಅರ್ಥ ॥ ಆ ಪರಮಾತ್ಮನು ಸರ್ವ ದೇವತೆಗಳಿಗೂ ಪರಮದೈವತನಾಗಿರುವನು ಎಂದು ತೀರ್ಮಾನವು॥೫೭॥

ಅ॥ ಈ ಪ್ರಕಾರವಾಗಿ ಶಿಷ್ಯನ ಪ್ರಥಮ ಪ್ರಶ್ನೆಯ ಉತ್ತರವಂ ನಿರೂಪಿಸಿ, ಈಗ ಆ ದೇವನ ಪೂಜೆಯು ಯಾವ ಪ್ರಕಾರದಿಂದಾಗುವದು, ಮತ್ತು ಅವನಂ ಪೂಜಿಸುವದ್ದರಿಂದ ಯಾವ ಫಲದ ಪ್ರಾಪ್ತಿಯಾಗುವದು, ಇಂತೆಂಬ ಯಾವ ಶಿಷ್ಯನ ಎರಡನೇ ಪ್ರಶ್ನೆ ಇರುವದೋ ಅದಕ್ಕೆ ಗುರು ಉತ್ತರವಂ ಪೇಳುತ್ತಾರೆ.

—ಗು ರು ರು ವಾ ಚ—

ನಪುಷ್ಪಮಾಲಾಭಿರಸೌನಚಂದನೈ ।
ರ್ನಧೂಪದೀಪಾದಿನಿವೇದನೈರಪಿ ॥
ಪ್ರಯಾತಿತೋಷಂತುಮನೋಂಬುಜಾರ್ಪಣಾತ್ ।
ತತೋಚಿರಂಮೋಕ್ಷಫಲಂಪ್ರಯಚ್ಛತಿ। ॥೫೮॥

ಟೀಕಾ ॥ ನಪುಷ್ಪಮಾಲಾದಿಭಿರಿತಿ—ಎಲೈ ಶಿಷ್ಯನೇ ! ಆ ಪರಮಾತ್ಮನಾದ ದೇವನು (ಪುಷ್ಪಮಾಲಾಭಿಃ) ಅಂದರೆ,-ನಾನಾಪ್ರಕಾರವಾದ ಪುಷ್ಪಗಳ ಹಾರಗಳನ್ನು ಸಮರ್ಪಣ ಮಾಡುವದ್ದರಿಂದಲೂ, ಹಾಗೆ (ನಚಂದನೈಃ) ಅಂದರೆ,-ಅನೇಕ ಪ್ರಕಾರವಾದ ಸುವಾಸನೆಗಳಿಂ ದೊಡಗೂಡಿದ ಚಂದನವನ್ನರ್ಪಿಸುವದ್ದರಿಂದಲೂ, ಹಾಗೆ (ನಧೂಪದೀಪಾದಿ) ಅಂದರೆ,-ನಾನಾಪ್ರಕಾರವಾದ ಧೂಪ ಮತ್ತು ದೀಪಗಳನ್ನು ನಿವೇದನ ಮಾಡುವದ್ದರಿಂದಲೂಕೂಡ (ತೋಷಂ) ಅಂದರೆ,-ಸಂತೋಷ೧ವಂ ಪೊಂದುವದಿಲ್ಲ. ಮತ್ತೇನಂದರೆ,-(ಮನೋಂಬುಜಾರ್ಪಣಾತ್) ಅಂದರೆ,-ಎಲೈ ಶಿಷ್ಯನೇ ! ರಾಗ೨ ದ್ವೇಷಾ೩ದಿ ಮಲಗಳಿಲ್ಲದ್ದರಿಂ ಶುದ್ಧವಾಗಿಯೂ, ಮತ್ತು ವಿವೇಕರೂಪವಾದ ಸೂರ್ಯಪ್ರಕಾಶದಿಂದ ಅರಳಲ್ಪಟ್ಟದ್ದಾಗಿಯೂ, ಹಾಗೆ ಪ್ರೇಮರೂಪವಾದ ಸುವಾಸನೆ

೧ ಪ್ರಸನ್ನತೆಗೆ ಪ್ರಾಪ್ತನಾಗುವದಿಲ್ಲ. ೨. ಕಾಮ-ಅಪೇಕ್ಷೆ. ೩. ದ್ವೇಷಾ ಅಂದರೆ ಕೋಪ-ಸಿಟ್ಟು-ಕ್ರೋಧ.

ಬಿಂದೊಡಗೂಡಿದ ಯಾವ ತನ್ನ ಚಿತ್ತರೂಪವಾದ ಒಂದು ಕಮಲವಿರುವದೋ ಅದನ್ನು ವಿಧಿ ೪ ಪೂರ್ವಕವಾಗಿ, ಅರ್ಪಣವಂ ಮಾಡುವದ್ದರಿಂದ ಆ ಪರಮಾತ್ಮನಾದ ದೇವನು ಶೀಘ್ರವಾಗಿ ಪ್ರಸನ್ನತ್ವವಂ ಪೊಂದುವನು. ಆದ್ದರಿಂದ ಎಲೈ ಶಿಷ್ಯನೇ! ನೀನು ಚಿತ್ತರೂಪವಾದ ಪುಷ್ಪದಿಂದಲೇ ಆ ದೇವನಂ ಪೂಜಿಸುವನಾಗು. ಹಾಗೆ ಶಂಕರಾಚಾರ್ಯರಿಂದಲೂ ಪೇಳಲ್ಪಟ್ಟಿರುವದು. "ಗಭೀರೆಕಾಸಾರೆ ವಿಶತಿವಿಜನೆಘೋರವಿಪಿನೆವಿಶಾಲೆಶೈಲೇಚಭ್ರಮತಿಕುಸುಮಾರ್ಥಂಜಡಮತಿಃ । ಸಮರ್ಪ್ಯೈಕಂಚೇತಃಸರಸಿಜಮುಮಾನಾಥಭವತೆಸುಖೆನ್ಯಾವಸ್ಥಾತುಂಜನ ಇಹನಜಾನಾತಿಕಿಮಹೊ" ಅರ್ಥ॥ ಎಲೈ ಉಮಾನಾಥನಾದ ಈಶ್ವರನೇ! ತಮಿಗೆ ಸಮರ್ಪಣವಂ ಮಾಡುವದಕ್ಕೆ ಯೋಗ್ಯವಾದ ಪುಷ್ಪಗಳಂ ಗ್ರಹಿಸತಕ್ಕೋಸುಗ ಅವಿವೇಕಿಯಾದ ಪುರುಷನು ನಿರ್ಜನವಾದ ವನದಲ್ಲೂ, ಮತ್ತು ಗಹನವಾದ ಸರೋವರಗಳಲ್ಲೂ, ಪ್ರವೇಶ ಮಾಡುತ್ತಿರುವನು. ಹಾಗೆ ವಿಕಟವಾದ ಪರ್ವತದಮೇಲೂ ಹತ್ತುತ್ತಿರುವನು. ಮುಖ್ಯವಾಗಿ ತನ್ನ ಸಮಾಪದಲ್ಲೇ ಇರುವ ಯಾವ ಚಿತ್ತರೂಪವಾದ ಸುಂದರ ಕಮಲವುಂಟೋ ಅದನ್ನು ಅನಾಯಾಸವಾಗಿ ತಮ್ಮಲ್ಲಿ ಅರ್ಪಣವಂ ಮಾಡಿ ಸುಖದಿಂದಿರಲಾಗುವದಿಲ್ಲವೇ? ಇದು ಮಹದಾಶ್ಚರ್ಯವಾದ ವಾರ್ತೆಯಾಗಿರುವದು ಎಂದು॥ ಹಾಗೆ ಯೋಗವಾಸಿಷ್ಠದ ನಿರ್ವಾಣಪ್ರಕರಣದಲ್ಲಿ ವಶಿಷ್ಠಮುನಿಯಂ ಕುರಿತು ಮಹಾ ದೇವನೂ "ಧ್ಯಾನೊಪಹಾರವಿವಾತ್ಮಾಧ್ಯಾನಮಸ್ಯಮಹಾರ್ಚನಂ । ವಿನಾತೇನೆತರೇಣಾಯ ಮಾತ್ಮಾಲಭ್ಯತೆಪವನೊ" ಅರ್ಥ॥ ಎಲೈ ವಶಿಷ್ಠನೇ! ಈ ಪರಮಾತ್ಮನಾದ ದೇವನ ಧ್ಯಾನವೇ ಪರಮ ಉಪಹಾರ-ಅಂದರೆ, ಪೂಜೆಯ ಸಾಮಗ್ರಿಯು ಮತ್ತು ಧ್ಯಾನವೇ ಇವನ ಪರಮ ಪೂಜೆಯಾಗಿರುವದು. ಯಾತಕ್ಕಂದರೆ,-ಧ್ಯಾನವಿನಃ ಈ ಆತ್ಮನ ಪ್ರಾಪ್ತಿಯಾಗುವದಿಲ್ಲವೆಂದು ಪೇಳಿರುವನು. ಆದಕಾರಣ ಎಲೈ ಶಿಷ್ಯನೆ ಈ ಪ್ರಕಾರವಾಗಿ ಚಿತ್ತರೂಪವಾದ ಪು

೪. ಇಲ್ಲಿ ವಿಧಿ ಎಂದರೆ ಕರ್ಮವೇದರ್ಥವಲ್ಲ. ಗುರುಕಟಾಕ್ಷದಿಂ ಸ್ವರೂಪಾನುಸಂಧಾನವನ್ನರಿತು ಚಿತ್ತವೃತ್ತಿಕೀಭಾವವನ್ನೈದಿಸುವ ಅಂತರ ಪ್ರಯತ್ನಕ್ಕೆ ವಿಧಿ ಎಂದು ಪೆಸರು.

ಷ್ಟವದ ಅರ್ಚಣ ರೂಪವಾದ ಪೂಜೆಯಿಂದ ಪ್ರಸನ್ನನಾಗಿ ಆ ಪರಮಾತ್ಮನಾದ ದೇವನು ಪೂಜೆಯಂ ಮಾಡುವಂಥಾ ಮುಮುಕ್ಷು ಪುರುಷನಿಗೆ, (ತತೋಚಿರಂ ಮೋಕ್ಷಫಲಂ ಪ್ರಯಚ್ಛತಿ) ಅಂದರೆ,-ಬಳಿಕ ಶೀಘ್ರವಾಗಿ ಜನ್ಮಮರಣ ರೂಪವಾದ, ಸಂಸಾರ ಬಂಧನದನಾಶದ್ವಾರಾ, ಕೈವಲ್ಯಮೋಕ್ಷದ ಪ್ರಾಪ್ತಿರೂಪವೆನಿಪ ಯಾವ ಫಲವುಂಟೊ, ಅದನ್ನು ಕೊಡುವನು. ಹಾಗೆ ಈ ವಾರ್ತೆಯನ್ನೂ ಭಗವದ್ಗೀತೆಯಲ್ಲಿ ಶ್ರೀಕೃಷ್ಣನೂವರ್ಣಿಸಿರುವನು. ತೇಷಾಂಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಂ॥ ದದಾಮಿ ಬುದ್ಧಿಯೋಗಂತಂಯೇನಮಾಮುಪಯಾಂತಿತೆ ,, ಅರ್ಥ- ಎಲೆ ಅರ್ಜುನ! ಯಾವ ಪುರುಷನು ನಿತ್ಯದಲ್ಲೂ, ಯುಕ್ತವಾದ ಪ್ರೀತಿ ಪೂರ್ವಕದಿಂದ ನನ್ನ ಆರಾಧನೆಯಂ ಮಾಡುವನೊ, ಅವನಿಗೆ ನಾನು ಅಂಥಾ ಜ್ಞಾನವಂ ಕೊಡುವೆನು. ಅದೇನಂದರೆ-ಯಾವದರಿಂದ ಅವನು ಶೀಘ್ರವಾಗಿ ನನ್ನ ಸ್ವರೂಪದಲ್ಲಿ ಬಂದು ಶೇರಿಕೊಳ್ಳುವನೊ. ಅಂಥಾ ಜ್ಞಾನವಂ ದಾಶಯುವು ॥೫೭॥

ಅ-ಈ ಪ್ರಕಾರವಾಗಿ ಪರಮಾತ್ಮನಾದ ದೇವನ ಸರ್ವೋತ್ಕೃಷ್ಟತೆಯನ್ನೂ ಅಂದರೆ-ಎಲ್ಲಾ ದೇವರುಗಳಿಗಿಂತಲೂ ಶ್ರೇಷ್ಟನೆಂಬುವದನ್ನೂ, ಮತ್ತು ಅವನ ಪೂಜೆಯ ವಿಧಾನವನ್ನೂ ಅನ್ನು ಕೈವಲ್ಯಮೋಕ್ಷರೂಪವಾದ ಫಲವನ್ನೂ ಸಹ, ಕೇಳಿ ಬಹು ಶೀಘ್ರಕಾರ್ಯಾಲೋಚನೆಯಂ ಪೊಂದಿದ ಶಿಷ್ಯನು ಈಗ ಆದೇವನ ನಿವಾಸ ಸ್ಥಾನವಂ ತಿಳಿಯಲೋಸುಗ, ಪ್ರಶ್ನೆಯಂ ಮಾಡುತ್ತಾನೆ.

ಶಿಷ್ಯ ಉವಾಚ

ಸ್ಥಲಂನಿವಾಸಸ್ಯಗುರೋಕ್ವವಿದ್ಯತೆ ।
ಸದೈವದೇವಸ್ಯಕಥಂಚಗಮ್ಯತೆ ।
ಕಥಂಭವೆತ್ತಸ್ಯಚದರ್ಶನಂದ್ರುತಂ ॥
ಬ್ರವೀತುಮೆತತ್ವದೃಶಾಂಮುಣಿರ್ಭವಾನ್ ॥೫೮॥

---

೫೭ ತತ್ವಮಸ್ಯಾದಿ ಮಹಾ ವಾಕ್ಯಗಳ ವಿಚಾರದಿಂದುಂಟಾಗುವ ಜೀವಬ್ರಹ್ಮೈಕ್ಯ ಜ್ಞಾನನೆಂದು ತಿಳಿಯತಕ್ಕದ್ದು.

ಟೀಕಾ—ಸ್ಥಲಮಿತಿ ॥ ಎಲೈ, (ತತ್ವದೃಶಾಂವುಣಿಃ) ಅಂದರೆ,-ಸರ್ವತತ್ವವೇತ್ತರಾದ ಪುರುಷರುಗಳಲ್ಲಿ ಮಣಿಯಂತೆ ಶ್ರೇಷ್ಠನಾದ ಗುರುವೆ ! ತಾವು ಯಾವದನ್ನು ಹೇಳಿದಿರೋ, ಅಂದರೆ,-ಆಪರಮಾತ್ಮನಾದ ದೇವನನ್ನು ಪೂಜಿಸಬೇಕೆಂದಪ್ಪಣೆ ಕೊಟ್ಟಿರಲ್ಲವೆ ? ಆದ್ದರಿಂದೆಲೈಭಗವಂತನೆ, (ಸ್ಥಲಂನಿವಾಸಸ್ಯ) ಅಂದರೆ,- ಆ ದೇವನು ಯಲ್ಲಾ ಕಾಲದಲ್ಲೂ ನಿವಾಸವಂ ಮಾಡುವಂಥಾ ಯಾವಸ್ಥಾನವಿರುವದೋ, ಅದನ್ನುಹೇಳಿದರೆ,-ಅಲ್ಲಿಗೆ ನಾನು ಹೋಗಿ, ಪೂಜಿಸುವೆನು. ಹಾಗೆ (ಕಥಂಚಗಮ್ಯತೆ) ಅಂದರೆ,-ಆಸ್ಥಾನದಲ್ಲಿ ಯಾವ ಪ್ರಕಾರದಿಂದ ಸೇರಲಾಗುವದೋ, ಹಾಗೆ ಸ್ಥಾನಧಲ್ಲಿ ಸೇರಿದರೂ ಪುನಃ ಆದೇವನ ದರ್ಶನವು ಯಾವ ಪ್ರಕಾರದಿಂದಾಗುವದೋ, ಆ ಈ ಸರ್ವ ವಿಷಯಗಳನ್ನು ಶೀಘ್ರವಾಗಿ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ॥೪೮॥

ಅ—ಈ ಪ್ರಕಾರದಿಂದ ಶಿಷ್ಯನ ಮೂರು ಪ್ರಶ್ನೆಗಳನ್ನು ಕೇಳಿದವರಾಗಿ ಈಗ ಗುರುವು, ಆ ಮೂರು ಪ್ರಶ್ನೆಗಳಿಗೂ ಒಂದೇ ಶ್ಲೋಕದಿಂದ ಉತ್ತರವಂ ನಿರೂಪಿಸುತ್ತಾರೆ.

—ಗುರು ರುವಾಚ—

ತಸ್ಯಸ್ಥಲಂಭೂಮಿಗತಂನಚಾಂಬರೆ ।
ಪಾತಾಲಗಂವಾಪಿಸದಾಹೃದಂಬುಜೆ ॥
ಜಾನೀಹಿತದ್ಧ್ಯಾಸಮುಪೇತ್ಯಚೇತಸಾ ।
ಪಶ್ಯಂತಿತಂದಿವ್ಯದೃಶಸ್ತುಯೋಗಿನಃ ॥೪೯॥

ಟೀಕಾ— ತಸ್ಯೇತಿ॥ ಎಲೈ ಶಿಷ್ಯನೆ! (ತಸ್ಯ) ಅಂದರೆ,- ಆದೇವನು ಇರುವಂಥಾಸ್ಥಾನವು (ಭೂಮಿಗತಂನ) ಅಂದರೆ,- ನಾನಾ ಪ್ರಕಾರವಾದ ಪರ್ವತ, ನದೀ, ಸಮುದ್ರಾದಿಗಳಿಂದ ಶೋಭಾಯಮಾನವಾಗಿ ಯಾವ ಈ ಪೃಥಿವೀ ಮಂಡಲವಿರುವದೋ, ಅದರಲ್ಲಿಯೂ ಇಲ್ಲ. ಮತ್ತು (ಅಂಬರೆ) ಅಂದರೆ,-ಯಾವ ಮೇಲಣ ಆಕಾಶದಲ್ಲಿ ಸ್ವರ್ಗ ಜನ ತಪಾದಿಯಾದ ಲೋಕಗಳಿರುವವೋ, ಅವುಗಳಲ್ಲಿಯೂ ಇಲ್ಲ. ಹಾಗೆ (ಪಾತಾಲಗಂ) ಅಂ

೧ ಶಾರೀರಕ ಚೈತನ್ಯವನ್ನೂ ಜಗದಾಧಿಷ್ಠಾನ ಚೈತನ್ಯವನ್ನೂ ಉಭಯವೂ ಒಂದೆಂದರಿತ ಜ್ಞಾನಿಗಳಲ್ಲಿ ರತ್ನ.

ದರೆ,-ಭೂಮಿಯ ಕೆಳಗೆ ಯಾವ ತಲ, ವಿತಲ, ತಲಾತಲಾದಿ ಲೋಕಗಳಿರುವವೋ, ಅಲ್ಲಿಯೂ ಇಲ್ಲ. ಮತ್ತೆಲ್ಲಿ ಎಂದರೆ,- (ಸದಾಹೃದಂಬುಜೆ) ಅಂದರೆ,-ಎಲೈ ಶಿಷ್ಯನೆ ಆದೇವನಂ ಸರ್ವದಾ ನೀನು ತನ್ನ ಹೃದಯಕಮಲದಲ್ಲಿಯೆ ನಿವಾಸವೆಂದು ತಿಳಿ, ಹಾಗೆ ಈ ವಾರ್ತೆಯು ಯಜುರ್ವೇದದ ಮಂತ್ರಭಾಗದಲ್ಲಿಯೂ ನಿರೂಪಿಸಲ್ಪಟ್ಟಿರುವದು. “ ಸಹಸ್ರ ಶೀರ್ಷಾಪುರುಷಃಸಹಸ್ರಾಕ್ಷಃಸಹಸ್ರಪಾತ್|ಸಭೂಮಿಂವಿಶ್ವತೋವೃತ್ವಾತ್ಯತಿಷ್ಠದ್ದಶಾಂಗುಲಮ್ ,, ಅರ್ಥ-ಆಪರಮಾತ್ಮರೂಪನಾದ ಪುರುಷನಿಗೆ ಅನೇಕ ಶಿರಗಳು ಮತ್ತು ಅನೇಕ ಚಕ್ಷುಗಳು ಇನ್ನೂ ಅನೇಕ ಪಾದಗಳೂ ಇರುವವು. ಅವನು ತನ್ನ ಸ್ವರೂಪದಿಂದ ಸರ್ವಪೃಥಿವೀ ಅಂದರೆ, ಬ್ರಹ್ಮಾಂಡವನ್ನು ಎಲ್ಲಾ ಕಡೆಯಿಂದಲು ಆಚ್ಛಾದಿಸಿಕೊಂಡು ಬಳಿಕ ನಾಭಿಯಿಂದ ದಶಾಂಗುಲೋಪರಿಯಲ್ಲಿ ಯಾವ ಹೃದಯ ಕಮಲ ವಿರುವದೋ, ಅದರಲ್ಲಿ ಸ್ಥಿತನಾಗಿರುವನು. ಹಾಗೆ ಗೀತೆಯ ಹದಿನೈದನೆ ಅಧ್ಯಾಯದಲ್ಲೂ ಸರ್ವಸ್ಯಚಾಹಂಹೃದಿ ಸನ್ನಿವಿಷ್ಟೋ ಮತ್ತಃಸ್ಮೃತಿಜ್ಞಾನ ಮಪೋಹನಂ ಚ॥ ಅರ್ಥ-ಎಲೆ ಅರ್ಜುನಾ, ನಾನು ಸರ್ವಭೂತ ಪ್ರಾಣಿಗಳ ಹೃದಯದಲ್ಲಿ ಪ್ರವಿಷ್ಟನಾಗಿರುವೆನು ಮತ್ತು ನನ್ನಿಂದಲೇ ಸರ್ವಪ್ರಾಣಿಗಳಿಗೆ ಸರ್ವ ಪದಾರ್ಥಗಳ ಸ್ಮರಣೆಯು, ಜ್ಞಾನವು, ಮತ್ತು ತರ್ಕವು ಉತ್ಪನ್ನವಾಗುವವು ಎಂದು ಶ್ರೀಕೃಷ್ಣನು ನಿರೂಪಿಸಿರುವನು. ಇಲ್ಲಿ ಈ ರಹಸ್ಯವಿರುವದು. ಹ್ಯಾಗಾದರೂ ಸಾಮಾನ್ಯವಾಗಿ, ಆ ಪರಮಾತ್ಮನಾದ ದೇವನು, ಹೇಳಲ್ಪಟ್ಟ ಆಕಾಶ ಪಾತಾಲಾದಿಯಾದಎಲ್ಲಾ ಕಡೆಯಲ್ಲಿಯೂ ಪರಿಪೂರ್ಣನಾಗಿರುವನು. ಈ ವಾರ್ತೆಯು ಆದಿಯಲ್ಲೇ ವರ್ಣಿಸಿಕೊಂಡು ಬಂದಿರುವದು. ಹಾಗಾದರೂ ವಿಶೇಷದಿಂದವನು ಹೃದಯಕಮಲದಲ್ಲೇ ಚೇತನ ರೂಪದಿಂದ ಉಪಲ[೧]ಬ್ಧಿಯಾಗಿರುವನು. ಹ್ಯಾಗೆ ಸರ್ವವ್ಯಾಪಕನಾದ ಸೂರ್ಯನ ಪ್ರಕಾಶವು ವಿಶೇಷದಿಂದ ದರ್ಪಣದಲ್ಲಿ ಉಪಲಬ್ಧಿಯಾಗುವದೋ, ಹಾಗೆಂದು ತಿಳಿಯತಕ್ಕದ್ದು. ಆದ್ದರಿಂದ ಗುರುವು ಇಲ್ಲಿ ಆ ಪರಮಾತ್ಮನಿಗೆ ಹೃದಯ ಕಮಲವೆ ನಿವಾಸಸ್ಥಾನವೆಂದು ಶಿಷ್ಯನಂ ಕುರಿತು ನಿರೂಪಿಸಿರುವರು. ಈ ಪ್ರಕಾರವಾಗಿ ಪ್ರಥಮ ಪ್ರಶ್ನೆಗೆ ಉ

---

೧ ಹೊಂದಲ್ಪಡುವದಕ್ಕೆ ಉಪಲಬ್ಧಿ ಎಂದು ಹೆಸರು.

ತ್ತರವಂ ಪೇಳಿ ಈಗ ಆ ಸ್ಥಾನದಲ್ಲಿ) ಯಾವ ಪ್ರಕಾರದಿಂದ ಸೇರಲಾಗುವದೋ, ಎಂಬ ಈ ಯಾವ ಶಿಷ್ಯನ ದ್ವಿತೀಯಪ್ರಶ್ನೆಯುಂಟೋ, ಅದಕ್ಕೆ ಗುರು ಉತ್ತರವಂ ಪೇಳುತ್ತಾರೆ (ಉಪೇತ್ಯ ಚೇತಸಾ) ಅಂದರೆ-ಎಲೈ ಶಿಷ್ಯನೇ ! ಆಪರಮಾತ್ಮನಾದ ದೇವನ ಸ್ಥಾನದಲ್ಲಿ, ಚಿತ್ತವೃತ್ತಿರೂಪವಾದ ಪಾ೧ದಗಳಿಂದ ಸೇರಲಾಗುವದು. ಬೇರೆ ಯಾವ ಉಪಾಯದಿಂದಲೂ ಆಗದು ? ಯಾತಕ್ಕೆಂದರೆ,-ಯಜುರ್ವೇದದ ಕಠೋಪನಿಷತ್ತಿನಲ್ಲಿ ಬರೆಯಲ್ಪಟ್ಟಿರುವದು. ಯೇನಂದರೆ,-" ಮನಸೈವೇದಮಾಪ್ತವ್ಯಂನೇಹನಾನಾಸ್ತಿ ಕಿಂಚನ ,, ಅರ್ಧ—ಈ ಪರಮಾತ್ಮನಲ್ಲಿ ನಾನಾತ್ವವು ಯಾವದೂ ಇಲ್ಲ. ಆದಕಾರಣ ಕೇವಲ ಮನದಿಂದಲೇ ಇವನಂ ಹೊಂದಲು ಯೋಗ್ಯವು, ಎಂದು ಬರೆಯಲ್ಪಟ್ಟಿರುವದು. ಈ ಪ್ರಕಾರದಿಂದ ಎರಡನೆ ಪ್ರಶ್ನೆಯ ಉತ್ತರವಂ ಪೇಳಿ ಈಗ ಆದೇವನ ದರ್ಶನವು ಯಾವ ಪ್ರಕಾರದಿಂದಾಗುವದೋ, ಎಂಬ ಈ ಯಾವ ಶಿಷ್ಯನ ಮೂರನೆ ಪ್ರಶ್ನೆ ಇರುವದೋ,ಅದಕ್ಕೆ ಉತ್ತರವಂ ಪೇಳುತ್ತಾರೆ,-(ದಿವ್ಯ ದೃಶಸ್ತುಯೋಗಿನಃ) ಅಂದರೆ,-ಎಲೈ ಶಿಷ್ಯನೆ ಹಿಂದೆ ಹೇಳಲ್ಪಟ್ಟ ಪ್ರಕಾರವಾಗಿ ಚಿತ್ತವೃತ್ತಿರೂಪವಾದ ಪಾದಗಳಿಂದಅಲ್ಲಿ ಸೇರಿ ಆಪರಮಾತ್ಮನಾದ ದೇವನನ್ನು ದಿವ್ಯದೃಷ್ಟಿಯುಳ್ಳ ಯಾವ ಯೋಗೀ ಜನಗಳಿರುವರೋ, ಅವರು(ಪಶ್ಯಂತಿ) ಅಂದರೆ, ಸಮಾಧಿ ಕಾಲದಲ್ಲಿ ನೋಡುತ್ತಿರುವರು. ಎಂತಾದರೂ ಪರಮಾತ್ಮನು ರೂಪಾದಿಗಳಿಲ್ಲದವನಾದಕಾರಣ, ಅವನಂ ನೋಡುವದು ಅಸಂಭವವಾಗುವದು. ಆದಾಗ್ಯೂ ಈ ವಾರ್ತೆಯಲ್ಲಿ ಅನೇಕ ಶೃತಿಸ್ಮೃತಿಗಳು ಪ್ರಮಾಣವಾಗಿರುವದ್ದರಿಂದ ಅವಶ್ಯಕವಾಗಿ ಸಮಾಧಿಕಾಲದೊಳ್ ತಮ್ಮ ಹೃದಯ ಕಮಲದಲ್ಲಿ ಜ್ಯೋತಿರೂಪದಿಂದ ಯೋಗೀಜನಗಳು ಆ ಪರಮಾತ್ಮನ ದರ್ಶನವಂ ಮಾಡುವರು. ಹಾಗೆ ಯಜುರ್ವೇದದ ಮುಂಡಕೋಪನಿಷತ್ತಿನಲ್ಲು ಪೇಳಲ್ಪಟ್ಟಿರುವದು. " ತತಸ್ತುತಂ ಪಶ್ಯತೆ ನಿಷ್ಕ

---

೧ ಬಾಹ್ಯದಲ್ಲಿ ಯಾವದಾದರೊಂದು ಸ್ಥಾನವಂ ಸೇರಬೇಕಾದರೆ, ಎರಡು ಪಾದಗಳು ಹ್ಯಾಗೆಬೇಕೊ, ಹಾಗೆ ಆತ್ಮಸ್ಥಾನವಂ ಮುಟ್ಟಲು ವೃತ್ತಿಯು ವೃತ್ತಿಯೊಡನೆ ಚೇತನವು ಎರಡೂಬೇಕು. ಕೇವಲ ವೃತ್ತಿಮಾತ್ರವನ್ನೇ ಗ್ರಹಿಸಿದರೆ, ಸರಿಯಾಗಿ ಆತ್ಮಸ್ಥಾನವಂ ಮುಟ್ಟಲು ವೃತ್ತಿಗೆ ಎಚ್ಚರ ವಿಲ್ಲದ ರಿಂದ ಚೇತನವನ್ನು ಗ್ರಹಿಸಿಕೊಳ್ಳಬೇಕು, ಇದು ಗುರು ರಹಸ್ಯಕ್ಕೆ ಸೇರಿದ್ದಾಗಿರುವದು.

ಲಂಧ್ಯಾಯಮಾನಃ ,, ಅರ್ಥ—ಅದರ ಅನಂತರ ಧ್ಯಾನವಂ ಮಾಡುತ್ತಿರುವ ಯೋಗೀ ಪುರುಷನು ಆ ಪರಮಾತ್ಮನಂ ನೋಡಿರುವನು ಎಂದು. ಹಾಗೆ ಕಠೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. “ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತಚಕ್ಷುರಮೃತತ್ವಮಿಚ್ಛನ್ ,, ಅರ್ಥ—ಯಾವನಾನೊಬ್ಬ ಧೈರ್ಯವಂತನಾದ ಪುರುಷನು ಸರ್ವೇಂದ್ರಿಯಗಳನ್ನು ನಿರೋಧ ಪಡಿಸಿ ಮೋಕ್ಷ ಪದದ ಇಚ್ಛೆಯುಳ್ಳವನಾಗಿ, ಸಮಾಧಿ ಮಾರ್ಗದಿಂದ ಆ ಪ್ರತ್ಯಗಾತ್ಮನನ್ನು ನೋಡಿರುವನು ಎಂದು. ಹಾಗೆ ಶಾರೀರಕ ಸೂತ್ರದಲ್ಲಿ ವ್ಯಾಸರೂ ಸಹ ಹೇಳಿರುವರು. “ ಅಪಿಚಸಂರಾಧನೆ ಪ್ರತ್ಯಕ್ಷಾನುಮಾನಾಭ್ಯಾಮ್ ,, ಅರ್ಥ—ಸಮಾಧಿ ಕಾಲದಲ್ಲಿ ಯೋಗೀಪುರುಷನು ಆ ಪರಮಾತ್ಮನನ್ನು ಹೃದಯಾಕಾಶದಲ್ಲಿ ದರ್ಶನ ಮಾಡುತ್ತಿರುವನು ಎಂದೂ ಈ ವಿಷಯದಲ್ಲಿ ಅನೇಕ ಶ್ರುತಿಸ್ಮೃತಿಗಳ ಪ್ರಮಾಣ ವಿರುವವು ಎಂದೂ ಸೂತ್ರಾಭಿಪ್ರಾಯವು. ಹಾಗೆ ಮಹಾ ಭಾರತದೋಳ್ ಭೀಷ್ಮಸ್ತವರಾಜದಲ್ಲಿಯೂ ಹೇಳಲ್ಪಟ್ಟಿರುವದು. “ ಯಂವಿನಿದ್ರಾಜಿತಶ್ವಾಸಾಃ ಸಂತುಷ್ಟಾಃ ಸಂಯತೇಂದ್ರಿಯಾಃ । ಜ್ಯೋತಿಃಪಶ್ಯಂತಿಯುಂಜಾನಾಸ್ತಸ್ಮೈಯೋಗಾತ್ಮನೇನಮಃ ,, ಅರ್ಥ—ಯಾವನನ್ನು ನಿದ್ರೆಯಿಂದ ರಹಿತರಾಗಿಯೂ, ಮತ್ತು ಪ್ರಾಣಗಳ ಜಯವಂ ಮಾಡುವಂಥಾವರಾಗಿಯೂ ಹಾಗೆ ಸಂತುಷ್ಟ ಚಿತ್ತವುಳ್ಳವರಾಗಿಯೂ, ಇನ್ನು ಇಂದ್ರಿಯ ಜಯವುಳ್ಳ ಯೋಗೀಜನಗಳು ಸಮಾ[೧]ಧಿಕಾಲದಲ್ಲಿ ಜ್ಯೋತಿರೂಪದಿಂದ ನೋಡುತ್ತಿರುವರೋ, ಆ ಯೋಗಾತ್ಮರೂಪನಾದ ಭಗವಂತನಿಗೆ ನನ್ನ ನಮಸ್ಕಾರವಾಗಲೀಯೆಂದು॥ ಅಥವಾ ಯೋಗೀ ಶಬ್ದದಿಂದ ಇಲ್ಲಿ ಆತ್ಮಜ್ಞಾನಿಗಳನ್ನೂ ಗ್ರಹಿಸಿಕೊಳ್ಳಬೇಕು. ಯಾತಕ್ಕೆಂದರೆ.-ಅವರೂ ಕೂಡ ಶರೀರ ಇಂದ್ರಿಯ ಬುದ್ಧಿ ಆದಿಗಳಾದ ಸರ್ವ ಪ್ರಪಂಚದ ಬಾಧನದಿಂದ ಪರಮಾತ್ಮನಲ್ಲಿ ಕೂಡುತ್ತಿರುವರು. ಅಂದರೆ,-ಏಕೀಭಾವವಂ ಹೊಂದುತ್ತಿರುವರು. ಆದ್ದರಿಂದ ಅವರೂ ಯೋಗಿಗಳೆಂದು ಹೇಳಿಸಿಕೊಳ್ಳುವರು. ಅವರು ಹೃದಯಾಕಾಶದಲ್ಲಿರುವ ಬುದ್ಧಿವೃತ್ತಿಯಲ್ಲಿ ಪ್ರತಿಬಿಂಬಿತವಾದ

---

೧ ವೃತ್ತಿಲಯಾವಸ್ಥೆಯಲ್ಲಿ.

ಯಾವ ಚೇತನ ರೂಪನೆನಿಪ ಪರಮಾತ್ಮನಿರುವನೋ ಅವನನ್ನು ನೋ೪ಡುತ್ತಿರುವರು. ॥೫೯॥

ಅ॥ ಈ ಪ್ರಕಾರವಾಗಿ ಪೂರ್ವೋಕ್ತ ರೀತಿಯಿಂದ ಇಲ್ಲಿನ ಪರ್ಯಂತವು ಜಗತ್ತಿನ ಉತ್ಪತ್ತಿ ಸ್ಥಿತಿ ಪ್ರಳಯಾದಿದ್ವಾರಾ ತತ್ಪದಾರ್ಥವಾದ ಯಾವ ಈಶ್ವರನಿರುವನೋ ಅವನಂ ತಟಸ್ಥಲಕ್ಷಣಗಳಿಂದ ನಿರೂಪಣೆಯಂ ಮಾಡಿ, ಈಗ ಹನ್ನೆರಡು ಶ್ಲೋಕಗಳಿಂದ ತ್ವಂ ಪದಾರ್ಥವಾದ ಯಾವ ಜೀವ ನಿರುವನೋ ಅವನ ವಿವೇಚನವಂ ಮಾಡುತ್ತಾರೆ. ಅಲ್ಲಿ ಪೂರ್ವೋಕ್ತಪ್ರಕಾರದಿಂದ ಬಾಹ್ಯವಿಷಯಕವಾದ ಪ್ರಶ್ನೆಗಳ ಸಮಾಧಾನವಂ ಕೇಳಿ, ಈಗ ಶಿಷ್ಯನು ಆಧ್ಯಾತ್ಮಿಕ ವಿಷಯವಾಗಿ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಅಹಂಶರೀರಂಕಿಮುತೇಂದ್ರಿಯಾಣಿವಾ ।
ಮನೋಥವಾಪ್ರಾಣಗಣೋಥವಾಮತಿಃ ॥
ಅಥೋಕಿಮೇಷಾಂಚಸಮುಚ್ಚಯೋಸ್ಮಿಕಿಂ ।
ತತ್ರಃಪೃಥಗ್ವಾತ್ಮವಿದಾಂಶಿರೋಮಣೇ॥ ॥೬೦॥

ಟೀಕಾ॥ ಅಹಮಿತಿ—ಎಲೈ (ಆತ್ಮವಿದಾಂಶಿರೋಮಣೇ) ಅಂದರೆ,-ಸರ್ವ ಆತ್ಮ ತತ್ವವನ್ನು ತಿಳಿದಂಥಾ ಪುರುಷರುಗಳಲ್ಲಿ ಶಿರೋಮಣಿ ರೂಪನಾದ ಗುರುವೇ! ಈ ಯಾವ ಅನ್ನಮಯ ಕೋಶರೂಪವಾದ ಸ್ಥೂಲ ಶರೀರವಿರುವದೋ ಅದೇ ನಾನೋ ಅಲ್ಲದೆ (ಇಂದ್ರಿಯಾಣಿ) ಅಂದರೆ,-ಶ್ರೋತ್ರ ಚಕ್ಷುವಾದಿಯಾದ ಯಾವ ದಶ ಇಂದ್ರಿಯಗಳಿರುವವೋ ಅವೇ ನಾನೋ-ಅಥವಾ ಸಂಕಲ್ಪ ವಿಕಲ್ಪಾತ್ಮಕವಾದ ಯಾವ ಮನವಿರುವದೋ ಅದೇ ನಾನೋ ಅಲ್ಲದೆ ಪ್ರಾಣಾಪಾನಾದಿಯಾದ ಯಾವ ಪ್ರಾಣಗಳ ಸಮೂಹವಿರುವದೋ ಅದೇ ನಾನೋ ಅಥವಾ (ಮತಿಃ) ಅಂದರೆ,-ನಿಶ್ಚಯಾತ್ಮಕವಾದ ಯಾವ ಬುದ್ಧಿ ಯುಂಟೋ ಅದಾದರೂ ನಾನೋ ಅದೂ ಅಲ್ಲದಿದ್ದರೆ-ಈ ಸರ್ವ ಶರೀರೇಂದ್ರಿಯಾದಿಗಳ ಯಾವ (ಸಮು

೪. ಅಂದರೆ-(ತತ್ವಮಸಿ) ಇತ್ಯಾದಿ ಮಹಾ ವಾಕ್ಯಗಳ ವಿಚಾರದಿಂ ಪುಟ್ಟಿದ ವೃತ್ತಿವ್ಯಾಪ್ತಿಯಿಂದ ಅದರ ಸಾಕ್ಷಾತ್ತನುಭವವಂ ಮಾಡಿಕೊಳ್ಳುವರು.

ಚ್ಛಯಃ) ಅಂದರೆ,-ಸಮೂಹ ವಿರುವದೋ ಅದೇ ನಾನೋ ಅಥವಾ (ತತಃಪೃಥಕ್) ಅಂದರೆ,-ಇವುಗಳೆಲ್ಲಕ್ಕಿಂತಲೂ ಯಾವ ಭಿನ್ನವಸ್ತುವು ನಾನಾಗಿರುವೆನೋ ಆ ಈ ಸರ್ವ ವಾರ್ತೆಗಳನ್ನು ಕೃಪೆಯಿಂದ ನನ್ನಂ ಕುರಿತು ನಿರೂಪಿಸಬೇಕು ಎಂದನು. ... ||೬೦||

ಅ|| ಈ ಪ್ರಕಾರದಿಂದ ಶಿಷ್ಯನ ಪ್ರಶ್ನೆಗಳನ್ನು ಕೇಳಿ,ಈ ಗಗುರುವು ಆ ಪ್ರಶ್ನೆಗಳ ಪ್ರಥಮ ಆರು ವಿಕಲ್ಪಗಳನ್ನು ನಿಷೇಧಪಡಿಸುತ್ತಾ ಅಂತ್ಯ ವಿಕಲ್ಪವನ್ನಂಗೀಕರಿಸಿ ಉತ್ತರವಂ ಹೇಳುತ್ತಾರೆ.

—ಗುರುರುವಾಚ—

ಶರೀರಮೇತನ್ನ ತಥೇಂದ್ರಿಯಾಣ್ಯಪಿ |
ಮನೋಪಿನೋಪ್ರಾಣಗಣೋಪಿನೋಮತಿಃ ||
ನಚಾಪಿಧೀಮನ್ನಪಿತತ್ಸಮುಚ್ಚಯ |
ಸ್ತತೋನ್ಯಮಾತ್ಮಾನಮವೇಹಿಸಾಕ್ಷಿಣಮ್ ||೬೧||

ಟೀಕಾ|| ಶರೀರಮಿತಿ—ಎಲೈ ಶಿಷ್ಯನೇ! (ಶರೀರಮೇ ತನ್ನ) ಅಂದರೆ,-ಈ ಯಾವ ಅನ್ನಮಯ ಕೋಶರೂಪವಾದ ಸ್ಥೂಲಶರೀರವಿರುವದೋ ಅದು ನೀನಲ್ಲ. ಯಾತಕ್ಕಂದರೆ,-ಈ ನಿಯಮ ವಿರುವದು. ಅದೇನಂದರೆ-ಹ್ಯಾಗೆ ಕಾರಣ ವಿರುವದೋ ಹಾಗೆಯೇ ಕಾರ್ಯವಾಗುವದು. ಅದು ಮಾತಾಪಿತೃಗಳ ರಜೋವೀರ್ಯ ಮತ್ತು ಅನ್ನದುಗ್ಧಾದಿ ಜಡಪದಾರ್ಥಗಳ ಕಾರ್ಯವಾದ್ದರಿಂದ ಈ ಶರೀರವೂ ಸ್ವತಃ ಜಡವೇ ಆಗಿರುವದು. ಈ ಕಾರಣದಿಂದ ಇದು ನಿನ್ನ ಸ್ವರೂಪವಾಗಿ ಸಂಭವಿಸಲಾರದು. ಮತ್ತು ಈ ಶರೀರವು ಉತ್ಪತ್ತಿಗೆ ಪೂರ್ವ ವಿರಲಿಲ್ಲ. ಇನ್ನು ಪುನಃ ಮರಣವಾದನಂತರ ಇರುವದಿಲ್ಲ. ಆದ್ದರಿಂದ ಅನಿತ್ಯವಾಗಿರುವದು. ಮತ್ತು ಯಾವ ಈ ಶರೀರವೇ ನಿನ್ನ ಸ್ವರೂಪವಾಗುವದಾದರೆ, ಈ ಜನ್ಮಕ್ಕೆ ಮೊದಲು ನಿನ್ನ ಅಭಾವವಾಗುವದರಿಂದ ಶುಭಾಶುಭ ಕರ್ಮಗಳೂಕೂಡ ಅಭಾವವೇ ಆದೀತು? ಹಾಗಾದಬಳಿಕ ಈ ಜನ್ಮದಲ್ಲಿ ಯಾವ ಸುಖದುಃಖಗಳ ಭೋಗವಾಗುವದೋ ಅದು ಯಾವ ಕರ್ಮಗಳ ಫಲವಾಗುವದು? ಮತ್ತು ಯಾವದನ್ನು ನೀನು ಹೇಳುವೆಯೋ ಅಂದರೆ-ಅದು ಈ ಜನ್ಮದ ಕರ್ಮಗಳ ಫಲವಾಗುವದು ಎಂದರೆ-ಈ ವಾರ್ತೆಯು

ಸಂಭವಿಸುವದಿಲ್ಲ. ಯಾತಕ್ಕೆಂದರೆ,-ಈ ವಿಷಯವು ಲೋಕದೊಳ್ ನೋಡುವಲ್ಲಿ ಕಾಣ್ಬರುವದಿಲ್ಲ. ಯಾಕೆಂದರೆ,-ಯಾವ ಈಗಲೇ ಕರ್ಮ ಮಾಡಿದರೆ, ಮತ್ತು ಈಗಲೇ ಅದರ ಫಲ ಪ್ರಾಪ್ತವಾಗುವದು, ಹ್ಯಾಗಾದರೂ ಕೆಲವು ಅತಿ ಉಗ್ರ ಕರ್ಮಗಳ ಫಲ, ಈ ಜನ್ಮದಲ್ಲಿಯೂ ಆಗುವದು ಆದಾಗ್ಯೂ ಎಲ್ಲಾ ಕರ್ಮಗಳದೂ ಅಲ್ಲ ಹಾಗಾದರೆ ಧರ್ಮಾತ್ಮ ಪುರುಷರಿಗೆ ಕ್ಲೇಶವು ಮತ್ತು ಪಾಪಾತ್ಮ ಪುರುಷರಿಗೆ ಸುಖಭೋಗವು ನೋಡುವಲ್ಲಿ ಕಾಣ್ಬರುತ್ತಿರುವದು ಹ್ಯಾಗಂದರೆ,-ಪಾಂಡವ ಮತ್ತು ದುರ್ಯೋಧನಾದಿಗಳಿದ್ದರು. ಆದ್ದರಿಂದ ಇದು ಸಿದ್ಧವಾಗಿರುವದೆಂದರೆ,- ಸರ್ವ ಕರ್ಮಗಳ ಫಲವು ಈ ಜನ್ಮದಲ್ಲಿ ಆಗುವದಿಲ್ಲ ಇಷ್ಟೇ ಅಲ್ಲ ಸರ್ವಭೂತ ಪ್ರಾಣಿಗಳೂ ಮರಣದಿಂದ ಅತ್ಯಂತ ಭಯವಂ ಪಡೆಯುತ್ತಿರುವರು. ಹಾಗೆ ಅವರುಗಳು ಆ ಮರಣಕಾಲದ ದುಃಖವನ್ನು ಯಾವ ಕಾಲದಲ್ಲಿ ಅನುಭವ ಮಾಡಿದ್ದರು ? ಈಗಿನ ಜನ್ಮದಲ್ಲಿ ಮಾಡಲ್ಪಟ್ಟಿದ್ದೆಂದರೆ-ಆ ವಾರ್ತೆಯೂ ಅಸಂಭವವೆನಿಸುವದು. ಯಾತಕ್ಕೆಂದರೆ,-ಯಾವನಾದರು ಈ ಜನ್ಮದಲ್ಲಿ ಮರಣದುಃಖವನ್ನು ಅನುಭವ ಮಾಡಿರುವದಾದರೆ, ಅವನು ಪುನಃ ಜೀವದಿಂದ ಹ್ಯಾಗಿರುವನು ? ಮತ್ತು ಯಾವನಾನೊಬ್ಬನು ಇನ್ನೊಬ್ಬರಂ ನೋಡುವದ್ದರಿಂದಾಗಿರುವದೆಂದು ಹೇಳಿದರೆ ಅದು ವಿಶೇಷ ವಿಚಾರರಹಿತವಾದ ಯಾವ ಪಶು, ಪಕ್ಷಿ, ಕೀಟ, ಪತಂಗಾದಿಗಳಿರುವವೋ ಅವುಗಳಿಗೂ ಆಗದಿರಬೇಕಾಗುವದು. ಇನ್ನು ಇಗಿರುವದ್ದರಿಂದ ಹಿಂದಣ ಜನ್ಮದಲ್ಲಿ ಅದರ ಅನುಭವ ಮಾಡಲ್ಪಟ್ಟಿರುವದು ಇದು ಸಿದ್ಧವಾಗಿರುವದು. ಮತ್ತು ಜನ್ಮಿಸುತ್ತಲೇ ಬಾಲಕನು ತಾಯಿಯ ಸ್ತನವಂ ಭುಂಜಿಸುವನು. ಅದನ್ನವನಿಗೆ ಯಾವನು ತೋರಿಸಿರುವನು ? ಅಂದರೆ,-ಇದರಲ್ಲಿ ಹಾಲಿರುವದು, ಮತ್ತು ಇದು ನಿನ್ನ ಕ್ಷುಧಾಶಾಂತಿ ಮಾಡುವಂಥಾದ್ದಾಗಿರುವದು ಎಂದು ಮತ್ತು ಮರಣವಾದನಂತರ ಈ ಶರೀರದ ಅಭಾವವಾಗುವದು, ಆಗ ಈ ಲೋಕದಲ್ಲಿ ಮಾಡಿದ ಯಾವ ಶುಭಾಶುಭ ಕರ್ಮಗಳೋ ಅವುಗಳಿಗೆ ಭೋಗ ವಿನಃ ನಾಶವಾಗಿ ಹೋದೀತು, ಆಗ ಪರಲೋಕ ಸಂಬಂಧಿಯಾದ ಫಲವುಳ್ಳ ಯಜ್ಞಾದಿ ಕರ್ಮಗಳ ವಿಧಾನವಂ ಮಾಡುವಂಥಾವರು ಇನ್ನು ಯಾವ ವೇದಶಾಸ್ತ್ರಗಳಿರುವವೋ ಆ ಸರ್ವವೂ ವ್ಯರ್ಥವಾಗಿ ಹೋದೀತು ? ಆದ್ದರಿಂದ

ಎಲೈ ಶಿಷ್ಯನೇ! ಈ ಸ್ಥೂಲ ಶರೀರವು ೧ ನೀನಲ್ಲ. ಹಾಗೆ ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿಯೂ, ಬರೆಯಲ್ಪಟ್ಟಿರುವದು. "ಜೀವಾಪೇತಂವಾವಕಿಲೆದಂಮ್ರಿಯತೆ,, ನಜೀವೋಮ್ರಿಯತೆ,, ಅರ್ಥ|| ಜೀವದಿಂದ ರಹಿತವಾದ ಈ ಸ್ಥೂಲಶರೀರವು ಮರಣವಾಗುವದು, ಜೀವ ಮರಣವಾಗುವದಿಲ್ಲವೆಂದು. ಇದರಿಂದಲೂ ಸ್ಥೂಲಶರೀರದಿಂದ ಜೀವನು ಭಿನ್ನನೆಂದು ನಿಶ್ಚಯವಾಗುವದು. ಹಾಗೆ (ಇಂದ್ರಿಯಾಣ್ಯಪಿ) ಅಂದರೆ,-ಎಲೈ ಶಿಷ್ಯನೇ! ಈ ಯಾವ ಶಬ್ದಾದಿ ವಿಷಯಗಳ ಗ್ರಹಣವಂ ಮಾಡುವಂಥಾ ಚಕ್ಷುಶ್ಶ್ರೋತ್ರಾದಿ ಪಂಚ ಜ್ಞಾನೇಂದ್ರಿಯಗಳು ಮತ್ತು ಹಸ್ತ ಪಾದಾದಿ ಕರ್ಮೇಂದ್ರಿಯಗಳಿರುವವೋ ಅವೂ ನೀನಲ್ಲ, ಯಾತಕ್ಕಂದರೆ,-ಪಂಚಮಹಾ ಭೂತಗಳ ಸತ್ವ ಮತ್ತು ರಜೋಗುಣಗಳ ಕಾರ್ಯವಾದ್ದರಿಂದ ಅವೂ ಶರೀರದಂತೆ ಸ್ವತಃ ಜಡರೂಪವೇ ಆಗಿರುವವು ಆದ್ದರಿಂದ ಅವೂ ನಿನ್ನ ಸ್ವರೂಪವಾಗಿ ಸಂಭವಿಸುವದಿಲ್ಲ. ಮತ್ತು ಯಾವ ಇಂದ್ರಿಯಗಳೇ ಜೀವನಸ್ವರೂಪವಾಗುವದಾದರೆ, ಯಾವ ಪುರುಷನು ಅಂಧ ೨ ನಾಗಿಯೂ, ಬಧಿ ೩ ರನಾಗಿಯೂ, ಪಂ ೪ ಗುವಾಗಿಯೂ, ಇವೇ ಮೊದಲಾದ ಇಂದ್ರಿಯಗಳಿಂದ ಹೀನನಾಗಿರುವನೋ ಅವನ ಜೀವನವು ಯಾವ ಪ್ರಕಾರದಿಂದಾಗುವದು? ಇನ್ನೂ ಅವನು ಅನ್ಯ ಪುರುಷರಹಾಗೆ ನಡೆಯುತ್ತಾ, ತಿರುಗುತ್ತಾ, ತಿನ್ನುತ್ತಾ, ಕುಡಿಯುತ್ತಾ ವ್ಯವಹರಿಸುವಂಥಾದ್ದು ಕಾಣ್ಬರುತ್ತಿರುವದು ಆದ್ದರಿಂದ ಎಲೈ ಶಿಷ್ಯನೇ! ಈ ಹತ್ತು ಇಂದ್ರಿಯಗಳೂ ನೀನಲ್ಲ. ಹಾಗೆ ಸಾಮವೇದದ ಛಾಂದೋಗ್ಯೋಪನಿಷತ್ತಿನಲ್ಲಿಯೇ ಈ ಪ್ರಸಂಗ ಬರೆಯಲ್ಪಟ್ಟಿರುವದು. ಯೇನಂದರೆ,-ಒಂದು ಕಾಲದಲ್ಲಿ ಸರ್ವ ಇಂದ್ರಿಯಗಳು ಪರಸ್ಪರವಾಗಿ ವಿವಾದ ಮಾಡುತ್ತಿದ್ದವು. ಒಂದು ಹೇಳಿತು ನಾನು ಶ್ರೇಷ್ಠನು, ಮತ್ತೊಂದುಹೇಳಿತು ನಾನು ಶ್ರೇಷ್ಠನು, ಆಗ ಈ ವಾರ್ತೆಯ ನಿರ್ಣಯವಂ ಮಾಡಲೋಸುಗ ಆ ಸರ್ವವು ಬ್ರಹ್ಮನ ಬಳಿಗೆ ಹೋಗಿ ಹೇಳುತ್ತಿದ್ದವು. ಎಲೈ ಭಗವಂತನೇ, ನಮ್ಮಗಳಲ್ಲಿ ಯಾರು ಶ್ರೇಷ್ಠರು, ಆಗ ಬ್ರಹ್ಮನು ಹೇಳಿದನು. ಯಾರ ವಿನಃ ಶರೀರಸ್ಥಿತಿ ಇರಲಾರದೋ ಅವರೇ ನಿಮ್ಮಲ್ಲಿ

---

೧. ಇದರಿಂದ ದೇಹಾತ್ಮವಾದಿಯಾದ ಚಾರ್ವಾಕನ ಮತವನ್ನು ನಿರಾಕರಿಸಿದರೆಂದು ತಿಳಿಯತಕ್ಕದ್ದು. ೨. ಕುರುಡ, ೩. ಕಿವುಡ, ೪. ಕುಂಟ.

ಶ್ರೇಷ್ಠರೆಂದು ತಿಳಿಯಿರಿ, ಆಗ ಈ ವಾಕ್ಯವನ್ನು ಕೇಳಿ, ಅವುಗಳಲ್ಲಿ ಪ್ರಥಮ ವಾಗಿಂದ್ರಿಯವು ಶರೀರದಿಂ ಹೊರಗೆ ಹೊರಟು ಒಂದು ವರ್ಷದ ಹಿಂದೆ ಬಂದು ಹೇಳುತ್ತಿದ್ದದು. ನನ್ನ ವಿನಃ ನೀವು ಹ್ಯಾಗೆ ಜೀವಿಸುತ್ತಿದ್ದಿರಿ ? ಅದಕ್ಕೆ ಮತ್ತೊಂದು ಇಂದ್ರಿಯವು ಹೇಳಿದ್ದೇನಂದರೆ,— ಹ್ಯಾಗೆ ಮೂಗ ಪುರುಷನು ಅನ್ನಪಾನಾದಿ ವ್ಯವಹಾರ ನಡಿಸುತ್ತಾ ಜೀವಿಸುತ್ತಿರುವನೋ ಹಾಗೆಯೇ ನಾವೂಕೂಡ ಜೀವಿಸುತ್ತಿದ್ದವು. ಈ ಪ್ರಕಾರದಿಂದ ಚಕ್ಷುಃ ಶ್ರೋತ್ರಾದಿಯಾದ ಸರ್ವೇಂದ್ರಿಯಗಳೂ ಹೊರಗೆ ಹೊರಟು ವ ೫ ರ್ಷವರ್ಷದ ಹಿಂದೆ ಬರುತ್ತಿದ್ದವು. ಆದಾಗ್ಯೂ ಶರೀರವು ಪತಿತವಾಗಲಿಲ್ಲ. ಮತ್ತು ಯಾವಾಗ ಪ್ರಾಣಗಳ ಸಹಿತವಾಗಿ ಜೀವಾತ್ಮನು ಹೊರಡಲಿಚ್ಛಿಸಿದನೋ ಆಗ ಆ ಸರ್ವ ಇಂದ್ರಿಯಗಳೂ ವ್ಯಾಕುಲಪಡುತ್ತಿದ್ದವು. ಬಳಿಕ ಶರೀರವೂ ಪತಿ ೬ ತವಾಗಬೇಕಾಯಿತು, ಆ ಬಳಿಕ ಆ ಸರ್ವ ಇಂದ್ರಿಯಗಳೂ ಪ್ರಾರ್ಥನೆ ಮಾಡಲಾಗಿ, ಪ್ರಾಣಸಹಿತ ಜೀವಾತ್ಮನಿದ್ದದ್ದರಿಂದ, ಶರೀರದ ಸ್ಥಿತಿಯಾಗುತ್ತಿದ್ದದು. ಮತ್ತು ಎಲೈ ಶಿಷ್ಯನೇ, ಇದು ನನ್ನ ಶ್ರೋತ್ರವು, ಇನ್ನು ಇದು ನನ್ನ ನೇತ್ರವು ಮತ್ತು ಇದು ನನ್ನ ಹಸ್ತವು ಹಾಗೆ ಇದು ನನ್ನ ಪಾದವು ಎಂಬ ಈ ಪ್ರಕಾರವಾಗಿ ಸರ್ವೇಂದ್ರಿಯಗಳನ್ನು ಭಿನ್ನಭಿನ್ನ ಮಾಡಿ ನೀನು ತಿಳಿಯುತ್ತಲಿದ್ದೀಯೆ ? ಮತ್ತು ಯಾವನು ಯಾವ ವಸ್ತುವನ್ನು ತಿಳಿಯುವನೋ ಅವನು ಅವಶ್ಯವಾಗಿ ಅದಕ್ಕೆ ಭಿ ೭ ನ್ನನಾಗಿರುವನು ಆದ್ದರಿಂದಲೂ ಈ ದಶ ಇಂ ೮ ದ್ರಿಯಗಳೂ ನೀನಲ್ಲ. ಹಾಗೆ ಎಲೈ ಶಿಷ್ಯನೇ ! (ಮನೋಪಿನೊ) ಅಂದರೆ,-ಸಂಕಲ್ಪ ವಿಕಲ್ಪಾತ್ಮಕವಾದ ಯಾವ ಈ ಚಂಚಲ ಮನಸ್ಸಿರುವದೋ ಅದೂ ನೀನಲ್ಲ. ಯಾತಕ್ಕೆಂದರೆ,-ಪಂಚಮಹಾಭೂತಗಳ ಸತ್ವಾಂಶ ಕಾರ್ಯವಾದ್ದರಿಂದ, ಮನವೂ ಸ್ವತಃಜಡವಾಗಿರುವದು. ಹಾಗೆ ಯಾವ ಕಾಲದಲ್ಲಿ ತಮೋ ಗುಣದ ಅಧಿಕತೆ ಯಾ

---

೫ ಒಂದರಹಿಂದೊಂದು. ೬ ಬೀಳಬೇಕಾಗಿ ಬಂತು ೭ ಘಟಪಟಾದಿಗಳನ್ನು ತಿಳಿಯುವ ಪುರುಷನು ಅವುಗಳಿಗಿಂತಲೂ ಬೇರೆಯಾಗಿರುವಂತ ಇಂದ್ರಿಯಗಳನ್ನು ತಿಳಿಯುವ ಆತ್ಮನು ಬೇರೆಯಾಗಿರುವನು. ೮ ಈ ನಿರೂಪಣೆಯಿಂದ ಇಂದ್ರಿಯಾತ್ಮವಾದಿ ಯಾದ ಲೋಕಾಯತನ (ನಿರೀಶ್ವರವಾದಿಯ) ಮತವನ್ನು ತಳ್ಳಿದರೆಂದು ತಿಳಿಯತಕ್ಕದ್ದು.

ಗುವದೋ ಆಗ ತಂ ೯ ದ್ರಾ, ಭ್ರಾಂ ೧೦ ತಿ, ನಿ ೧೧ ದ್ರೆ, ಆಲ ೧೨ ಸ್ಯ, ಇತ್ಯಾದಿ ಮನದ ವೃತ್ತಿಗಳಾಗುತ್ತಿರುವವು. ಮತ್ತು ಯಾವ ಕಾಲದಲ್ಲಿ ರಜೋಗುಣದ ಆಧಿಕ್ಯವಾಗುವದೋ, ಆಗ ಭೋಗದ ಇಚ್ಛೆಯೂ ಮತ್ತು ಐಶ್ವರ್ಯದ ಇಚ್ಛೆಯೂ, ಇನ್ನು ಕರ್ಮವಮಾಡುವದರಲ್ಲಿ ಉತ್ಸಾಹವೂ, ಹಾಗೆ ಸ್ತ್ರೀಯಾದಿ ವಿಷಯಗಳಲ್ಲಿ ರಾಗವೂ ಇವೇ ಆದಿಯಾದ ಮನದ ವೃತ್ತಿಗಳಾಗುತ್ತಿರುವವು. ಮತ್ತು ಯಾವ ಕಾಲದಲ್ಲಿ ಸತ್ವ ಗುಣದ ಅಭಿವೃದ್ಧಿಯಾಗುವದೋ ಆಗಶಾಂತಿ ವಿರಾಗ ಧರ್ಮ ರು ೧೩ ಚಿ ಪ್ರಸನ್ನ ೧೪ ತೆ ಇತ್ಯಾದಿ ಮನದ ವೃತ್ತಿಗಳಾಗುತ್ತಿರುವವು. ಆದ್ದರಿಂದೀ ಪ್ರಕಾರವಾಗಿ ಮನಸ್ಸಿಗೆ ಪ್ರತಿಕ್ಷಣವೂ ವಿಕಾರವಾಗುವದ್ದರಿಂದ ಆತ್ಮತ್ವವು ಸಂಭವಿಸುವದಿಲ್ಲ. ಯಾತಕ್ಕಂದರೆ,-ಅನೇಕ ಶೃತಿಸ್ಮೃತಿಗಳಲ್ಲಿ ಆತ್ಮನನ್ನು ನಿರ್ವಿಕಾರನೆಂದು ಪ್ರತಿಪಾದನ ಮಾಡಿರುವವು. ಮತ್ತು ಈನಿಯಮ ವಿರುವದು, ಯೇನಂದರೆ, ಯಾವದು ವಿಕಾರಿ ವಸ್ತುವಾಗುವದೋ ಅದಕ್ಕೆ ಅವಶ್ಯವಾಗಿ ಯಾವದಾನೊಂದು ಕಾಲದಲ್ಲಿ ನಾಶವೂ ಸಂಭವಿಸುವದು. ಹ್ಯಾಗೆ ಘಟಾದಿಗಳು ವಿಕಾರಿ ಯಾದ್ದರಿಂದ ನಾಶವಾಗುವವೊ ಹಾಗೆಂದು ತಿಳಿಯತಕ್ಕದ್ದು. ಮತ್ತು ಆತ್ಮನಾದರೋ ಅವಿನಾಶಿಯು ಇಷ್ಟೇ ಅಲ್ಲ. ಯಲ್ಲಿಯವರಿವಿಗೂ ಮನಸ್ಸಿನ ಶುಭಾಶುಭ ವೃತ್ತಿಗಳಿರುವವೋ ಆ ಸರ್ವವನ್ನು ಅಖಂಡಿತನಾಗಿ ಆತ್ಮನು ತಿಳಿದಿರುವನು. ಯಾವಾಗ ಆತ್ಮನೂ ವಿಕಾರಿಯಾಗುವನೋ ಆಗ ಯಾವಾಗಲೂ ತಿಳಿಯುವದು ಯಾವಾಗಲೂ ತಿಳಿಯದಿರುವದು ಆಗುವದು. ಆದ್ದರಿಂದಲೂ ಆತ್ಮನು ನಿರ್ವಿಕಾರನೆಂಬುವದು ಸಿದ್ಧವಾಗಿರುವದು. ಇನ್ನು ಮನವಾದರೋ ತನ್ನ ಘಟಪಟಾದಿ ವಿಷಯಗಳನ್ನು ಒಂದುವೇಳೆ ತಿಳಿಯುವದು ಮತ್ತೊಂದು ವೇಳೆ ತಿಳಿಯದಿರುವದು ಆಗಿರುವದು ಆದ್ದರಿಂದ ವಿಕಾರಿ ಎಂಬುವದು ಸಿದ್ಧವಾಗಿರುವದು. ಆದಕಾರಣ ಎಲೈಶಿಷ್ಯನೇ! ಮನ ೧೫ ವೂ ನೀನಲ್ಲ. ಹಾಗೆ ಎಲೈ ಶಿಷ್ಯನೆ, (ಪ್ರಾಣೋಪಿನೊ) ಅಂದರೆ,-ಈ ಯಾವ ಮುಖ

---

೯ ಮೂರ್ಛೆ ೧೦ ಒಂದರಲ್ಲಿ ಮತ್ತೊಂದರ ಜ್ಞಾನ ೧೧ ಮೈಮರತಿರುವದು ೧೨ ಜಡವಾಗಿರುವದು ೧೩ ಶಾಂತಿ ೧೪ ಪ್ರಸನ್ನತೆ ಯೆಂದರೆ--ಸಂತೋಷ--ನಿರ್ಮಲ. ೧೫ ಇದರಿಂದ ಮನಾತ್ಮವಾದಿಯು (ನಾರದ ಪಾಂಚರಾತ್ರ) ಮತವನ್ನು ನಿಷೇಧಿಸಿರುವರೆಂದು ತಿಳಿಯುತಕ್ಕದ್ದು.

ನಾಸಿಕಾದಿ ದ್ವಾರಗಳಲ್ಲಿ ಇದ್ದುಕೊಂಡು, ಅನ್ನ ಜಲಾದಿ ಭಕ್ಷಣವನ್ನು ಮತ್ತು ಪಚನಾದಿ ಕ್ರಿಯೆಗಳನ್ನು ಮಾಡುವಂಥಾ ಪ್ರಾಣ, ಅಪಾನ, ವ್ಯಾನ, ಸಮಾನ, ಉದಾನ, ನಾಗ, ಕೂರ್ಮ, ಕೃಕಲ, ದೇವದತ್ತ, ಧನಂಜಯ ವೆಂಬ ಈ ಭೇದದಿಂದ ಹತ್ತು ಪ್ರಕಾರವಾಗಿ ಶರೀರದಲ್ಲಿ ಪ್ರಾಣಸಮೂಹ ವಿರುವದೋ ಅದೂ ನೀನಲ್ಲ. ಯಾಕಂದರೆ,-ಪಂಚ ಮಹಾ ಭೂತಗಳ ರಜೋಂಶ ಕಾರ್ಯವಾದ್ದರಿಂದ ಪ್ರಾಣವೂ ಸ್ವತಃ ಜಡವೇ ಆಗಿರುವದು. ಮತ್ತು ಯಾವ ಕಾಲದಲ್ಲಿ ಪುರುಷನು ಶಯನವಂ ಮಾಡುವನೋ ಆಗ ಪ್ರಾಣವು ನಡಿಯುತ್ತಲೇ ಇರುವದು. ಆದರೂ ಆ ಕಾಲದಲ್ಲಿ ಆ ಪುರುಷನ ಸಮೀಪದಿಂದ ಯಾವದಾದರೂ ಧನಾದಿ ವಸ್ತುಗಳನ್ನು ಚೋರಾದಿಗಳು ಎತ್ತಿಕೊಂಡು ಹೋಗುತ್ತಿದ್ದರೆ ಆಗ ಯಾವ ಎಚ್ಚರವೂ ಇಲ್ಲದೆ ಇರುತ್ತಿರುವದು. ಯಾವ ಪ್ರಾಣವೇ ಚೇತನಾತ್ಮನಾದರೆ ಆಗ ಯಾತಕ್ಕೆ ತಿಳಿಯುವದಿಲ್ಲ. ಆದಕಾರಣ ಎಲೈ ಶಿಷ್ಯನೆ ಈ ಪ್ರಾಣ ೧೬ ಗಳ ಸಮೂಹವೂ ನೀನಲ್ಲ. ಹಾಗೆ (ನೂಮತಿಃ) ಅಂದರೆ,- ಎಲೈ ಶಿಷ್ಯನೆ ಶುಭಾಶುಭ ಕಾರ್ಯಗಳ ನಿಶ್ಚಯವಂ ಮಾಡುವಂಥಾ ಯಾವ ಈ ಬುದ್ಧಿ ಇರುವದೋ, ಅದೂ ನೀನಲ್ಲ. ಯಾತಕ್ಕಂದರೆ,-ಪಂಚಮಹಾ ಭೂತಗಳ ಸತ್ವಾಂಶ ಕಾರ್ಯವಾದ್ದರಿಂದ ಬುದ್ಧಿಯೂ ಸ್ವತಃ ಜಡವೇ ಆಗಿರುವದು. ಮತ್ತು ವಿಕಾರಿಯೂ ಆಗಿರುವದು. ಯೆಂತೆಂದರೆ,- ಜಾಗ್ರತ್ ಮತ್ತು ಸ್ವಪ್ನಾವಸ್ಥೆಯಲ್ಲಿ ಬುದ್ಧಿ ಇರುವದು ಇನ್ನು ಸುಷುಪ್ತಿ ಕಾಲದಲ್ಲಿ ಅದರ ವಿಲಯವಾಗುತ್ತಿರುವದು. ಆದ್ದರಿಂದೆಲೈ ಶಿಷ್ಯನೆ ಉತ್ಪತ್ತಿ ವಿನಾಶವುಳ್ಳದ್ದಾದ್ದರಿಂದ ಬು ೧೭ ದ್ಧಿಯೂ ನೀನಲ್ಲ ಹ್ಯಾಗಾದರೂ ಮನ ಮತ್ತು ಬುದ್ಧಿಗೆ ವಿಶೇಷವಾದ ಭೇದವಿಲ್ಲ. ಆದಾಗ್ಯು ಬುದ್ಧಿ ಸ್ವಾಮಿಯಂತೆ ಕರ್ತನಾಗಿರುವದು. ಮತ್ತು ಮನ ಅದಕ್ಕೆ ಭೃತ್ಯನಂತೆ ಕರ ೧೮ ಣವಾಗಿರುವದು. ಈ ಪ್ರಕಾರದಿಂದ ಇಲ್ಲಿ ಮನ ಮತ್ತು

೧೬ ಈ ನಿರೂಪಣೆಯಿಂದ ಪ್ರಾಣಾತ್ಮವಾದಿಯಾದ ಹಿರಣ್ಯ ಗರ್ಭೋಪಾಸಕನ ಮತವನ್ನು ನಿರಾಕರಿಸಿದರೆಂದು ತಿಳಿದುಕೊಳ್ಳತಕ್ಕದ್ದು ೧೭ ಈ ಕಥನದಿಂದ ವಿಜ್ಞಾನಾತ್ಮವಾದಿಯಾದ, ಬೌದ್ಧನ (ಬುದ್ಧನ ಶಿಷ್ಯನಾದ ಯೋಗಾಚಾರ್ಯನೆಂಬ ನಾಸ್ತಿಕನ) ಮತವನ್ನು ಕಳೆದಿರುವರೆಂದು ತಿಳಿಯತಕ್ಕದ್ದು ೧೮ ಕಾರ್ಯಗಳ ನಿಶ್ಚಯ ಮಾಡುವಲ್ಲಿ ಸಾಧನ ಭೂತವಾಗಿರುವದು.

ಬುದ್ಧಿಯುನ್ನು ಬೇರೆಬೇರೆಯಾಗಿ ವರ್ಣಿಸಲ್ಪಟ್ಟಿರುವದು. ಹಾಗೆ (ನಷಾ ಪಿಥೀವಮನ್ನಸಿತತ್ಸಮುಚ್ಚಯಃ) ಅಂದರೆ,- ಎಲೆ ಬುದ್ಧಿಶಾಲಿಯಾದ ಶಿಷ್ಯನೇ ! ಆ ಶರೀರ ಇಂದ್ರಿಯ ಮನಪ್ರಾಣಗಳಿಂದೊಡಗೂಡಿದ ಒಂದು ಸಮೂಹವೂ ನೀನಾಗಿಲ್ಲ. ಯಾತಕ್ಕಂದರೆ,-ಪಂಚಮಹಾ ಭೂತಗಳ ತ್ರಿಗುಣಗಳ ಕಾರ್ಯವಾದ್ದರಿಂದ ಈ ಶರೀರೇಂದ್ರಿಯಾದಿ ಸರ್ವ ಸಂಘಾತವು ಸ್ವತಃ ಜಡವಾಗಿರುವದು. ಮತ್ತು ಯಾರೊ ಕೆಲವರು ಚಾರ್ವಾಕಾದಿ ನಾಸ್ತಿಕ ಜನಗಳು ಹೀಗೆ ಹೇಳುತ್ತಿರುವರು ಯೇನಂದರೆ,- ಹ್ಯಾಗಾದರೂ ಬೇರೆಬೇರೆ ಪೃಥಿವ್ಯಾದಿ ಭೂತವು ಜಡವಾಗಿರುವದು. ಆದಾಗ್ಯೂ ಅದು ಏಕತ್ರ ಸೇರುವದ್ದರಿಂದ ಅದರಲ್ಲಿ ಚೈತನ್ಯ ಉತ್ಪನ್ನವಾಗುವದು. ಹ್ಯಾಗೆ ಎಲೆ, ಅಡಿಕೆ, ಸುಂಣ, ಕಾಚುಗಳು ಸೇರುವದ್ದರಿಂದ ಕೆಂಪುಬಂಣ ಉತ್ಪತ್ತಿಯಾಗುವದೋ ಹಾಗೆ ಎಂದರೆ,-ಅವರ ಈವಾರ್ತೆಯು ಅಸಂಭವವೆನಿಸುವದು. ಯಾಕಂದರೆ,-ಈ ಕೆಳಗೆ ಹೇಳುವ ನಿಯಮ ವಿರುವದು. ಅದೇನಂದರೆ,- ಯಾವಾಗ ಒಂದೊಂದು ಜಡವಾದ ರೊ ಅದು ಸೇರುವದ್ದರಿಂದಲೂ ಜಡವೇ ಆಗಿರುವದು. ಹಾಗೆ ಲೋಕದಲ್ಲಿ ಪ್ರತ್ಯಕ್ಷವಾಗಿ ಒಂದೊಂದು ಕಾಷ್ಠವನ್ನ ಗುಂಪುಕೂಡಿಸಿ ಹೊರೆಯಂ ಕಟ್ಟಿದಾಗ್ಯೂ ಜಡವೇ ಆಗಿರುವದು. ಮತ್ತು ಅವುಗಳನ್ನು ಸೇರಿಸುವಂಥಾ ಯಾವನಾದರು ಅನ್ಯಚೇತನ ಪುರುಷ ಬೇಕಾಗುವದು ಎಂದರೆ,-ಅದಕ್ಕೆ ಲೋಹ ಮತ್ತು ಚುಂಬಕ೧೯ ಕದ ಹಾಗೆ ತಾವೇ ಸೇರಿಕೊಳ್ಳುವದು ಎಂದು ಹೇಳಿದರೆ, ಆಗಲೂ ಅವುಗಳನ್ನು ಪರಸ್ಪರ ಸಮೀಪದಲ್ಲಿ ಇರಿಸುವಂಥಾ ಯಾವದಾದರೂ ಚೇತನ ಪುರುಷಾದಿಯಾದವುಗಳು ಬೇಕೇ ಆಗುವದು. ಇಷ್ಟೇ ಅಲ್ಲ. ಇಲ್ಲಿಯೂ ಈ ನಿಯಮ ವಿರುವದು ಅದೇನಂದರೆ,- ಯಾವ ವಸ್ತುವು ಅನೇಕ ಪದಾರ್ಥ ಸೇರಿದ್ದರಿಂದ ಒಂದು ನಿರ್ಮಾಣ ಮಾಡಲ್ಪಡುವದೋ ಆವಸ್ತುವು ಅದರಿಂದ ಭಿನ್ನವಾಗಿರುವ ಅನ್ಯರಾವನಾದರೂಬ್ಬ ಭೋಕ್ತ ಪುರುಷನಿಗೋಸುವೇ ಆಗಿರುವದು. ಹ್ಯಾಗೆ ಇಟ್ಟಿಗೆ ಮರ ಮೃತ್ತಿಕಾದಿಗಳಿಂದ ಒಂದು ಗೃಹ ನಿರ್ಮಾಣ ಮಾಡಲ್ಪಡುವದು ಆದರೆ ಅದು ಎರಡನೆ ಚೇತನ ಪುರುಷನಿಗೋಸುಗವೇ ಆಗಿರುವದು. ಹಾಗೆ ಈ ವಾರ್ತೆಯು ಸಾಂಖ್ಯ ಸೂತ್ರದಲ್ಲಿ ಕಪಿಲದೇವನೂ ಕೂಡ ಪ್ರಕಟಪಡಿ

---

೧೯ ಸೂಜಿಗಲ್ಲು.

ನಿರುವನು. “ಸಂಘಾತಃಪರಾರ್ಥಃಸಂಹತ್ಯಕಾರಿತ್ವಾತ್,, ಅರ್ಥ॥ ಈ ಶರೀರೇಂದ್ರಿಯಾದಿ ರೂಪಸಂಘಾತವು ಯಾವನೋ ಅನ್ಯಭೋಕ್ತೃ ಪುರುಷನ ಪ್ರಯೋಜನಕ್ಕಾಗಿರುವದು. ಯಾತಕ್ಕಂದರೆ,-ಸೇರಿಕೊಂಡು ಕಾರ್ಯ ಮಾಡುವಂಥಾವನಾದ್ದರಿಂದ ಎಂದು. ಈ ಪ್ರಕಾರದಿಂದ ಶರೀರೇಂದ್ರಿಯಾದಿಗಳು ನನ್ನ ಸ್ವರೂಪವಲ್ಲವಿದ್ದರೆ-ಬಳಿಕ ನಾನು ಯಾವವಸ್ತುವಾಗಿರುವೆನು? ಯಾತಕ್ಕಂದರೆ,-ಈ ಶರೀರ,ಇಂದ್ರಿಯ,ಪ್ರಾಣಾದಿಗಳೇ ಪ್ರತೀತವಾಗುತ್ತಿರುವವು. ಇವುಗಳಿಗಿಂತ ಅನ್ಯವಾಗಿ ಬೇರೆ ಯಾವವಸ್ತುವೂ ಪ್ರತೀತವಾಗುವದಿ ೨೦ ಲ್ಲ ಈ ಪ್ರಕಾರವಾದ ಶಿಷ್ಯನ ಆ ಕಾಂಕ್ಷೆಯಾದ್ದರಿಂದ ಈಗ ಗುರು ಅದಕ್ಕೆ ಸಮಾಧಾನವಂ ಹೇಳುತ್ತಾರೆ, (ತತೋಽನ್ಯಮಾತ್ಮಾನಂ) ಅಂದರೆ,-ಎಲೈ ಶಿಷ್ಯನೇ! ಈ ಶರೀರ ಮೊದಲುಗೊಂಡು ಬುದ್ಧಿಯು ಪರ್ಯಂತವೂ, ಈ ಸಂಘಾತದಿಂದ ಭಿನ್ನವಾಗಿ ಮತ್ತು ಈ ಸಮಸ್ತಕ್ಕೂ ಯಾವದು ಸಾಕ್ಷಿಯಾಗಿ ಅಂದರೆ, ಪ್ರಕಾಶ ಮಾಡುವಂಥಾ ಆತ್ಮವಸ್ತುವಿರುವದೋ ಅದನ್ನೇ ನೀನು ತನ್ನ ಸ್ವರೂ ೨೧ ಪವೆಂದು ತಿಳಿ. ಹ್ಯಾಗೂ ಎಲೈ ಶಿಷ್ಯನೇ! ನೀನು ಯಾವದನ್ನು ಹೇಳಿದೆಯೋ ಅಂದರೆ,-ಶರೀರ ಇಂದ್ರಿಯ ಪ್ರಾಣಾದಿಗಳೇ ಪ್ರತೀತವಾಗುವವೆಂತಲೂ ಅದಕ್ಕೆ ಪರವಾಗಿ ಅನ್ಯ ಯಾವವಸ್ತುವೂ ಪ್ರತೀತವಾಗುವದಿಲ್ಲವೆಂತಲೂ, ಹಾಗೆ ನೀನು ಹೇಳಿದ್ದು ನಿಜವೇ ಸರಿ, ಆದಾಗ್ಯೂ ಯಾವದರಿಂದ ಈ ಶರೀರ ಇಂದ್ರಿಯ ಪ್ರಾಣಾದಿಗಳು ಕರಾಮಲಕದಂತೆ ಭಿನ್ನಭಿನ್ನವಾಗಿ ಪ್ರತೀತವಾಗುವದೋ ಆ ವಸ್ತುವಿಗೆ ಯಾವ ಪ್ರಕಾರದಿಂದ ಅಭಾವಸಂಭವಿಸೀತು? ಅದೇ ಎಲ್ಲದರಿಂದ ಪರವಾಗಿಯೂ,ಮತ್ತು ಸರ್ವಕ್ಕೂ ಅಧಿಷ್ಠಾನವಾಗಿಯೂ, ಸಕಲಕ್ಕೂ ಸಾಕ್ಷಿಯಾದ ಆತ್ಮವು. ಅದೇ ನಿನ್ನ ಸ್ವರೂಪವಾಗಿರುವದು. ಹಾಗೆ ಗೀತೆಯಲ್ಲೂ ಹೇಳಲ್ಪಟ್ಟಿರುವದು “ಇಂದ್ರಿಯಾಣಿಪರಾಣ್ಯಾಹು ರಿಂದ್ರಿಯೇಭ್ಯಃಪರಂಮನಃ। ಮನಸಸ್ತುಪರಾಬುದ್ಧಿ ರ್ಯೋಬುದ್ಧೇಃಪರತಸ್ತುಸಃ॥,, ಅರ್ಥ॥ ಎಲೇ

---

೨೦. ಇದು ಸುಷುಪ್ತಿಸ್ಥಾನನಾದ ಆನಂದಮಯಕೋಶದಲ್ಲಿನ ಅಜ್ಞಾನದ ವಚನವಾಗಿರುವದು. ಇದು ಮಧ್ಯಮಿಕ ಬೌದ್ಧನ (ಶೂನ್ಯವಾದಿ) ಮತದಲ್ಲಿ ಸಿದ್ಧವಾಗಿರುವದು. ಇದರ ನಿರಾಕರಣೆಯನ್ನು ಗುರು ಸಮಾಧಾನದಲ್ಲಿ ತೋರಿಸುತ್ತಾರೆ. ೨೧. ಅಂದರೆ-ಅದೇ ನೀನಾಗಿರುವೆ.

ಅರ್ಜುನನೇ ! ಈ ಸ್ಥೂಲ ಶರೀರವು ಶಬ್ದಾದಿ ವಿಷಯಗಳ ಅಪೇಕ್ಷೆಯಿಂದ ಪರೆ-ಅಂದರೆ,-ಅಭ್ಯಂತರವಾಗಿರುವದು. ಮತ್ತು ಆ ವಿಷಯಗಳಿಂದ ಇಂದ್ರಿಯಂಗಳು ಪರವಾಗಿರುವವು. ಇನ್ನು ಇಂದ್ರಿಯಂಗಳಿಂದ ಮನಸ್ಸು ಅಭ್ಯಂತರವಾಗಿರುವದು. ಪುನಃ ಮನದಿಂದ ಬುದ್ಧಿ ಅಭ್ಯಂತರವಾಗಿರುವದು. ಹಾಗೆ ಆ ಬುದ್ಧಿಗಿಂತಲೂ ಯಾವದು ಅದರ ಪ್ರಕಾಶಕವಾಗಿ ಅಭ್ಯಂತರವಾಗಿರುವದೋ ಅದೇ ಆತ್ಮನು ಎಂದು. ಹಾಗೆ ಆ ಆತ್ಮನಿಂದ ಪರೆ-ಅನ್ಯವಾಗಿ ಯಾವದೂ ಇಲ್ಲ. ಈ ವಾರ್ತೆಯು ಕಠೋಪನಿಷತ್ತಿನಲ್ಲಿಯೂ ವರ್ಣಿಸಲ್ಪಟ್ಟಿರುವದು. “ಪುರುಷಾನ್ನಪರಂಕಿಂಚಿತ್ ಸಾಕಾಷ್ಠಾಸಾಪರಾಗತಿಃ ಅರ್ಥ|| ಸರ್ವ ಶರೀರ ಇಂದ್ರಿಯ ಪ್ರಾಣಾದಿಗಳಿಂದ ಪುರುಷ ,, ಯಾವ ಆತ್ಮನಿರುವನೋ ಅವನೇ ಪರವಾಗಿರುವನು. ಅವನಿಗಿಂತ ಪರವಾಗಿ ಬೇರೆ ಯಾವದೂ ಇಲ್ಲ. ಅವನೇ ಸರ್ವಕ್ಕೂ ಕಾಷ್ಠಾ-ಅಂದರೆ, ಸೀಮಾ ಮತ್ತು ಪರಮ ಗತಿಯು ಎಂದು. ಹಾಗೆ ಎಲೈ ಶಿಷ್ಯನೇ ! ಈ ಹೇಳಲ್ಪಟ್ಟ ಪ್ರಕಾರದಿಂದ ಯಾವ ಮನ ಮತ್ತು ಬುದ್ಧಿಗೆ ಸಾಕ್ಷಿಯಾದ ಆತ್ಮನಿರುವನೋ ಅವನೇ ನಿನ್ನ ಸ್ವರೂಪವು. ಹಾಗೆ ಅನ್ಯತ್ರದಲ್ಲೂ ಗುರುಶಿಷ್ಯರ ಸಂವಾದದಲ್ಲಿ ಹೇಳಿರುವದು. “ಕೋದೇವೋಯೋಮನೋವೇತ್ತಿ ಮನೋವೇದ್ಮ್ಯಹಮೇವಯಾ । ತರ್ಹಿದೇವಸ್ತ್ವಮೇವಾಸಿ ಏಕೋದೇವಇತಿಶ್ರುತಿಃ ,, ಅರ್ಥ|| ಶಿಷ್ಯನು ಪ್ರಶ್ನೆ ಮಾಡಿದ್ದೇನಂದರೆ,-ಎಲೈ ಗುರುವೇ ! ದೇವನಾರು ? ಅದಕ್ಕೆ ಗುರು ಉತ್ತರ ಕೊಟ್ಟಿದ್ದೇನಂದರೆ,-ಯಾವನು ಮನವನ್ನು ತಿಳಿಯುವನೋ ಅವನೇ ದೇವನು. ಅದಕ್ಕೆ ಶಿಷ್ಯನು ಹೇಳಿದ್ದೇನಂದರೆ,-ತನ್ನ ಮನವನ್ನಾದರೆ ನಾನೇ ತಿಳಿಯುತ್ತಿರುವೆನು. ಅದಕ್ಕ ಗುರು ಕೂಡಲೇ ಹೇಳಿದ್ದೇನಂದರೆ,-ಹಾಗಾದರೆ ಎಲೈ ಶಿಷ್ಯನೇ ! ನೀನೇ ಆ ದೇವನು, ಯಾತಕ್ಕಂದರೆ,-“ ಏಕೋದೇವಃಸರ್ವಭೂತೇಷುಗೂಢಃ ,, ಇತ್ಯಾದಿ ಶ್ರುತಿಗಳಲ್ಲಿ ಒಬ್ಬನೇ ದೇವನೆಂದು ವರ್ಣಿಸಲ್ಪಟ್ಟಿರುವದು ಎಂದರು|| ||೬೧||

ಅ|| ಈ ಪ್ರಕಾರವಾಗಿ ದೇಹೇಂದ್ರಿಯಾದಿಗಳಿಗಿಂತಲೂ ಭಿನ್ನವಾದ ತನ್ನ ಸ್ವರೂಪವನ್ನು ಕೇಳಿದವನಾಗಿ ಈಗ ಅದ

---

೨೦ ಸಂಕಲ್ಪ ವಿಕಲ್ಪ ಸಂಶಯಗಳನ್ನೂ ಸಾಮಾನ್ಯ ವಿಶೇಷ ವೃತ್ತಿಗಳನ್ನೂ ಮನಸ್ಸಿನ ಭಾವಾಭಾವಗಳನ್ನೂ ಎಂದು ತಿಳಿದುಕೊಳ್ಳಬೇಕು.

ರ ವಿಶೇಷ ಬೋಧಾರ್ಥವಾಗಿ ಶಿಷ್ಯನು ಪುನಃ ಪ್ರಶ್ನೆಯನ್ನು ಮಾಡುತ್ತಾನೆ.

—ಶಿಷ್ಯ ಉವಾಚ—

ವಿಚೇಷ್ಟತೇಕೇನಮನಃಪ್ರಚೋದಿತಂ|
ಕರೋತಿಕೇನಾಸುಗಣೋಗಮಾಗಮಂ ||
ವಪುಸ್ತಥೇದಂನನುಕೇನನೀಯತೇ |
ಹೃದಿಪ್ರವಿಷ್ಟನಗುರುಬ್ರವೀತುಮೇ|| ||೬೨||

ಟೀಕಾ|| ವಿಚೇಷ್ಟತ ಇತಿ-ಎಲೈ ಭಗವಂತನೇ ! ಈ ಯಾವ ಸಂಕಲ್ಪವಿಕಲ್ಪಾತ್ಮಕವಾದ ಮನವಿರುವದೋ ಅದು (ಕೇನ) ಅಂದರೆ,-ಯಾವದರಿಂದ (ಪ್ರಚೋದಿತಂ) ಅಂದರೆ,-ಪ್ರೇರಿತವಾಗಿ ನಿರಂತರವೂ ಚೇಷ್ಟೆ[೧] ಸುತ್ತಿರುವದೋ ಹಾಗೆ (ಅಸುಗಣ) ಅಂದರೆ,-ಯಾವ ಪ್ರಾಣಾಪಾನ ವ್ಯಾನಾದಿರೂಪವಾದ ಪ್ರಾಣಗಳ ಸಮೂಹವಿರುವದೋ ಅದೂ ಯಾವದರಿಂದ ಪ್ರೇರಿತವಾಗಿ ಶರೀರದಲ್ಲಿ ಅಧೋರ್ಧ್ವಗಮನವಂ ಮಾಡುತ್ತಿರುವದೋ, ಹಾಗೆ (ವಪುಃ) ಅಂದರೆ,-ಈ ಯಾವ ಸ[೨]ತಾ ಸ್ಫೂರ್ತಿಯಿಂದ ರಹಿತವಾಗಿ ಜಡವಾದ ಸ್ಥೂಲದೇಹವಿರುವದೋ, ಅದೂಕೂಡ ಯಾವದರಿಂ ಪ್ರೇರಿತವಾಗಿ ಅನ್ನಪಾನಾದಿ ವ್ಯವಹಾರದಲ್ಲಿ ಪ್ರವೃತ್ತವಾಗುತ್ತಿರುವದೋ ಆದರೆ, ಎಲೈ ಗುರುವೇ, ಹೀಗೆ ಯಾವ ವಸ್ತುವು ಹೃದಯದಲ್ಲಿ ಪ್ರವಿಷ್ಟವಾಗಿರುವದು[೩] ಅಂದರೆ ಯಾವದರಿಂದ ಈ ಮನಾದಿಯಾದ ಸರ್ವವೂ ಪ್ರೇರಿತವಾಗಿ ಸ್ವಸ್ವಕಾರ್ಯಗಳಲ್ಲಿ ಪ್ರವೃತ್ತವಾಗುತ್ತಿರುವವೋ ಅದನ್ನು ಕೃಪೆಯಿಂದ ನನ್ನಂ ಕುರಿತು ನಿರೂಪಿಸಬೇಕು ಎಂದನು. ... ... ||೬೨||

ಅ|| ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ಗುರುವು ಅದರ ಉತ್ತರವನ್ನು ಪ್ರಕಟ ಪಡಿಸುತ್ತಾರೆ.

—ಗುರುರುವಾಚ—

ಕರ್ಣಸ್ಯಕರ್ಣಂಮನಸೋಮನಃಶ್ರುತಿ |

---

೧. ನಾನಾಪ್ರಕಾರವಾದ ಶುಭಾಶುಭ ಸಂಕಲ್ಪ ವಿಕಲ್ಪವಂ ಮಾಡುತ್ತಿರುವದೋ. ೨. ಇರಲುಳ್ಳದ್ದು. ೩. ಪ್ರಕಾಶ.

ವಾರ್ಚಂಚವಾಚೋಯಮುಸೊರಸುಂಜಗ ॥
ತೇನಾನಿಶಂಯಂತ್ರಮಿವಾಂತರಾತ್ಮನಾ ।
ಸಂಪ್ರೇರಿತಂಸರ್ವಮಿದಂಪ್ರವರ್ತತೇ॥ ॥೬೩॥

ಟೀಕಾ॥ಕರ್ಣಸ್ಯೇತಿ-ಎಲೈ ಶಿಷ್ಯನೇ! ಯಾವನನ್ನು ಶ್ರುತಿಅಂದರೆ-ಯಾವ ವೇದವಿರುವದೋ ಅದು (ಕರ್ಣಸ್ಯಕರ್ಣಂ)ಅಂದರೆ,-ಶ್ರೋತ್ರಕ್ಕೆಶ್ರೋತ್ರವೆಂತಲೂ, ಮನಸ್ಸಿಗೆ ಮನವೆಂತಲೂ ವಾಕ್ಕಿಗೆವಾಕ್ಕೆಂತಲೂ,ಮತ್ತು ಪ್ರಾಣಗಳಿಗೆ ಪ್ರಾಣವೆಂದು ಪ್ರಸಿದ್ಧಪಡಿಸಿರುವದೋ ಹಾಗೆ ಸಾಮವೇದದ ಕೇನೋಪನಿಷತ್ತಿನಲ್ಲಿ ಬರಿಯಲ್ಪಟ್ಟಿರುವದು. “ ಶ್ರೋತ್ರಸ್ಯಶ್ರೋತ್ರಂಮನಸೊಮನೊಯದ್ವಾಚೋಹವಾಚಂಸ ಉಪ್ರಾಣಸ್ಯಪ್ರಾಣಃ,, ಅರ್ಥ ॥ ಯಾವ ಪರಮಾತ್ಮನು ಶ್ರೋತ್ರಕ್ಕೆ ಶ್ರೋತ್ರವೋ, ಮತ್ತು ಮನಸ್ಸಿಗೆ ಮನವೋ, ಇನ್ನು ವಾಕ್ಕಿಗೆ ವಾಕ್ಕೋ ಹಾಗೆ ಪ್ರಾಣಗಳಿಗೆ ಪ್ರಾಣವೋ ಎಂದು. ಅಂದರೆ,-ಯಾವ ಪರಮಾತ್ಮನು ಶ್ರೋತ್ರಾದಿಗಳ ಶ್ರವಣರೂಪವಾದ ಶಕ್ತಿಗಳಿಗೆ ಆಶ್ರಯಭೂತನಾಗಿರುವನೋ, ಆ ಸಾಕ್ಷೀರೂಪನಾದ ಅಂತರಾತ್ಮನಿಂದಲೇ ಸರ್ವದಾ ಪ್ರೇರಿತವಾಗಿ, ಈ ಶ್ರೋತ್ರಾದಿಯಾದ ಸರ್ವವೂ ತಮ್ಮ ತಮ್ಮ ಕ್ರಿಯೆಗಳಲ್ಲಿ ಪ್ರವೃತ್ತವಾಗುತ್ತಿರುವವು. ಹ್ಯಾಗೆ ಲೋಕದಲ್ಲಿ ಪ್ರಸಿದ್ಧವಾಗಿ ನಾನಾಕಲೆಗಳಿಂದ ಯುಕ್ತವಾದ ಯಂ೧ತ್ರಮಧ್ಯದಲ್ಲಿರುವ ಚೇತನ ಪುರುಷನಿಂದ ಪ್ರಧಾನಕಲೆಯು ಪ್ರೇರಿತವಾಗಿ ಬಳಿಕ ಯಲ್ಲಾಕಡೆಯಿಂದಲೂ, ಚೇಷ್ಟೆಗೊಳ್ಳುತ್ತಿರುವದೋ, ಹಾಗೆಯೇ ಮಧ್ಯದಲ್ಲಿರುವ ಸಾಕ್ಷಿರೂಪನಾದ ಆತ್ಮನಿಂದ ಮೊದಲು ಪ್ರಧಾನಕಲಾರೂಪವಾದ ಬುದ್ಧಿಯು ಪ್ರೇರಿತವಾಗುವದು. ನಂತರ ಬುದ್ಧಿಯಿಂದ ಮನವು ಪ್ರೇರಿತವಾಗುವದು. ತದನಂತರ ಮನದಿಂದ ಪ್ರಾಣಪ್ರೇರಿತವಾಗುವದು ಆ ಪ್ರಮಾಣದಿಂದ ಚಕ್ಷುರಾದಿ ಇಂದ್ರಿಯಗಳು ಪ್ರೇರಿಸಲ್ಪಡುವವು. ಆಮೇಲೆ ಚಕ್ಷುರಾದಿ ಇಂದ್ರಿಯಂಗಳಿಂದ ಸ್ಥೂಲಶರೀರವು ಪ್ರೇರಿತವಾಗುತ್ತಿರುವದು. ಈ ಪ್ರಕಾರವಾಗಿ ಈ ಸರ್ವ ಸಂಘಾತರೂಪವಾದ ಯಂ೨ತ್ರವು. ಜಾಗ್ರ೩ತ್

---

೧. ರೈಲ್ವೇ ಇಂಜನ್. ೨, ಶರೀರ, ೩, ಜಾಗ್ರದವಸ್ಥೆಯಲ್ಲಿ ಸ್ಥೂಲದೇಹವು,

ವತ್ತು ಸ್ವಪ್ನಾ೪ವಸ್ಥೆಯಲ್ಲಿ ಚಲಿಸುತ್ತಿರುವದು. ಇನ್ನು ಪುನಃ ಹಾಗೆ ಯಾವ ಕಾಲದಲ್ಲಿ ಆ ಯಂತ್ರಸ್ಥನಾದ ಪುರುಷನು ಪ್ರಧಾನಕಲೆಯ ನಿರೋಧ ಮಾಡಿಕೊಳ್ಳುವದಾದರೆ, ಆಗ ಸರ್ವ ಯಂತ್ರವು ನಿಶ್ಚೇಷ್ಟಿತನಾಗಿ ಹೋಗುವದೋ ಹಾಗೆಯೇ ಸುಷುಪ್ತಿ ಕಾಲದಲ್ಲಿ ಬುದ್ಧಿರೂಪವಾದ ಪ್ರಧಾನಕಲೆಯು ಸ್ವಕಾರಣ ಭೂತವಾದ ಅಜ್ಞಾನದಲ್ಲಿ ಲೀನವಾಗುವದರಿಂದ ಈ ಸಂಘಾತರೂಪವಾದ ಯಂತ್ರವು ಎಲ್ಲಾ ಕಡೆಯಿಂದಲೂ ನಿಶ್ಚೇಷ್ಟೆಯುಳ್ಳದ್ದಾಗಿ ಬಿದ್ದುಕೊಂಡಿರುವದು. ಪುನಃ ಅಲ್ಲಿಂದ ಸ್ವಪ್ನ ಅಥವಾ ಜಾಗ್ರದವಸ್ಥೆಯಾಗುವಲ್ಲಿ ಪ್ರವೃತ್ತಗೊಳ್ಳುತ್ತಿರುವದು. ಈ ಪ್ರಕಾರವಾಗಿ ಕೈವಲ್ಯಮೋಕ್ಷ ಪರ್ಯಂತವೂ ಅನೇಕ ಕಲ್ಪಕಲ್ಪಾಂತರಗಳಲ್ಲಿ ಪ್ರವೃತ್ತವಾಗುತ್ತಿರುವದುಎಂದು ಭಾವವು||೬೩||

ಅ—ಈ ಪ್ರಕಾರವಾಗಿ ದೇಹ ಇಂದ್ರಿಯ ಮನಾದಿಗಳಿಗೆ ಪ್ರೇರಕನಾದ ಸಾಕ್ಷೀ ಆತ್ಮನನ್ನು ಸಂಘಾತದಿಂದ ಭಿನ್ನನೆಂದು ಕೇಳಿ ಈಗ ಸಾಕ್ಷೀ ಆತ್ಮನು ಸರ್ವದರಿಂದ ಅಸಂಗನು ಮತ್ತು ಅವನಿಂದ ಭಿನ್ನವಾದ ಸರ್ವ ಸಂಘಾತವು ಜಡವಾಗಿರುವದು. ಆದ್ದರಿಂದ ಈ ಕರ್ತೃತ್ವಭೋಕ್ತೃತ್ವಾದಿಗಳು ಯಾವದರ ಧರ್ಮವು ಎಂದು ಈ ಪ್ರಕಾರವಾದ ಸಂಶಯವಂ ಹೊಂದಿದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಕರ್ತೃತ್ವಭೋಕ್ತೃತ್ವಮುಖಂ ಕಿಮಾತ್ಮನಃ |
ಕಿಂಧರ್ಮಜಾಲಂಮನಸೋಽಥವಾಮತೇಃ ||
ಕಿಂವೇಂದ್ರಿಯಾಣಾಂಕಿಮುತಾಸುಗಂಭವೆ |
ದೇತದ್ದಯಾಲೋವದಮೇವಿನಿಶ್ಚಿತಮ್ ||೬೪||

ಟೀಕಾ—ಕರ್ತೃತ್ವೇತಿ|| ಎಲೈ (ದಯಾಲೋ) ಅಂದರೆ-ಸ್ವಾಭಾವಿಕ ದಯಾವಂತನಾದ ಗುರುವೆ ತಾವು ಯಾವದನ್ನು ಹೇಳಿದಿರೋ ಅಂದರೆ-ಸರ್ವದೇಹ ಇಂದ್ರಿಯಾದಿ ಸಂಘಾತ ರೂಪವಾದ ಯಂತ್ರದ ಪ್ರೇರಕ, ಸಾಕ್ಷಿ ಆತ್ಮನೆಂದು ಅಪ್ಪಣೆ ಕೊಟ್ಟಿರಲ್ಲವೆ ? ಆ ಸಾಕ್ಷಿ ಆತ್ಮನಾದರೋ, " ಅಸಂಗೋಹ್ಯಯಂ ಪುರುಷಃ ,, ಇತ್ಯಾದಿ ಶ್ರುತಿಗಳಲ್ಲಿ ಸರ್ವಸಂ

೪ ಸ್ವಪ್ನಾವಸ್ಥೆಯಲ್ಲಿ ಸೂಕ್ಷ್ಮ ದೇಹವು ಚಲಿಸುತ್ತಿರುವದೆಂದು ತಿಳಿಯತಕ್ಕದ್ದು.

ಘಾತವಿಂದ ಅಸಂಗನೆಂದು ನಿರೂಪಣ ಮಾಡಿರುವವು. ಮತ್ತು ಅವನಿಂದ ಭಿನ್ನವಾದ ಈ ಸರ್ವ ಸಂಘಾತವು ಜಡವಾಗಿರುವದು. ಆದ್ದರಿಂದ ಈ ಯಾವ ಶುಭಾ ಶುಭ ಕರ್ಮಾದಿಗಳ ಕರ್ತೃತ್ವವೂ ಇನ್ನು ಭೋಕ್ತೃತ್ವಾದಿ ಧರ್ಮ ಸಮೂಹವಿರುವದೋ, ಅವು (ಕಿಮಾತ್ಮನಃ) ಅಂದರೆ,-ಯೇನು ಸಾಕ್ಷಿಯಾದ ಆತ್ಮನದೋ ಅಲ್ಲದೆ ಮನಸ್ಸಿನ ಧರ್ಮವೋ ಅಥವಾ (ಮತಿ) ಯಾವ ಬುದ್ಧಿಯುಂಟೂ ಅದರದೋ (ಕಿಂಪೇಂದ್ರಿಯಾಣಾಂ) ಅಂದರೆ,-ಅಥವಾ ಶ್ರೋತ್ರಾದಿ ಇಂದ್ರಿಯಗಳದೊ, ಅದೂ ಅಲ್ಲದಿದ್ದರೆ ಪ್ರಾಣಗಳದೋ ಅಥವಾ ಈ ಸ್ಥೂಲ ಶರೀರದ್ದೋ ಆ ಈವಾರ್ತೆಯನ್ನು ನಿಶ್ಚಯವಾಗಿ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು.

ಅ—ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರು ಅದರ ಉತ್ತರವನ್ನು ಪ್ರಕಟಪಡಿಸುತ್ತಾರೆ.

—॥ ಗುರುರುವಾಚ ॥—

ಕರ್ತಾತುನಾತ್ಮಾನಮನೋನಶೇಮುಷೀ |
ನೈವೇಂದ್ರಿಯಾಣೀಹನಚಾಸವಸ್ತಥಾ ||
ನಾಹಂಕೃತಿರ್ನಾಪಿವೃವೀಕ್ಷಿಣಃ |
ಕರ್ತಾರಮೇಷಾಂತುಸಮುಚ್ಚಯಂವಿದುಃ ||೬೫||

ಟೀಕಾ॥ ಕರ್ತೇತಿ- ಎಲೈಶಿಷ್ಯನೆ (ಕರ್ತಾತುನಾತ್ಮಾ) ಅಂದರೆ ಈ ಶರೀರದಲ್ಲಿ ಯಾವ ಸಾಕ್ಷೀಆತ್ಮನಿರುವನೋ ಅವನು ಕಿಂಚಿತ್ತಾದರೂ ಮಾಡುವವನಲ್ಲ. ಯಾತಕ್ಕಂದರೆ,-ಲೋಕದಲ್ಲಿ ಯಾವನು ಕರ್ತನಾಗುವನೋ ಅವನು ನಿಯಮದಿಂದ ವಿಕಾರೀ ಆಗುವನು. ಮತ್ತು ಆತ್ಮನಾದರೋ ಅನೇಕ ಶೃತಿಸ್ಮೃತಿಗಳಲ್ಲಿ ನಿರ್ವಿಕಾರನೆಂದು ಪ್ರತಿಪಾದನ ಮಾಡಿರುವವು. ಹಾಗೆ ಭಗವದ್ಗೀತೆಯಲ್ಲಿ (ಶರೀರಸ್ಥೋಪಿಕೌಂತೇಯ ನಕರೋತಿನಲಿಪ್ಯತೆ) ಅರ್ಥ॥ ಎಲೈಕೌಂತೇಯ-ಅಂದರೆ, ಅರ್ಜುನ ಈ ಆತ್ಮನು ಸರ್ವದಾ ಶರೀರದಲ್ಲಿ ಇರುತ್ತಿದ್ದರೂ ಯಾವದನ್ನೂ ಮಾಡುವದಿಲ್ಲ ಮತ್ತು ಯಾವ ಕರ್ಮದಿಂದಲೂ ಲೇಪಿತನಾಗುವದೂ ಇಲ್ಲವೆಂದು ಶ್ರೀಕೃಷ್ಣನು. ಹೇಳಿರುವನು. ಇನ್ನು ಯಾವ ಕರ್ತ್ರಾಭೋಕ್ತ್ರಾದಿ ರೂಪವಾದ ಧರ್ಮವು ಆತ್ಮನಲ್ಲಿ ಸ್ವಾಭಾವಿಕವಾದರೆ ಆಗ ಅದರ ನಿವೃತ್ತಿಯು ಎಂದಿಗೂ ಆಗುವದಿಲ್ಲ. ಆದ್ದರಿಂದ ಕೈ

ವೆಲ್ಲ ಮೋಕ್ಷ ಪ್ರತಿಪಾದಕವಾದ ಸರ್ವವೇದಗಳೂ ಮತ್ತು ಶಾಸ್ತ್ರಗಳೂ ವ್ಯರ್ಥವಾಗುವವು. ಹಾಗೆ ಈ ವಿಷಯವನ್ನು ಸುರೇಶ್ವರಾಚಾರ್ಯರೂ ಕೂಡ ಪ್ರಸಿದ್ಧಪಡಿಸಿರುವರು. “ಆತ್ಮಾ ಕರ್ತ್ರಾದಿರೂಪಶ್ಚೇನ್ಮಾಕಾಂಕ್ಷೀಸ್ತರ್ಹಿಮುಕ್ತತಾಂ ॥ ನಹಿಸ್ವಭಾವೋ ಭಾವಾನಾಂವ್ಯಾವರ್ತೇತೌಷ್ಣ್ಯವದ್ರವೇಃ ,, ಅರ್ಥ-ಎಲೈವಾದಿಯೆ! ಯಾವಾಗ ಆತ್ಮನಿಗೆ ಕರ್ತೃಭೋಕ್ತ್ರಾದಿಗಳು ಸ್ವರೂಪವೆ ಆಗುವವೋ ಆಗ ನೀನು ಮೋಕ್ಷದ ಆಶೆಯನ್ನು ತೊರೆದು ಬಿಡು. ಯಾಕೆಂದರೆ,- ಯಾವ ವಸ್ತುವಿಗೆ ಯಾವದು ಸ್ವಾಭಾವಿಕ[1] ಧರ್ಮವಾಗುವದೋ ಅದು ಆ ವಸ್ತುವಿಗೆ ನಾಶವಾದಲ್ಲದೆ ನಿವೃತ್ತವಾಗುವದಿಲ್ಲ. ಹ್ಯಾಗೆ ಸೂರ್ಯನ ಉಷ್ಣತೆಯು ಸೂರ್ಯನ ನಾಶವಿನಾ ನಿವೃತ್ತವಾಗುವದಿಲ್ಲವೋ, ಹಾಗೆಂದರ್ಥವು. ಆದ್ದರಿಂದ ಎಲೈ ಶಿಷ್ಯನೆ! ಆತ್ಮನು ಕರ್ತನೂ ಅಲ್ಲ, ಮತ್ತು ಭೋಕ್ತನೂ ಅಲ್ಲವೆಂದು ತಿಳಿ, ಹಾಗೆ (ಮನಸೂ) ಅಂದರೆ,-ಮನವು ಸ್ವತಃ ಕರ್ತನಾಗಿಲ್ಲ ಯಾತಕ್ಕಂದರೆ,-ಜಡರೂಪ ಪಂಚ ಮಹಾ ಭೂತಗಳ ಕಾರ್ಯವಾದ್ದರಿಂದ ಮನವೂ ಸ್ವತಃ ಚೇತನದಿಂದ ರಹಿತವಾಗಿರುವದು. ಆದಕಾ

---

೧ ಈ ವಿಷಯದಲ್ಲಿ ಕೆಲವರು (ತಾರ್ಕಿಕಾದಿಗಳು) ಯುಕ್ತಿ ಹೇಳುವದೇನೆಂದರೆ ವಸ್ತುನಾಶದಿಂದ ಸ್ವಭಾವಕ್ಕೆ ನಾಶವಾಗಬೇಕಾಗುವದಿಲ್ಲ ಸ್ವಭಾವನಾಶವಾದರೂ ವಸ್ತು ಉಳಿದುಕೊಂಡಿರುವದು. ಅಗ್ನಿಯ ದಾಹಕ ಸ್ವಭಾವವು ಮಣಿಮಂತ್ರಾದಿ ಪ್ರತಿಬಂಧಕದಿಂದ ನಾಶವಾಗಿ ಅಗ್ನಿ ಹ್ಯಾಗೆ ಉಳಿಯುವದೋ ಮತ್ತು ಜಲದ ಶೀತಸ್ವಭಾವವು ಅಗ್ನಿಯ ಸಂಬಂಧದಿಂದ ನಿವೃತ್ತಿಸಲ್ಪಟ್ಟು ಜಲವು ಮಾತ್ರ ಹ್ಯಾಗ ಉಳಿಯುವದೋ, ಹಾಗೆ ಕರ್ತೃತ್ವಾದಿಗಳು ಆತ್ಮಸ್ವಭಾವವೆ ಅದು ಸುಷುಪ್ತಿ, ಸಮಾಧಿ, ಮುಕ್ತಿಕಾಲಗಳಲ್ಲಿ ನಿವೃತ್ತಿಸಲ್ಪಟ್ಟು ಆತ್ಮವಸ್ತುವೆ ಉಳಿಯುವದು ಇದರಲ್ಲಿ ಯಾವದೊಂದು ದೋಷವಿಲ್ಲವೆಂದು ಹೇಳುವರು ಇದು ಸರಿಯಲ್ಲ? ಯಾಕೆಂದರೆ,-ಮಣಿ ಮಂತ್ರಾದಿ ಪ್ರತಿಬಂಧಕದಿಂದ ಅಗ್ನಿಯ ದಾಹಕ ಸ್ವಭಾವವು ತತ್ಕಾಲದಲ್ಲಿ ನಿವೃತ್ತವಾದಂತೆ ತೋರಿದರೂ ಪ್ರತಿಬಂಧಕ ಕ್ಷಯದ ಮೇಲೆ ಅಗ್ನಿಗೆ ದಾಹಕ ಸ್ವಭಾವವು ಬಂದೇ ಬರುವದು ಮತ್ತು ಜಲದ ಶೀತಸ್ವಭಾವವು ಅಗ್ನಿಯ ಸಂಸ್ಪರ್ಶದಿಂದ ತತ್ಕಾಲದಲ್ಲಿ ನಿವೃತ್ತಿಸಲ್ಪಟ್ಟಂತೆ ತೋರಿದರೂ ಪುನಃ ಕಾಲಾಂತರದಲ್ಲಿ ಪೂರ್ವದ ಶೀತಲತ್ವವೇ ಬರುವದು ಆದ್ದರಿಂದ ಕರ್ತೃತ್ವಾದಿಗಳು ಆತ್ಮಸ್ವಭಾವವಲ್ಲ. ಹಾಗೆ ಆತ್ಮಸ್ವಭಾವವೇ ಆದರೆ, ಸುಷುಪ್ತ್ಯಾದಿ ಕಾಲಗಳಲ್ಲಿ ನಿವೃತ್ತಿಸಲ್ಪಟ್ಟದ್ದು ಪುನಃ ಬಂದೇ ಬರುವದು ಆಗ ನಿತ್ಯ ಮುಕ್ತಿ ಎಂಬುವದು ಲೋಕದಲ್ಲಿ ಇಲ್ಲದೇ ಹೋಗುವದು ಆದ್ದರಿಂದ ಸುರೇಶ್ವರಾಚಾರ್ಯರ ವಾಕ್ಯವೇ ಸರಿ.

ರಣ ಕಾಷ್ಠ[೨] ಲೋಷ್ಟಾದಿಗಳಂತೆ ಜಡದಲ್ಲಿ ಸ್ವತಃ ಕ್ರಿಯಾಸಂಭವಿಸುವದಿಲ್ಲ. ಹಾಗೆ (ನಶೇಮುಷೀ) ಅಂದರೆ,- ಬುದ್ಧಿಯೂ ಕರ್ತನಲ್ಲ. ಯಾಕಂದರೆ ಅದೂ ಸಹಾ ಪಂಚ ಮಹಾ ಭೂತಗಳಕಾರ್ಯವಾದ್ದರಿಂದ ಸ್ವತಃ ಜಡವೇ ಆಗಿರುವದು. ಹಾಗೆ (ನೈವೇಂದ್ರಿಯಾಣಿ) ಅಂದರೆ,-ಶ್ರೋತ್ರಾದಿಯಾದ ಯಾವ ಇಂದ್ರಿಯಗಳಿರುವವೋ, ಅವೂ ಕರ್ತನಲ್ಲ ಯಾತಕ್ಕಂದರೆ,-ಸರ್ವ ಇಂದ್ರಿಯಗಳು ಮನಸ್ಸಿನಅಧೀನದಿಂದ ಚೇಷ್ಟೆಗೊಳ್ಳುವವು. ಆದರೆ ಯಾವಾಗ ಮನವೇ ಜಡವಾಯಿತೋ, ಆಗ ಇಂದ್ರಿಯಗಳು ಎಲ್ಲಿಂದ ಚೇತನವಾಗಲಾದೀತು ? ಆದ್ದರಿಂದ ಇಂದ್ರಿಯಗಳು ಕರ್ತನಲ್ಲ. ಹಾಗೆ (ನಚಾಸವಃ) ಅಂದರೆ,-ಎಲೈ ಶಿಷ್ಯನೆ, ಪ್ರಾಣಾಪಾನಾದಿಯಾದ ಯಾವ ಪಂಚ ಪ್ರಾಣಗಳಿರುವವೋ ಅವೂ ಕರ್ತನಲ್ಲ. ಯಾತಕ್ಕಂದರೆ,-ಪ್ರಾಣವಾದರೂ ಪ್ರತ್ಯಕ್ಷವಾಗಿ ಒಂದು ವಾಯುರೂಪವು ಸ್ವತಃ ಜಡಪದಾರ್ಥವಾಗಿರುವದು. ಹಾಗೆ (ನಾಹಂಕೃತಿಃ) ಅಂದರೆ,-ಅಹಂಕೃತಿ. ಯಾವ ಅಹಂಕಾರವಿರುವದೋ, ಅದೂ ಕರ್ತನಲ್ಲ. ಯಾಕಂದರೆ,-ಅಹಂಕಾರವು ಒಂದು ಅಂತಃಕರಣದ ವೃತ್ತಿ ವಿಶೇಷವೆನಿಸುವದು ಮತ್ತು ಆ ಅಂತಃಕರಣವು ಪಂಚ ಮಹಾ ಭೂತಗಳ ಕಾರ್ಯವಾದ್ದರಿಂದ ಸ್ವತಃ ಜಡವಾಗಿರುವದು. ಆದಕಾರಣ ಅಹಂಕಾರವು ಕರ್ತನಾಗಲರಿಯದು. ಹಾಗೆ (ನಾಪಿವಪುಃ) ಅಂದರೆ,-ವಪು-ಯಾವ ಈ ಸ್ಥೂಲ ದೇಹವಿರುವದೋ, ಅದೂ ಕರ್ತನಲ್ಲ. ಯಾತಕ್ಕಂದರೆ,- ರಜೋವೀರ್ಯ, ಅನ್ನದುಗ್ಧಾದಿ ಜಡಪದಾರ್ಥಗಳ ಕಾರ್ಯವಾದ್ದರಿಂದ ಇದೂ ಸ್ವತಃ ಜಡವೇ ಆಗಿರುವದು. ಮತ್ತು ಮರಣ ಕಾಲದಲ್ಲಿ ಜೀವಾತ್ಮನು ಹೊರಗೆ ಹೊರಟು ಹೋಗುವದ್ದರಿಂದ ಆಗ ಪ್ರತ್ಯಕ್ಷವಾಗಿ ಇದರ ಜಡತೆಯು ಪ್ರತೀತವಾಗುವದು. ಆದ್ದರಿಂದ ಈ ಸ್ಥೂಲಶರೀರವು ಕರ್ತನೂ ಭೋಕ್ತನು ಅಲ್ಲ. ಈ ಪ್ರಕಾರವಾಗಿ ಈ ಸರ್ವದಲ್ಲಿ ಬೇರೆ ಬೇರೆಯಾಗಿ ಯಾವದೂ ಕರ್ತಾ-ಭೋಕ್ತನಾಗಿಲ್ಲ. ಯಾವನೂ ಕರ್ತಾ-ಭೋಕ್ತನೂ ಇದರಲ್ಲಿ ಯಾರೂ ಇಲ್ಲದಿದ್ದರೆ, ಈ ನಾನಾ ಪ್ರಕಾರವಾದ ಅನ್ನಪಾನಾದಿ ಕ್ರಿಯೆಗಳು ಯಾವ ಪ್ರಕಾರದಿಂದಾಗುವವು. ಹೀಗೆಂದು ಶಿಷ್ಯನ ಆಕಾಂ

---

೨ ಕಟ್ಟಿಗೆ ಸಂಪುದೆ ೩. ಮಣ್ಣಿನಹೆಂಟೆ.

ಕ್ಷೆ ಸಾಮಗ್ರಿಯಿಂದ ಈಗ ಗುರು- ಅದಕ್ಕೆ ಸಮಾಧಾನವಂ ಹೇಳುತ್ತಾರೆ. (ಕರ್ತಾರಮೇಷಾಂತು ಸಮುಚ್ಚಯಂವಿದುಃ) ಅಂದರೆ,-ಎಲೈ ಶಿಷ್ಯನೆ, ಹೇಳಲ್ಪಟ್ಟದೇಹ, ಇಂದ್ರಿಯ, ಪ್ರಾಣಾದಿಗಳ ಮತ್ತು ಆತ್ಮನ ಯಾವ ಸಮುಚ್ಚಯ ಅಂದರೆ,-ಸಮೂ೪ಹವಿರುವದೋ ಅದನ್ನೇ ವಿ೫ದ್ವಾಂಜನಗಳು ಕರ್ತೃಭೋಕ್ತೃವೆಂದು ತಿಳಿಯುತ್ತಿರುವರು. ಹಾಗೆ ಈ ವಾರ್ತೆಯು ಕಠೋಪನಿಷತ್ತಿನಲ್ಲಿಯೂ ಬರೆಯಲ್ಪಟ್ಟಿರುವದು. "ಆತ್ಮೇಂದ್ರಿಯಮನೋಯುಕ್ತಂ ಭೋಕ್ತೇತ್ಯಾಹುರ್ಮನೀಷಿಣಃ,,

ಅರ್ಥ ॥ ಇಂದ್ರಿಯಮನ ಮೊದಲಾದವುಗಳಿಂದ ಸಂಯುಕ್ತನಾದ ಆತ್ಮನನ್ನೇ ವಿದ್ವಾಂಜನಗಳು ಕರ್ತೃಭೋಕ್ತೃವೆಂದು ಪ್ರಕಟಿಸುತ್ತಿರುವರು. ಈ ಪ್ರಕಾರವಾಗಿ ಎಲ್ಲಿಯ ಪರ್ಯಂತ ದೇಹ ಇಂದ್ರಿಯಾದಿಗಳ ಭಿನ್ನಭಿನ್ನ ವಿವೇಚನವಾಗುವದಿಲ್ಲವೋ ಅಲ್ಲಿಯಪರ್ಯಂತವು ಜೀವನಿಗೆ ಶುಭಾಶುಭ ಕರ್ಮಗಳು ಲೇಪನ ಮಾಡುತ್ತಿರುವವು. ಮತ್ತು ಯಾವಾಗ ಪೂರ್ವೋಕ್ತ ಪ್ರಕಾರದಿಂದ ವಿವೇಚನವಂ ಮಾಡಿ ಆ ಸರ್ವದರಿಂದ ತನ್ನ ಆತ್ಮನನ್ನು ಅಸಂಗನೆಂದೂ, ಅಕರ್ತನೆಂದೂ, ಅಭೋಕ್ತನೆಂದು ದೃಢವಾಗಿ ನಿಶ್ಚಯಿಸುವನೋ ಆಗ ಪುನಃ ಆ ಪುರುಷನನ್ನು ಯಾವ ಶುಭಾಶುಭ ಕರ್ಮಗಳೂ ಲೇಪನ ಮಾಡಲಾರವು. ಈ ಅಭಿಪ್ರಾಯವಂ ಗ್ರಹಿಸಿ ಭಗವಂತನು ಗೀತೆಯ ಚತುರ್ಥಾಧ್ಯಾಯದಲ್ಲಿ ಹೇಳಿರುವನು. "ಹತ್ವಾಪಿಸಇಮಾಂಲ್ಲೋಕಾನ್ನಹಂತಿ ನನಿಬಧ್ಯತೇ,, ಅರ್ಥ ॥ ಎಲೈ ಅರ್ಜುನಾ, ಆ ಜ್ಞಾನಿಪುರುಷನು ಈ ಮೂರು ಲೋಕಗಳನ್ನು ಕೊಂದರೂ ಅವನು ಕೊಂದವನಲ್ಲ ಮತ್ತು ಅದರಿಂದ ಲೇಪಿ೬ಸಲ್ಪಡುವದೂ ಇಲ್ಲವೆಂದು. ಆದಕಾರಣ ಹ್ಯಾಗೂ ಹೇಳಲ್ಪಟ್ಟ ಪ್ರಕಾರವಾಗಿ ದೃಢನಿಶ್ಚ

---

೪ ಅವಿವೇಕದಿಂದ ಮಿಶ್ರೀಭೂತನಾಗಿರುವ ಸಂಘಾತಕ್ಕೆ ಸಮೂಹವೆಂದು ಹೆಸರು.

೫. ತತ್ವಜ್ಞಾನಿಗಳು ೬. ಯಾತಕ್ಕೆಂದರೆ,—ನಾನೇ ಕಾರ್ಯವಂ ಮಾಡುವನೆಂದು ಕರ್ತೃತ್ವಾಭಿಮಾನಪೂರ್ವಕವಾಗಿ ಯಾವನು ಅಹಂಕರಿಸುವನೋ ಅವನ ತಲೆಯಮೇಲೆ ವಿಧಿನಿಷೇಧಗಳು ಸುಖದುಃಖಗಳು ಪಾಪಪುಣ್ಯಗಳು ಮತ್ತು ಸ್ವರ್ಗ ನರಕಾದಿಗಳ ಸರ್ವ ಸಂಸಾರವು ಗಂಟುಕಟ್ಟಿರುವದು ಅವಿದ್ಯಾ ಮೊಳಕೆಯಾದ ಅಹಂಕಾರವು ಕರ್ತೃತ್ವಾಭಿಮಾನಕ್ಕೆ ಗರ್ವಾದ್ದರಿಂದ ಜ್ಞಾನಾಗ್ನಿಯಿಂದದು ದಗ್ಧನಾಗಿ ಭರ್ಜಿತ ಬೀಜವೆಂತಿರುವ [illegible] ಜ್ಞಾನಿಗೆ ಯಾವದರ ಲೇಪವು ಇಲ್ಲ

ಯು ಉಕ್ತ ಪುರುಷನನ್ನು ಪಾಪಕರ್ಮಗಳು ಲಿಪಾಯಿಸುವಹಾಗೆ ಮಾಡಲಾರವು. ಹಾಗಾದರೂ ಅವನಿಗೆ ಪಾಪಕರ್ಮದಲ್ಲಿ ಕದಾಚಿತ್ ಪ್ರವೃತ್ತಿ ಸಂಭವಿಸುವದಿಲ್ಲ. ಯಾತಕ್ಕೆಂದರೆ,-ಅಜ್ಞಾನವಶದಿಂ ದೇಹಾದಿಗಳಲ್ಲಿ ಅಧ್ಯಾಸವಾಗುವದ್ದರಿಂದಲೇ ಅದರ ನಿಮಿತ್ತದಿಂ ಪುರುಷನಿಗೆ ಯಾವಾಗಲಾದರೂ ನಿಷಿದ್ಧಕರ್ಮಗಳಲ್ಲಿ ಪ್ರವೃತ್ತಿ ಯುಂಟಾಗುತ್ತಿರುವದು. ಮತ್ತು ಜ್ಞಾನೀಪುರುಷನಿಗಾದರೋ ಜ್ಞಾನಪ್ರಭಾವದಿಂದ ಸರ್ವ ದೇಹಾದಿಗಳಲ್ಲಿ ಮಿಥ್ಯಾತ್ವಬುದ್ಧಿ ಯುಂಟಾದುದರಿಂದ ಆ ಅಧ್ಯಾ[೭]ಸವಾಗುವದಿಲ್ಲ. ಅದ್ದರಿಂದ ಆ ಜ್ಞಾನಿಗೆ ಆ ಮಿಥ್ಯಾದೇಹಾದಿಗಳಿಗೋಸುಗ ನಿಷಿದ್ಧಕರ್ಮದಲ್ಲಿ ಒಂದು ವ್ಯಾಳೆಯು ಪ್ರವೃತ್ತಿ ಸಂಭವಿಸುವದಿಲ್ಲ. ಹಾಗೆ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. "ಆತ್ಮಾನಂ ಚೇದ್ವಿಜಾನೀಯಾದಯಮಸ್ಮೀತಿಪೂರುಷಃ । ಕಿಮಿಚ್ಛನ್ ಕಸ್ಯ ಕಾಮಾಯ ಶರೀರಮನುಸಂಜ್ವರೇ[೮]ತ್" ಅರ್ಥ॥ ಯಾವ ಕಾಲದಲ್ಲಿ ಈ ಪುರುಷನು ತನ್ನ ಆನಂದಸ್ವರೂಪನಾದ ಆತ್ಮನನ್ನು ಕರಾಮಲಕದಂತೆ ಅಪರೋಕ್ಷಾನುಭವವಂ ಮಾಡಿಕೊಳ್ಳುವನೋ ಆದರ ಬಳಿಕ ಅವನು ಯಾರಿಗೋಸುಗ ಮತ್ತು ಯಾವ ವಸ್ತುವನ್ನು ಇಚ್ಛಿಸುವವನಾಗಿ ತನ್ನ ಶರೀರಾದಿಗಳಿಗೆ ಪ್ರಯಾಸವಂ ಕೊಡುವನು? ಅಂದರೆ ಪ್ರಯಾಸ ಪಡಿಸುವದಿಲ್ಲವೆಂದು ತಾತ್ಪರ್ಯ ಇಷ್ಟೇ ಅಲ್ಲ. ಅನ್ಯ ಜನಗಳ ಸಂಗ್ರಹದ ನಿಮಿತ್ತವಾಗಿಯಾದರೂ ಜ್ಞಾನೀ ಪುರುಷನು ನಿಷಿದ್ಧಕರ್ಮಗಳಲ್ಲಿ ಪ್ರವೃತ್ತನಾಗುವದಿಲ್ಲ. ಹಾಗೆ ಈ ವಾರ್ತೆಯು ಕೌಷೀತಕೀ ಉಪನಿಷತ್ತಿನ ವ್ಯಾಖ್ಯಾ ವಿವರಣದಲ್ಲಿ, ಅನುಭೂತಿ ಪ್ರಕಾಶದೋಳ್ ವಿದ್ಯಾರಣ್ಯ ಸ್ವಾಮಿಗಳು ಪ್ರಕಟಪಡಿಸಿರುವರು. "ಶಿಷ್ಟಾಸ್ತ್ಯಜಂತಿಪಾಪಿಷ್ಠಂ ಪ್ರತ್ಯಕ್ಷಂನರಕೋಹಿ ಸಃ । ತಸ್ಮಿಂದಕಸ್ತ್ಯಪಾಪಂ ಗೃಹೀತ್ವಾನರಕಂವ್ರಜೇತ್ । ಸ್ತೋತ್ರಾದಿಕ ವಿರ್ನತಾಸಂಸರ್ಗಾತ್ ಸ್ವಯಮವ್ಯಾಚರತ್ತಥಾ। ಇತ್ಥಂದೋಷತ್ರಯಂ ದೃಷ್ಟ್ವಾ ಶಿಷ್ಟಾಃಪಾಪಂತ್ಯಜಂತಿಹಿ ॥ ಅರ್ಥ॥ ಪ್ರಥಮದಲ್ಲಿ ಯಾವ

೭. ಅಲ್ಲದ್ದನ್ನು ಹಾಗೆ ತಿಳಿಯುವದು. ಹೇಗೆ ಒಂದರಲ್ಲಿ ಮತ್ತೊಂದರ ಜ್ಞಾನವು. ಅಂದರೆ,- ರಜತವಲ್ಲದ ಶುಕ್ತಿಯನ್ನು ರಜತವೆಂದು ಗ್ರಹಿಸುವದು. ೮. ಈ ಶ್ಲೋಕಕ್ಕೆ ೨೯೮ ವ್ಯಾಖ್ಯಾನದಿಂದ ವಿಸ್ತಾರಪಡಿಸಿ ವಿದ್ಯಾರಣ್ಯ ಸ್ವಾಮಿಗಳು ಪಂಚದಶೀ ಪ್ರಕರಣದಲ್ಲಿ ತೃಪ್ತಿದೀಪಿಕೆ ಎಂದು ಹೆಸರಿಟ್ಟರು.

ಪುರುಷನು ಶಾಸ್ತ್ರ ನಿಷಿದ್ಧವಾದ ಪಾಪಕರ್ಮದಲ್ಲಿ ಪ್ರವೃತ್ತನಾಗುವನೋ ಅವನನ್ನು ಶಿಷ್ಟಪುರುಷನು ಪರಿತ್ಯಾಗ ಮಾಡಿಬಿಡುವನು. ಯಾಕೆಂದರೆ-ಪಾಪಿಷ್ಠ ಪುರುಷನು ಪ್ರತ್ಯಕ್ಷವಾಗಿ ನರಕದ ಸಮಾನವಾಗಿರುವನು. ಮತ್ತು, ದ್ವೇಷದಿಂದ ಪಾಪಿಷ್ಠ ಪುರುಷನನ್ನು ಸ್ನೇಹದಿಂದ ಯಾವನು ಅವನನ್ನು ನಿಂದಿಸುವನೋ, ಅವನು ಅವನ ಪಾಪದ ಭಾಗಿಯಾಗುವದ್ದರಿಂದ ನರಕವನ್ನು ಸೇರಿಕೊಳ್ಳುವನು. ಇನ್ನು ಮೂರನೇಯವನಾದ ಯಾವ ಪುರುಷನು ಆ ಪಾಪಿಷ್ಠನ ಅನುಕೂಲವಾಗಿವರ್ತಿಸುತ್ತಾ ಅವನನ್ನು ಸ್ತುತಿಸುತ್ತಿರುವನೋ, ಅವನು ತಾನೂಕೂಡ ಅವನಿಗೆ ಅನುಸಾರವಾದ ಪಾಪಕರ್ಮದಲ್ಲಿ ಪ್ರವೃತ್ತನಾದ್ದರಿಂದ ನರಕವಂ ಹೊಂದಿಕೊಂಡಿರುವನು ಆದ್ದರಿಂದ ಈ ಪ್ರಕಾರವಾಗಿ ಮೂರು ಮಹಾದೋಷಗಳಂ ನೋಡಿದ್ದರಿಂದ ವಿದ್ವಾನ್-ಜ್ಞಾನೀಪುರುಷನು ಪಾಪಕರ್ಮಗಳನ್ನು ದೂರದಿಂದಲೇ ಪರಿತ್ಯಾಗ ಮಾಡಿಬಿಡುವನು. ಎಂದು, ಹಾಗಾದರೆ ಪುರಾಣಗಳಲ್ಲಿ ವಿಶ್ವಾಮಿತ್ರ, ಪರಾಶರ, ನಾರದಾದಿಗಳು ವಶಿಷ್ಠಮುನಿಯ ನೂರು ಪುತ್ರರಂ ಕೊಂದಿದ್ದು, ಮತ್ಸ್ಯೋದರಿಯು ಗಮನಮಾಡಿದ್ದು, ಅಲ್ಲಲ್ಲಿ ಪರಸ್ಪರ ದ್ವೇಷವನ್ನುಂಟುಮಾಡುತ್ತಿದ್ದದ್ದು. ಇವೇ ಆದಿಯಾದ ನಿಷಿದ್ಧ ಕರ್ಮಗಳು ಕೇಳ್ಬರುತ್ತಿರುವವೆಂದು ಯಾವನೊಬ್ಬನು ಹೇಳಿದರೆ, ಅದಾದರೂ ಅವರ ಪ್ರಾರಬ್ಧ ಕರ್ಮಗಳು ಅತಿ ಬಲ ಉಳ್ಳದಾದ್ದರಿಂದ ಹಾಗಾಗಿರುವದು. ಆದ್ದರಿಂದ ಹೇಳಲ್ಪಟ್ಟ ವಿಷಯದಲ್ಲಿ ದೋಷವಾವುದೂ ಸಂಭವಿಸಲಿಲ್ಲ. ... ... ||೬೫||

ಅ|| ಪೂರ್ವೋಕ್ತಪ್ರಕಾರವಾಗಿ ಯಾವ ಪರಮಾತ್ಮನು ದೇಹೇಂದ್ರಿಯಾದಿಗಳಿಂದ ಅತ್ಯಂತ ಭಿನ್ನನು, ಅಕರ್ತನು, ಮತ್ತು ಅಭೋಕ್ತನು, ಪಾಪಪುಣ್ಯಗಳಿಂದ ನಿರ್ಲೇಪನೂ ಇರುವನು. ಆದರೆ, ಪುನಃ ಅವನು ಈ ದೇಹಾದಿಗಳಲ್ಲಿ ಯಾವ ಪ್ರಕಾರದಿಂದ ಬಂಧನಕ್ಕೊಳಗಾಗಿರುವನೋ, ಎಂಬ ಈ ಅಭಿಪ್ರಾಯವಂ ಪಿಡಿದು ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ನಿಬಧ್ಯತೇಯಂಕಿಲಕೇನಹೇತುನಾ ।
ತಥೈವಕೇನೈಷಜನೋವಿಮುಚ್ಯತೇ ॥

ನಿಬಂಧಮೋಕ್ಷೌಚಕಿಮಾತ್ಮಕೌಸ್ಮೃತೌ |
ಕೃಪಾದ್ರ್ರದೃಷ್ಟೇವದಮೇಸಮಾಸತಃ || ||೬೬||

ಟೀಕಾ|| ನಿಬಧ್ಯತ ಇತಿ—ಎಲೈ (ಕೃಪಾದ್ರ್ರದೃಷ್ಟೇ) ಅಂದರೆ,-ಸ್ವಾಭಾವಿಕ ಕೃಪೆಯಿಂದ ಆರ್ದ್ರದೃಷ್ಟಿಯುಳ್ಳ ಗುರುವೇ; ತಾವು ಹೇಳಿದ್ದೇನಂದರೆ,-ಆತ್ಮನು ದೇಹ, ಇಂದ್ರಿಯಾದಿಗಳಿಂದ ಭಿನ್ನನು, ಮತ್ತು ಶುಭಾಶುಭ ಕರ್ಮಗಳಿಂದ ನಿರ್ಲೇಪನು, ಇನ್ನೂ ಅ ಕರ್ತನು ಅಭೋಕ್ತನು ಎಂದು. ಅದರೆ ಪುನಃ (ಅಯಂ) ಅಂದರೆ,-ಈ ಆತ್ಮನು, (ಕೇನಹೇತುನಾ) ಅಂದರೆ,-ಯಾವ ಕಾರಣದಿಂದ ಈ ದೇಹ ಇಂದ್ರಿಯಾದಿಗಳಲ್ಲಿ ಪರವಶನಾಗಿಬಂಧಕ್ಕೊಳಗಾಗಿರುವನೋ, ಹಾಗೆ ಅವನು ಈ ಪ್ರಕಾರವಾದ ಬಂಧನಕ್ಕೆ ಪ್ರಾಪ್ತನಾಗಿ, ಪುನಃ ಆ ಬಂಧನದಿಂದ ಯಾವ ಪ್ರಕಾರವಾಗಿ, (ವಿಮುಚ್ಯತೆ) ಅಂದರೆ,-ಮೋಕ್ಷವನ್ನು ಪಡದು ಕೊಳ್ಳುವನೋ, ಹಾಗೆ ಬಂಧ ಮತ್ತು ಮೋಕ್ಷ ಇವೆರಡರ ಸ್ವರೂಪ ಯಥಾರ್ಥವೇನಿರುವದೋ, ಆ ಈ ಸರ್ವವನ್ನು ಕೃಪೆಯಿಂದ ನನ್ನಂ ಕುರಿತು (ಸಮಾಸತಃ) ಅಂದರೆ,—ಸಂಕ್ಷೇಪವಾಗಿ ನಿರೂಪಿಸಬೇಕು ಅಂದನು. ... ... ||೬೬||

ಅ|| ಈ ಪ್ರಕಾರವಾಗಿ ಶಿಷ್ಯನ ಮೂರು ಪ್ರಶ್ನೆಗಳನ್ನು ಕೇಳಿ, ಈಗ ಗುರು ಅದಕ್ಕೆ ಒಂದೇ ಶ್ಲೋಕದಿಂದ ಉತ್ತರವನ್ನು ಪ್ರಕಟ ಪಡಿಸುತ್ತಾರೆ.

—ಗು ರು ರು ವಾ ಚ—

ನಿಬಧ್ಯತೇಽಯಂವಿಷಯಾನುರಾಗತೋ |
ವಿರಾಗತಸ್ತೇಷುವಿಮುಚ್ಯತೆದ್ರುತಮ್[೧] ||
ಸ್ವಭಾವತಸ್ಸಂಸ್ಖಲನಂಹಿಬಂಧನಂ |
ಪುನಸ್ಸ್ಥಿತಿಸ್ತತ್ರಪಮುಕ್ತಿರುಚ್ಯತೆ || ||೬೭||

ಟೀಕಾ|| ನಿಬಧ್ಯತ ಇತಿ—ಎಲೈ ಶಿಷ್ಯನೇ, (ಅಯಂ) ಅಂದರೆ, ಈ ಯಾವ ಪ್ರಕೃತ ಆತ್ಮನುಂಟೋ, ಅವನು (ವಿಷಯಾನುರಾಗತಃ) ಅಂದರೆ,-ಶಬ್ದ ಸ್ಪರ್ಶಾದಿಯಾದ ಯಾವ ವಿಷಯಗಳಿರುವವೋ, ಅದರ

೧. ಕರ್ಣಾಟಮಯಪಾದ.

ಅನುರಾಗ-ಅಂದರೆ,-ಆಸಕ್ತಿ ಮಾಡಿದ್ದರಿಂದಲೇ ದೇಹಾದಿಗಳಲ್ಲಿ ಬಂಧಾ ನುಮಾನನಾಗಿರುವನು. ಮತ್ತು (ವಿರಾಗತಃ) ಅಂದರೆ,-ಎಲೈ ಶಿಷ್ಯ ನೇ ! ಯಾವ ಕಾಲದಲ್ಲಿ ಈ ಜೀವಾತ್ಮನು ಆ ವಿಷಯುಗಳಿಂದ ದೋಷ ದೃಷ್ಟಿಪೂರ್ವಕವಾಗಿ, ವೈರಾ೧ಗ್ಯವಂ ಪಡದುಕೊಳ್ಳುವನೋ ಆಗ(ವಿ ಮುಚ್ಯತೇದೃತಂ) ಅಂದರೆ,-ಶೀಘ್ರವಾಗಿ ಮೋಕ್ಷಪದವಂ ಪೊಂದಿಕೊಳ್ಳು ವನು ಹಾಗೆ ಈ ವಾರ್ತೆಯು ಅನ್ಯತ್ರದಲ್ಲೂ ಗುರುಶಿಷ್ಯರ ಸಂವಾದ ದ್ವಾರಾ ಪ್ರಕಟಿಸಲ್ಪಟ್ಟಿರುವದು. “ ಒದ್ಧೋಹಿಕೋಂಯೋವಿಷಯಾನು ರಾಗೀ ಕೋವಾವಿಮುಕ್ತೋವಿಷಯೆವಿರಕ್ತಃ ,, ಈ ವಾಕ್ಯದ ಅರ್ಥವು. ಲಿ ಹೇಳಿದ ಅರ್ಥದ ಸಮಾನವಾಗಿರುವದು. ಅಥವಾ ವಿಷಯ ಶಬ್ದ ಂದ ಇಲ್ಲಿ ಬುದ್ಧಿ ಮೊದಲುಗೊಂಡು ಸ್ಥೂಲದೇಹ ಪರ್ಯಂತವಾದ ಪಂ ಕಕೋಶಗಳ ಗ್ರಹಣವಂ ತಿಳಿಯುತಕ್ಕದ್ದು. ಯಾತಕ್ಕಂದರೆ,-ಯಾವ ಸ್ತುವು ಯಾವದರಿಂದ ಪ್ರಕಾಶಿತವಾಗುವದೋ ಅದು ಆದರ ವಿಷಯು ಂದು ಹೇಳಲ್ಪಡುವದು. ಆದು ಬುದ್ಧಿ ಆದಿ ಸರ್ವಸಂಘಾತಕ್ಕೆ ಸಾ ಕ್ಷಿಯಾದ ಆತ್ಮನಿಂದ ಪ್ರಕಾಶಿತವಾಗಿರುವದು. ಆದ್ದರಿಂದ ಅದಕ್ಕೆ ಷಯುವೆಂದು ಹೇಳಲ್ಪಟ್ಟಿರುವದು. ಅದರಲ್ಲಿ ಯಾವ ಅನುರಾಗ-ಅಂದ ರೆ,-ಆತ್ಮ ಮತ್ತು ಅನಾತ್ಮದ ಅವಿವೇಚನಪೂರ್ವಕವಾದ ಕಲ್ಪಿತತಾ ದಾತ್ಮ್ಯಧ್ಯಾಸ ಉಂಟೋ, ಅದೇ ಆತ್ಮನ ಬಂಧಕ್ಕೆ ಹೇತುವಾಗಿರುವ ದು. ಈ ವಾರ್ತೆಯನ್ನು ಸಾಂಖ್ಯಸೂತ್ರದಲ್ಲಿ ಕಪಿಲದೇವನೂಕೂಡ ರ್ಣಿಸಿ ಇರುವನು. “ ಪ್ರಕಾರಾಂತರಾಸಂಭವಾದ ವಿವೇಕಪವಬಂಧಃ ,, ರ್ಥ॥ ನಿತ್ಯಮುಕ್ತಾಸಂಗರೂಪನಾದ ಆತ್ಮನ ಬಂಧನದಲ್ಲಿ ಅನ್ಯ ಯಾ ಪ್ರಕಾರದಲ್ಲೂ ಸಂಭವವಾಗದ್ದರಿಂದ ಕೇವಲ ಯಾವ ಆತ್ಮಾ ಮತ್ತು

೧. ಶಂಕರಾಚಾರ್ಯರ ಅಪರೋಕ್ಷಾನುಭೂತಿಯಲ್ಲಿ “ ಬ್ರಹ್ಮಾದಿ ... ಂತೇಷುವೈರಾ ಗ್ಯಂವಿಷಯೆಷ್ವನು । ಯಥೈವಕಾಕವಿಷ್ಠಾಯಾಂವೈರಾಗ್ಯಂ ಧ್ಧಿನಿರ್ಮಲಂ ,, ಎಂದು ಹೇಳಿ ವನು. ಇದರ ಅರ್ಥವೇನೆಂದರೆ,—ಬ್ರಹ್ಮಲೋಕವಾದಿಯಾಗಿ ವೃಕ್ಷ ಪಾಷಾಣಾದಿಗಳೇ ಡೆಯಾಗಿರುವ ಇಂದ್ರಿಯಾಪೇಕ್ಷೆಗಳಾದ ವಿಷಯುಗಳಲ್ಲಿ ಕಾಗೆಯ ಮಲದಲ್ಲಿ ಹ್ಯಾಗೆ ಅಸಹ್ಯ ವೋ ಹಾಗೆ ಪ್ರೀತಿರಹಿತವಾಗಿರುವದೇ ನಿರ್ಮಲವಾದ ವೈರಾಗ್ಯವೆಂದು ತಿಳಿಯತಕ್ಕದ್ದು. ಈ ವೈರಾಗ್ಯ ವಿಷಯುವು ಹಿಂದೆ ಜನ್ಮಾದಿ ವರಿಸಿದ್ದರೂ ಅದು ಜ್ಞಾಪಕದಲ್ಲಿ ನಿಲ್ಲಲೋಸು ಪುನಃ ಇಲ್ಲಿ ಎಚ್ಚರಪಡಿಸಿರುವದೆಂದು ತಿಳಿಯಬೇಕು.

ಅನಾತ್ಮದ ಪರಸ್ಪರ ಅವಿವೇಕ ವಿರುವದೋ, ಅದೇ ಬಂಧಕ್ಕೆ ಕಾರಣ ವು ಎಂದು. ಹಾಗೆ ಭಗವದ್ಗೀತೆಯಲ್ಲಿಯೂ "ಕಾರಣಂಗುಣಸಂಗೋಸ್ಯ ಸದಸದ್ಯೋನಿಜನ್ಮಸು,, ಅರ್ಥ॥ ಎಲೇ ಅರ್ಜುನಾ, ಈ ಆತ್ಮನಿಗೆ ತ್ರಿ ೧ ಗುಣಗಳ ಕಾರ್ಯಭೂತವಾದ ದೇಹ ಇಂದ್ರಿಯಾದಿಗಳೊಡನೆ ಯಾವ ಸಂಗ ಉಂಟೋ, ಅಂದರೆ-ಅಧ್ಯಾಸವಿರುವದೋ, ಅದೇ ನಾನಾಪ್ರಕಾರವಾದ ನೀಚ, ಉಚ ಯೋನಿಗಳ ಗ್ರಹಣದಲ್ಲಿ ಹೇತುವು ಎಂದು ಶ್ರೀಕೃಷ್ಣನು ಹೇಳಿರುವನು. ಹಾಗೆ (ವಿರಾಗತಃ) ಅಂದರೆ,-ಪುನಃ ಗುರು ಹಾಗೆ ವೇದಾಂತಶಾಸ್ತ್ರೋಕ್ತವಾದ ರೀತಿಯಿಂದ ದೇಹಾದಿಗಳಿಂದಾತ್ಮನನ್ನು ಭಿನ್ನ ವಿವೇಚನೆಯುಂ ಮಾಡಿ ಬಳಿಕ ಆ ದೇಹಾದಿಗಳಲ್ಲಿ ಯಾವ ಅಧ್ಯಾಸದ ನಿವೃತ್ತಿ ಯುಂಟೋ ಅದೇ ಮೋಕ್ಷಕ್ಕೆ ಕಾರಣವಾಗುವದೆಂದು. ಈ ಪ್ರಕಾರವಾಗಿ ಪೂರ್ವದ ಎರಡು ಪ್ರಶ್ನೆಗಳ ಉತ್ತರವಂ ನಿರೂಪಿಸಿ, ಈಗ ಮೂರನೇ ಪಕ್ಕೆ ಹೇಳುತ್ತಾರೆ. (ಸ್ವಭಾವತಃ) ಅಂದರೆ,-ಎಲೈ ಶಿಷ್ಯನೇ! ತನ್ನ ಸ್ವಭಾವದಿಂದ ಯಾವದು ಪ್ರಚ್ಯುತವಾಗುವದೋ ಅಂದರೆ, ಹೇಳಲ್ಪಟ್ಟ ಅಧ್ಯಾಸದಿಂದ ತನ್ನ ನಿತ್ಯತ್ವ ಮುಕ್ತತ್ವ ಸಚ್ಚಿದಾನಂದ ಮಯತ್ವಾದಿ ಸ್ವಭಾವವನ್ನು ಮರೆತುಬಿಟ್ಟು, ಬದ್ಧತ್ವ ದುಃಖಿತ್ವ ಪರತಂತ್ರತ್ವಾದಿ ದೇಹೇಂದ್ರಿಯಾದಿಗಳ ಸ್ವಭಾವಗಳನ್ನು ಯಾವ ತನ್ನಲ್ಲಿ ಆರೋಪಣ ಮಾಡಿಕೊಳ್ಳಲ್ಪಡುವದೋ, ಅದೇ ಬಂಧ ವೆನಿಸಿಕೊಳ್ಳುವದು. ಮತ್ತು (ಪುನಸ್ಥಿತಿಸ್ತತ್ರ) ಅಂದರೆ,-ವೇದಾಂತ ಶಾಸ್ತ್ರದ ಯುಕ್ತಿಗಳ ವಿವೇಕನದಿಂದ ದೇಹೇಂದ್ರಿಯಾದಿಗಳ ಸ್ವಭಾವವಾದ ಆರೋಪದ ಪರಿತ್ಯಾಗವಂ ಮಾಡಿ, ಹೇಳಲ್ಪಟ್ಟ ತನ್ನ ಸಚ್ಚಿದಾನಂದ ಮಯತ್ವಾದಿ ಸ್ವಭಾವದಲ್ಲಿ ಯಾವದು ಹಿಂತಿರಿಗಿ ನಿಲ್ಲಲ್ಪಡುವದೋ, ಅಂದರೆ-ಅಪರದೃಢ ನಿಶ್ಚಯ ಮಾಡಲ್ಪಡುವದೋ, ಅದೇ (ವಿಮುಕ್ತಿರುಚ್ಯತೆ) ಅಂದರೆ,-ಮೋಕ್ಷಪದವೆನಿಸಿಕೊಳ್ಳುವದು. ಹಾಗೆ ಯೋಗವಾಸಿಷ್ಠದಲ್ಲಿಯೂ ಹೇಳಲ್ಪಟ್ಟಿರುವದು. "ಜ್ಞಾನಸ್ಯಾಜ್ಞೇಯತಾಪತ್ತಿರ್ಬಂಧ ಇತ್ಯಭಿಧೀಯತೆ। ತಸ್ಯೈವಜ್ಞೇಯತಾಶಾಂತಿ ರ್ಮೋಕ್ಷ ಇತ್ಯಭಿಧೀಯತೆ,, ಅರ್ಥ॥ ಜ್ಞಾನರೂಪನಾದ ಆತ್ಮನಿಗೆ ಯಾವ ದೇಹ ಇಂದ್ರಿಯಾದಿ ರೂಪವಾದ

೧. ಸತ್ವ ರಜಸ್, ತಮಸ್.

ಜ್ಞೇಯಭಾವದ ಪ್ರಾಪ್ತಿಯುಂಟೋ ಅದೇ ಬಂಧವೆನಿಸಿಕೊಳ್ಳುವದು. ಮತ್ತು ಪುನಃ ಅದೇ ಆತ್ಮನಿಗೆ ಜ್ಞಾನ ವಿವೇಕದ್ವಾರಾ ದೇಹೇಂದ್ರಿಯಾದಿ ರೂಪವಾದ ಜ್ಞೇಯಭಾವದ ಶಾಂತಿಯಾಗುವದೋ, ಅದೇ ಮೋಕ್ಷವೆನಿಸಿಕೊಳ್ಳುವದು ಎಂದು. ... ... ॥೬೭॥

ಅ॥ ಈ ಪ್ರಕಾರದಿಂದ ಕಾರಣಸಹಿತವಾಗಿ ಬಂಧ ಮತ್ತು ಮೋಕ್ಷದ ಸ್ವರೂಪವನ್ನು ಕೇಳಿ, ಈಗ ಪುನಃ ಅದೇ ಜೀವಾತ್ಮನ ವಿಶೇಷ ಬೋಧಾರ್ಥವಾಗಿ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

— ಶಿಷ್ಯ ಉವಾಚ —

ಜೀವೋವಿಭುರ್ವಾಣುರುತಾಪಿಮಧ್ಯಮೋ ।
ನಾನಾಥವೈಕಃಕಿಮುಮಧ್ಯಸಂಖ್ಯಕಃ ।
ನಿತ್ಯೋಥವಾಕಿಂಪ್ರಲಯೇವಿನಶ್ಯತಿ ।
ಸರ್ವಂತದೇತತ್ಕೃಪಯಾವದಾಶುಮೇ ॥ ॥೬೮॥

ಟೀಕಾ॥ ಜೀವ ಇತಿ—ಎಲೈ ಭಗವಂತನೇ, ಈ ಜೀವಾತ್ಮನು (ವಿಭುಃ) ಅಂದರೆ,-ಸರ್ವತ್ರ ವ್ಯಾಪಕನೋ, ಅಲ್ಲದೆ ಅಣು-ಅಂದರೆ-ಅಣುವಿಗೆ ಸಮಾನ ಸೂಕ್ಷ್ಮ ಪರಿಮಾಣ ಉಳ್ಳವನೋ, ಅಥವಾ (ಮಧ್ಯಮಃ) ಅಂದರೆ,-ಮಧ್ಯಮ ಪರಿಮಾಣ ಉಳ್ಳವನೋ ಅಂದರೆ, ಯಾವದಾದರು ನಿಯತಪರಿಮಾಣ ಉಳ್ಳವನಾಗಿರುವನೋ, ಹಾಗೆ (ನಾನಾ) ಅಂದರೆ,-ಈ ಜೀವಾತ್ಮನು ಪ್ರತಿ ದೇಹವು ಬಿನ್ನಭಿನ್ನವಾದ್ದರಿಂದ ಅನೇಕನಾಗಿರುವನೋ, ಹಾಗಲ್ಲದೆ ಸರ್ವ ಶರೀರಗಳಲ್ಲಿ ಏಕನಾಗಿರುವನೋ, ಅಥವಾ (ಮಧ್ಯಸಂಖ್ಯಕಃ) ಅಂದರೆ,-ಇವನಿಗೆಯಾವದಾದರೂನಿಯತಸಂಖ್ಯಾವಾಗಿರುವದೋ, ಅಥವಾ ಈ ಜೀವಾತ್ಮನು (ನಿತ್ಯಃ) ಅಂದರೆ,-ಸರ್ವದಾ ಅವಿನಾಶಿಯೋ, ಅಲ್ಲದೆ ದೇಹದ ಮರಣ, ಅಥವಾ ಮಹಾ ಪ್ರಲಯದಲ್ಲಿ ನಾಶವನ್ನು ಹೊಂದುತ್ತಿರುವನೋ, ಆ ಈ ಸರ್ವವನ್ನು ಕೃಪೆಯಿಂದ ನನ್ನಂ ಕುರಿತು ಶೀಘ್ರವಾಗಿ ಅಪ್ಪಣೆ ಕೊಡಬೇಕು ಎಂದನು॥೬೮॥

ಅ॥ ಇಲ್ಲಿ ಶಿಷ್ಯನ ಮೂರು ಪ್ರಶ್ನೆಗಳಿರುವವು. ಅವುಗಳಲ್ಲಿ ಪ್ರಥಮದ್ದಾದರೋ ಜೀವಾತ್ಮನ ಪರಿಮಾಣವಿಷಯಕವಾಗಿರುವದು. ಮತ್ತು ಎರಡನೇದು ಅವನ ಸಂಖ್ಯಾವಿಷಯಕವಾಗಿರುವದು. ಇನ್ನು ಮೂರನೆ

ಯಾದು ಅವನ ನಿತ್ಯತಾ ಮತ್ತು ಅನಿತ್ಯತಾವಿಷಯಕವಾಗಿರುವದು. ಹಾಗೆ ಆ ಸರ್ವಕ್ಕೂ ಕ್ರಮವಾಗಿ ಮೂರು ಶ್ಲೋಕಗಳಿಂದ ಗುರು ಉತ್ತರವನ್ನು ಪ್ರಕಟಪಡಿಸುತ್ತಾರೆ.

— ಗು ರು ರು ವಾ ಚ —

ನಾಣುಃಸಮಸ್ತಾವಯವಾನುಗೋಯತೋ |
ನೋಮಧ್ಯಮೋಯಂಪರಿಣಾಮವರ್ಜನಾತ್ ||
ಆಕಾಶವತ್ಸರ್ವಗತೋಹಿಗೀಯತೇ |
ತಸ್ಮಾತ್ತ್ವಮೇನಂವಿಭುಮೇವನಿಶ್ಚಿನು॥ [೬೯]

ಟೀಕಾ—ನಾಣುರಿತಿ॥ ಎಲೈ ಶಿಷ್ಯನೆ ! ಈ ಜೀವಾತ್ಮನು ಅಣುವಿಗೆ ಸಮಾನವಾದ ಸೂಕ್ಷ್ಮಪರಿಮಾಣವುಳ್ಳವನಲ್ಲ. ಯಾತಕ್ಕೆಂದರೆ,-ಯತೋ-ಅಂದರೆ,-ಯಾವ ಕಾರಣದಿಂದ ಶರೀರದಲ್ಲಿನ ಜುಟ್ಟು ಮೊದಲುಗೊಂಡು ಪಾದಾಂಗುಷ್ಟ ಪರಿಯಂತರವು (ಸಮಸ್ತಾವಯವಾನುಗಃ) ಅಂದರೆ,-ಹಸ್ತಪಾದಾದಿಯಾದ ಸರ್ವ ಅವಯವಗಳಲ್ಲಿ ಅನುಗ ೧ ತನಾಗಿರುವನೊ, ಯಾವಾಗ ಆತ್ಮನು ಶರೀರದ ಸರ್ವಾವಯವಗಳಲ್ಲಿ ವ್ಯಾಪಕನಾಗದಿದ್ದರೆ ಆಗ ನನ್ನ ಶಿರದಲ್ಲಿ ವೇದನೆ ಆಗುವದು ನನ್ನ ಪಾದದಲ್ಲಿ ವೇದನಿಯಾಗುವದು ಎಂಬ ಈ ಪ್ರಕಾರದ ಅನುಭವವು ಏಕಕಾಲದಲ್ಲಿ ಆಗದು. ಮತ್ತು ಆಗಿರುವದ್ದರಿಂದ ಆತ್ಮನು ಅಣುಪರಿಮಾಣ ಉಳ್ಳವನ ೨ ಲ್ಲ. ಇನ್ನು "ಬಾಲಾಗ್ರಶತಭಾಗಸ್ಯ ಶತಧಾ ಕಲ್ಪಿತಸ್ಯ ಚ । ಭಾಗೋ ಜೀವಃ ಸವಿಜ್ಞೇಯಃ ಸಚಾನಂತ್ಯಾಯ ಕಲ್ಪತೇ" ಅರ್ಥ-ತಲೆಯ ಕೂದಲಿನ ಅಗ್ರಭಾಗವನ್ನು ನೂರು ಭಾಗವು ಮಾಡಿ ಪುನಃ ಅದರಲ್ಲಿಂದ ಒಂದು ಭಾಗವನ್ನು ನೂರು ಭಾಗವು ಮಾಡುವಲ್ಲಿ ಎಷ್ಟು ಭಾಗ ಸೂಕ್ಷ್ಮವಾಗುತ್ತಿರುವದೋ, ಅಷ್ಟು ಭಾಗ ಜೀವನು ಸೂಕ್ಷ್ಮನೆಂದು ತಿಳಿಯತಕ್ಕದ್ದು. ಮತ್ತು ಆ ಜೀವಾತ್ಮನು ಅನಂತನು ಎಂಬ ಇತ್ಯಾದಿ ಶ್ರುತಿಗಳಲ್ಲಿ ಯಾವದು

೧. [illegible] ನೆಲೆಸಿರುವನೋ. ೨. ಈ ವಿರೋಧದಿಂದ ಸ್ವರೂಪದಿಂದ [illegible] ತನ್ನ [illegible]ವೆಂದು ತಿಳಿಯತಕ್ಕದ್ದು.

ಹೇಳಿರುವದೋ ೩ ಅದಾದರೂ ಜಾಗ್ರತ್ಸ್ವಪ್ನ ಸುಷುಪ್ತಿ ರೂಪವಾದ ಮೂರು ಅವಸ್ಥೆಗಳೊಳಗೆ ಗಮನಾಗಮನದಲ್ಲಿ ಮಾರ್ಗ ಭೂತವಾದ ಕಂಠವಿಂದಾದಿಯಾಗಿ ಹೃದಯ ಪರ್ಯಂತವಾಗಿರುವ ಹಿತಾ ಎಂಬ ಹೆಸರುಳ್ಳ ಸೂಕ್ಷ್ಮನಾಡಿ ಇರುವದೋ ಅದರಲ್ಲಿ ಪ್ರವೇಶಿಸುವದ್ದರಿಂ ಜೀವಾತ್ಮನಿಗೂ ಗೌಣ ವೃತ್ತಿಯಿಂದ ಸೂಕ್ಷ್ಮತ್ವವನ್ನು ಪ್ರಕಟಿಸಿ ಇರುವದೆಂದು ತಿಳಿದುಕೊಳ್ಳಬೇಕು. ಹಾಗೆ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಬರೆಯಲ್ಪಟ್ಟಿರುವದು. ತಾವಾ ಅಸ್ಯೈತಾಹಿತಾನಾಮನಾಡ್ಯೋಯಥಾಕೇಶಃ ಸಹಸ್ರಧಾಭಿನ್ನಃ, ಅರ್ಥ—ಹಾಗೆ ಅಲ್ಲಿ ಈ ಆತ್ಮನ ಗಮನಾಗಮನದಲ್ಲಿ ಮಾರ್ಗ ಭೂತವಾದ ಹಿತಾನಾಮನಾಡಿ ಇರುವದು ಹ್ಯಾಗೆ ತಲೆಯ ಕೂದಲು ಸಹಸ್ರ ಭಾಗಮಾಡುವದ್ದರಿಂದ ಸೂಕ್ಷ್ಮವಾಗುವದೋ ಹಾಗೆಯೆ ಸೂಕ್ಷ್ಮವಾಗಿರುವದು ಎಂದು ಹಾಗೆ (ನೊಮಧ್ಯಮೊಯಂ) ಅಂದರೆ,-ಎಲೈ ಶಿಷ್ಯನೇ! ಈ ಆತ್ಮನು ಮಧ್ಯಮ ಅಂದರೆ ಶರೀರಕ್ಕೆ ಸಮಾನವಾದ ಪರಿಮಾಣ ವುಳ್ಳವನೂ ಅಲ್ಲ. ಯಾಕಂದರೆ,-ಯಾವದು ಶರೀರಕ್ಕೆ ಸಮಾನವಾದ ಪರಿಮಾಣ ವುಳ್ಳದ್ದಾಗುವದೋ ಅದು ಅಂದರೆ,-ಯಾವ ಆತ್ಮ ಹ ೪ ಸ್ತಿಯ ಶರೀರದಲ್ಲಿ ಇರುವದೋ ಮತ್ತು ಪುನಃ ಕದಾಚಿತ್ ಪ್ರಾರಬ್ಧ ಕರ್ಮದಿಂದ ಅದು ಪಿ೫ಪೀಲಿಕ ಶರೀರವಂ ಪೊಂದುವದಾದರೆ, ಆಗ ಅದರಲ್ಲಿ ಯಾವ ಪ್ರಕಾರದಿಂದ ಸೇರಲಾಗುವದು ಇದರಂತೆಯೆ ಪಿಪೀಲಿಕ ದೇಹದಲ್ಲಿನ ಆತ್ಮಾ ಹಸ್ತಿಯ ಶರೀರದಲ್ಲಿನ ಸರ್ವಾಂಗಗಳೊಳ ಯಾವ ಪ್ರಕಾರದಿಂದ ವ್ಯಾಪಿಸಿಕೊಳ್ಳಲಾದೀತು ಆದ್ದರಿಂದ ಎಲೈ ಶಿಷ್ಯನೆ! ಈ ಆತ್ಮನು ಮಧ್ಯಮ ಪರಿಮಾಣವುಳ್ಳವನೂ ಅಲ್ಲ. ಮತ್ತು ಯಾರೊ ಕೆಲವರು ೬ ಅಂದರೆ,-ಜೈನಮತದವರು ಹೀಗೆ ಗ್ರಹಿಸುತ್ತಿರುವರು. ಯೇನೆಂದರೆ, ಯಾವಾಗ ಹಸ್ತಿಯ ಆತ್ಮಾ ಪಿಪೀಲಿಕಾ ಶರೀರದಲ್ಲಿ ಪೊಂದುತ್ತಿರುವದೊ, ಆಗ ಅದರ ಅವಯವವು ನ್ಯೂನವಾಗಿ ಹೋಗುವದು. ಮತ್ತು ಯಾವಾಗ ಪಿಪೀಲಿಕಾ ಶರೀರದಲ್ಲಿನ ಆತ್ಮಾ ಹಸ್ತಿಯ ಶರೀ

೩. ಅಂದರೆ ಆತ್ಮನಿಗೆ ಸೂಕ್ಷ್ಮ ಪರಿಮಾಣವನ್ನು ವರ್ಣಿಸ ಮಾಡಿರುವದು. ೪ ಆನೆ ೫ ಇರುವೆ-ಚೀಮೆ. ೬ ಇವರ ನಿರೂಪಣೆಯಿಂದ ದಿಗಂಬರ ಮತವನ್ನು ತಿಳಿಸುವರೆಂ ತಿಳಿಯುತಕ್ಕದ್ದು. ಯಾಕಂದರೆ ದಿಗಂಬರರು ಆತ್ಮನನ್ನು ಮಧ್ಯಮ ಪರಿಮಾಣ ಉಳ್ಳವನೆಂದು ಹೇಳುತ್ತಿರುವರು.

ರದಲ್ಲಿ ಶೇರಿಕೊಳ್ಳುವದೋ, ಆಗ ಅದರ ಅವಯವವು ಅಧಿಕವಾಗಿ ಹೋಗುವದು ಎಂದು ಹೇಳುವರು. ಅವರ ಈ ವಾರ್ತೆಯು ಅಸಂಭವವೆನಿಸುವದು. ಯಾತಕ್ಕಂದರೆ,-ಈ ನಿಯಮ ವಿರುವದು. ಅದೇನಂದರೆ,-ಯಾವವಸ್ತು ಪರಿ ೭ ಣಾಮಿಯಾ ಆಗುವದೊ ಅದು ಯಾವದಾದರೊಂದು ಕಾಲದಲ್ಲಿ ನಾಶವಾಗುತ್ತಿರುವದು. ಮತ್ತು ಆತ್ಮನಾದರೋ ಸರ್ವಶೃತಿಸ್ಮೃತಿಗಳಲ್ಲಿ ಅವಿನಾಶೀ ಎಂತಲೂ ಇನ್ನು ಪರಿಣಾಮದಿಂದ ರಹಿತನೆಂತಲೂ ಪ್ರತಿಪಾದನ ಮಾಡಿರುವವು. ಮತ್ತು ಯಾರಾದರು ಆತ್ಮನನ್ನು ನಾಶವುಳ್ಳನನೂ ಎಂದರೆ, ಆಗಕೃತನಾಶ ಮತ್ತು ಅಕೃತಾಭ್ಯಾಗಮ ಅಂದರೆ,-ಈ ಜನ್ಮದಲ್ಲಿ ಮಾಡಿದ ಕರ್ಮಗಳಿಗೆ ಭೋಗವಿನಃ ನಾಶವು ಮತ್ತು ಮಾಡದೆ ಇರುವ ಕರ್ಮಗಳಿಗೆ ಆಗಾಮಿ ಜನ್ಮದಲ್ಲಿ ಭೋಗವು ಎಂಬ ಈ ಎರಡು ದೋಷಗಳು ಪ್ರಾಪ್ತಿಯಾಗುವವು. ಹಾಗೆ ಈ ಪ್ರಕಾರವಾಗಿ ಹೇಳಲ್ಪಟ್ಟ ಎರಡು ಪಕ್ಷಗಳೂ ಅಸಂಭವವಾದ್ದರಿಂದ ಪರಿಶೇಷದಲ್ಲಿ ಎಲೈ ಶಿಷ್ಯನೇ ! ನೀನು ಈ ಆತ್ಮನನ್ನು (ವಿಭುಮೇವನಿಶ್ಚಿನು) ಅಂದರೆ,-ಸರ್ವವ್ಯಾಪಕನೆ ಎಂದು ನಿಶ್ಚಯಿಸುವನಾಗು. ಯಾತಕ್ಕಂದರೆ,-(ಆಕಾಶವತ್) ಅಂದರೆ,-ಈ ಆತ್ಮನನ್ನು ಶೃತಿಸ್ಮೃತಿಗಳಲ್ಲಿ ಆಕಾಶದಂತೆ ಸರ್ವಗತನೆಂದು ಗಾಯ ೮ ನ ಮಾಡಿರುವವು. ಆ ಶೃತಿಯಾವದೆಂದರೆ, "ಆಕಾಶವತ್ಸರ್ವಗತಶ್ಚನಿತ್ಯಃ ", ಅರ್ಥ—ಈ ಆತ್ಮನು ಆಕಾಶದಂತೆ ಸರ್ವಗತನು. ಮತ್ತು ನಿತ್ಯನು ಎಂದು॥ ಇನ್ನು ಸ್ಮೃತಿ ಎಂದರೆ,-ಭಗವದ್ಗೀತೆಯಲ್ಲಿಯೂ ಹೇಳಲ್ಪಟ್ಟಿರುವದು. "ನಿತ್ಯಃ ಸರ್ವಗತಸ್ಥಾಣುರಚಲೋಯಂಸನಾತನಃ ", ಅರ್ಥ—ಎಲೈ ಅರ್ಜುನ ಈ ಆತ್ಮ ೯ ನು ನಿತ್ಯ೧೦ನು, ಸರ್ವಗ ೧೧ ತನು, ಸ್ಥಾಣು ೧೨ ವಿನಂತೆ ಸ್ಥಿರನು, ಅಚ ೧೩ ಲನು

---

೭ ಒಂದು ವಸ್ತುವು ಮೊದಲಿನ ರೂಪದಲ್ಲಿರದೆ ಬೇರೆ ರೂಪವನ್ನು ಪಡೆಯುತ್ತಾ ಹೋಗುವದಕ್ಕೆ ಪರಿಣಾಮಿ ಎಂಬ ಹೆಸರು. ಅಂದರೆ,-ಹೂ ಹೀಚಾಗುವದು ಹೀಚು ಕಾಯಿ ಆಗುವದು ಕಾಯಿ ಹಣ್ಣಾಗುವದು. ಅಥವಾ ಕ್ಷೀರ ದಧಿಯಾಗುವದು ಸೌದೆ ಬೂದಿಯಾಗುವದು, ೮ ಪ್ರತಿಪಾದನ ಮಾಡಿರುವವು. ೯ ಕೂಟಸ್ಥ ಚೇತನನು. ೧೦ ನಾಶವಿಲ್ಲದವನು. ೧೧ ಸರ್ವದರಲ್ಲಿ ವ್ಯಾಪಿಸಿಕೊಂಡಿರುವವನು. ೧೨ ಇದ್ದಂತೆ ಇರುವನು-ಪರಿಣಾಮಶೂನ್ಯ. ೧೩ ಕಿರಗಾಟ ವಿಲ್ಲದವನು.

ಮತ್ತು ಸನಾತನ[೧೪]ನನು ಎಂದು. ಆನ್ವಯವಾವದು ಪೂರ್ವದಲ್ಲಿ ಹೇಳಲ್ಪಟ್ಟಿರುವದೋ ಅಂದರೆ,-ಸೂಕ್ಷ್ಮನಾಡಿಯ-ಲ್ಲೂ ಮತ್ತು ಹಸ್ತಿಪಿಪೀಲಿಕಾದಿ ಶರೀರಗಳಲ್ಲಿ ಆತ್ಮನ ಪ್ರವೇಶವಾಗುವದು ಎಂದು. ಅದಾದರೂ ಹ್ಯಾಗೆ ಘಟ ಮತ್ತು ಮಂದಿರಾದಿ ಉಪಾಧಿಗಳಿಂದ ದೀಪದ ಪ್ರಭೆಯು[೧೫] ಸಂಕೋಚ ವಿಕಾಶ ವಾಗುತ್ತಿರುವದೋ ಹಾಗೆಯೆ ಆತ್ಮನಿಗೆ ಉಪಾಧಿರೂಪವಾದ ಯಾವ ಅಂತಃಕರಣ ಉಂಟೋ ಆದರ ಪ್ರಾರಬ್ಧ ಕರ್ಮವಶದಿಂದ ಸಂಕೋಚ ವಿಕಾಸದ್ವಾರಾ ಸಣ್ಣ ದೊಡ್ಡ ಶರೀರಗಳಲ್ಲಿ ಪ್ರವೇಶವಾಗುತ್ತಿರುವದು. ಆದಕಾರಣ ಆತ್ಮನಿಗೂ ಗೌಣವೃತ್ತಿಯಿಂದ ಆದರ ಅನುಸಾರವಾಗಿ ಪ್ರವೇಶ ವರ್ಣನೆಯು ಮಾಡಲ್ಪಟ್ಟಿರುವದು. ಈ ಕಾರಣದಿಂದ ಆತ್ಮನು ಸರ್ವವ್ಯಾಪೀ ಯೆಂಬುದು ಸಿದ್ಧವಾಗಿರುವದು. ||೬೯||

ಅ—ಈ ಪ್ರಕಾರವಾಗಿ ಪ್ರಥಮ ಪ್ರಶ್ನೆಯ ಉತ್ತರವಂ ನಿರೂಪಿಸಿ ಈಗ ಯಾವ ಶಿಷ್ಯನ ಸಂಖ್ಯಾವಿಷಯಕವಾದ ದ್ವಿತೀಯ ಪ್ರಶ್ನೆ ಇರುವದೋ ಅದಕ್ಕೆ ಒಂದುಶ್ಲೋಕದಿಂದ ಗುರು ಉತ್ತರವನ್ನು ಹೇಳುತ್ತಾರೆ.

—ಗುರುರುವಾಚ—

ರವಿರ್ಯಥೈಕೋನಿಖಿಲಾಕ್ಷಿಭಾಸಕ |
ಸ್ತಥಾಯಮಾತ್ಮಾಖಿಲದೇಹದೀಪಕಃ ||
ಉಪಾಧಿಭೇದಾಚ್ಚ ಭವೇದ್ವ್ಯವಸ್ಥಿತಿಃ |
ಪ್ರಮಾಣಹೀನಾತುತೃತೀಯಕಲ್ಪನಾ ||೨೦||

ಟೀಕಾ—ರವಿರಿತಿ|| ಎಲೈ ಶಿಷ್ಯನೆ (ರವಿರ್ಯಥಾ) ಅಂದರೆ,-ಹ್ಯಾಗೆ ಒಬ್ಬನೆ ಸೂರ್ಯ ಭಗವಂತನು, ಮನುಷ್ಯ, ಪಶು, ಪಕ್ಷಿ, ಆದಿ ಜಂತುಗಳ ನೇತ್ರಗಳನ್ನು ಭಿನ್ನಭಿನ್ನವಾಗಿ ಪ್ರಕಾಶಪಡಿಸುವನೋ (ತಥಾ) ಅಂದರೆ, ಹಾಗೆಯೇ ಈಒಬ್ಬನೆ ಆತ್ಮನು, ದೇವ,ದಾನವ, ನರ,ಮೃಗ,ಪಕ್ಷಿ,

---

೧೪ ಸರ್ವಜ್ಞನು ಆದಿಯಾದವನು ಪುರಾತನ. ೧೫ ಒಂದು ದೀಪವನ್ನು ಒಂದು ಮಡಿಕೆಯಲ್ಲಿ ಇಟ್ಟರೆ ಆದರ ಪ್ರಭೆಯು ಹೊರಗೆ ವ್ಯಾಪಿಸದೆ ಅಂತರದಲ್ಲಿಯೆ ಇರುವದು ಅದೇ ದೀಪವನ್ನು ಮಡಿಕೆಯಿಂದ ತೆಗದು ಮನೆಯಲ್ಲಿ ಇಟ್ಟರೆ ಮನೆ ತುಂಬ ವ್ಯಾಪಿಸುವದು. ಮನೆ ವಿಶಾಲತೆಯಿಂದ ಪ್ರಭೆ ಅಧಿಕವಾಗಿಯೂ ಮಡಿಕೆಯ ಸಂಕೋಚದಿಂದ ನ್ಯೂನವಾಗಿಯು ತೋರುತಿರುವದು

ಆದಿಯಾದ ಸರ್ವ ಶರೀರಗಳಲ್ಲಿ (ದೀಪಕಃ) ಅಂದರೆ,-ಪ್ರಕಾಶಮಾಡುತ್ತಿರುವನು. ಹಾಗೆ ಈ ವಾರ್ತೆಯು ಯಜುರ್ವೇದದ ಕಠೋಪನಿಷತ್ತಿನಲ್ಲೂ ಪ್ರತಿಪಾದನ ಮಾಡಿರುವದು. “ ಸೂರ್ಯೋಯಥಾಸರ್ವಲೋಕಸ್ಯಚಕ್ಷುರ್ನಲಿಪ್ಯತೆ ಚಾಕ್ಷುಷೈರ್ಬಾಹ್ಯದೋಷೈಃ । ಏಕಸ್ತಥಾ ಸರ್ವಭೂತಾಂತರಾತ್ಮಾನಲಿಪ್ಯತೆ ಲೋಕದುಃಖೇನಬಾಹ್ಯಃ ,, ಅರ್ಥ—ಯಾವ ಪ್ರಕಾರವಾಗಿ ಒಬ್ಬನೆ ಸೂರ್ಯನು ಸರ್ವಜನಗಳ ನೇತ್ರಗಳಲ್ಲಿಇದ್ದುಕೊಂಡು ಆನೇತ್ರಗಳ ಅಂಧತ್ವ, ಮಂಧತ್ವಾದಿ ದೋಷಗಳಿಂದ ಲಿಪಾಯಮಾನನಾಗದಿರುವನೋಹಾಗೆಯೆ ಒಬ್ಬನೆ ಆತ್ಮನು ಸರ್ವಭೂತಪ್ರಾಣಿಗಳ ಶರೀರಗಳಲ್ಲಿ ಸ್ಥಿತನಾಗಿದ್ದು ಆ ಶರೀರಗಳ ಆಧ್ಯಾತ್ಮಿಕಾದಿ ದುಃಖಗಳಿಂದ ಲಿಪಾಯಮಾನನಾಗದಿರುವನು. ಯಾತಕ್ಕಂದರೆ,-ಯಾವಕಾರಣದಿಂದ ಬಾಹ್ಯ-ಅಂದರೆ,- ಆಶರೀರಗಳಲ್ಲಿ ಸ್ಥಿತನಾಗಿದ್ದರೂ ಅದರಿಂದ ಭಿನ್ನನಾಗಿರುವನೋಎಂದು. ಹಾಗೆ ಗೀತೆಯಲ್ಲಿಯೂ “ ಯಥಾಪ್ರಕಾಶಯತ್ಯೇಕಃ ಕೃತ್ಸ್ನಂಲೋಕಮಿಮಂರವಿಃ । ಕ್ಷೇತ್ರಂ ಕ್ಷೇತ್ರೀತಥಾಕೃತ್ಸ್ನಂಪ್ರಕಾಶಯತಿಭಾರತ ,, ಅರ್ಥ—ಹೇ ಭಾರತ ಅಂದರೆ ಎಲೆ ಅರ್ಜುನಾ, ಹ್ಯಾಗೆ ಒಬ್ಬನೆ ಸೂರ್ಯನು ಸರ್ವಚರಾಚರ ಜಗತನ್ನು ಪ್ರಕಾಶಿಸುವನೊ, ಹಾಗೆಯೆ ಕ್ಷೇತ್ರೀ ಅಂದರೆ,- ಯಾವ ಸಾಕ್ಷೀ ಆತ್ಮನುಂಟೋ ಅವನು ವಬ್ಬನೆ, ಸರ್ವಕ್ಷೇತ್ರ ಅಂದರೆ,-ಸಕಲ ಶರೀರಗಳನ್ನು ಪ್ರಕಾಶಿಸುವನು ಎಂದು ಶ್ರೀಕೃಷ್ಣನು ಪೇಳಿರುವನು.

ಈ ಸ್ಥಲದಲ್ಲಿ ಯಾವದೋ ಒಂದನ್ನು ಕುರಿತು ಶಿಷ್ಯನು ಹೀಗೆ ಶಂಕೆಯಂ ಮಾಡುತ್ತಾನೆ. ಯೇನಂದರೆ,-ಯಾವಾಗ ಸರ್ವ ಶರೀರಗಳಲ್ಲಿ ಒಬ್ಬನೇ ಆತ್ಮನಾದಾನೋ, ಆಗ ಒಬ್ಬನಿಗೆ ಬಂಧನವಾದರೆ ಸರ್ವರಿಗೂ ಬಂಧನವಾಗಬೇಕು. ಮತ್ತು ಒಂದಕ್ಕೆ ಮುಕ್ತಿಯಾಗುವದ್ದರಿಂದ ಸರ್ವಕ್ಕೂ ಮುಕ್ತಿಯಾಗಬೇಕು. ಇನ್ನು ಒಬ್ಬನು ಸುಖಿಯಾಗುವದ್ದರಿಂದ ಸರ್ವರೂ ಸುಖಿಗಳಾಗಬೇಕು. ಹಾಗೆ ಒಬ್ಬನು ದುಃಖೀ ಆಗುವದ್ದರಿಂದ ಸರ್ವರಿಗೂ ದುಃಖ ಉಂಟಾಗಬೇಕು. ಮತ್ತು ಒಬ್ಬನ ಹೃದಯದಲ್ಲಿನ ವಾ ೧ ರ್ತೆಯು ಮತ್ತೊಬ್ಬನಿಗೆ ಜ್ಞಾತವಾಗಬೇಕು. ಹಾಗೆ ಈ ವಿಷಯಗಳಲ್ಲಿ ಆಗುವದು ಯಾವದೂ ಇಲ್ಲ ; ಅದ್ದರಿಂದ ಸರ್ವ

೧, ವಿಷಯ-ಅಭಿಪ್ರಾಯ,

ಶರೀರಗಳಲ್ಲಿ ಒಬ್ಬನೇ ಆತ್ಮನಿರುವನು ಎಂಬ ಈ ವಾರ್ತೆಯು ಹ್ಯಾಗೆ ಸಂಭವಿಸುವದು ? ಎಂದೀ ಪ್ರಕಾರವಾದ ಶಂಕೆಯುಂಟಾದ್ದರಿಂದ ಈಗ ಗುರು ಅದಕ್ಕೆ ಸಮಾಧಾನವಂ ಹೇಳುತ್ತಾರೆ. (ಉಪಾಧಿಭೇದಾತ್) ಅಂದರೆ,—ಎಲೈ ಶಿಷ್ಯನೇ, ಬಂಧ ಮೋಕ್ಷಾದಿಯಾದ ಯಾವ ವ್ಯವಸ್ಥೆ ಇರುವದೋ ಅದು ಆತ್ಮನಿಗೆ ಉಪಾಧಿಯಾದ ಯಾವ ಅಂತಃಕರಣ ಉಂಟೋ ಅದರ ಭೇದದಿಂದಾಗಿರುವದು. ಹಾಗೆ ಈ ವಾರ್ತೆಯು ಮಾಂಡೂಕ್ಯೋಪನಿಷತ್ತಿನ ಕಾರಿಕೆಯಲ್ಲಿ ಗೌಡಪಾದಾಚಾರ್ಯರೂ ಅಪ್ಪಣೆಕೊಟ್ಟಿರುವರು " ಯಥೈಕಸ್ಮಿನ್ ಘಟಾಕಾಶೆ ರಜೋಧೂಮಾದಿಭಿರ್ಯುತೆ । ನಸರ್ವೆಸಂಪ್ರಯುಜ್ಯಂತೆ ತದ್ವಜ್ಜೀವಾಃಸುಖಾದಿಭಿಃ ,, ಅರ್ಥ॥ ಹ್ಯಾಗೆ ಒಂದೇ ಆಕಾಶವು ಅನೇಕ ಘಟಗಳಲ್ಲಿದ್ದುಕೊಂಡು ಉಪಾಧಿಯಿಂದ ಭಿನ್ನಭಿನ್ನವಾಗಿ ಪ್ರತೀತವಾಗುವದೋ, ಮತ್ತು ಯಾವಾಗ ಆ ಸರ್ವ ಘಟಗಳಲ್ಲಿಂದ ಒಂದು ಘಟದಲ್ಲಿ ಇರುವಂಥಾ ಆಕಾಶವು ಧೂಳು ಅಥವಾ ಧೂಮಾದಿಗಳಿಂದ ಮಲಿನವಾಗುವನಾದರೆ ಆಗ ಆ ಕಾಲದೋಳ್ ಎರಡನೇ ಘಟಗಳಲ್ಲಿರುವ ಯಾವ ಆಕಾಶ ಉಂಟೋ ಆ ಸರ್ವವು ಮಲಿನವಾಗದಿರುವವೋ ಹಾಗೆಯೇ ಒಬ್ಬನು ಸುಖೀ, ದುಃಖೀ, ಬದ್ಧ, ಮುಕ್ತನಾಗುವದ್ದರಿಂದ ಅನ್ಯ ಸರ್ವ ಜೀವಾತ್ಮರು ಸುಖದುಃಖಾದಿಗಳಿಂದ ಲಿಪ್ತಾಯಮಾನರಾಗದಿರುವರು ಎಂದು. ಆದ್ದರಿಂದ ಎಲೈ ಶಿಷ್ಯನೇ, ಈ ಪ್ರಕಾರವಾಗಿ ಸರ್ವ ಶರೀರಗಳಲ್ಲಿ ಒಬ್ಬನೇ ಆತ್ಮನಿರುವನು. ವಾಸ್ತವವಾಗಿ ಆತ್ಮನಲ್ಲಿ ಯಾವ ಪ್ರಕಾರವಾದ ಭೇದವೂ ಇಲ್ಲ. ಹಾಗೆ ಶ್ವೇತಾಶ್ವತರೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು " ಏಕೋದೇವಃಸರ್ವಭೂತೇಷುಗೂಢಃ ಸರ್ವವ್ಯಾಪೀಸರ್ವಭೂತಾಂತರಾತ್ಮಾ ,, ಅರ್ಥ॥ ಒಬ್ಬನೇ ದೇವನು ಸರ್ವ ಭೂತಪ್ರಾಣಿಗಳಲ್ಲಿ ಗೂಢನಾಗಿಯೂ, ವ್ಯಾಪಕನಾಗಿಯೂ, ಮತ್ತು ಸರ್ವರ ಅಂತರಾತ್ಮನಾಗಿ ಇರುವನು ಎಂದು. ಇನ್ನು ಶಿಷ್ಯನು ಯಾವದನ್ನು ಪೂರ್ವದೋಳ್ ಹೇಳಿದ್ದನೋ ಅಂದರೆ,-ಜೀವಾತ್ಮನಿಗೆ ಯಾವದು ನಿಯತಸಂಖ್ಯಾವಾದೀತು ಎಂದು. ಈಗ ಅದರ ನಿರಾಕರಣೆಯಂ ಮಾಡುತ್ತಾರೆ, (ಪ್ರಮಾಣಹೀನಾತುಸ್ಯತೀಯ ಕಲ್ಪನಾ) ಅಂದರೆ,-ಎಲೈಶಿಷ್ಯನೇ, ಆತ್ಮನಿಗೆ ಯಾಪಕೋಟಿ ದಶಕೋ

೨, ಅಂದರೆ ಪರಸ್ಪರ ಭಿನ್ನನಾಗಿ ನಾನಾವಾಗಿರುವದ್ದರಿಂದ ಸಂಭವಿಸಿರುವದು,

ಟ್ಯಾದಿ ನಿಯತಸಂಖ್ಯಾಪಾದೀತು ॥ ಇಂತೆಂಬ ಈ ಯಾವ ನಿನ್ನ ತ್ರುತೀಯ ಕಲ್ಪನಾ ಇರುವದೋ, ಅದೂಕೂಡ ಪ್ರಮಾಣಹೀನಾ-ಅಂದರೆ,-ಪ್ರಮಾಣವಿಲ್ಲದ್ದಾಗಿರುವದು ಅಂದರೆ, ಅದರಲ್ಲಿ ಯಾವದೂ ಶ್ರುತಿ ಸ್ಮೃತಿಗಳ ಪ್ರಮಾಣವು ನೋಡುವಲ್ಲಿ ಕಾಣಬರದಿರುವದು. ಆದಕಾರಣ ಪ್ರಮಾಣದಿಂಹೀನವಾದ್ದರಿಂದ ಅದೂ ಸಂಭವಿಸುವದಿಲ್ಲ. ಆದ್ದರಿಂದ ಸರ್ವ ಶರೀರಗಳಲ್ಲಿ ಒಬ್ಬನೇ ಆತ್ಮನು ವ್ಯಾಪಕನು ಇಂತೆಂಬೀ ವಾರ್ತೆಯು ಪ್ರಮಾಣಸಿದ್ಧವಾದುದು. ... ॥೭೦॥

ಅ॥ ಈ ಪ್ರಕಾರವಾಗಿ ಆತ್ಮನ ವ್ಯಾಪಕತೆಯನ್ನು ಮತ್ತು ಸರ್ವ ಶರೀರಗಳಲ್ಲಿ ಏಕನೆಂಬುವದನ್ನು ಸಿದ್ಧಪಡಿಸಿ, ಈಗ ಶಿಷ್ಯನು ಯಾವ ಆತ್ಮನು ನಿತ್ಯನೋ, ಅಲ್ಲದೆ ಶರೀರದ ನಾಶಕಾಲ ಅಥವಾ ಪ್ರಲಯಕಾಲದಲ್ಲಿ ನಾಶವಂ ಪೊಂದುತ್ತಿರುವನೋ, ಎಂಬ ಈ ಮೂರನೆಯ ಪ್ರಶ್ನೆಯನ್ನು ಮಾಡಿದ್ದನೋ, ಅದಕ್ಕೆ ಗುರು ಉತ್ತರವಂ ನಿರೂಪಿಸುತ್ತಾರೆ.

—॥ ಗುರುರುವಾಚ ॥—

ಸಮಸ್ತವಸ್ತ್ವೇಕವಿನಾಶಸಾಕ್ಷಿಣೋ ।
ಭವೇದ್ವಿನಾಶೋನಕದಾಪಿಕೇನಚಿತ್ ॥
ಲಯೇಭವೇಚ್ಚೇದ್ವದಕಸ್ತದಾಶ್ರಯ ।
ಸ್ತತಸ್ತ್ವಮಂನಿತ್ಯಮವೇಹಿಂದೇಹಿನಮ್ ॥೭೧॥

ಟೀಕಾ॥ ಸಮಸ್ತವಸ್ತ್ವೇತಿ—ಎಲೈಶಿಷ್ಯನೇ, (ಸಮಸ್ತವಸ್ತ್ವೇಕವಿನಾಶಸಾಕ್ಷಿಣೋ) ಅಂದರೆ,-ಈ ಚರಾಚರ ರೂಪವಾದ ಜಗತ್ತಿನಲ್ಲಿ ಯಾವ ಯಾವ ವಸ್ತುವು ಯಾವ ಯಾವ ಕಾಲದಲ್ಲಿ ನಾಶವಂ ಪೊಂದುವದೋ, ಆ ಸರ್ವಕ್ಕೂ ಆತ್ಮನು ಸಾಕ್ಷೀಯಾಗಿರುವನು. ಅಂದರೆ ತಿಳಿಯುವಂಥಾವನಾಗಿರುವನು. ಹಾಗೆ ಯಾವನು ಈ ಪ್ರಕಾರದಿಂದ ಸರ್ವ ವಸ್ತುಗಳ ವಿನಾಶಕನಾಗಿ ಏಕ ಸಾಕ್ಷೀಯಾದ ಆತ್ಮನಿರುವನೋ, ಅವನಿಗೆ ಕದಾಪಿ-ಅಂದರೆ, ಶರೀರದ ಪಾತ ಅಥವಾ ಪ್ರಲಯ ಮೊದಲುಗೊಂಡು ಯಾವ ಕಾಲದಲ್ಲಿಯೂ, (ಕೇನಚಿತ್) ಅಂದರೆ,-ಯಾವದಾದರೂ ಶಸ್ತ್ರಾದಿ ನಿಮಿತ್ತಗಳಿಂದ ವಿನಾಶವಾಗುವದದಿಲ್ಲ. ಯಾತಕ್ಕಂದರೆ,-ಈ ಆತ್ಮನು ಸರ್ವದಾ ಅವಿನಾಶಿಯಾಗಿರುವನು. ಈ ವಾರ್ತೆಯು ಬೃಹದಾರಣ್ಯ

ಕೋಪನಿಷತ್ತಿನಲ್ಲಿಯೂ, ಬರಿಯಲ್ಪಟ್ಟಿರುವದು. "ಅವಿನಾಶೀವಾರೆ ಯಮವಾತ್ಮಾ," ಅರ್ಥ॥ ಓ ಮೈತ್ರೇಯಿ ಈ ಆತ್ಮನು ಅವಿನಾಶಿಯು ಎಂದು. ಹಾಗೆ ಗೀತೆಯ ಎರಡನೇ ಅಧ್ಯಾಯದಲ್ಲೂ ಹೇಳಿರುವದು. "ನೈನಂಛಿಂದಂತಿಶಸ್ತ್ರಾಣಿ ನೈನಂದಹತಿಪಾವಕಃ । ನಚೈನಂಕ್ಲೇದ ಯಂತ್ಯಾಪೋ ನಶೋಷಯತಿಮಾರುತಃ ॥ ಅಚ್ಛೇದ್ಯೋಯಮದಾಹ್ಯೋ ಯ ಮಕ್ಲೇದ್ಯೋಶೋಷ್ಯಏವಚ," ಅರ್ಥ॥ ಎಲೇ ಅರ್ಜುನಾ, ಈ ಆತ್ಮನನ್ನು ಖಡ್ಗಾದಿ ಶಸ್ತ್ರಗಳು ಛೇದನ ಮಾಡಲಾರವು. ಮತ್ತು ಸರ್ವವನ್ನು ದಹಿಸುವಂಥಾ ಯಾವ ಅಗ್ನಿ ಇರುವದೋ ಅದು ಸುಟ್ಟು ಬಿಡಲಾರದು. ಹಾಗೆ ಸರ್ವ ಪದಾರ್ಥಗಳನ್ನು ಕರಗಿಸುವಂಥಾ ಯಾವ ಜಲವಿರುವದೋ, ಅದು ಇವನನ್ನು ಕರ ೧ ಗಿಸಲಾರದು. ಇನ್ನು ಸರ್ವವನ್ನು ಶೋಷಣ ಮಾಡುವಂಥಾ ಯಾವ ವಾಯು ವಿರುವದೋ, ಅದೂ ಇವನನ್ನು ಶೋಷ ೨ ಣ ಮಾಡಲಾರದು. ಯಾತಕ್ಕಂದರೆ,— ಯಾವ ಕಾರ ೩ ಣವಿಂದ ಈ ಆತ್ಮನು ಅಚ್ಛೇದ್ಯ-ಅಂದರೆ,—ಛೇದನ ಕರ್ಮಕ್ಕೆ ವಿಷಯನಾಗದಿರುವನೋ, ಮತ್ತು ಅದಾಹ್ಯ-ಅಂದರೆ,-ದಹನ ಕ್ರಿಯೆಗೂ ವಿಷಯನಲ್ಲದಿರುವನೋ, ಹಾಗೆ ಅಕ್ಲೇದ್ಯ-ಅಂದರೆ,-ಕರಗಿಸುವ ಕಾರ್ಯಕ್ಕೂ ವಿಷಯನಲ್ಲವೋ, ಇನ್ನು ಅಶೋಷ್ಯ-ಅಂದರೆ,-ಶೋಷಣೆಯ ಕರ್ಮಕ್ಕೂ ವಿಷಯನಾಗದಿರುವನೋ, ಎಂದು. ಮತ್ತು ಎಲೈ ಶಿಷ್ಯನೇ, ಯಾವದನ್ನು ನೀನು ಹೇಳಿರುವೆಯೋ, ಅಂದರೆ,— (ಲಯಭವೇಚ್ಚಿತ್) ಹ್ಯಾಗಾದರೂ ಶರೀರದ ಪಾತ ಅಥವಾ ಮಹಾ ಪ್ರಲಯಕಾಲದಲ್ಲಿ ಈ ಆತ್ಮನು ನಾಶವಾಗಿ ಹೋಗುವನೋ ಎಂದು ಹಾಗಾಗುವದಾದರೆ ಅದನ್ನು ನೀನು ತೋರಿಸು? ಯೇನಂದರೆ,—ಆ ಕಾಲದಲ್ಲಿ ಆತ್ಮನ ನಾಶಕವಾದ ಯಾವದು ಎರಡನೇ ಆಶ್ರಯ-ಅಂದರೆ,-ಅಧಿಷ್ಠಾನವಾಗಿರುವದು? ಯಾತಕ್ಕಂದರೆ,-ಯಾವದೂ ಅಧಿಷ್ಠಾನವಿಲ್ಲದೇ ಯಾವ

---

೧. ನೆನಸುವ ಕಾರ್ಯ-ತೊಳೆಯುಸುವದು-ತೋಯಿಸುವದು. ೨. ಒಣಗಿಸುವ ಕಾರ್ಯ-ಶುಷ್ಕ-ಒತ್ತಿಸುವದು. ೩. ಯಾವದು ಪಾಂಚಭೌತಿಕವೋ, ಅಂದರೆ ಭೂತಗಳ ಕಾರ್ಯವೋ, ಅದು (ದೇಹ) ಶಸ್ತ್ರ, ಅಗ್ನಿ, ಜಲ, ವಾಯ್ವಾದಿಗಳಿಂದ ಯೇನನ್ನಾದರೂ ದುಃಖವನ್ನನುಭವಿಸಬಹುದು, ಆತ್ಮನು ಭೂತಕಾರ್ಯಾಭಾವನಾಗದ್ದರಿಂದ ಮೇಲೆ ಹೇಳಿದ ಸರ್ವ ಪದಾರ್ಥಗಳು ಯೇನನ್ನೂ ಮಾಡಲಾರವೆಂಬುದಭಿಪ್ರಾಯ.

ವಸ್ತುವಿಗೂ ನಾಶ ಸಂಭವಿಸದು. ಮತ್ತು “(ಸಾಕಾಷ್ಠಾಸಾಪರಾಗತಿಃ)” ಇತ್ಯಾದಿ ಶ್ರುತಿಗಳಲ್ಲಿ ಸರ್ವ ವಸ್ತುಗಳ ನಾಶಕ್ಕೂ ಅಧಿಷ್ಠಾನವಾದ ಒಬ್ಬ ಆತ್ಮನನ್ನೇ ವರ್ಣಿಸಿರುವದು. ಆದ್ದರಿಂದ ಆ ಆತ್ಮನ ನಾಶಕವಾದ ಯಾವ ಅನ್ಯ ಅಧಿಷ್ಠಾನವು ಸಂಭವಿಸಲಿಲ್ಲ ಇಷ್ಟೇ ಅಲ್ಲ. ಸರ್ವ ವಿನಾಶವನ್ನೂ ತಿಳಿಯುವಂಥಾ ಸಾಕ್ಷಿಯಾದ ಆತ್ಮನಿಗೂ ಯಾವಾಗ ನಾಶವಂ ಗ್ರಹಿಸಿದರೆ ಆಗ ಅವನ ನಾಶವಂ ತಿಳಿಯುವಂಥಾ ಅನ್ಯ ಯಾವನಿರುವನು? ಅಂದರೆ,-ಯಾವದೂ ಸಂಭವಿಸುವದಿಲ್ಲ. ಯಾತಕ್ಕೆಂದರೆ,-“ನಾನ್ಯೋಽಸ್ತಿ ಜ್ಞಾತಾ” ಇತ್ಯಾದಿ ಶ್ರುತಿಗಳಲ್ಲಿ ಸಾಕ್ಷಿಯಾದ ಆತ್ಮನಿಗಿಂತ ಭಿನ್ನನಾದ ಜ್ಞಾತ ಪುರುಷನನ್ನು ನಿಷೇಧ ಮಾಡಿರುವದು. ಆದಕಾರಣ ಈ ಆತ್ಮನು ಅವಿನಾಶಿಯೇ ಎಂಬುದು ಸಿದ್ಧವಾಯಿತು. ಹಾಗೆ ಶಂಕರಾಚಾರ್ಯರೂ ಕೂಡ ಉಪನಿಷದ್ಭಾಷ್ಯದಲ್ಲಿ ಹೇಳಿರುವರು. “ಸರ್ವಂವಿನಶ್ಯದ್ವಸ್ತುಜಾತಂ ಪುರುಷಾಂತಂವಿನಶ್ಯತಿ । ಪುರುಷಸ್ತುವಿನಾಶಹೇತ್ವಭಾವಾನ್ನವಿನಶ್ಯತಿ”. ಅರ್ಥ॥ ಎಲ್ಲಾ ವಸ್ತು ಸಮೂಹವು ನಾಶವಂ ಪಡಿಯುತ್ತಾ ಪಡಿಯುತ್ತಾ ಪುರುಷನ ಪರ್ಯಂತವು ನಾಶವಂ ಪೊಂದುತ್ತಿರುವವು. ಇನ್ನೂ ಪುರುಷನಾದರೋ, ವಿನಾಶದ ಹೇತುರಹಿತನಾದ್ದರಿಂದ ನಾಶವಂ ಪೊಂದಲ್ಪಡುವದಿಲ್ಲ ಎಂದು. ಆದ್ದರಿಂದ ಎಲೈ ಶಿಷ್ಯನೇ, ಈ ದೇಹದಲ್ಲಿ ಇರುವಂಥಾ ಸಾಕ್ಷಿಯಾದ ಆತ್ಮನನ್ನು ನೀನು (ನಿತ್ಯಮವೇಹಿ) ಅಂದರೆ, ಸರ್ವದಾ ನಿತ್ಯ ಅರ್ಥಾತ್ ಅವಿನಾಶಿ ಯೆಂದು ತಿಳಿ. ಹಾಗೆ ಕಠೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. “ನಿತ್ಯೋನಿತ್ಯಾನಾಂಚೇತನಶ್ಚೇತನಾನಾಂ” ಅರ್ಥ॥ ಈ ಆತ್ಮನು ಪೃಥ್ವ್ಯಾದಿಯಾದ ಯಾವ ನಿತ್ಯ ಪದಾರ್ಥವಿರುವವೋ, ಅವಕ್ಕಿಂತಲೂ ನಿತ್ಯನು ಮತ್ತು ಬುದ್ಧಿ ಆದಿಚೇತನ ಪದಾರ್ಥಗಳಿಗಿಂತಲೂ ಪರಮ ಚೇತನನು ಎಂದು॥

ಅ—ಇಲ್ಲಿನ ಪರ್ಯಂತವೂ ಜೀವನ ತಟಸ್ಥ ಲಕ್ಷಣವನ್ನು ನಿರೂಪಿಸಿ, ಮತ್ತು ಇದಕ್ಕೆ ಪೂರ್ವ ಈಶ್ವರನ ತಟಸ್ಥ ಲಕ್ಷಣವನ್ನು ನಿರೂಪಣೆಗೈದಿರುವರು. ಆ ಈ ಪೂರ್ವೋಕ್ತ ಪ್ರಕಾರದಿಂದ ಜೀವ ಮತ್ತು ಈಶ್ವರನ ತಟಸ್ಥ ಲಕ್ಷಣಗಳನ್ನು ಕೇಳಿದವನಾಗಿ ಈಗ ಶಿಷ್ಯನು ಅವರ ಇವರ ಸ್ವರೂಪ ಲಕ್ಷಣವನ್ನು ತಿಳಿಯುವಕೋಸುಗ ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಸ್ವರೂಪಮೀಶಸ್ಯತುಕಿಂವಿನಿಶ್ಚಿತಂ ।
ತಥಾಸ್ಯಜೀವಸ್ಯಚಕಿಂವಪುರ್ಭವೇತ್ ॥
ಕಿಯತ್ತಯೋರಸ್ತಿತಥೈವಚಾಂತರಂ ।
ಬ್ರವೀತುಮೇತತ್ತ್ವವಿದಾಂವರೋಭವಾನ್ ॥೭೨॥

ಟೀಕಾ—ಸ್ವರೂಪಮಿತಿ॥ ಎಲೈ (ತತ್ತ್ವವಿದಾಂವರ) ಅಂದರೆ,-ಸರ್ವ ಆತ್ಮತತ್ತ್ವವನ್ನು ತಿಳಿದಿರುವ ಪುರುಷರಲ್ಲಿ ಶ್ರೇಷ್ಠನಾದ ಗುರುವೆ ತಾವು ಯಾವನನ್ನು ಪೂರ್ವದೊಳ್ ಜಗತ್ತಿನ ಉತ್ಪತ್ತಿ ಸ್ಥಿತಿ ಮತ್ತು ಪ್ರಳಯದ ಹೇತುವಾದ ಈಶ್ವರನೆಂದುನಿರೂಪಣೆಯಂ ಮಾಡಿರುವಿರೋ ಅವನಿಗೆ ಶ್ರುತಿಸ್ಮೃತಿಗಳಲ್ಲಿ ನಿಶ್ಚಿತವಾದ ಯೇನು ಸ್ವರೂಪವಿರುವದು ? ಹಾಗೆ (ಅಸ್ಯಜೀವಸ್ಯ) ಅಂದರೆ,-ಈ ಯಾವ ವಿಭುನಿತ್ಯಾದಿ ಲಕ್ಷಣಗಳಿಂದ ಮೇಲೆ ಪ್ರತಿಪಾದನ ಮಾಡಿರುವ ಜೀವಾತ್ಮ ನಿರುವನೊ ಅವನಿಗೂ ನಿಶ್ಚಿತವಾದ ಸ್ವರೂಪವೇನಿರುವದು ? ಹಾಗೆ ಎಲೈ ಭಗವಂತನೆ, ಆ ಎರಡು ಅಂದರೆ,-ಈಶ್ವರ ಮತ್ತು ಜೀವನಲ್ಲಿ (ಕಿಯತ್) ಅಂದರೆ,-ಎಷ್ಟು ಪರಸ್ಪರ (ಅಂತರ) ಅಂದರೆ, ಭೇದವಿರುವದು ? ಆ ಈ ಸರ್ವವನ್ನು ಕೃಪೆಯಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ॥೭೨॥

ಅ—ಈ ಪ್ರಕಾರವಾದ ಶಿಷ್ಯನ ಮೂರು ಪಶ್ನೆಗಳನ್ನು ಕೇಳಿ, ಈಗ ಗುರು ಒಂದೇ ಶ್ಲೋಕದಿಂದ ಅವುಗಳಿಗೆ ಉತ್ತರವಂ ನಿರೂಪಿಸುತ್ತಾರೆ.

—ಗುರುರುವಾಚ—

ಮಾಯಾಯುತಂಬ್ರಹ್ಮಮಹೇಶ್ವರಂಬುಧಾ ।
ಜೀವಂಸಮೇತಂಚವದಂತ್ಯವಿದ್ಯಯಾ ॥
ನೈವಾಂತರಂಕಿಂಚಿದುಪಾಧಿಮಂತರಾ ।
ಸಮ್ಯಗ್ವಿಚಾರೇಣತಯೋಸ್ತುಲಭ್ಯತೇ ॥೭೩॥

ಟೀಕಾ—ಮಾಯಾಯುತಮಿತಿ ॥ ಎಲೈ ಶಿಷ್ಯನೆ ! (ಮಾಯಾ

ಯುತಂ) ಅಂದರೆ,-ಮಾ ೧ ಯಾಶಕ್ತಿಯಿಂ ಕೂಡಿಕೊಂಡಿದೆ ಯಾವ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವಿರುವದೋ ಅದನ್ನು (ಬುಧಾ) ಅಂದರೆ, ವಿದ್ವಾಂಸ ಜನಗಳು ಈಶ್ವರನೆಂದು ಹೇಳುವರು. ಮತ್ತು (ಅವಿದ್ಯಯಾ) ಅಂದರೆ,-ಅದೇ ಬ್ರಹ್ಮವು ಯಾವ ಅವಿ ೨ ದ್ಯೆಯಿಂ ಸಂಯುಕ್ತವಾದುದೋ ಅದನ್ನು ಜೀವನೆಂದು ಹೇಳುವರು. ಇಲ್ಲಿ ಈ ತಾತ್ಪರ್ಯವಿರುವದು ಜಗತ್ತಿನ ಆ೩ದಿಯಲ್ಲಿ ಏಕವೆಂತಲೂ ಅದ್ವಿತೀಯವೆಂತಲೂ ಸರ್ವಪರಿಪೂರ್ಣವೆಂತಲೂ ಹೇಳಲ್ಪಡುವ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮವೇ ಇದ್ದಿತು. ಮತ್ತು ಆ ಬ್ರಹ್ಮದ ಯಾವದೊ ಒಂದಂಶದಲ್ಲಿ ತ್ರಿಗುಣಗಳ ಸಾಮ್ಯಾವಸ್ಥಾರೂಪವಾದ ಪ್ರಕೃತಿಯೂ ಇರ್ಪುದು. ಹ್ಯಾಗೆ ಶರೀರದ ಯಾವದೋ ದೇಶದಲ್ಲಿ ಕಪ್ಪುಚುಕ್ಕೆ ೪ ಯಾಗಿರುವದೋ ಹಾಗೆ ಅದರಿಂದ ಯಾವ ಕಾಲದಲ್ಲಿಯೋ ಆ ಬ್ರಹ್ಮಕ್ಕೆ ಈ ಇಚ್ಛೆಯುಂಟಾದುದು. ಯೇನಂದರೆ,- (ಬಹುಸ್ಯಾಂ ಪ್ರಜಾಯೇಯ) ಅಂದರೆ,- ನಾನು ಪಬ್ಬನೆ ಅನೇಕ ರೂಪನಾಗಿ ಪ್ರಕಟಗೊಳ್ಳುವೆನು. ಎಂದು ಆಗ ಈ ಪ್ರಕಾರವಾಗಿ ಬ್ರಹ್ಮದ ಸತ್ಯ ಸಂಕಲ್ಪವಾದ್ದರಿಂದ ಅದರ ಆಶ್ರಯದಲ್ಲಿ ಯಾವ ಪ್ರಕೃತಿ ಇದ್ದಿತೋ ಅದು ಕ್ಷೋಭ೫ವನ್ನು ಪಡಿಯುತ್ತಿದ್ದಿತು. ಒಳಿಕ ಮೂರು ಗುಣಗಳು ತಮ್ಮ ಸಾಮ್ಯಾವಸ್ಥೆಯನ್ನು ಪರಿತ್ಯಾಗಮಾಡಿ ನ್ಯೂನಾಧಿಕ ಭಾವವಂ ಪೊಂದುತ್ತಿದ್ದಿತು. ನಂತರ ಯಾವ ಭಾಗದಲ್ಲಿ ಸತ್ವಗುಣದ ಅಧಿಕತೆಯೂ ಮತ್ತು ರಜೋಗುಣದ ಅತ್ಯಂತ ನ್ಯೂನತೆಯೂ ಉಂಟಾದುದೊ ಅದರನಾಮ ಮಾಯಾ ಎಂದಾಗುತ್ತಿದ್ದಿತು. ಇನ್ನು ಯಾವ ಭಾಗದಲ್ಲಿ ರಜೋಗುಣದ ಅಧಿಕತೆ, ಮು

---

೧ ಯಾಮಾ-ಸಾಮಾಯಾ, ಎಂಬ ವ್ಯುತ್ಪತ್ತಿಯಿಂದ ಯಾವದು ಇಲ್ಲವೊ ಅದು ಮಾಯೆ. ೨ ಯಾನವಿದ್ಯತೆ-ಸಾಅವಿದ್ಯಾ ಇಂತೆಂಬ ವಿಗ್ರಹದಿಂ ಯಾವದು ಹುಡುಕಿದರೂ ಸಿಕ್ಕದೊ ಅದು ಅವಿದ್ಯಾ ಅಂದರೆ ಯಾವದಕ್ಕೆ ತೋರಿಕೆ ಮಾತ್ರವಲ್ಲದೆ ಸ್ಥಿತಿಇಲ್ಲವೊ ಅದು ಮಾಯೆ ಯಾವದು ವಿದ್ಯಾ ಪ್ರಭಾವದಿಂದ ಇಲ್ಲದೆ ಹೋಗುವದೊ ಅದು ಅವಿದ್ಯೆ ಎಂದು ತಿಳಿದುಕೊಳ್ಳಬೇಕು. ೩ ಹ್ಯಾಗೂ ಜಗತ್ತು ಅನಾದಿ ಸಿದ್ಧವಾಗಿ ಬಂದಿರುವದು. ಹಾಗಾದರೂ ಈ ವರ್ಣನೆಯು ಅಧ್ಯಾರೋಪರೀತಿಯಿಂದ ತಿಳಿಯಬೇಕು. ೪ ಸಂಗಾತಿ-ಕಪ್ಪುಮಚ್ಚೆ ೫ ಬಸರಿಯಾದವಳಿಗೆ ಅಂತರದಲ್ಲಿ ಪ್ರಸವ ವೇದನೆ ತೋರುವಂತೆ ಬ್ರಹ್ಮಕಲೆಯಿಂ ಪಡಿಸಿದ ಪ್ರಕೃತಿಗೆ ಅಗೋಚರವಾದ ಯೇನೊ ಒಂದು ಬೆಚ್ಚುಟಾದುದಕ್ಕೆ ಕ್ಷೋಭವೆಂದು ತಿಳಿಯಬೇಕು.

ತ್ತು ಸತ್ವಗುಣದ ನ್ಯೂನತೆಯಾದುದೋ, ಅದರನಾಮ ಅವಿದ್ಯಾಎಂದಾ ಗುತ್ತಿದ್ದುದು. ಮತ್ತು ಯಾವ ಭಾಗದಲ್ಲಿ ತಮೋಗುಣದ ಅಧಿಕತೆ ಇನ್ನು ಸತ್ವಗುಣದ ಅತ್ಯಂತ ನ್ಯೂನತೆಯಾದುದೋ ಅದರ ನಾಮ ತಮ ಪ್ರಧಾನ ಪ್ರಕೃತಿ ಎಂದಾಗುತ್ತಿದ್ದುದು. ಈ ಪ್ರಕಾರವಾಗಿ ಗುಣಗಳ ನ್ಯೂನಾಧಿಕ ಭಾವದಿಂದ ಪ್ರಕೃತಿಯು ಮೂರು ಭೇದವಾಗುತ್ತಿದ್ದುದು. ಆದರೆ,-ಅವುಗಳಲ್ಲಿ ಯಾವ ಮೊದಲನೆಯದಾದ ಮಾಯಾ ಇರುವದೊ ಅದರೊಳ್ ಸತ್ವಗುಣವು ಅಧಿಕವಾದಕಾರಣ ಅತ್ಯಂತ ಸ್ವಚ್ಛವಾಗಿರುವ ದು. ಆದ್ದರಿಂದ ಆ ಪರಿಪೂರ್ಣಚೇತನ ಸ್ವರೂಪವಾದ ಬ್ರಹ್ಮದ ಪ್ರತಿ ಬಿಂಬವಾಗುತ್ತಿದ್ದುದು. ಅದರ ಬಳಿಕ ಆ ಪ್ರತಿಬಿಂಬ ಮತ್ತು ಮಾ ಯಾ ಇನ್ನು ಮಾಯಾವಚ್ಛಿನ್ನಬಿಂಬ ಭೂತಬ್ರಹ್ಮ ಇವು ಮೂರುಕೂ ಡಿದ್ದರಿಂದ ಸರ್ವಜ್ಞನು, ಸರ್ವ ಶಕ್ತಿಯುಳ್ಳವನು, ನಿತ್ಯನು, ಶುದ್ಧನು, ಬುದ್ಧನು, ಜ್ಞಾನಸ್ವರೂಪನೆನಿಪ ಈಶ್ವರನಾಗುತ್ತಿದ್ದನು ಹಾಗೆಯೆ ಪ್ರಕೃತಿಯು ಎರಡನೇಭಾಗವಾದ ಯಾವ ಅವಿದ್ಯಾ ಇರುವದೋ ಅದರಲ್ಲಿ ಪ್ರತಿಬಿಂಬ ಉಂಟಾದ್ದರಿಂದ ಆ ಅವಿದ್ಯೆಯು ಮತ್ತು ಅದರಲ್ಲಿನ ಪ್ರತಿ ಬಿಂಬವೂ ಇನ್ನೂ ಅವಿದ್ಯಾವಚ್ಛಿನ್ನ ಬ್ರಹ್ಮವು ಇವು ಮೂರು ಸೇರಿದ್ದ ರಿಂದ ಅಲ್ಪಜ್ಞನು, ಅಲ್ಪಶಕ್ತಿಯುಳ್ಳವನು, ಬದ್ಧ ಮತ್ತು ಮಲಿನನೆನಿಪ ಜೀವನಾಗುತ್ತಿದ್ದನು. ಇನ್ನು ಯಾವ ತಮಃಪ್ರಧಾನಪ್ರಕೃತಿಯು ಮೂ ರನೆಯ ಭಾಗವಿತ್ತೋ, ಅದರಲ್ಲಿ ತಮೋಗುಣವು ಅಧಿಕವಾದ ಕಾರಣದಿಂ ದ ಅತ್ಯಂತ ಮಲಿನವಾಗಿರುವದು. ಆದ್ದರಿಂದ ಬ್ರಹ್ಮದ ಪ್ರತಿಬಿಂಬ ಉಂಟಾಗಲಿಲ್ಲ. ತದನಂತರ ಈಶ್ವರನ ಇಚ್ಛಾನುಸಾರ ಆ ತಮಪ್ರ ಧಾನ ಪ್ರಕೃತಿಯಿಂದ ಆಕಾಶಾದಿ ಪಂಚಮಹಾಭೂತಗಳ ಉತ್ಪತ್ತಿದ್ವಾ ರಾ ಸರ್ವ ಜಗತ್ತಿನ ಉತ್ಪತ್ತಿಯಾಗುತ್ತಿದ್ದುದು. ಈ ಪ್ರಕಾರವಾಗಿ ಈಶ್ವರ ಮತ್ತು ಜೀವನಸ್ವರೂಪ ಲಕ್ಷಣವಂನು ವರ್ಣನೆಯಂ ಮಾಡಿ, ಈಗ ಯಾವ ಶಿಷ್ಯನು ಈಶ್ವರ ಮತ್ತು ಜೀವನಲ್ಲಿ ಎಷ್ಟು ಪರಸ್ಪರ ಭೇ ದವಿರುವದು ಎಂಬ ಈ ಮೂರನೇ ಪ್ರಶ್ನೆಯಂ ಮಾಡಿದ್ದನೋ, ಅದರ ಉತ್ತರವಂ ಹೇಳುತ್ತಾರೆ. (ನೈವಾಂತರಂಕಿಂಚಿದುಪಾಧಿಮಂತರಾ) ಅಂ ದರೆ,-ಎಲೈ ಶಿಷ್ಯನೇ, ವೇದಾಂತಶಾಸ್ತ್ರದ ಯುಕ್ತಿಗಳಿಂದ ಚನ್ನಾಗಿ ವಿಚಾರವಂಮಾಡಿ ನೋಡಿದರೆ, (ತಯೋಃ) ಅಂದರೆ,-ಆ ಈಶ್ವರ ಮತ್ತು

ಜೀವನಲ್ಲಿ ಪೂರ್ವೋಕ್ತವಾದ ಮಾಯಾ ಮತ್ತು ಅವಿದ್ಯಾರೂಪವಾದ ಉಪಾಧಿಯ ಭೇದದಿಂ ವಿನಃ ಕಿಂಚಿನ್ಮಾತ್ರವಾದರೂ ಅಂತರ-ಅಂದರೆ,-ಭೇದವು ಪ್ರತೀತವಾಗುವದಿಲ್ಲ. ... ... ॥೨೩॥

ಅ॥ ಈ ಪ್ರಕಾರವಾಗಿ ಅಕಸ್ಮಾತ್ ಈಶ್ವರ ಮತ್ತು ಜೀವನ ಏಕತೆಯು ಶ್ರವಣದಿಂದ ಅತ್ಯಂತ ವಿಸ್ಮಯವಂ ಪೊಂದಿದವನಾಗಿ, ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಕಥಂಮಹಾಂಭೋಧಿತರಂಗತುಲ್ಯಯೋ।
ರ್ವಿರುದ್ಧಧರ್ಮಾಸ್ಪದಯೋಃಪರಸ್ಪರಮ್ ॥
ಭವೇದಿಹೈಕ್ಯಂಪರಮೇಶಜೀವಯೋ ।
ರ್ವದೈತದಾತ್ಮಾನುಭವಾದ್ಭವಾರ್ತಿಹನ್॥ ॥೨೪॥

ಟೀಕಾ—ಕಥಮಿತಿ॥ ಎಲೈ (ಭವಾರ್ತಿಹನ್) ಅಂದರೆ,-ಜನನಮರಣ ರೂಪವಾದ ಸಂಸಾರ ಜನ್ಯ ದುಃಖವನ್ನು ನಾಶಮಾಡುವಂಥಾ ಗುರುವೆ! ತಾವು ಯಾವದನ್ನು ಹೇಳಿದಿರೋ ಅಂದರೆ,-ಈಶ್ವರ ಮತ್ತು ಜೀವನಲ್ಲಿ ಉಪಾಧಿ ಇಂದಲ್ಲದೆ ಕಿಂಚಿನ್ಮಾತ್ರವಾದರೂ ಅಂತರವಿಲ್ಲವೆಂದಿರಿ ಆವಾರ್ತೆಯು ಹ್ಯಾಗೆ ಸಂಭವಿಸುವದು ? ಯಾತಕ್ಕಂದರೆ (ಮಹಾಂಭೋಧಿತರಂಗ ತುಲ್ಯಯೋಃ) ಅಂದರೆ,-ಈಶ್ವರನಾದರೋ ಮಹಾ ಸಮುದ್ರಕ್ಕೆ ಸಮಾನವಾಗಿರುವನು. ಮತ್ತು ಜೀವನು ಅದರ ಒಂದು ತರಂಗಕ್ಕೆ ಸಮಾನವಾಗಿರುವನು. ಅದರೊಳ್ ಹ್ಯಾಗೆ ಮಹಾ ಗಂಭೀರ[೧]ತೆಯು ಊಚ್ಚ[೨] ಗರ್ಜನೆಯು ಮಹಾ ವಿಸ್ತಾರ ವುಳ್ಳೋಣವು, ಅನೇಕ ಮಕರ ಮತ್ಸ್ಯಾದಿಗಳಿರೋಣವು, ಮತ್ತು ಅನೇಕ ದೊಡ್ಡದೊಡ್ಡ ಹಡಗುಗಳು ನಡಿಯೋಣವು, ಇತ್ಯಾದಿಗಳು ಯಾವ ಸಮುದ್ರದ ಧರ್ಮವಾಗಿರುವದು, ಮತ್ತು ಅಲ್ಪಗಂಭೀರತೆ, ಅಲ್ಪಶಬ್ದವಾಗೋಣವು, ಅಲ್ಪವಿಸ್ತಾರವಾಗಿರೋಣವು, ಅಲ್ಪಜಂತುಗಳುಳ್ಳೋಣವು, ಇನ್ನು ದೊಡ್ಡದೊಡ್ಡ ಹಡಗುಗಳು ನಡಿಯದಿರೋಣವು ಇವೇ ಮೊದಲಾದವುಗಳು ಯಾವ ತರಂಗದ ಧರ್ಮವಾಗಿರುವದು, ಅದರಿಂದ ಅವೆರಡೂ ಪರಸ್ಪರ ವಿರುದ್ಧವಾಗಿ

೧. ಆಳ, ೨. ದೊಡ್ಡ ಶಬ್ದ.

ರುವದು. ಹಾಗೆಯೆ ಸರ್ವಜ್ಞತ್ವ, ಸರ್ವಶಕ್ತಿತ್ವ, ನಿತ್ಯಮುಕ್ತತ್ವ, ಸರ್ವನಿಯಂತೃತ್ವ, ಸ್ವತಂತ್ರತ್ವ ಇತ್ಯಾದಿಗಳೆಲ್ಲ ಯಾವ ಈಶ್ವರನ ಧರ್ಮವಾಗಿರುವದು. ಮತ್ತು ಅಲ್ಪಜ್ಞತ್ವ, ಅಲ್ಪಶಕ್ತಿತ್ವ, ಬದ್ಧತ್ವ, ಪರಾಧೀನತ್ವ ಇತ್ಯಾದಿಗಳೆಲ್ಲ ಯಾವ ಜೀವನ ಧರ್ಮವಾಗಿರುವದು. ಆದರಿಂದ ಅವೆರಡಕ್ಕು ಪರಸ್ಪರ ಅತ್ಯಂತ ವಿರೋಧವಿರುವದು. ಆದಕಾರಣ ಯಲೈ ಭಗವಂತನೆ, ಈ ಪ್ರಕಾರವಾಗಿ ಸಮುದ್ರ ಮತ್ತು ತರಂಗಕ್ಕೆ ಸಮಾನವಾಗಿಯೂ, ಇನ್ನೂ ಅನೇಕ ಪರಸ್ಪರ ವಿರುದ್ಧ ಧರ್ಮಗಳ ಸ್ಥಾನಭೂತವಾಗಿಯೂ ಯಾವ ಈಶ್ವರ ಮತ್ತು ಜೀವನಿರುವನೊ ಅವರಿಬ್ಬರಿಗೂ ಇಲ್ಲಿ ಏಕತೆ ಎಂಬುವದು ಹ್ಯಾಗೆ ಸಂಭವಿಸುವದು ? ಆ ಈವಾರ್ತೆಯು ನನ್ನ ಅನುಭವಕ್ಕೆ ಬರುವದಿಲ್ಲ. ಆದ್ದರಿಂದ ತಾವು ಕೃಪಾದೃಷ್ಟಿಯಿಂದ ತಮ್ಮ ಅನುಭವಾನುಸಾರ ಯಥಾ ೩ ವತ್ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ॥೨೪॥

ಅ—ಈ ಪ್ರಕಾರವಾಗಿ ಶಿಷ್ಯನು ಶಂಕೆ ಮಾಡಿದ್ದರಿಂದ ಈಗ ಗುರು ಅದರ ಸಮಾಧಾನವಂ ಪೇಳುತ್ತಾರೆ.

—ಗುರು ರುವಾಚ—

ಯಥಾಬ್ಧಿತಾಚಾಪಿತರಂಗತಾತಯೊ ।
ರ್ವಿಹಾಯನೀರೈಕ್ಯಮುಹೋಪಲಕ್ಷ್ಯತೇ ॥
ಅಮಾಸ್ಯಜೀವೇಶ್ವರಭಾವನಿಾಕ್ಷ್ಯತೇ ।
ತಥಾಚಿದಾನಂದಮಯಂವಿಚಕ್ಷಣೈಃ ॥೨೫॥

ಟೀಕಾ—ಯದೆತಿ॥ ಎಲೈ ಶಿಷ್ಯನೇ ! ಹ್ಯಾಗೂ ಈಶ್ವರ ಮತ್ತು ಜೀವನು ಪರಸ್ಪರ ವಿರುದ್ಧ ಧರ್ಮಗಳಿಂ ಯುಕ್ತರಾದ್ದರಿಂದ ಅವರಿಗೆ ಸಾಕ್ಷಾತ್ತಾಗಿ ಏಕತೆ ಸಂಭವಿಸುವದಿಲ್ಲವೆಂದು ಹೀಗೆ ನೀವು ಪೇಳಿದ್ದು ವಾಸ್ತವವೇಸರಿ, ಹಾಗಾದರೂ ಭಾಗತ್ಯಾಗಲಕ್ಷಣೆಯ ರೀತಿಯಿಂದ ಅವರಿಬ್ಬರಿಗೂ ಏಕತ್ವ ಸಂಭವಿಸುವದು. ಆದರೆ- ಹ್ಯಾಗೆ ದೃಷ್ಟಾಂತದಲ್ಲಿ (ಅಬ್ಧಿತಾ) ಅಂದರೆ-ಸಮುದ್ರದಲ್ಲಿನ ಗಂಭೀರತೆ ಉಚ್ಚಗರ್ಜನ ಮಹಾ

೩. ಹ್ಯಾಗೋ ಹಾಗೆ.

ವಿಸ್ತಾರಾದಿ ಧರ್ಮಗಳ ಸಹಿತವಾದ ಯಾವಸಮುದ್ರತ್ವ ವುಂಟೋ ಅದರ ಪರಿತ್ಯಾಗಮಾಡಿ ಬಿಡುವದ್ದರಿಂದಲೂ ಇನ್ನು ತರಂಗದಲ್ಲಿನ ಅಲ್ಪಗಂಭೀರತೆ ಅಲ್ಪ ಗನ್ನನೆ, ಅಲ್ಪವಿಸ್ತಾರಾದಿ ಧರ್ಮಗಳ ಸಹಿತವಾದ ಯಾವ ತರಂಗತ್ವವುಂಟೋ ಅದನ್ನೂ ಪರಿತ್ಯಾಗ ಮಾಡಿ ಬಿಡುವದ್ದರಿಂದಲೂ, ಬಳಿಕ (ನೀರೈಕ್ಯಮಹೋಪಲಕ್ಷ್ಯತೆ)ಅಂದರೆ, ಅವೆರಡಕ್ಕೂ ಜಲಮಾತ್ರ ದೃಷ್ಟಿ ಇಂದ ಹ್ಯಾಗೆ ಏಕತ್ವ ಸಂಭವಿಸುವದೋ ಹಾಗೆಯೇ ಇಲ್ಲಿ ದಾಷ್ಟಾಂತದೋಳ್ (ಅವಾಸ್ಯಜೀವೇಶ್ವರಭಾವಂ) ಅಂದರೆ,—ಈಶ್ವರನ ಈಶ್ವರತ್ವ ಮತ್ತು ಜೀವನ ಜೀವತ್ವ ಅಂದರೆ,-ಈಶ್ವರನ ಮಾಯಾ ಉಪಾಧಿ ಮತ್ತು ಸರ್ವಜ್ಞತ್ವ ಸರ್ವಶಕ್ತಿತ್ವ,ಸ್ವತಂತ್ರತ್ವಾದಿಯಾದ ಯಾವ ಧರ್ಮಗಳುಂಟೋ ಅದರಪರಿತ್ಯಾಗಮಾಡಿಬಿಡುವದ್ದರಿಂದಲೂ, ಇನ್ನು ಜೀವನ ಅವಿದ್ಯಾ ಉಪಾಧಿ ಮತ್ತು ಅಲ್ಪಜ್ಞತ್ವ, ಅಲ್ಪ ಶಕ್ತಿತ್ವ, ಪರಾಧೀನತ್ವಾದಿ ಯಾದ ಯಾವ ಧರ್ಮಗಳುಂಟೋ ಅದನ್ನೂ ಪರಿತ್ಯಾಗ ಮಾಡಿ ಬಿಡುವದ್ದರಿಂದಲೂ, ಬಳಿಕ (ಚಿದಾನಂದಮಯಂ) ಅಂದರೆ, ಕೇವಲ ಸಚ್ಚಿದಾನಂದ ಸ್ವರೂಪ ಮಾತ್ರದಿಂ ಅವೆರಡರ ಏಕತೆಯನ್ನು ವಿಚಕ್ಷಣ-ಯಾವವಿವೇಕೀ ಜನ ಉಂಟೋ ಅವರು ಅನುಭವ ಮಾಡುತ್ತಿರುವರು. ಇಲ್ಲಿ ಈ ತಾತ್ಪರ್ಯ ವಿರುವದು॥ ಹ್ಯಾಗೆಸಮುದ್ರದಿಂದ ತರಂಗವು, ಯಾವ ಭಿನ್ನವಸ್ತುವೂ ಆಗುವದಿಲ್ಲ. ಯಾತಕ್ಕಂದರೆ,-ಶ್ರುತಿಯೊಳ್ಪೇಳಿರುವದು "ತತ್ಸೃಷ್ಟ್ವಾ ತದೇವಾನುಪ್ರಾವಿಶತ್ „ ಅರ್ಥ-ಆ ಪರಮಾತ್ಮನು ಶರೀರ ಸಹಿತವಾದ ಈ ಸರ್ವ ಜಗತ್ತನ್ನು ನಿರ್ಮಾಣಮಾಡಿ ಬಳಿಕ ತಾನೆ, ಜೀವರೂಪದಿಂದ ಅದರಲ್ಲಿ ಪ್ರವೇಶನಾಗುತ್ತಾ ಇರುವನು ಎಂದು ಹಾಗೆ ಗೀತೆಯಲ್ಲಿ "ಅಹಮಾತ್ಮಾ ಗುಡಾಕೇಶಸರ್ವಭೂತಾಶಯಸ್ಥಿತಃ॥ ಕ್ಷೇತ್ರಜ್ಞಂಚಾಪಿಮಾಂ ವಿದ್ಧಿಸರ್ವಕ್ಷೇತ್ರೇಷುಭಾರತ „ ಅರ್ಥ-ಹೇಗುಡಾಕೇಶ ಅಂದರೆ,-ಅರ್ಜುನ ಸರ್ವ ಭೂತ ಪ್ರಾಣಿಗಳ ಅಂತಃಕರಣದಲ್ಲಿ ನಾನು ಇರಲುಳ್ಳವನಾಗಿರುವೆನು. ಹಾಗೆ ಹೇ ಭಾರತ ಅಂದರೆ,-ಎಲೆ ಅರ್ಜುನಾ ಕ್ಷೇತ್ರರೂಪವಾದ ಸರ್ವಶರೀರಗಳಲ್ಲಿ ಕ್ಷೇತ್ರಜ್ಞಯಾವಸಾಕ್ಷೀ ಆತ್ಮನುಂಟೋ ಅವನನ್ನು ನೀನು ನನ್ನನ್ನೆ ಎಂದುತಿಳಿ. ಎಂದು ಶ್ರೀಕೃಷ್ಣನೂಸಹಾ ಹೇಳಿರುವನು ಆದ್ದರಿಂದ ಜೀವಮತ್ತು ಈಶ್ವರನ ಏಕತ್ವವೆಂಬುವದು ಸ್ವತಃ ಸಿದ್ಧವೇ ಆಗಿರುವದು. ಮುಖ್ಯವಾಗಿ ಕೇವಲ ತಿಳಿಯುವದು ಮತ್ತು ತಿಳಿಯದೆ

ಇರುವದೇ ಭೇದವು. ಇನ್ನು "ಮೃತ್ಯೋಃಸಮೃತ್ಯುಮಾಪ್ನೋತಿಯ ಇಹ ನಾನೇವ ಪಶ್ಯತಿ ॥ ಅಥಯೋಽನ್ಯಾಂದೇವತಾಮುಪಾಸತೇನ್ಯೋಸಾವನ್ಯೋಹಮಸ್ಮೀತಿನಸವೇದಯಥಾ ಪಶುರೇವಂಸದೇವಾನಾಂ" ಅರ್ಥ--ಯಾವ ಪುರುಷನು ಈ ಆತ್ಮನಲ್ಲಿ ನಾನಾ ಅಂದರೆ-ಭೇದವಂ ನೋಡುತ್ತಿರುವನೋ ಅವನು (ಮೃತ್ಯೋರ್ಮೃತ್ಯುಂ) ಅಂದರೆ-ಮರಣದಿಂದ ಬೇರೆ ೧ ಮರಣವಂ ಪಡಿಯುತ್ತಿರುವನು ಹಾಗೆ ಯಾವಪುರುಷನು ನನ್ನಿಂದ ದೇವತೆಭಿನ್ನವೆಂದೂ ಮತ್ತು ನಾನು ಅದರಿಂದ ಭಿನ್ನನಾಗಿರುವೆನು ಎಂದೂ ಈ ಪ್ರಕಾರವಾಗಿ ಆತ್ಮನಿಂದ ಭಿನ್ನವಾಗಿ ತಿಳಿದು ದೇವತೆಯ ಉಪಾಸನೆಯಂ ಮಾಡುವನೊ ಅವನು ಯಥಾರ್ಥವನ್ನರಿಯಲಾರನು. ಇಷ್ಟೇ ಅಲ್ಲ ಅವನು ದೇವತೆಗಳ ಪಶುವೆಂದು ಹೇಳಲ್ಪಡುವನು. ಇತ್ಯಾದಿ ಅನೇಕ ಶೃತಿಗಳಲ್ಲಿ ಭೇದ ಪಕ್ಷದನಿಂದೆ ಶ್ರವಣದಲ್ಲಿ ಬರುತ್ತಿರುವದು. ಮತ್ತು ನಾಲ್ಕು ವೇದಗಳಲ್ಲಿ ಅಭೇದಪಕ್ಷದ ನಿಂದಾ ಎಲ್ಲಿಯೂ ಕೇಳ್ಪರುವದಿಲ್ಲ. ಆದ್ದರಿಂದಲೂ ಜೀವೇಶ್ವರರ ಅಭೇದವೆ ವಾಸ್ತವ ಸಿದ್ಧವಾಗಿರುವದು. ಹಾಗೆ ಮಾಂಡೂಕ್ಯೋಪನಿಷತ್ತಿನ ಕಾರಿಕೆ ೨ ಕೆಯಲ್ಲಿ ಗೌಡಪಾದಾಚಾರ್ಯರೂ ಕೂಡ ಹೇಳಿರುವರು. "ಜೀವಾತ್ಮನೋರನನ್ಯತ್ವಮಭೇದೇನಪ್ರಶಸ್ಯತೇ। ನಾನಾತ್ವಂನಿಂದ್ಯತೇ ಯಚ್ಚತದೇವಂಹಿಸಮಂಜಸಂ" ಅರ್ಥ--ಜೀವಮತ್ತು ಈಶ್ವರನ ಏಕತೆ ಅಭೇದ ರೂಪದಿಂದಲೇ ವೇದದಲ್ಲಿ ಪ್ರಶಂಸಿತ ಯಾಕಿರುವದು ? ಮತ್ತು ಹೇಳಲ್ಪಟ್ಟ ಶೃತಿಗಳಲ್ಲಿ ಆದರ ಭೇದದನಿಂದಾ ಯಾಕಿರುವದು ? ಅದಕಾರಣ ತದೇವಂ-ಅಂದರೆ-ಆಜೀವ ಈಶ್ವರರ ಏಕತೆಯನ್ನು ಅಭೇದ ರೂಪವಾಗಿಯೆ ಗ್ರಹಿಸುವದು ಯೋಗ್ಯವು ಆದರೆ ಯಾವನ್ಮಾತ್ರ ಶೃತಿಸ್ಮೃತಿಗಳ ವಾಕ್ಯವು ಜೀವೇಶ್ವರರ ಏಕತೆಯನ್ನು ಪ್ರತಿಪಾದಿಸತಕ್ಕವುಗಳೋ ಅವುಗಳೆಲ್ಲದರಲ್ಲಿಯೂ ಈ ಕಾರವಾದ ವ್ಯವಸ್ಥೆಯನ್ನು ತಿಳಿದುಕೊಳ್ಳಬೇಕು. ಹಾಗೆ ಈ ಹೇಳಲ್ಪಟ್ಟ ಪ್ರಕಾರದಿಂದ ಜೀವ ಮತ್ತು ಈಶ್ವರನ ಏಕತೆಯು ಯಾವದರಿಂದ ನಿಸ್ಸಂದೇಹವಾಗಿ ತಿಳಿದುಕೊಳ್ಳತಕ್ಕದ್ದೋ ಆದರ ನಾಮವೇ ಬ್ರಹ್ಮಜ್ಞಾನವು ಮತ್ತು ಅದೇ ಜನ್ಮಮರಣ ರೂಪವಾದ ಸಂಸಾರ ಬಂಧನದ

---

೧. ಅಂದರೆ-ಪುನಃಪುನಃ ನಾನಾಪ್ರಕಾರವಾದ ನೀಚ ಯೋನಿಗಳಂ ಹೊಂದುತ್ತಿರುವನು. ೨. ಶ್ಲೋಕರೂಪವಾದ ವ್ಯಾಖ್ಯಾನಕ್ಕೆ ಕಾರಿಕಾ ಎಂದು ಹೆಸರು.

ಮುಕ್ತಿಗೆ ಹೇತುವು. ಅದನ್ನು ಯಥಾವತ್ ಸಂಪಾದನೆ ಮಾಡುವದ ಕ್ಕೋಸುಗವೇ ಶಾಸ್ತ್ರಗಳಲ್ಲಿ ನಾನಾ ಪ್ರಕಾರವಾದ ಜಪ, ತಪ, ತೀರ್ಥ, ಯಜ್ಞಾದಿಗಳ ವಿಧಾನವಂ ಪೇಳಿರುವವು. ಈ ಜ್ಞಾನದ ಪ್ರಾಪ್ತಿಯಾದರೆ, ಅದೇ ಆ ಸರ್ವ ಜಪತಪಾದಿಗಳ ಮುಖ್ಯ ಫಲವೆನಿಸುವದು. “ ಹಾಗೆ ಗೀತೆಯಲ್ಲಿ ಭಗವಂತನೂ ಪೇಳಿರುವನು. „ ಸರ್ವಂಕರ್ಮಾಖಿಲಂ ಪಾರ್ಥ ಜ್ಞಾನೆ ಪರಿಸಮಾಪ್ಯತೆ ॥ ಅರ್ಥ—ಹೇ ಪಾರ್ಥ-ಅಂದರೆ,-ಎಲೆ ಅರ್ಜುನ! ಶೃತಿಸ್ಮೃತಿಗಳಿಂದ ಪ್ರತಿಪಾದಿತವಾದ ಯಾವ ಯಜ್ಞಾದಿ ಕರ್ಮಗಳಿರುವವೊ ಆ ಸರ್ವವು ಬ್ರಹ್ಮಜ್ಞಾನದಲ್ಲಿ ಅಂತರ್ಭೂತವಾಗುವವು ಎಂದು. ಆದಕಾರಣ ಸಂಸಾರ ಬಂಧನದಿಂ ಮುಕ್ತರಾಗಬೇಕೆಂಬ ಇಚ್ಛೆಯುಳ್ಳ ಸರ್ವಜಿಜ್ಞಾಸುಜನಗಳು ಪೇಳಲ್ಪಟ್ಟ ಪ್ರಕಾರವಾಗಿ ಜೀವ ಮತ್ತು ಈಶ್ವರನ ಏಕತೆಯನ್ನು ದೃಢನಿಶ್ಚಯ ಮಾಡುವದು ಯೋಗ್ಯವು ॥೪೫॥

ಅಥ ಈ ಪ್ರಕಾರವಾಗಿ ನಲವತ್ತುಮೂರನೇ ಶ್ಲೋಕವಂ ಪಿಡಿದು ಇಲ್ಲಿನ ಪರ್ಯಂತವೂ ‘ ತತ್ ಮತ್ತು ತ್ವಂ , ಪದದ ವಿವೇಚನಪೂರ್ವಕ ಆ ಎರಡರ ಏಕತೆಯಂ ನಿರೂಪಿಸಿ, ಹಾಗೆ ಆ ಏಕತೆಯನ್ನು ನಿಸ್ಸಂದೇಹವಾಗಿ ತಿಳಿಯುವ ರೂಪವಾದ ಯಾವ ಜ್ಞಾನ ಉಂಟೋ ಅದು ಮೊದಲು ಅಂತಃಕರಣದ ಶುದ್ಧಿಯಾದಲ್ಲದೆ ಕದಾಚಿತ್ತಾದರೂ ಚನ್ನಾಗಿ ಪ್ರಾದುರ್ಭಾವವನ್ನು ಪಡೆಯಲಾಗುವದಿಲ್ಲ. ಆದ್ದರಿಂದ ಈಗ ಅದರ ಶುದ್ಧ್ಯರ್ಥವಾಗಿ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ. ಹ್ಯಾಗೂ ಶಿಷ್ಯನ ಅಂತಃಕರಣವು ಪ್ರಥಮವೇ ಶುದ್ಧವಾಗಿದ್ದದು. ಯಾತಕ್ಕಂದರೆ,-ಅಂತಃಕರಣದ ಶುದ್ಧಿಯು ವಿನಃ ಅವನಂ ಕುರಿತು ಪೇಳಿದ ರೀತಿಯಿಂದ ಗುರುವಿನ ಉಪದೇಶ ಮಾಡಲು ಸಂಭವಿಸದು. ಹಾಗಾದರೂ ಈ ಪ್ರಶ್ನೆಯು ಸರ್ವ ಮುಮುಕ್ಷು ಪುರುಷರಿಗೋಸುಗ ಸಾಧಾರಣವೆಂದು ತಿಳಿದುಕೊಳ್ಳತಕ್ಕದ್ದು.

— ಶಿಷ್ಯ ಉವಾಚ —

ಬಹೂನುಪಾಯಾನವದನ್ನಿಹರ್ಷಯೊ ।
ವಿಶುದ್ಧಯೇಂತಃಕರಣಸ್ಯಸಿದ್ಧಿತಾಃ॥

ಭವೇತ್ತ್ವತ್ತೇಷಾಮಚಿರಂವಿಶೋಧಕೋ ।
ಮಹಾಮತೇತತ್ವಮುಪಾದಿಶಾಶುಮೇ॥ ॥೭೬॥

ಟೀಕಾ॥ ಬಹೂನಿತಿ—ಹೇ (ಮಹಾಮತೇ) ಅಂದರೆ,- ಎಲೈ ಜ್ಞಾನ ವಿಜ್ಞಾನ ಸಂಪನ್ನಮತಿಯುಳ್ಳ ಗುರುವೇ, (ಇಹ) ಅಂದರೆ,—ಈ ಲೋಕದಲ್ಲಿ ವ್ಯಾಸ ವಸಿಷ್ಠಾದಿಯಾಗಿರುವ ತತ್ವವೇತ್ತರಾದ ಮಹರ್ಷಿ ಜನಗಳು (ಅಂತಃಕರಣಸ್ಯ) ಅಂದರೆ,-ಅಂತಃಕರಣದ ೧ ಶುದ್ಧ್ಯರ್ಥವಾಗಿ ನಿಶ್ಚಯ ಮಾಡಿ, ಜಪತಪಾದಿಯಾದ ಅನೇಕ ಉಪಾಯಗಳನ್ನು ಪುರಾಣಾದಿಗಳಲ್ಲಿ ಕಥನಿಸಿರುವರು. ಆದರೆ, ಆ ಸರ್ವವೂ ಹ್ಯಾಗೋ ಹಾಗೆ ಸಮ್ಯಕ್ ಪ್ರಕಾರದಿಂದ ಈ ಕಲಿಕಾಲ ಮತ್ತು ಅಲ್ಪಾಯುಷ್ಯದಲ್ಲಿ ಅನುಷ್ಠಾನ ಮಾಡಲು ಅತ್ಯಂತ ದುಷ್ಕರವಾಗಿರುವದು. ಆದ್ದರಿಂದ (ತೇಷಾಂ) ಅಂದರೆ,-ಆ ಸರ್ವ ಉಪಾಯಗಳಲ್ಲಿಂದ ಹೀಗೆ ಯಾವದು ಸುಗಮ ಉಪಾಯವಿರುವದೋ ಅಂದರೆ ಯಾವದರ ಅನುಷ್ಠಾನ ಮಾಡುವದರಿಂದ (ಅಚಿರಂ) ಅಂದರೆ,-ಅನಾಯಾಸದಿಂ ಶೀಘ್ರವೇ ಅಂತಃಕರಣದ ಶುದ್ಧಿಯಾಗುವದೋ ಹಾಗೆ ಎಲೈ ಭಗವಂತನೇ, (ತಮುಪಾದಿಶಾಶುಮೇ) ಅಂದರೆ,-ಕೃಪೆಯಿಂದ ಶೀಘ್ರವಾಗಿ ನನ್ನಂ ಕುರಿತು ಆ ಉಪಾಯವನ್ನು ಅಪ್ಪಣೆ ಕೊಡಿಸಬೇಕು ಎಂದನು. ... ॥೭೬॥

ಅ॥ ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ಗುರು ಒಂದು ಶ್ಲೋಕದಿಂದಲೇ ಅದಕ್ಕೆ ಉತ್ತರವಂ ನಿರೂಪಿಸುತ್ತಾರೆ.

—ಗುರುರುವಾಚ—

ನತೀರ್ಥಯಾತ್ರಾಭಿರಿದಂನಚಾಧ್ವರೈ ।
ಸ್ತಪೋಭಿರುಗ್ರೈರ್ನಜಪೈರ್ವ್ರತೈರಪಿ ।
ತಥಾಪಶುದ್ಧ್ಯತ್ಯಚಿರಂಯಥಾಹರೇ ।
ರನನ್ಯಚೇತಃಸ್ಮರಣೇನನಿತ್ಯಶಃ। ॥೭೭॥

ಟೀಕಾ॥ ನೇತಿ—ಎಲೈ ಶಿಷ್ಯನೇ, (ಇದಂ) ಅಂದರೆ,-ಈ ಯಾವ ಪ್ರಸ್ತುತ ಪುರುಷನ ಅಂತಃಕರಣ ಉಂಟೋ ಅದು (ತೀರ್ಥಯಾತ್ರಾದಿಭಿಃ) ಅಂದರೆ,-ಹಾಗೆ ಪ್ರಯಾಗಾದಿ ತೀರ್ಥಗಳ ಸೇವನೆ ಮಾಡುವದ್ದ

೧ ಚಿತ್ತದಲ್ಲಿರುವ ದೋಷಗಳ ನಿವಾರಣೆಗೋಸುಗ.

ರಿಂದ ಶೀಘ್ರವಾಗಿ ಶುದ್ಧವಾಗುವದಿಲ್ಲ. ಹಾಗೆ (ನಚಾಧ್ವರೈಃ) ಅಂದರೆ,-ಅಧ್ವರ-ಯಾವ ನಾನಾಪ್ರಕಾರವಾದ ಅಶ್ವಮೇಧಾದಿ ಯಜ್ಞಗಳುಂಟೋ ಅವುಗಳಿಂದಲೂ ಹಾಗೆ ಶೀಘ್ರ ಶುದ್ಧವಾಗುವದಿಲ್ಲ. ಮತ್ತು (ತಪೋಭಿರುಗ್ರೈಃ) ಅಂದರೆ,-ಪಂಚಾಗ್ನಿ ತಪನಾದಿರೂಪವಾದ ಯಾವ ಉಗ್ರತಪವಿರುವದೋ ಅದರಿಂದಲೂ ಹಾಗೆ ಶೀಘ್ರ ಶುದ್ಧವಾಗುವದಿಲ್ಲ. ಇನ್ನು (ನಜಪ್ಯೈಃ) ಅಂದರೆ,-ಗಾಯತ್ರ್ಯಾದಿ ನಾನಾ ಪ್ರಕಾರವಾದ ಪವಿತ್ರಮಂತ್ರಗಳನ್ನು ವಿಧಿಪ್ರಕಾರ ಜಪವಂ ಮಾಡುವದ್ದರಿಂದಲೂ, ಹಾಗೆ ಶೀಘ್ರ ಶುದ್ಧವಾಗುವದಿಲ್ಲ. ಮತ್ತು (ವ್ರತೈರಪಿ) ಅಂದರೆ,-ಕೃಚ್ಛ್ರ ಚಾಂದ್ರಾಯಣಾದಿಯಾಗಿ ನಾನಾಪ್ರಕಾರವಾದ ಯಾವ ವ್ರತಗಳುಂಟವೋ ಅವುಗಳಿಂದಲಾದರೂ ಹಾಗೆಶೀಘ್ರವಾಗಿ ಅಂತಃಕರಣದ ಶುದ್ಧಿಯಾಗದಿರುವದು ಮತ್ತೇತರಿಂದಾಗುವದಂದರೆ,- (ಹರೇರನನ್ಯಚೇತಃಸ್ಮರಣೇನ) ಅಂದರೆ,-ಹರಿಃ-ಯಾವ ವಿಷ್ಣು ಭಗವಂತನಿರುವನೋ ಅವನನ್ನು ಪ್ರತಿನಿತ್ಯದಲ್ಲೂ ಅನನ್ಯಚಿತ್ತನಾಗಿ ಸ್ಮರಣೆ ಮಾಡುವದ್ದರಿಂದ ಆಗುವದು. ತಾತ್ಪರ್ಯವೇನಂದರೆ,-ಭಗವಂತನ ಆರಾಧನೆ ಮಾಡುವದರಿಂದ ಸರ್ವ ಪಾಪಗಳು ಶೀಘ್ರವಾಗಿ ವಿನಾಶವಾಗುವವು. ಬಳಿಕ ತಾನಾಗಿಯೇ ಅಂತಃಕರಣದ ಶುದ್ಧಿಯಾಗುತ್ತಿರುವದು. ಹ್ಯಾಗೆ ವಸ್ತ್ರದ ಮಲ ದೂರ ಮಾಡುವದ್ದರಿಂದ ನಂತರ ತಾನಾಗಿಯೇ ವಸ್ತ್ರದ ಶುದ್ಧಿಯಾಗುತ್ತಿರುವದೋ ಎಂದು. ಹಾಗೆ ಮಹಾ ಭಾರತದ ಶಾಂತಿಪರ್ವದಲ್ಲಿ ಭೀಷ್ಮರೂಕೂಡ ಹೇಳಿರುವರು. " ಕಿಂತಸ್ಯದಾನೈಃಕಿಂತೀರ್ಥೈಃ ಕಿಂತಪೋಭಿಃಕಿಮಧ್ವರೈಃ । ಯೋನಿತ್ಯಂಧ್ಯಾಯತೇದೇವಂ ನಾರಾಯಣಮನನ್ಯಧೀಃ ,,

ಅರ್ಥ —ಯಾವ ಪುರುಷನು ನಿತ್ಯವೂ ಏ ೧ ಕಾಗ್ರ ೨ ಬುದ್ಧಿ ಇಂದ ನಾರಾ ೩ ಯಣನ ಧ್ಯಾನವಂ ಮಾಡುವನೋ ಅವನಿಗೆ ಪುನಃ ನಾನಾ

---

೧ ಏಕ-ವಂದರೆ ದ್ವೈತಭೇದವಿಲ್ಲದ್ದು. ೨ ಅಗ್ರಬುದ್ಧಿ ಎಂದರೆ - ವಿಷಯವನ್ನು ಪಿಡಿಯುವದಕ್ಕಿಂತ ಪೂರ್ವದಲ್ಲಿರುವ ಬುದ್ಧಿ,ಅಂದರೆ,- ವಿಷಯಾಲೋಚನೆಯಿಂದೊಡಗೂಡದಿರುವ ಬುದ್ಧಿ.ಭಾವನೇನಂದರೆ,ಗನಸ್ತಪೋವಾಸನೆಗಳಿಲ್ಲದೆ ಅಖಂಡವಸ್ತುವಿನಲ್ಲಿ ನೆಲೆಗೊಳ್ಳತಕ್ಕಯೋಗ್ಯತೆಯುಳ್ಳ ಶುದ್ಧಸತ್ವ ಪ್ರಧಾನವಾದ ಬುದ್ಧಿ. ಇದುಜ್ಞಾನಮೆಂಗಪರ. ೩ ಯಾವನುಸಂಹಾರಕಾಲವಲ್ಲಿ ಜಗವೆಲ್ಲವನ್ನೊಳಕೊಳ್ಳುವದರಿಂದ ನರನೆಂತಲೂ, ಪುನಃ ಸೃಷ್ಟಿಕಾಲದಲ್ಲಿ ತನ್ನಿಂದುದಯಿಸಿದ್ದರಿಂದ ಪ್ರಕೃತ್ಯಾದಿ ತತ್ವಗಳೆಲ್ಲವು ನಾರವೆಂತಲೂ, ಸ್ಥಿತಿಕಾಲದೋಳ್

ಪ್ರಕಾರವಾದ ವಿಪುಲ ದಾನಗಳಂ ಮಾಡುವದ್ದರಿಂದ ಏನುಪ್ರಯೋಜನ ವು ? ಹಾಗೆ ನಾನಾ ಪ್ರಕಾರವಾದ ಪ್ರಯಾಗಾದಿ ತೀರ್ಥಗಳಲ್ಲಿ ಸ್ನಾನ ವಂ ಮಾಡುವದ್ದರಿಂದಲೂ ಯೇನು ಪ್ರಯೋಜನವು, ಇನ್ನು ನಾನಾಪ್ರ ಕಾರವಾದ ಪಂಚಾಗ್ನಿ ತಪನಾದಿ ಉಗ್ರತಪವನ್ನಾಚರಿಸುವದ್ದರಿಂದಲೂ ಯೇನು ಪ್ರಯೋಜನವು, ಹಾಗೆ ನಾನಾ ಪ್ರಕಾರವಾದ ಯಜ್ಞಗಳ ಅ ನುಷ್ಠಾನ ಮಾಡುವದ್ದರಿಂದಲೂ ಕೂಡ ಯೇನು ಪ್ರಯೋಜನ ವಿರುವ ದು. ಅಂದರೆ,-ಅವನಿಗೆ ಕೇವಲ ನಾರಾಯಣನ ಸ್ಮರಣೆಯಿಂದಲೇ ಅಂತಃ ಕರಣದ ಶುದ್ಧಿದ್ವಾರಾ ಕೈವಲ್ಯಮೋಕ್ಷದ ಪ್ರಾಪ್ತಿಯಾಗುವದು ಎಂದು ಹಾಗೆ ಅನ್ಯಸ್ಮೃತಿಯಲ್ಲಿಯೂ ಹೇಳಲ್ಪಟ್ಟಿರುವದು " ಗಂಗಾಸ್ನಾನಸ ಹಸ್ರೇಷು ಪುಷ್ಕರಸ್ನಾನಕೋಟಿಷು ‖ ಯತ್ಪಾಪಂ ವಿಲಯಂಯಾತಿ ಸ್ಮೃತೇನಶ್ಯತಿ ತದ್ಧರೇ ‖ ಮಹಾಪಾತಕಯುಕ್ತೋಪಿ ಧ್ಯಾಯನ್ನಿಮಿಷ ಮಚ್ಯುತಂ ‖ ಭೂಯಸ್ತಪಸ್ವೀಭವತಿ ಪಂಕ್ತಿಪಾವನ ಪಾವನಃ ,, ಅರ್ಥ ‖ ಗಂಗಾನದಿಯಲ್ಲಿ ಸಹಸ್ರಾವೃತ್ತಿ ಸ್ನಾನವಂ ಮಾಡುವದ್ದರಿಂದ ಯಾವ ಪಾಪನಾಶವಾಗುವದೋ ಮತ್ತು ಪುಷ್ಕರ ತೀರ್ಥದಲ್ಲಿ ಕೋಟ್ಯಾ ವೃತ್ತಿ ಸ್ನಾನವಂ ಮಾಡುವದ್ದರಿಂದ ಯಾವ ಪಾಪ ನಷ್ಟವಾಗುವದೋ ಆ ಸರ್ವ ಪಾಪಗಳು ಒಂದು ಕ್ಷಣಮಾತ್ರದೊಳ್ ಹರಿಯ ಸ್ಮರಣೆಮಾ ಡಿದ ಮಾತ್ರದಿಂದಲೇ ನಷ್ಟವಾಗಿ ಹೋಗುವದು. ಹಾಗೆ ಬ್ರಹ್ಮಹತ್ಯಾ ದಿ ಮಹಾಪಾಪಗಳಿಂದ ಯುಕ್ತನಾಗಿದ್ದರೂ ಪುರುಷನು ಯಾವ ಅಚ್ಯುತ ಭಗವಂತನ ಒಂದು ನಿಮಿಷಮಾತ್ರವಾದರೂ ಸರ್ವದಾ ಧ್ಯಾನವಂ ಮಾ ಡುತ್ತಿರುವವನಾದರೆ ಅವನೂ ಪುನಹ ತಪಸ್ವೀ ಮತ್ತು ಪಂಕ್ತಿಗಳ ಪಾ ವನ ಮಾಡುತ್ತಿರುವ ಮಹಾತ್ಮರಾದ ಪುರುಷರುಗಳನ್ನೂ ಪಾವನ ಮಾ ಡುವಂಥಾವನಾಗಿರುವನು ಎಂದು. ಆದಕಾರಣ ಯಾವಪುರುಷನಿಗೆ ಶೀಘ್ರ ವಾಗಿ ಅನಾಯಾಸದಿಂದಲೇ ಅಂತಃಕರಣದ ಶುದ್ಧಿಯುಂಟಾಗಿ ಜ್ಞಾನಪ್ರಾ ಪ್ತಿದ್ವಾರಾ ಕೈವಲ್ಯ ಮೋಕ್ಷಪದದ ಇಚ್ಛೆಯಾಗುವದೋ ಅವನು ಅನ್ಯ ಸರ್ವ ಪ್ರಯತ್ನಗಳನ್ನು ಪರಿತ್ಯಾಗಮಾಡಿ ಕೇವಲ ಭಗವಂತನನ್ನೇ ಏಕಾ

ಅವುಗಳಲ್ಲಿ ತಾನೇ ವ್ಯಾಪ್ತನಾಗಿರುವದ್ದರಿಂದಲೂ, ಮತ್ತು ಆ ಪ್ರಕೃತ್ಯಾದಿ ತತ್ವಗಳೆಲ್ಲವೂ ತನ್ನಲ್ಲಿಯೇ ಸರ್ವದಾ ಇರುವದ್ದರಿಂದಲೂ ಅಂದರೆ, ತಾನೇ ಆ ಪ್ರಕೃತಿಗೆ ಆಧಾರನಾದ್ದ ರಿಂದ ಆ ಪರಮಾತ್ಮನೇ ನಾರಾಯಣನೆನಿಸಿಕೊಳ್ಳುವನೆಂದು ತಿಳಿಯತಕ್ಕದ್ದು.

ಗ್ರಚಿತ್ತನಾಗಿ ಆರಾಧನ ಮಾಡುವದು ಯೋಗ್ಯವು ಎಂದರು. ॥೭೭॥

ಅ—ಈ ಪ್ರಕಾರವಾಗಿ ಅಂತಃಕರಣದ ಶುದ್ಧಿಯು ಮುಖ್ಯೋಪಾಯವಂ ಕೇಳಿ ಈಗ ಪೂರ್ವದಲ್ಲಿ ವರ್ಣಿಸಿದ ಯಾವ ಬ್ರಹ್ಮಜ್ಞಾನ ಉಂಟೋ ಅದು ವೇದಾಂತ ಶಾಸ್ತ್ರದ ರೀತಿಯಿಂದಲೇ ಯಥಾರ್ಥವಾಗಿ ದೊರಕುತ್ತಿರುವದು. ಆದಾಗ್ಯೂ ಇತರವಾದ ಯಾವ ಸಾಂಖ್ಯ, ಯೋಗ, ನ್ಯಾಯಾದಿ ಶಾಸ್ತ್ರಗಳಿರುವವೋ, ಅವುಗಳ ರೀತಿಯಾಗಿ ವಿಶೇಷಾಂಶದಿಂದ ವಿರುದ್ಧ ಪ್ರತೀತಿಯಾಗುತ್ತಿರುವದು ಎಂಬ ಈ ಪ್ರಕಾರವಾದ ಸಂಶಯವಂ ಪೊಂದಿದ ಶಿಷ್ಯನು ಪ್ರಮಾಣಗತ ಸಂಶಯದ ನಿರ್ಣಯವಂ ಮಾಡಲೋಸುಗ ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಅನೇಕಶಾಸ್ತ್ರಾಣಿ ಪುರರ್ಷಿಪುಂಗವೈಃ
ಕೃತಾನಿಸರ್ವಾಣಿಚ ಯುಕ್ತಿಮಂತಿವೈ ॥
ಪ್ರಮಾಣತಾತೇಷುತು ಕಸ್ಯಸಂಭವೇ
ದಶೇಷಶಾಸ್ತ್ರಾರ್ಥ ವಿಚಾರಸಾರವಿತ್ ॥೭೮॥

ಟೀಕಾ ॥ ಅನೇಕೇತಿ ॥ ಎಲೈ (ಅಶೇಷಶಾಸ್ತ್ರಾರ್ಥ ವಿಚಾರಸಾರವಿತ್) ಅಂದರೆ, ಸರ್ವಶಾಸ್ತ್ರಗಳ ಅರ್ಥವನ್ನು ವಿಚಾರ ಪೂರ್ವಕವಾಗಿ ಅವುಗಳೆಲ್ಲದರ ಸಾರತತ್ವವನ್ನು ತಿಳಿದಂಥಾ ಗುರುವೇ ! (ಪುರಾ) ಅಂದರೆ,-ಈ ಕಲಿಯುಗದ ಆಗಮನದಿಂದ ಪೂರ್ವ ಅಥವಾ ಇದರ ಆದಿಕಾಲದಲ್ಲಿ ಸರ್ವ ಋಷಿಗಳೊಳ್ ಶ್ರೇಷ್ಠರಾದ ವ್ಯಾಸ, ವಶಿಷ್ಠ, ಪಾತಂಜಲಿ, ಜೈಮಿನಿ, ಗೌತಮಾದಿಗಳಾದಿಯಾದ ಮಹರ್ಷಿಗಳು ಯಾವ ಅನೇಕ ಪ್ರಕಾರವಾದ ಭಿನ್ನಭಿನ್ನ ಶಾರೀರಕಾದಿ ಶಾಸ್ತ್ರಗಳನ್ನು ನಿರ್ಮಾಣ ಮಾಡಿರುವರೋ ಅವು ತಮ್ಮ ಗಳಲ್ಲಿ ಸರ್ವವು (ಯುಕ್ತಿಮಂತಿ) ಅಂದರೆ,--ನಾನಾಪ್ರಕಾರವಾದ ಯುಕ್ತಿಗಳಿಂದ ಸಂಯುಕ್ತವಾಗಿ ಪ್ರತೀತ ವಾಗುತ್ತಿರುವವು. ಮತ್ತೂ ಏನಂದರೆ.— ಅವುಗಳೊಳ್ ಬಹು ಸ್ಥಲಗಳಲ್ಲಿ ಪರಸ್ಪರ ವಿರುದ್ಧ ಪದಾರ್ಥಗಳ ಪ್ರತಿಪಾದನ ಮಾಡಿ ಇರುವರು. ಆದ್ದರಿಂದ ಈ ವಿಷಯದೊಳ್ ನನಗೆ ಮಹಾ ಸಂಶಯ ಉಂಟಾಗಿರುವದು. ಯೇನಂದರೆ,-ಅವುಗಳೊಳಗೆಲ್ಲ ಯಾವ ಶಾಸ್ತ್ರವು ಪ್ರಮಾಣವಾಗಿರುವದೋ ಅದನ್ನು ಎಲೈ ಭಗವಂತನೇ, (ಪ್ರಮಾಣತಾತೇಷುತುಕಸ್ಯ

ಸಂಭವೇತ್) ಅಂದರೆ,-ಆ ಸರ್ವ ಶಾಸ್ತ್ರಗಳಲ್ಲಿ ಮುಖ್ಯ ಪ್ರಮಾಣ ಉಳ್ಳದ್ದು ಯಾವ ಶಾಸ್ತ್ರವೋ ಅದನ್ನು ನನ್ನಂ ಕುರಿತು ಕೃಪೆಯಿಂದ ಅಪ್ಪಣೆ ಕೊಡಿಸಬೇಕು ಎಂದನು. ... ... ॥೭೮॥

ಅ॥ ಈ ಪ್ರಕಾರವಾಗಿ ಪ್ರಮಾಣ ವಿಷಯಕವಾದ ಶಿಷ್ಯನ ಪ್ರಶ್ನೆಯಂ ಕೇಳಿ, ಈಗ ಸಂಕ್ಷೇಪದಿಂದ ಒಂದು ಶ್ಲೋಕದಿಂದಲೇ ಅದಕ್ಕೆ ಗುರು ಉತ್ತರವನ್ನು ಹೇಳುತ್ತಾರೆ.

— ಗು ರು ರು ಉ ವಾ ಚ —

ಯದ್ಯದ್ವೇದಾನುಗತಂಚಯುಕ್ತಿಮತ್ ।
ತತ್ತದ್ಬಾಲೋಕ್ತಮಪಿಹಗೃಹ್ಯತೇ ॥
ತದ್ಬಾಹ್ಯಮಬ್ಜಜಜನ್ಮನೋದಿತಂ ।
ಪ್ರಾಮಾಣ್ಯಮಾಯಾತಿನಚೋಕದಾಚಿತ್ ॥೭೯॥

ಟೀಕಾ॥ ಯದ್ಯದಿತಿ—ಎಲೈ ಶಿಷ್ಯನೇ, (ಯತ್‌ಯತ್) ಅಂದರೆ,-ಯಾವ ಯಾವ ವಾಕ್ಯಗಳು (ವೇದಾನುಗತಂ) ಅಂದರೆ,-ವೇದದ ಅನುಕೂಲ ಅಂದರೆ ವೇದದ ಅಭಿಪ್ರಾಯದಿಂ ದೊರೆಯುತ್ತಾ ಮತ್ತು (ಯುಕ್ತಿಮತ್) ಅಂದರೆ,-ಯುಕ್ತಿಪೂರ್ವಕವಾಗಿರುವದೋ ಆಯಾಯ ವಾಕ್ಯಗಳು ಬಾಲಕನಿಂದಾದರೂ ವರ್ಣನೇ ಮಾಡಲ್ಪಟ್ಟರೆ ಅದನ್ನು ವಿದ್ವಾಂಸ ಜನಗಳು ಗ್ರಹಣ ಮಾಡುತ್ತಿರುವರು. ಮತ್ತು ಯಾವದು (ತದ್ಬಾಹ್ಯಂ) ಅಂದರೆ,-ವೇದಕ್ಕೆ ಬಾಹ್ಯ ಅಂದರೆ ವಿರುದ್ಧವಾಗಿ ಅನ್ನು ಯುಕ್ತಿಯಿಂದ ರಹಿತವಾದ ವಾಕ್ಯವಿರುವದೋ ಅದನ್ನು ಎಂತಾದರೂ ಸಾಕ್ಷಾತ್ ಬ್ರಹ್ಮನೇ ವರ್ಣಿಸಲ್ಪಟ್ಟಾಗ್ಯೂ ಅದು (ಕದಾಚಿತ್) ಅಂದರೆ ಒಂದಾನೊಂದು ವೇಳೆಯಲ್ಲಿ ಪ್ರಮಾಣತೆಯನ್ನು ಹೊಂದಲಾಗುವದಿಲ್ಲ. ಹಾಗೆ ಯೋಗವಾ ೧ ಸಿಷ್ಠದ ಎರಡನೇ ಪ್ರಕರಣದಲ್ಲಿಯೂ ಹೇಳಲ್ಪಟ್ಟಿರುವದು. "ಯುಕ್ತಿಯುಕ್ತಮುಪಾದೆಯಂ ವಚನಂಬಾಲಕಾದಪಿ ।

೧ ವಸಿಷ್ಠರಿಂದ ಶ್ರೀರಾಮನಿಗೆ ೩೨,೦೦೦ ಶ್ಲೋಕಗಳಿಂದ ಉಪದೇಶಿಸಲ್ಪಟ್ಟ ಗ್ರಂಥಕ್ಕೆ ವಾಸಿಷ್ಠವೆಂದು ಹೆಸರು ಇದರಲ್ಲಿ ಪ್ರಾಣಾಯಾಮಾದಿ ಯೋಗಗಳ ನಿರೂಪಣೆ ಇದುವದ್ದರಿಂದ ಯೋಗವಾಸಿಷ್ಠವೆಂತಲೂ, ತತ್ವವಿಚಾರವೆಲ್ಲವೂ ಸಂಪೂರ್ಣವಾಗಿ ಹೇಳಲ್ಪಟ್ಟಿರುವದ್ದರಿಂದ ಜ್ಞಾನವಾಸಿಷ್ಠವೆಂತಲೂ, ಆತ್ಮ ಸಾಕ್ಷಾತ್ಕಾರಕ್ಕೆ (ಮೋಕ್ಷಕ್ಕೆ) ಸುಲಭೋಪಾಯಗಳು ಹೇಳಲ್ಪಟ್ಟಿರುವದ್ದರಿಂದ ಲಘುವಾಸಿಷ್ಠವೆಂತಲೂ ಸಕಲೋಪನಿಷತ್ತುಗ

ಅನ್ಯತ್ತೃಣಮಿವತ್ಯಾಜ್ಯಂ ಮಪ್ಯುಕ್ತಂಪದ್ಮಜನ್ಮನಾ,, ಅರ್ಥ॥ ಎಲೈ ರಾಮಚಂದ್ರನೇ, ವೇದಕ್ಕೆ ಅನುಕೂಲವಾಗಿಯೂ, ಯುಕ್ತಿಯಿಂದೊಡಗೂಡಿದ್ದಾಗಿಯೂ ಇರುವ ಯಾವದನ್ನು ಬಾಲಕನೇ ನುಡಿಯಲ್ಪಟ್ಟರೂ ಅದನ್ನು ಗ್ರಹಣ ಮಾಡಲು ಯೋಗ್ಯವು. ಮತ್ತು ಅದಕ್ಕೆ ವಿರುದ್ಧವಾಗಿ ಯಾವದನ್ನು ಬ್ರಹ್ಮನೇ ಹೇಳಿದಾಗ್ಯೂ ತೃಣದಂತೆ ಅದನ್ನು ಪರಿತ್ಯಾಗ ಮಾಡತಕ್ಕದ್ದು ಎಂದು. ಅದರಲ್ಲಿ ಪ್ರಥಮ ವೇದವಾದರೋ ಅಪೌರುಷೇಯವಾದ್ದರಿಂದ ಸರ್ವ ಶಂಕೆಗಳು ಮತ್ತೂ ದೋಷಗಳಿಂ ರಹಿತವಾಗಿರುವದು. ಆದ್ದರಿಂದ ಆ ಸರ್ವವೂ ಪ್ರಮಾಣ ಭೂತವಾಗಿರುವದು. ಹಾಗೆ ಅದಕ್ಕೆ ಅನುಕೂಲವಾಗಿ ಅನ್ಯ ಯಾವ ಮಹಾಭಾರತಾದಿ ಇತಿಹಾಸ ಮತ್ತು ಭಾಗವತಾದಿ ಪುರಾಣ ಇನ್ನು ಮನುಯಾಜ್ಞವಲ್ಕ್ಯಾದಿ ಕೃತಧರ್ಮಶಾಸ್ತ್ರ, ಹಾಗೆ ವಾಲ್ಮೀಕಮುನಿಯಿಂ ಮಾಡಿದ ಮಹಾ ರಾಮಾಯಣಾದಿಗಳು, ವ್ಯಾಸ ವಿರಚಿತವಾದ ಶಾರೀರಕಸೂತ್ರ, ಇತ್ಯಾದಿ ಶಾಸ್ತ್ರಗಳಿರುವವೋ* ಅವೂ ಎಲ್ಲಾ ಪ್ರಮಾಣ ಭೂತವಾಗಿರುವವು. ಮತ್ತು ಯಾವ ಜೈಮಿನಿಕೃತ ಪೂರ್ವ ಮೀಮಾಂಸಾ, ಇನ್ನು ಪತಂಜಲಿಮುನಿರಚಿತಯೋಗಸೂತ್ರ ಹಾಗೆ ಕಪಿಲ ದೇವನಿಂದುಕ್ತವಾದ ಸಾಂಖ್ಯಸೂತ್ರವಿರುವದೋ ಅವೂ ವಿಶೇಷಾಂಶದಿಂದ ವೇದಾನುಕೂಲವಾದಕಾರಣ ಪ್ರಮಾಣ ಭೂತವಾಗಿರುವವು. ಇನ್ನು ಯಾವ ನ್ಯಾಯಶಾಸ್ತ್ರ, ವೈಶೇಷಿಕಶಾಸ್ತ್ರ, ಜೈನಶಾಸ್ತ್ರ, ಚಾರ್ವಾಕಶಾಸ್ತ್ರ ಇತ್ಯಾದಿವೇದ ವಿರುದ್ಧ ಶಾಸ್ತ್ರಗಳಿರುವವೋ ಅವೆಲ್ಲವೂ ಪ್ರಮಾಣ ಭೂತವಾಗಿಲ್ಲ. ಹ್ಯಾಗಾದರೂ ಅವುಗಳಲ್ಲಿಯೂ ಅಲ್ಪಸ್ವಲ್ಪ ಯಾವಯಾವ ಅಂಶಗಳೊ ವೇದಾನುಕೂಲವಾಗಿ ಪ್ರತೀತವಾಗುತ್ತಿರುವವು. ಹ್ಯಾಗೆಂದರೆ, ಜೈನಶಾಸ್ತ್ರದಲ್ಲಿ ಅಹಿಂಸ ವ್ರತ, ಉಪವಾಸಾದಿಗಳಿರುವವು. ಹಾಗಾದರೂ ಬಹು ಅಂಶಗಳಲ್ಲಿ ವೇದವಿರುದ್ಧವಾಗಿರುವದ್ದರಿಂದ ಅವುಗಳಿಗೆ

ಳಿಗೂ ಅರ್ಥರೂಪವಾಗಿ ಯಾವ ಶಾಸ್ತ್ರ ಯಾವ ಮತದವರಿಂದಲೂ ನಿರಾಕರಿಸಲಶಕ್ಯವಾಗಿ ಮಹೋನ್ನತವಾದ ಸಿದ್ಧಾಂತಗಳಿಂ ಯುಕ್ತವಾಗಿರುದ್ದರಿಂದ ಗುರುವಾಸಿಷ್ಠವೆಂತಲೂ ಮುಖ್ಯವಾಗಿ ಪೇಳಲ್ಪಟ್ಟ ಸರ್ವ ವಿಷಯಗಳಿಂ ಪೂರ್ಣವಾಗಿ ಸಮುದ್ರದಂತೆ ಮಹಾ ವಿಸ್ತಾರವಾಗಿರುವದ್ದರಿಂದ ಬೃಹದ್ವಾಸಿಷ್ಠವೆಂತಲೂ, ವಿವಿಧವಾದ ವಚನಪುಷ್ಪಗಳಿಂದ ಈ ಒಂದು ಗ್ರಂಥವೇ ಪೂಜಿಸಿಕೊಳ್ಳುತ್ತಿರುವದು.

ಪ್ರಮಾಣತೆ ಸಂಭವಿಸಲಿಲ್ಲ. ಹಾಗೆ ಮನುಸ್ಮೃತಿಯು ಹನ್ನೆರಡನೆ ಅಧ್ಯಾಯದಲ್ಲಿಯೂ ಬರೆಯಲ್ಪಟ್ಟಿರುವದು. ಯೋವೇದಬಾಹ್ಯಾಃಸ್ಮೃತಯೋಯಾಶ್ಚ ಕಾಶ್ಚ ಕುದೃಷ್ಟಯಃ । ಸರ್ವಾಸ್ತಾ ನಿಷ್ಫಲಾಃಪ್ರೇತ್ಯತಮೋನಿಷ್ಠಾಹಿತಾಸ್ಮೃತಾಃ,, ಅರ್ಥ-ಯಾವ ಯಾವ ಸ್ಮೃತಿಗಳು ಮತ್ತು ಯಾವಯಾವ ಅನ್ಯ, ಕುದೃಷ್ಟಯಃ-ಅಂದರೆ, ಸ್ವಕಪೋಲಕಲ್ಪಿತವೆನಿಪಚಾರ್ವಾಕಾದಿ ದರ್ಶನವಿರುವದೊ ಅವೆಲ್ಲವೂ ನಿಷ್ಫಲವಾಗಿಯೂ ಇನ್ನು ಪ್ರೇತ್ಯ,ಅಂದರೆ,- ಮರಣಾನಂತರದಲ್ಲಿನರಕವಂಕೊಡತಕ್ಕವುಗಳಾಗಿಯೂ ಇರುವವುಎಂದು. ಆದ್ದರಿಂದ ಆಸ್ತಿಕರಾದ ಮುಮುಕ್ಷು ಪುರುಷರುಗಳು ಆ ಸರ್ವವನ್ನು ದೂರದಲ್ಲಿಯೆ ಪರಿತ್ಯಾಗವಮಾಡಿ ಬಿಡುವದು ಯೋಗ್ಯವು ಇತಿ. ॥೩೯॥

ಅ-ಈ ಪ್ರಕಾರವಾಗಿ ಪ್ರಮಾಣಗತ ಸಂಶಯದ ಸಮಾಧಾನವಂ ಕೇಳಿ ಈಗ ಸ್ವಲ್ಪವೇದದಲ್ಲಿ "ಋತೇಜ್ಞಾನಾನ್ನಮುಕ್ತಿಃ ,, ಇತ್ಯಾದಿ ವಾಕ್ಯಗಳಿಂದ ಕೇವಲ ಜ್ಞಾನದಿಂದಲೇ ಮೋಕ್ಷಪದದ ಪ್ರಾಪ್ತಿ ಎಂದು ವರ್ಣಿಸಲ್ಪಟ್ಟಿರುವದು. ಮತ್ತು ಪುನಃಸ್ವಲ್ಪ "ವಿದ್ಯಯಾಮೃತಮಶ್ನುತೆ ,, ಇತ್ಯಾದಿ ವಾಕ್ಯಗಳಿಂದ ಉಪಾಸನೆಯಿಂದಲೇ ಮೋಕ್ಷದಪ್ರಾಪ್ತಿ ಎಂದು ಕಥನ ಮಾಡಿರುವದು. ಹಾಗೆ ಪುನಃಸ್ವಲ್ಪ "ತ್ರಿಕರ್ಮಕೃತ್ತರತಿ ಜನ್ಮಮೃತ್ಯೂಂ ,, ಇತ್ಯಾದಿ ವಾಕ್ಯಗಳಿಂದ ಕರ್ಮಗಳಿಂದಲೇ ಮೋಕ್ಷದ ಪ್ರಾಪ್ತಿ ಎಂದು ವರ್ಣನೆ ಮಾಡಲ್ಪಟ್ಟಿರುವದು. ಆದರೆ ಈ ಪರಿಯಾದ ಭಿನ್ನಭಿನ್ನ ವಾಕ್ಯಗಳು ಪ್ರಮಾಣ ಮಾಗಿರುವದ್ದರಿಂದ ಅವುಗಳಲ್ಲಿ ಯಾವದು ಪ್ರಮಾಣವೋ ಎಂದು ಈ ಪ್ರಕಾರವಾದ ಮಹಾ ಸಂಶಯವಂ ಪೊಂದಿದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯಉವಾಚ—

ಉಪಾಸನಾಜ್ಞಾನ ಮುತಾಪಿಕರ್ಮಣಾ
ಭವೇದ್ದೃಢಾಕಿಂನು ವಿಮೋಕ್ಷಸಾಧನಮ್ ॥
ಅಥೋಕಿಮೇತಾನಿ ಸಮುಚ್ಚಿತಾನಿವಾ
ಕಿಮನ್ಯದಸ್ತ್ಯಸ್ತಿತಪಾಪ್ತಿಕಾರಣಮ್ ॥೪೦॥

ಟೀಕಾ॥ ಉಪಾಸನೇತಿ- ಎಲೈ ಭಗವಂತನೇ ! ಸರ್ವದುಃಖಗಳ ಅತ್ಯಂತ ನಿವೃತ್ತಿ ಮತ್ತು ಪರಮಾನಂದದ ಪ್ರಾಪ್ತಿರೂಪವಾದ ಯಾವ

ಮೋಕ್ಷ ಉಂಟೋ ಅದರ ಪ್ರಾಪ್ತಿಯಲ್ಲಿ ದೃಢವಾದ ಸಾಧನವು, ಉಪಾಸನೆಯೋ, ಅಲ್ಲದಿದ್ದರೆ ಜ್ಞಾನವೋ, ಅಥವಾ ಕರ್ಮವೋ, ಅಥವಾ (ಏತಾನಿಸಮುಚ್ಚಿತಾನಿ) ಅಂದರೆ,-ಈ ಉಪಾಸನಾ, ಜ್ಞಾನ, ಕರ್ಮ, ಮೂರು ಏಕತ್ರ ಸೇರಿಕೊಂಡು ಮೋಕ್ಷಕ್ಕೆ ಸಾಧನವಾಗಿರುವದೋ ಅಥವಾ ಈ ಮೂರರಿಂದಲೂ ಯಾವದು, ಅನ್ಯತ್-ಅಂದರೆ,-ಭಿನ್ನ ೧ ವಾಗಿ ಆ ಮೋಕ್ಷದ ಪ್ರಾಪ್ತಿಗೆ ಕಾರಣವಾಗಿರುವದೋ, ಅದನ್ನು ಕೃಪೆಯಿಂದ ನನ್ನಂ ಕುರಿತು ನಿರೂಪಿಸಬೇಕು ಎಂದನು. ||೮೦||

ಅ—ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರು ಅದಕ್ಕೆ ಸಮಾಧಾನವಂ ಹೇಳುತ್ತಾರೆ.

—॥ ಗುರುರುವಾಚ ॥—

ನೋಪಾಸನಾನ್ನೈವಚಕರ್ಮಕಾರಣಂ
ಮೋಕ್ಷಸ್ಯನೈನಾಪಿ ಸಮುಚ್ಚಯಸ್ತಯೋಃ॥
ಜ್ಞಾನಂವದಂತೀಹ ತು ತಸ್ಯಸಾಧನಂ
ನಾನ್ಯೋಸ್ತಿಪಂಥಾ ಭವರೋಗಶಾಂತಯೇ ||೮೧||

ಟೀಕಾ॥ ನೋಪಾಸನೇತಿ- ಎಲೈ ಶಿಷ್ಯನೇ! (ಮೋಕ್ಷಸ್ಯ) ಅಂದರೆ, ವಿದೇಹ ಕೈವಲ್ಯ ವೆನಿಪ ಮೋಕ್ಷದ ಪ್ರಾಪ್ತಿಗೆ ಉಪಾಸನಾ ಸಾಕ್ಷಾತ್ಕಾರಣವಾಗಿಲ್ಲ. ಮತ್ತು (ನೈವಚಕರ್ಮ) ಅಂದರೆ,- ಕರ್ಮವೂ ಸಾಕ್ಷಾತ್ಸಾಧನವಾಗಿಲ್ಲ. ಹಾಗೆ (ತಯೋಃ) ಅಂದರೆ,- ಆ ಉಪಾಸನಾ, ಮತ್ತು ಕರ್ಮದ ಯಾವ ಪರಸ್ಪರ ಸಮುಚ್ಚ ೧ ಯ ಉಂಟೋ ಅದೂ ಮೋಕ್ಷದ ಕಾರಣವಾಗಿಲ್ಲ. ಅಥವಾ ಅವೆರಡಕ್ಕೂ ಯಾವ ಜ್ಞಾನದೊಡನೆ ಸಮುಚ್ಚಯ ಉಂಟೋ ಅದೂ ಮೋಕ್ಷದ ಮುಖ್ಯ ಸಾಧನವಾಗಿಲ್ಲ. ಯಾತಕ್ಕಂದರೆ,- ಹ್ಯಾಗೆ ಪ್ರಜ್ವಲಿತವಾದ ದೀಪಕವು ಪದಾರ್ಥಗಳಂ ಪ್ರಕಾಶಪಡಿಸುವಲ್ಲಿ ಯಾವದೂ ಎರಡನೇ ದೀಪಾದಿ ಪ್ರಕಾಶದ ಅಪೇಕ್ಷಾ ಮಾಡದಿರುವದೋ ಹಾಗೆಯೇ ಉತ್ಪನ್ನ ೨ ವಾದ ಜ್ಞಾನವೂ, ಮೋಕ್ಷದಲ್ಲಿ

೧ ಪ್ರತಿಯಾಗ.

೧ ಜೊತೆಗೊಳಿಸುವಿಕೆ- ಬೆರಿಕೆ. ೨ ಇಲ್ಲಿ ಜ್ಞಾನಕ್ಕೆ ಉತ್ಪತ್ತಿಯನ್ನಂಗೀಕರಿಸಿದರೆ ಜ್ಞಾನ ವನಿತ್ಯವಾಗುವದು. ಅನಿತ್ಯ ಜ್ಞಾನದಿಂದ ಮೋಕ್ಷಪ್ರಾಪ್ತಿ ಎಂಬುವದು ಅಸಂಭವನೀಯವು. ಆದ್ದರಿಂದ ಇದಕ್ಕೆ ಭಾವಾರ್ಥವೇನೆಂದರೆ,-ಕಾಷ್ಠದಲ್ಲಿ ಅಗ್ನಿ ಇರುವದು ಅದು ಮಥ

ಯಾವದೂ ಎರಡನೇ ಅಪೇಕ್ಷಾ ಮಾಡದಿರುವದು. ಹಾಗೆ ಈ ಕಾರಣದಿಂದ (ಜ್ಞಾನಂವದಂತಿ) ಅಂದರೆ,-ಶ್ರುತಿಸ್ಮೃತಿಗಳವಾಕ್ಯ ಕೇವಲ ಜ್ಞಾನವನ್ನೇ ಸಾಕ್ಷಾತ್ ಮೋಕ್ಷದ ಸಾಧನವೆಂದು ವರ್ಣನೆ ಮಾಡುತ್ತಿರುವದು. ಹಾಗೆ ಶ್ವೇತಾಶ್ವತರೋಪನಿಷತ್ತಿನಲ್ಲಿಯೂ ಪೇಳಲ್ಪಟ್ಟಿರುವದು. "ಜ್ಞಾತ್ವಾ ದೇವಂಮುಚ್ಯತೆ ಸರ್ವಪಾಶೈಃ,, ಅರ್ಥ-ಜ್ಞಾನದ್ವಾರಾ ಆ ಪರಮಾತ್ಮನಾದ ದೇವನನ್ನು ತಿಳಿಯುವದ್ದರಿಂದಲೇ ಈ ಪುರುಷನು ಜನ್ಮಮರಣಾದಿರೂಪವಾದ ಸಂಸಾರದ ಸರ್ವಪಾಶಗಳಿಂದ ಮುಕ್ತನಾಗುವನು ಎಂದು. ಹಾಗೆ ಸ್ಮೃತಿಯಲ್ಲಿಯೂ ಪೇಳಿರುವದು. "ಜ್ಞಾನಾದೇವತು ಕೈವಲ್ಯಂ ಪ್ರಾಪ್ಯತೆ ಯೇನಮುಚ್ಯತೆ ,, ಅರ್ಥ-ಜ್ಞಾನದಿಂದಲೇ ಕೈವಲ್ಯ ಮೋಕ್ಷದ ಪ್ರಾಪ್ತಿಯಾಗುವದು. ಯಾವದರಿಂದ ಈ ಪುರುಷನು ಸಂಸಾರಬಂಧನದಿಂ ಮುಕ್ತನಾಗುವನೊ ಎಂದು. ಹಾಗೆ ಗೀತೆಯಲ್ಲಿಯೂ ಪೇಳಲ್ಪಟ್ಟಿರುವದು. "ನಹಿಜ್ಞಾನೇನಸದೃಶಂ ಪವಿತ್ರಮಿಹವಿದ್ಯತೆ ,, ಅರ್ಥ—ಎಲೆ ಅರ್ಜುನ! ಜ್ಞಾನಕ್ಕೆ ಸಮಾನ ಈ ಲೋಕದಲ್ಲಿ ಅನ್ಯ ಉಪಾಸನಾದಿ ಯಾವ ಪವಿತ್ರವಸ್ತುವೂ ಇಲ್ಲವೆಂದು. ಆದ್ದರಿಂದೆಲೈ ಶಿಷ್ಯನೆ, ಈಪ್ರಕಾರವಾಗಿ ಮೋಕ್ಷದ ಪ್ರಾಪ್ತಿಯಲ್ಲಿ ಜ್ಞಾನವೇ ಮುಖ್ಯಸಾಧನವಾಗಿರುವದು. ಹ್ಯಾಗೂ ಅಂತಃಕರಣದಶುದ್ಧಿ ಮತ್ತು ಏಕಾಗ್ರತಾದ್ವಾರಾ, ಕರ್ಮ ಇನ್ನು ಉಪಾಸನೆಯುಕೂಡ ಮೋಕ್ಷದ ಸಾಧನವೆ ಯೆ. ಹಾಗಾದರೂ ಅವು ಪರಂಪರೆಯಿಂ ಸಾಧನವಾಗಿರುವವಲ್ಲದೆ ಸಾಕ್ಷಾತಲ್ಲಾಗಿಲ್ಲ. ಸಾಕ್ಷಾತ್ತಾದರೊ ಕೇವಲ ಜ್ಞಾನವೇ ಆಗಿರುವದು. ಆದ್ದರಿಂದಿಲ್ಲಿ ಕೇವಲಜ್ಞಾನಕ್ಕೇನೆ ಮುಖ್ಯತಾ ಪೇಳಲ್ಪಟ್ಟಿರುವದು. ಈ ಪ್ರಕಾರದಿಂ ಪ್ರಶ್ನೆಯ ಪ್ರಥಮ ಅಂಶದ ಉತ್ತರವಂ ಪೇಳಿದವರಾಗಿ ಈಗ ಯಾವಶಿಷ್ಯನ ಈ ಪ್ರಶ್ನೆ ಇರುವದೊ ಯೇನೆಂದರೆ,-ಮೋಕ್ಷದ ಪ್ರಾಪ್ತಿಯಲ್ಲಿ ಯಾವದೂ

ನಕ್ಕೆ ಪೂರ್ವ ಅಗೋಚರವಾಗಿರುವದು. ಮಥನದಿಂದ ಅಗ್ನಿ ಗೋಚರವಾಗುವಾಗ್ಯೆ ಪುಟ್ಟಿತೆಂದು ಹ್ಯಾಗೆ ಲೋಕದಲ್ಲಿ ಪೇಳಲ್ಪಡುವದೋ ಹಾಗೆ ಸ್ವರೂಪವೆ ದ ಜ್ಞಾನವು ಅನಾದಿ ಬಾವಾಜ್ಞಾನದಿಂದಲೂ, ತತ್ಕಾರ್ಯ-ವಾದ ಆ ವರಣ ವಿಕ್ಷೇಪಾದಿ ಪ್ರತಿಬಂಧಕದಿಂದ ಅಗೋಚರವಾಗಿದ್ದು, ಗುರುಶಾಸ್ತ್ರ ವಿಚಾರಾದಿರೂಪ ಮಥನದಿಂದ ಅದು ಪ್ರಕಾಶಿಸುವಾಗ್ಯೆ ಉತ್ಪನ್ನವೆಂದು ಪೇಳಲ್ಪಡುವದು ಇಷ್ಟೆಅಲ್ಲದೆ ಜಾಯತೆ ವರ್ಧತೆ ಎಂಬ ವಿಕಾರಾರ್ಥವಾಗಿ ಇಲ್ಲಿ ಗ್ರಹಿಸಕೂಡದು.

ಅನ್ಯವಾದರೂ ಸಾಧನವುಂಟೋ ಯೇನು ಇಲ್ಲವೋ ಇಂತೆಂಬ ಆದಕ್ಕೆ ಉತ್ತರವನ್ನು ಹೇಳುತ್ತಾರೆ (ನಾನ್ಯೋಸ್ತಿ ಪಂಥಾ) ಅಂದರೆ,-ಎಲೈ ಶಿಷ್ಯನೆ ಜನ್ಮಮರಣರೂಪವಾದ ಯಾವ ಮಹಾ ಭವರೋಗ ವಿರುವದೋ ಅದರ ಶಾಂತಿ ಅಂದರೆ,-ನಿವೃತ್ತಿಗೋಸುಗ ಎರಡನೆ ಯಾವ ಮಾರ್ಗವೂ ಇಲ್ಲ. ಭಾವವೇನಂದರೆ,-ಪೂರ್ವೋಕ್ತವಾದ ಆತ್ಮಜ್ಞಾನವೆ ಪರಮಮಾರ್ಗವು ಎಂದು. ಈ ವಾರ್ತೆಯು ಶ್ವೇತಾಶ್ವತರೋಪನಿಷತ್ತಿನೊಳಗೂ ಪ್ರಕಟಿಸಲ್ಪಟ್ಟಿರುವದು. " ನಾನ್ಯಃ ಪಂಥಾವಿದ್ಯತೇಯನಾಯ ,, ಅರ್ಥ-ಜ್ಞಾನದ ವಿನಃ ಮೋಕ್ಷದ ಪ್ರಾಪ್ತಿಯಲ್ಲಿ ಯಾವದೂ ಎರಡನೆ ಮಾರ್ಗವಿಲ್ಲವು ಎಂದು ಹಾಗೆ ಯೋಗವಾಸಿಷ್ಠದಲ್ಲಿಯೂ ಬರಿಯಲ್ಪಟಿರುವದು. ಜ್ಞಾನಾನ್ನಿರ್ದುಃಖತಾಮೆತಿ ಜ್ಞಾನಾದಜ್ಞಾನಸಂಕ್ಷಯಃ ॥ ಜ್ಞಾನಾದೇವಪರಾಸಿದ್ಧಿರ್ನಾನ್ಯಸ್ಮಾದ್ರಾಮವಸ್ತುತಃ ,, ಅರ್ಥ—ಎಲೈ ರಾಮಚಂದ್ರನೆ ಈ ಪುರುಷನು ಜ್ಞಾನದಿಂದಲೇ ಸರ್ವದುಃಖಗಳಿಂ ರಹಿತನಾಗುವನು. ಮತ್ತು ಜ್ಞಾನದಿಂದಲೇ ಅಜ್ಞಾನದ ನಾಶವಾಗುವದು. ಹಾಗೆ ಜ್ಞಾನದಿಂದಲೇ ಪರಮ ಸಿದ್ಧಿ ಎನಿಪ ಯಾವ ಮೋಕ್ಷವುಂಟೋ ಆದರ ಪ್ರಾಪ್ತಿಯಾಗುವದು, ಅನ್ಯ ಯಾವ ವಸ್ತುವಿನಿಂದಲೂ ಇಲ್ಲ. ॥೪೧॥

ಅ—ಈ ಪ್ರಕಾರವಾಗಿ ಮೋಕ್ಷದ ಸರ್ವ ಸಾಧನಗಳಲ್ಲಿಂದ ಜ್ಞಾನದ ಮುಖ್ಯಸಾಧನತೆಯನ್ನು ಕೇಳಿ ಈಗ ಅಜ್ಞಾನದ ಸಾಧನ ಮತ್ತು ಸ್ವರೂಪ ಲಕ್ಷಣದ ಬೋಧಾರ್ಥವಾಗಿ ಶಿಷ್ಯನು ಪುನಃ ಪ್ರಶ್ನೆಯನ್ನು ಮಾಡುತ್ತಾನೆ.

—ಶಿಷ್ಯ ಉವಾಚ—

ಉಪಾಸನಾಯಾಶ್ಚ ತಥೈವಕರ್ಮಣೋ।
ಭವೇದ್ವಿಬೋಧಸ್ಯಚಕಿಂನುಸಾಧನಂ ॥
ಸ್ವರೂಪಮೇಷಾಂಚಕಿಮಸ್ತಿನಿಶ್ಚಿತಂ।
ಪೃಥಕ್‌ಪೃಥಗ್ಬ್ರೂಹಿವಿಭೋಉಪಾಸತಃ। ॥೪೨॥

ಟೀಕಾ॥ ಉಪಾಸನಾಯಾಇತಿ—ಹೇ ವಿಭೋ-ಅಂದರೆ,—ಆತ್ಮಸ್ವರೂಪದಿಂದ ಸರ್ವ ವ್ಯಾಪಕನಾದ ಗುರುವೇ, ತಾವು ಯಾವ ಮೋಕ್ಷದ ಪ್ರಾಪ್ತಿಯಲ್ಲಿ ಜ್ಞಾನವೇ ಸಾಕ್ಷಾತ್ಸಾಧನವೆಂತಲೂ, ಉಪಾಸನಾ ಮತ್ತು

ಕರ್ಮಗಳೆಲ್ಲವೆಂತಲೂ, ಹೇಳಿದಿರಲ್ಲವೇ? ಆದರೆ ಮೊದಲು ಆ ಉಪಾಸನಾಕರ್ಮ ಇನ್ನು ವಿಬೋಧ-ಯಾವ ಜ್ಞಾನ ಉಂಟೋ ಆ ಮೂರಕ್ಕೂ ಯೇನು ಸಾಧನವಿರುವದು? ಹಾಗೆ (ಸ್ವರೂಪಮೇಷಾಂ) ಅಂದರೆ,— ಅವುಗಳಿಗೆ ಯಥಾರ್ಥ ಸ್ವರೂಪ ಲಕ್ಷಣವೇನಿರುವದೋ ಆ ಈ ಸರ್ವವನ್ನೂ (ಪೃಥಕ್ಪೃಥಕ್) ಅಂದರೆ,-ಬೇರೆಬೇರೆಯಾಗಿ ಸಂಕ್ಷೇಪದಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ||೮೨||

ಅ|| ಈ ಪ್ರಕಾರವಾದ ಶಿಷ್ಯನ ಯರಡು ಪ್ರಶ್ನೆಗಳನ್ನು ಕೇಳಿ, ಈಗ ಅವಕ್ಕೆ ಶ್ಲೋಕದ್ವಯದಿಂದ ಸಂಕ್ಷೇಪವಾಗಿ ಗುರು ಉತ್ತರವನ್ನು ಹೇಳುತ್ತಾರೆ.

—ಗುರುರುವಾಚ—

ಶ್ರದ್ಧಾಮನಃಸ್ಥೈರ್ಯಮುಪಾಸನಸ್ಯವೈ |
ಚಾಸ್ತಿಕ್ಯವಿತ್ತಾಧಿಕತಾದಿಕರ್ಮಣಃ ||
ಜ್ಞಾನಸ್ಯವೈರಾಗ್ಯವಿವೇಚನಾದಿಕಂ |
ವಿಜ್ಞಾನವದಂತೀಹತುಸಾಧನಂಪೃಥಕ್|| ||೮೩||

ಟೀಕಾ|| ಶ್ರದ್ಧೇತಿ-ಎಲೈ ಶಿಷ್ಯನೇ, ತನ್ನ ಇಷ್ಟದೇವತೆಯಲ್ಲಿಯಾವ ಪರಮ ಶ್ರದ್ಧಾ ಮತ್ತು ಮನದ ಸ್ಥಿರತೆಯೂ ಉಂಟೋ ಆ ಈ ಎರಡು ಉಪಾಸನೆಯ ಸಾಧನವು. ಇಲ್ಲಿ ಶ್ರದ್ಧಾ ಮತ್ತು ಮನದ ಸ್ಥಿರತೆ ಇವೆರಡೂ ಉಪಾಸನಾವಿಧಿಗೆ ಯಥಾರ್ಥ ಜ್ಞಾನ ಮರಣ ಪರ್ಯಂತವಾಗಿ ದೃಢವಾದ ಹಠ, ಇನ್ನು ಚಿತ್ತದಲ್ಲಿ ಉತ್ಸಾಹ ಇತ್ಯಾದಿಗಳದೂ ಉಪಲಕ್ಷಣವಾಗಿರುವದು. ಹ್ಯಾಗಾದಾಗ್ಯೂ ಮನದಸ್ಥಿರತೆ ಎಂಬುದು ಉಪಾಸನೆಯ ಅನಂತರವಾಗುವದು. ಹಾಗಾದರೂ ಕಿಂಚಿತ್ಸಾಮಾನ್ಯದಿಂದ ಪ್ರಥಮದಲ್ಲಿಯೇ ಆಗಬೇಕು. ಯಾತಕ್ಕಂದರೆ,-ಅತ್ಯಂತ್ಯ ಚಂಚಲಮನವುಳ್ಳ ಪುರುಷನಿಗೆ ಉಪಾಸನೆಯಲ್ಲಿ ಅಧಿಕಾರವಿಲ್ಲ ಈ ಕಾರಣದಿಂದ ಅತ್ಯಂತ ಚಂಚಲ ಪುರುಷನಂ ಕುರಿತು ಯೋಗಶಾಸ್ತ್ರದಲ್ಲಿ “ತಪಃಸ್ವಾಧ್ಯಾಯೇಶ್ವರಪ್ರಣಿಧಾನಾನಿಕ್ರಿಯಾಯೋಗಃ” ಈ ಸೂತ್ರದಲ್ಲಿ ಕೃಚ್ಛ್ರಚಾಂದ್ರಾಯಣಾದಿರೂಪ ತಪಮಾಡುವದು, ವೇದ, ಸ್ಮೃತಿ, ಅಥವಾ ಗಾಯತ್ರ್ಯಾದಿ ಮಂತ್ರಗಳನ್ನು ಅಹರ್ನಿಶ ಅಧ್ಯಯನ ಮಾಡುವದು, ಮತ್ತು ಈಶ್ವರ

ನನಾಮೋಚ್ಚಾರಣಾದಿ ರೂಪಸ್ಮರಣೆ ಮಾಡುವದು ಎಂಬ ಈ ಪ್ರಕಾರ ದಿಂದ ಪತಂಜಲಿ ಮುನಿಯು ಕ್ರಿಯಾಯೋಗದ ವಿಧಾನವಂ ಪೇಳಿರುವರು. ಹಾಗೆ (ಚಾಸ್ತಿಕ್ಯವಿತ್ತಾಧಿಕತಾದಿಕರ್ಮಣಃ) ಅಂದರೆ, ಎಲೈ ಶಿಷ್ಯನೇ, ವೇದವಾಕ್ಯಗಳಲ್ಲಿಯೂ, ಮತ್ತು ಸ್ವರ್ಗಾದಿ ಲೋಕಗಳಲ್ಲಿಯೂ, ಯಾವ ಪರಮ ಆಸ್ತಿಕತೆಯುಂಟೋ, ಇನ್ನು ತನ್ನ ಶರೀರಾದಿ ಪೋಷಣೆಯಿಂದ ಯಾವ ದ್ರವ್ಯದ ಅಧಿಕತೆಯುಂಟೋ ಆದಿ ಶಬ್ದದಿಂದ ದ್ವಿಜಾತಿತ್ವಾದಿ ಅಧಿಕಾರಿತ್ವವು ಕರ್ಮದ ವಿಧಿಯು ಜ್ಞಾನವಾಗತಕ್ಕದ್ದು, ಭೋಗ ಅಥವಾ ಮೋಕ್ಷದ ಇಚ್ಛೆಯಾಗಲೀ ಇತ್ಯಾದಿ ಇವು ಕರ್ಮದ ಸಾಧನಗಳಾಗಿರುವವು. ಹಾಗೆ (ಜ್ಞಾನಸ್ಯವೈರಾಗ್ಯವಿವೇಚನಾದಿಕಂ) ಅಂದರೆ,-ಈಲೋಕ ಮತ್ತು ಪರಲೋಕದ ವಿಷಯಗಳಲ್ಲಿ ವಿರಾಗವು, ಇನ್ನು ಸತ್ತು ಅಸತ್ತುಗಳ ವಿವೇಕವು. ಆದಿಶಬ್ದದಿಂದ ಶಮ, ದಮ, ವಿಶ್ವಾಸ ತಿತಿಕ್ಷಾದಿರೂಪ ಷಟ್ ಸಂಪತ್ತಿ, ಮತ್ತುಮೋಕ್ಷದ ಉತ್ಕಟೇಚ್ಛಾ ಹಾಗೆ ವೇದಾಂತ ಶಾಸ್ತ್ರದ ಬ್ರಹ್ಮನಿಷ್ಠ ಗುರುಮುಖದ್ವಾರಾ, ಶ್ರವಣ ಮನನ ನಿಧಿಧ್ಯಾಸ, ತತ್ ಮತ್ತು ತ್ವಂಪದಾರ್ಥದ ಶೋಧನವೆಂಬ ಈಸರ್ವವೂ ಜ್ಞಾನದ ಸಾಧನಗಳಾಗಿರುವವು ಆದ್ದರಿಂದೆಲೈ ಶಿಷ್ಯನೇ ! (ವಿಜ್ಞಾವದಂತಿ) ಅಂದರೆ,-ವಿಜ್ಞ-ಯಾವ ತತ್ವ ದರ್ಶಿಗಳಾದ ವಿದ್ವಾಂಸ ಜನಗಳುಂಟೋ ಅವರು ಪೇಳಲ್ಪಟ್ಟ ರೀತಿಯಿಂದ ಉಪಾಸನಾದಿಗಳನ್ನು ಭಿನ್ನ ಭಿನ್ನ ಸಾಧನವೆಂದು ಪೇಳುತ್ತಿರುವರು. ||೮೩||

ಅ—ಈ ಪ್ರಕಾರದಿಂದ ಪ್ರಥಮ ಪ್ರಶ್ನೆಯ ಉತ್ತರವಂ ನಿರೂಪಿಸಿ, ಈಗ ಆ ಉಪಾಸನಾದಿಗಳ ಯಥಾರ್ಥ ಸ್ವರೂಪವೇನಿರುವದೋ ಎಂಬ ಈ ಯಾವ ಶಿಷ್ಯನ ಎರಡನೆ ಪ್ರಶ್ನೆಯುಂಟೋ ಅದಕ್ಕೆ ಉತ್ತರವಂ ನಿರೂಪಿಸುತ್ತಾರೆ.

—ಗುರುರುವಾಚ—

ದಾನಾಗ್ನಿಹೋತ್ರಾದಿತಃಕರ್ಮಣಸ್ತಥಾ
ಪಾಸ್ತಿಶ್ಚಚೇತೋರ್ಪಣ ಮಿಷ್ಟವಸ್ತುನಿ ||
ಬ್ರಹ್ಮಾತ್ಮನೋರೈಕ್ಯ ವಿನಿಶ್ಚಯಂಬುಧಾಃ
ಪ್ರಾಹುರ್ವಿಬೋಧಸ್ಯಚಲಕ್ಷಣಂಪೃಥಕ್ ||೮೪||

ಟೀಕಾ॥ ದಾನೇತಿ-ಎಲ್ಯೈಶಿಷ್ಯನೇ, (ದಾನಾಗ್ನಿಹೋತ್ರಾದಿ) ಅಂದರೆ,-ದಾನಮಾಡುವದು, ಮತ್ತು ಅಗ್ನಿಹೋತ್ರ ಮಾಡುವದು, ಆದಿಶಬ್ದದಿಂದ ಇಷ್ಟಾಪೂರ್ತ ದತ್ತ ರೂಪವೆನಿಪ, ಯಾವ ಮೂರು ಪ್ರಕಾರದ ಕರ್ಮವಿರುವದೋ, ಅವುಗಳೆಲ್ಲವನ್ನೂ ಇಲ್ಲಿ ಗ್ರಹಿಸಿಕೊಳ್ಳಬೇಕು. ಹಾಗೆ ಆ ಮೂರರ ಲಕ್ಷಣವನ್ನು ಅನ್ಯಸ್ಮೃತಿಯಲ್ಲಿ ವರ್ಣಿಸಲ್ಪರುವದು. “ ಅಗ್ನಿಹೋತ್ರಂತಪಃಸತ್ಯಂ ವೇದಾನಾಂಚಾನುಪಾಲನಂ । ಆತಿಥ್ಯಂವೈಶ್ವದೇವಂಚ ಇಷ್ಟಮಿತ್ಯಭಿಧೀಯತೆ ॥ ವಾಪೀಕೂಪತಡಾಗಾದಿ ದೇವತಾಯತನಾನಿಚ । ಅನ್ನಪ್ರದಾನಮಾರಾಮಃ ಪೂರ್ತಮಿತ್ಯಭಿಧೀಯತೆ ॥ ಶರಣಾಗತಸಂತ್ರಾಣಂ ಭೂತಾನಾಂಚಾಪ್ಯಹಿಂಸನಂ । ಬಹಿರ್ವೇದಿಚಯದ್ದಾನಂ ದತ್ತಮಿತ್ಯಭಿಧೀಯತೆ ,,

ಅರ್ಥ—ಸಾಯಂಪ್ರಾತಃಕಾಲಗಳಲ್ಲಿ ಅಗ್ನಿಹೋತ್ರ ಮಾಡುವದು ತಪವಂ ಮಾಡುವದು, ಸತ್ಯಭಾಷಣ ಮಾಡುವದು, ವೇ೧ದಗಳ ಪಾ೨ಲನವಂ ಮಾಡುವದು,ಅತಿಥಿಗಳಂ ಸೇವಿಸುವದು, ವೈಶ್ವದೇವ ಮಾಡುವದು. ಈ ಸರ್ವಕರ್ಮವು ಇಷ್ಟವೆಂದು ಹೇಳಲ್ಪಡುವದು. ಹಾಗೆ ಬಾಪೀಕೂಪ ಮತ್ತು ಕಟಾಕಸ್ಥಾಪನಾ ದೇವ ಮಂದಿರನಿರ್ಮಾಣಾ ಅನ್ನಕ್ಷೇತ್ರಸ್ಥಾಪನ ಇನ್ನು ತೋಪುಗಳಂ ಹಾಕಿಸುವದು ಈ ಸರ್ವಕರ್ಮವು ಪೂರ್ತಮೆನ್ನಲ್ಪಡುವದು. ಹಾಗೆ ಶರಣಾಗತರಾದ ಜೀವಿಗಳನ್ನು ರಕ್ಷಿಸುವದು ಯಾವ ಭೂತಪ್ರಾಣಿಗೂ ಹಿಂಸೆಯಂ ಮಾಡದಿರುವದು ಮತ್ತು ಯಜ್ಞವೇದಿಯಿಂದ ಹೊರಗೆ ಯಾವದಾನ ಮಾಡಲ್ಪಡುವದೊ ಈ ಸರ್ವಕರ್ಮವೂ ದತ್ತವೆನ್ನಲ್ಪಡುವದು ಎಂದು. ಈ ಪ್ರಕಾರವಾಗಿ ಇವುಗಳೆಲ್ಲದರ ನಾಮ ಕರ್ಮವಾಗಿರುವದು. ಹಾಗೆ ಎಲ್ಯೈ ಶಿಷ್ಯನೆ (ಇಷ್ಟವಸ್ತುನಿ) ಅಂದರೆ,-ವಿಷ್ಣುಮಹಾ ದೇವಾದಿಗಳಾದ ಯಾವಧ್ಯೇಯ ದೇವತೆಯುಂಟೋ ಅವುಗಳೊಳಗೆಲ್ಲ ಯಾವದುತನಿಗೆ ಇಷ್ಟವಾಗುವದೊ ಅದರಲ್ಲಿ ಯಾವ ಚಿತ್ತದ ಅರ್ಪಣ ಅಂದರೆ,-ಅನ್ಯಪ್ರತ್ಯಯದ ಪರಿಹಾರ ಪೂರ್ವಕ

೧ ಸರ್ವ ಭಾಗಗಳಿಂದಲೂ ಅಂದರೆ,- ಕರ್ಮ ಮಾರ್ಗದಿಂದಲೂ, ಉಪಾಸನಾ ಮಾರ್ಗದಿಂದಲೂ, ಜ್ಞಾನ ಮಾರ್ಗದಿಂದಲೂ, ಆತ್ಮ ಸ್ವರೂಪವನ್ನೆ ತಿಳಿಸುವದಾದ್ದರಿಂದ ವೇದವೆಂದು ಹೆಸರು. ೨ ವೇದ ವಿಧಿಗಳನ್ನು ವೇದಾಧ್ಯಯನಗಳನ್ನು ಕ್ರಮ ತಪ್ಪದೆ ಆಚರಿಸುವದಕ್ಕೆ ಪಾಲನವೆಂದು ಹೆಸರು,

ತೈಲಧಾರೆಯಂತೆ. ಧ್ಯೇಯಾಕಾರ ಪ್ರತ್ಯಯದ ಯಾವ ಸದೃಶ ಪ್ರವಾಹ ಸಂಪಾದನ ಮಾಡಲ್ಪಡುವದೋ, ಅದರನಾಮ ಉಪಾಸನ ವೆನ್ನಲ್ಪಡುವದು. ಹಾಗೆ (ಬ್ರಹ್ಮಾತ್ಮನೋರೈಕ್ಯವಿನಿಶ್ಚಯಂ) ಅಂದರೆ,- ಪೂರ್ವದಲ್ಲಿ ಹೇಳಿದ ಭಾಗತ್ಯಾಗ ಲಕ್ಷಣದ ರೀತಿಯಿಂದ ಬ್ರಹ್ಮ ಮತ್ತು ಜೀವಾ೩ತ್ಮನ ಏಕತೆಯು ಯಾವ ದೃಢ ನಿಶ್ಚಯು ಉಂಟೋ ಅದರ ಹೆಸರು ಜ್ಞಾನವೆನ್ನಲ್ಪಡುವದು. ಅದರಿಂದೆಲೈ ಶಿಷ್ಯನೇ, ಈ ಪ್ರಕಾರವಾಗಿ ಬುಧಾ- ಯಾವ ತತ್ವದರ್ಶೀ ಜನಗಳುಂಟೋ ಅವರು ಬೇರೆ ಬೇರೆಯಾಗಿ ಕರ್ಮ ಉಪಾಸನಾ, ಮತ್ತು ಜ್ಞಾನದ ಲಕ್ಷ೪ಣವೆಂದು ವರ್ಣನೆಗೈಯ್ಯುತ್ತಿರುವರು. ॥೪೪॥

ಅ—ಈ ಪ್ರಕಾರದಿಂದ ಕರ್ಮ ಮತ್ತು ಉಪಾಸನೆಯು ಸಾಧನ ಇನ್ನೂ ಸ್ವರೂಪ ಲಕ್ಷಣ, ಹಾಗೆ ಅವೆರಡರಿಂದ ಜ್ಞಾನದ ಉತ್ಕೃಷ್ಟತೆಯನ್ನು ಸಹಾ ಕೇಳಿ ಈಗ ಪರವೈರಾಗ್ಯ ಪೂರ್ವಕ ಜೀವನ್ಮುಕ್ತಿಯ ಸುಖದ ಪ್ರಾಪ್ತ್ಯರ್ಥವಾಗಿ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಕಸ್ಯೈಹವೃಕ್ಷಸ್ಯ ಫಲೇ ಸುಖಾಸುಖೆ
ಶಾಖಾಶ್ಚ ಕಾಸ್ತಸ್ಯ ಮತಾಮಹಾಮತೇ ।
ಬೀಜಂಚ ಮೂಲಂಚ ಪದಾನಿಕಾನಿಕಿಂ
ಸಂಕ್ಷೇಪತೋಬ್ರೂಹಿ ಪೃಥಕ್ ಪೃಥಗ್ಗುರೋ ॥೪೫॥

ಟೀಕಾ॥ ಕಸ್ಯೇತಿ- ಹೇ (ಮಹಾಮತೆ) ಅಂದರೆ, ಎಲೈ ಜ್ಞಾನ ವಿಜ್ಞಾನ ಸಂಪನ್ನ ಮತಿಯುಳ್ಳ ಗುರುವೇ (ಸುಖಾಸುಖೆ) ಅಂದರೆ,-- ಈ ಯಾವ ಲೋಕದಲ್ಲಿ ಪ್ರಸಿದ್ಧವಾಗಿ ಸುಖ ಮತ್ತು ದುಃಖಗಳು, ಭೋಗಿಸುವಲ್ಲಿ ಬರುತ್ತಿರುವವೋ ಆ ಈ ಎರಡು (ಕಸ್ಯ) ಅಂದರೆ,- ಯಾವ ವೃಕ್ಷದ ಫಲವಾಗಿರುವದು ? ಮತ್ತು ಆ ವೃಕ್ಷಕ್ಕೆ ವಿದ್ವಾಜ್ಜನಗಳು ಶಾಖಾ ಯಾವದೆಂದು ಗ್ರಹಿಸಿರುವರು ? ಹಾಗೆ ಅದರ ಮೂಲವೇನಿರುವದು ? ಇನ್ನು (ಪದಾನಿ) ಅಂದರೆ,-ಅದಕ್ಕೆ ಬುಡ ವಾವುದಾಗಿರುವದು? ಹಾಗೆ ಆ ವೃಕ್ಷಕ್ಕೆ ಬೀಜವಾವುದು ? ಆ ಈ ಯಲ್ಲ

೩ ಜೀವಪದ ಲಕ್ಷ್ಯಾರ್ಥವಾದ ಕೂಟಸ್ಥನ. ೪ ಸ್ವರೂಪ.

ವನ್ನು ಎಲೈ ಗುರುವೇ, (ಪೃಥಕ್‌ಪೃಥಕ್) ಅಂದರೆ,-ಬೇರೆಬೇರೆಯಾಗಿ ನನ್ನಂ ಕುರಿತು ಸಂಕ್ಷೇಪದಿಂದ ಅಪ್ಪಣೆ ಕೊಡಿಸಬೇಕು ಎಂದನು.॥೮೬

ಅ॥ ಈಪ್ರಕಾರವಾದ ಶಿಷ್ಯನ ಗುಹ್ಯ ಪ್ರಶ್ನೆಯನ್ನು ಕೇಳಿ, ಈಗ ಒಂದು ಶ್ಲೋಕದಿಂದಲೇ ಗುರು ಅದಕ್ಕೆ ಉತ್ತರವನ್ನು ಹೇಳುತ್ತಾರೆ.

—ಗುರುರುವಾಚ—

ಯೋನೇಕಜನ್ಮಾರ್ಜಿತವಾಸನಾಪದಃ।
ಸಂಕಲ್ಪಮೂಲೋನುಭವೈಕಬೀಜಕಃ॥
ಧರ್ಮಾಂತರೋತ್ತುಂಗಲತೋಪಶೋಭಿತಃ।
ಕರ್ಮದ್ರುಮಸ್ತಸ್ಯ ಫಲೇ ಸುಖಾಸುಖೇ॥ ॥೮೭॥

ಟೀಕಾ॥ ಯ ಇತಿ—ಎಲೈ ಶಿಷ್ಯನೇ, (ಅನುಭವೈಕಬೀಜಕಃ) ಅಂದರೆ,-ಯಾವದಕ್ಕೆ ಶಬ್ದಾದಿಯಾದ ವಿಷಯಗಳ ಯಾವ ಅನುಭವವುಂಟೋ ಅದೇ ಒಂದು ಬೀಜವು. ಯಾತಕ್ಕಂದರೆ,-ಹ್ಯಾಗೆ ಮೊದಲು ಬೀಜವಾದರೇನೆ ಬಳಿಕ ವೃಕ್ಷದ ಬುಡ ಮೂಲಶಾಖಾದಿಗಳು ಉತ್ಪನ್ನವಾಗುವವೋ ಹಾಗೆಯೇ ಪ್ರಥಮ ಅನುಭವವಾದರೇನೆ ಬಳಿಕ ವಾಸನಾಸಂಕಲ್ಪ ಧರ್ಮಾಧರ್ಮಾದಿಗಳು ಉತ್ಪನ್ನವಾಗುವವು. ಹಾಗೆ (ವಾಸನಾಪದಃ) ಅಂದರೆ,-ಯಾವದಕ್ಕೆ ಅನಾದಿಯಾದ ಸಂಸಾರದಲ್ಲಿ ಅನೇಕ ಜನ್ಮ ಜನ್ಮಾಂತರಗಳೊಳ್ ಸಂಪಾದನೆ ಮಾಡಿರುವ ಯಾವ ಭೋಗಗಳ ವಾಸನೆಯುಂಟೊ ಅದೇ ಬುಡವೆನಿಸುವದು. ಯಾತಕ್ಕಂದರೆ,-ಹ್ಯಾಗೆ ಬುಡದಿಂದ ನಂತರ ಅಂಕುರದ್ವಾರಾ ವೃಕ್ಷದ ಮೂಲಶಾಖಾದಿಗಳು ಉತ್ಪನ್ನವಾಗುವವೋ ಹಾಗೆಯೇ ವಾಸನೆಯಿಂದ ನಂತರ ಸಂಸ್ಕಾರದ್ವಾರಾ ಸಂಕಲ್ಪಾದಿಗಳು ಉತ್ಪನ್ನವಾಗುತ್ತಿರುವವು ತಾತ್ಪರ್ಯವೇನಂದರೆ,-ಹ್ಯಾಗೆ ಅಂಕುರವು ಬುಡದಿಂದ ಪುಷ್ಟತೆಯಾಗುವದೋ ಮತ್ತು ಬುಡವಂಕುರದಿಂದ ಪುಷ್ಟತೆಯಾಗುವದೋ ಹಾಗೆಯೇ ವಾಸನೆಯಿಂದ ಸಂಸ್ಕಾರದ ಪುಷ್ಟತೆಯಾಗುವದು. ಮತ್ತು ಪುನಃ ಸಂಸ್ಕಾರದಿಂದ ವಾಸನೆಯು ಪುಷ್ಟತೆಯಾಗುವದು. ಈ ಪ್ರಕಾರವಾಗಿ ಇವೆರಡಕ್ಕೂ ಅನಾದಿ ಸಂಬಂಧವಿರುವದು. ಹಾಗೆ (ಸಂಕಲ್ಪಮೂಲಃ) ಅಂದರೆ,-ಎಲೈ ಶಿಷ್ಯನೇ,

ಯಾವದಕ್ಕೆ ತನ್ನ ಸ್ವರೂಪದಿಂದ ವ್ಯತಿರಿಕ್ತ ೧ ನವಾಗಿ ಮನದ ಬಹಿ ಮುಖವಾಗುವದರಿಂದ ಯಾವ ಸಂ ೨ ಕಲ್ಪ ವಿಕ ೩ ಲ್ಪ ಮಾಡಲ್ಪಡು ವದೋ ಅದೇ ಮೂಲವು. ಯಾಕಂದರೆ,-ಹ್ಯಾಗೆ ವೃಕ್ಷದ ಮೂಲದಿಂದ ಕ್ರಮವಾಗಿ ಶಾಖಾದಿಗಳು ಉತ್ಪತ್ತಿಯಾಗುವವೋ ಹಾಗೆಯೇ ಸಂಕಲ್ಪ ದಿಂದ ಶುಭಾಶುಭ ಕ್ರಿಯಾದ್ವಾರಾ ಧರ್ಮಾಧರ್ಮಗಳ ಉತ್ಪತ್ತಿಯಾ ಗುವವು. ಈ ವಾರ್ತೆಯು ಮನುಸ್ಮೃತಿಯ ಎರಡನೇ ಅಧ್ಯಾಯದ ಲ್ಲಿ ವರ್ಣಿಸಲ್ಪಟ್ಟಿರುವದು. "ಸಂಕಲ್ಪಮೂಲಃಕಾಮೋವೈಯಜ್ಞಾಃ ಸಂಕಲ್ಪಸಂಭವಾಃ । ವ್ರತಾನಿಯಮಧರ್ಮಾಶ್ಚ ಸರ್ವೇಸಂಕಲ್ಪಜಾಸ್ಮೃ ತಾಃ ,, ಅರ್ಥ॥ ನಾನಾಪ್ರಕಾರವಾದ ಪದಾರ್ಥಗಳ ಇಚ್ಛಾರೂಪವಾದ ಯಾವ ಕಾಮ ಉಂಟೋ ಅದರ ಮೂಲಸಂಕಲ್ಪವೇಯೆ. ಮತ್ತು ಯಾವ ಜ್ಯೋತಿಷ್ಟೋಮಾದಿ ಯಜ್ಞಗಳಿರುವವೋ ಅವು ಯಲ್ಲಾ ಸಂ ಕಲ್ಪದಿಂದಾಗುತ್ತಿರುವವು. ಹಾಗೆ ಅನ್ಯ ಯಾವ ವ್ರತ ನಿಯಮ ಧರ್ಮ ಗಳುಂಟೋ ಅವೂ ಎಲ್ಲಾಸಂಕಲ್ಪದಿಂದಲೇ ನಡೆಯುತ್ತಿರುವವು ಎಂದು. ಹಾಗೆ (ಧರ್ಮೇತರೋತ್ತುಂಗಲತೋಪಶೋಭಿತಃ) ಅಂದರೆ,-ಎಲೈ ಶಿಷ್ಯ ನೇ, ಧರ್ಮ ಮತ್ತು ಅಧರ್ಮ ಅರ್ಥಾತ್ ಪಾಪ ಮತ್ತು ಪುಣ್ಯರೂಪ (ಉತ್ತುಂಗ) ಅಂದರೆ,-ವಿಸ್ತೃತ ಶಾಖಾದಿಂದ ಯಾವದು ಶೋಭಾಯ ಮಾನವಾಗಿರುವದೋ, ಹ್ಯಾಗಾದರೂ ಪಾಪ ಮತ್ತು ಪುಣ್ಯ ಇವೆರಡೂ ಸಂಖ್ಯಾದಿಂದ ಎರಡೇ ಪ್ರತೀತವಾಗುತ್ತಿರುವವು. ಹಾಗಾದರೂ ಇವು ಗಳ ಅವಾಂತರ ಭೇದವು ಅನೇಕವಾಗಿರುವದ್ದರಿಂದ ಇವಕ್ಕೆ ಅನೇಕ ಶಾ ಖೆಗಳೆಂದು ಉಪಮಾನ ಸಂಭವಿಸುವದು. ಯಾತಕ್ಕಂದರೆ,-ಹ್ಯಾಗೆ ವೃಕ್ಷದ ಶಾಖೆಗಳಿಂದ ಫಲಗಳ ಪ್ರಾಪ್ತಿಯಾಗುವವೋ ಹಾಗೆಯೇ ಪಾಪ ಮತ್ತು ಪುಣ್ಯದಿಂದಲೇ ಸುಖ ದುಃಖಗಳ ಪ್ರಾಪ್ತಿಯಾಗುವದು. ಅದ ರಿಂದೆಲೈ ಶಿಷ್ಯನೇ, ಈ ಪರಿಯಾದ ಯಾವ (ಕರ್ಮದ್ರುಮಃ) ಅಂದರೆ,

---

೧. ಎಚ್ಚರ. ೨. ಇದು ಹೀಗೆ ಆಗಬೇಕು, ಹೀಗಾದರೆ ನಾನು ಹೀಗಾದೆನು, ಇಚ್ಛೆ ಇದ್ದಂತೆಯೇ ಇದು ಆಗುವದು ಅಥವಾ ಆದೀತು, ಇಂತೆಂಬ ಕಾರ್ಯಾನುಸಾರಿಯಾದ ಶೋ ರಿಕೆಯೇ ಸಂಕಲ್ಪವೆನಿಸುವದು. ೩. ಇದು ಹೀಗಾಗದಿದ್ದರೆ ನಾನು ಕೆಡುವೆನು ಇಚ್ಛೆ ಇದ್ದಂ ತೆ ಇದು ಆಗದಿದ್ದರೆ ನಾನು ಮಾಡುವದೇನು, ಇಂತೆಂಬ ವಿರುದ್ಧವಾದ ತೋರಿಕೆಗಳೇ ವಿಕ ಲ್ಪವೆನಿಸುವವು.

ಕರ್ಮರೂಪ ವೃಕ್ಷ ಉಂಟೋ ಅದರ ಫಲವೇ ಸುಖ ಮತ್ತು ದುಃಖವಾಗಿರುವದು ಎಂದರು. ... ... ||೪೬||

ಅ|| ಈ ಪ್ರಕಾರವಾಗಿ ಕರ್ಮರೂಪ ವೃಕ್ಷದ ಸುಖ ದುಃಖರೂಪವಾದ ಫಲಗಳನ್ನು ಶ್ರವಣವಂ ಮಾಡಿ ಈಗ "ನಹಿಕಶ್ಚಿತ್‌ಕ್ಷಣಮಪಿಜಾತುತಿಷ್ಠತ್ಯಕರ್ಮಕೃತ್", ಇಂತೆಂಬ ಗೀತೆಯ ವಾಕ್ಯದಲ್ಲಿ ಹೇಳಿರುವದೇನಂದರೆ,- ಯಾವ ಪುರುಷನಾದಾಗ್ಯೂ ಒಂದು ಕ್ಷಣಮಾತ್ರವಾದರೂ ಕದಾಚಿತ್ ಕರ್ಮವಿನಃ ಇರಲಾಗುವದಿಲ್ಲ. ಆದಕಾರಣ ಕರ್ಮಕ್ಕೆ ಯಾವಾಗಲೂ ಸದ್ಭಾವವಾಗುವದ್ದರಿಂದ ಅದರ ಫಲವಾದ ಸುಖ ದುಃಖಗಳಿಗೂ ಯಾವದೊಂದು ಕಾಲದಲ್ಲಿಯೂ ನಾಶವಿಲ್ಲದೇ ಹೋಗುವದು. ಆದ್ದರಿಂದ ಮೋಕ್ಷಪದದ ಸಿದ್ಧಿ ಹ್ಯಾಗಾದೀತು ? ಹೀಗೆಂಬ ಪ್ರಕಾರದಿಂ ಸಂಶಯುವಿಂದಾವಿಷ್ಟನಾದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

— ಶಿಷ್ಯಉವಾಚ —

ಕಥಂನನಿರ್ಮೂಲ ನಮುಸ್ಯಚಾಚಿರಂ
ಭವೇದ್ಗ್ರೋಕರ್ಮತರೋರಶೇಷತಃ।
ನಿರೂಢನಾದಸ್ಯಚಭೀತಿ ದಾಯಿನೊ
ದಯಾನಿಧೇತಸ್ವದಮೆ ವಿನಿಶ್ಚಿತಂ ||೪೭||

ಟೀಕಾ|| ಕಥಮಿತಿ- ಎಲೈ (ದಯಾನಿಧೆ, ಅಂದರೆ,- ಸ್ವಾಭಾವಿಕ ದಯಾಸಮುದ್ರನಾದ ಗುರುವೇ! ತಾವು ಯಾವದನ್ನು ಹೇಳಿದಿರೋ, ಅಂದರೆ,- ಕರ್ಮರೂಪ ವೃಕ್ಷದ ಸುಖದುಃಖ ರೂಪವಾದ ಎರಡು ಫಲಗಳಿಂದು ಮತ್ತು ನಾನು ಅವೆರಡರಿಂದ ರಹಿತನಾಗ ಲಿಚ್ಛಿಸುತ್ತಿರುವೆನು, ಆದಕಾರಣ (ಕರ್ಮತರೋಃ) ಅಂದರೆ,- ಆ ಕರ್ಮರೂಪ ವೃಕ್ಷದ (ಅಶೇಷತಃ) ಅಂದರೆ,-ನಿಃಶೇಷವಾಗಿ ಅರ್ಥಾತ್ ಬುಡಮೂಲಸಹಿತವಾಗಿ,ಯಾವ ಉಪಾಯದಿಂದ ಶೀಘ್ರವಾಗಿ (ನಿರ್ಮೂಲನಂ) ಅಂದರೆ,- ಕೀಳಲಾಗುವದೊ ಹಾಗೆ ಎಲೈ ಭಗವಂತನೆ ಈ ಕರ್ಮರೂಪ ವೃಕ್ಷವು ಎಂತಿರುವದೊ (ನಿರೂಢಮಾದಸ್ಯ) ಅಂದರೆ,- ಹ್ಯಾಗೆ ಅತಿಪುರಾತನವಾದ ಮಹದ್ವೃಕ್ಷದ ಬೇರು ಕೆಳಗೆ ಭೂಮಿಯಲ್ಲಿ ಅತ್ಯಂತ ವಿಸ್ತೃತವಾಗುವದ್ದರಿಂದ ದೃಢವಾಗಿ ಸೇರಿಕೊಳ್ಳುತ್ತಿರುವದೋ ಹಾಗೆಯೆ ಈಕರ್ಮ ರೂಪ

ವೃಕ್ಷದ ವಾಸನಾರೂಪವಾದ ಬೇರು ಅಂತಃಕರಣ ರೂಪವಾದ ಪೃಥ್ವಿಯಲ್ಲಿ ಅತ್ಯಂತ ದೃಢವಾಗಿ ಸೇರಿಕೊಂಡಿರುವದು. ಹಾಗೆ ಪುನಃ ಈ ಕರ್ಮರೂಪ ವೃಕ್ಷವೆಂಥಾದ್ದಾಗಿರುವದು ? (ಭೀತಿದಾಯಿನಃ) ಅಂದರೆ,-ಭಯವಂ ಕೊಡುವಂಥಾದ್ದಾಗಿರುವದು. ಆದ್ದರಿಂದ ಎಲೈ ಭಗವಂತನೆ ಈ ಕರ್ಮರೂಪ ವೃಕ್ಷಕ್ಕೆ ಯಾವದರಿಂದ ಶೀಘ್ರವಾಗಿ ಮೂಲಸಹಿತ ಛೇದನವಾಗುವದೋ ಆ ಉಪಾಯವನ್ನು ಕೃಪೆಯಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ॥೮೭॥

ಅ—ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರು ಅದಕ್ಕೆ ಒಂದು ಶ್ಲೋಕದಿಂದಲೇ ಉತ್ತರವಂ ನಿರೂಪಿಸುತ್ತಾರೆ.

—ಗುರುರುವಾಚ—

ವೈರಾಗ್ಯಮೇವಾಸ್ಯದೃಢಂದೃಢಾಶಯಾಃ ।
ಶಸ್ತ್ರಂವದಂತೀಹವಿವೇಕಸಂಶಿತಮ್ ॥
ತೇನೈನಮುನ್ಮೂಲಯಬೋಧವಿರ್ಯತೋ ।
ನಾನ್ಯತ್ತುತತ್ಸಾಧನ ಮಸ್ತಿನೈಕ್ವಚಿತ್ ॥೮೮॥

ಟೀಕಾ—ವೈರಾಗ್ಯಮಿತಿ ॥ ಎಲೈ ಶಿಷ್ಯನೇ (ಅಸ್ಯ) ಅಂದರೆ,-ಈ ಕರ್ಮರೂಪ ವೃಕ್ಷವನ್ನು ಸಮೂಲವಾಗಿ ಛೇದನ ಮಾಡುವಂಥಾ ಪರವೈರಾಗ್ಯರೂಪವೆ ಒಂದು ದೃಢವಾದ ಶಸ್ತ್ರವೆಂದು ವಿದ್ವಾಂಸ ಜನಗಳು ವರ್ಣನೆಯಂ ಮಾಡುತ್ತಿರುವರು. ಆ ಶಸ್ತ್ರವೆಂತಾದರೂ ದೃಢವೂ ಆಗಿರಲಿ ಮುಖ್ಯವಾಗಿ ಸಾಣೆಯಿಂದ ಅಗ್ರಭಾಗವನ್ನು ತೀಕ್ಷ್ಣವಾಗಮಾಡಲ್ಪಡದಿದ್ದರೆ ಅದು ಮಹಾವೃಕ್ಷವನ್ನು ಕತ್ತರಿಸುವದರಲ್ಲಿ ಸಮರ್ಥವಾಗದಿರುವದು. ಆದ್ದರಿಂದ(ವಿವೇಕಸಂಶಿತಂ) ಅಂದರೆ,-ಆ ವೈರಾಗ್ಯರೂಪವಾದ ಶಸ್ತ್ರವನ್ನು ವೇದಾಂತಶಸ್ತ್ರದಿಂಪುಟ್ಟದ ವಿವೇಕರೂಪ ಸಾಣೆಯಿಂದ ಸರ್ವಪ್ರಕಾರವಾಗಿ ತೀಕ್ಷ್ಣ ಮಾಡಿಕೊಳ್ಳಬೇಕು. ಹ್ಯಾಗಾದರೂ ಅದು ದೃಢವಾಗಿಯೂ ಮತ್ತು ಅಗ್ರಭಾಗದಿಂ ತೀಕ್ಷ್ಣವೂ ಆಗಿದ್ದರೂ ಮುಖ್ಯ

೧ ಹ್ಯಾಗೆ ಮಹಾ ಪುರಾತನ ವೃಕ್ಷದ ಆಶ್ರಯದಿಂದ ಪಿಶಾಚವು ಬಲಹೀನ ಪುರುಷರಿಗೆ ಭಯವಂ ಕೊಡುವದೊ ಹಾಗೆಯೆ ಕರ್ಮರೂಪವೃಕ್ಷದ ಆಶ್ರಯದಿಂದ ಅಜ್ಞಾನರೂಪಪಿಶಾಚವು ವಿವೇಕ ರೂಪಬಲದಿಂ ಹೀನರಾದ ಪುರುಷರಿಗೆ ಜನ್ಮಮರಣಾದಿ ರೂಪವಾದ ಭಯವನ್ನುಂಟು ಮಾಡುವದು.

ವಾಗಿ ಛೇದನಮಾಡುವಂಥಾ ಪುರುಷನಶರೀರದಲ್ಲಿ ಯಾವ ಬಲವಿಲ್ಲದಿದ್ದರೆ ಆಗಲೂ ಅದರಿಂದ ವೃಕ್ಷಕ್ಕೆ ಮೂಲದಿಂ ಛೇದನ ಸಂಭವಿಸುವದಿಲ್ಲ. ಆದ ಕಾರಣ (ಬೋಧವೀರ್ಯಾತಃ) ಅಂದರೆ ಆತ್ಮಸ್ವರೂಪದಯಾವನಿಸ್ಸಂದೇಹದೃಢಬೋ[೧]ಧ ಉಂಟೋ ಅದೇ ಮಹಾಬಲವಾಗಿರುವದು ಆದ್ದರಿಂದ ಅದರಿಂದಲೂ ಮುಮುಕ್ಷು ಪುರುಷನು ಸಂಯುಕ್ತನಾಗಬೇಕು. ಹಾಗೆ ಜ್ಞಾನದ ಬಲರೂಪತೆಯನ್ನು ಕೇನೋಪನಿಷತ್ತಿನಲ್ಲಿಯೂ ತೋರಿಸಲ್ಪಟ್ಟಿರುವದು “ ಆತ್ಮನಾವಿಂದತೆವೀರ್ಯಂ ,, ಅರ್ಥ॥ ಆತ್ಮನ ಜ್ಞಾನದಿಂದಲೇ ಈ ಪುರುಷನು ಬಲವಂ ಪೊಂದುತ್ತಿರುವನು ಎಂದು ಅದರಿಂದೆಲೈ ಶಿಷ್ಯನೇ, (ತೀಕ್ಷ್ಣೇನಂ) ಅಂದರೆ-ಹೀಗೆ ಪೇಳಿದ ಕರ್ಮರೂಪ ವೃಕ್ಷವನ್ನು ಈ ಪ್ರಕಾರವಾದ ಪರವೈರಾಗ್ಯರೂಪವೆನಿಪ ಶಸ್ತ್ರವಂ ಹಸ್ತದಲ್ಲಿ ಪಿಡಿದು (ಉನ್ಮೂಲಯಾ) ಅಂದರೆ-ಬುಡ ಮತ್ತು ಮೂಲ ಸಹಿತವಾಗಿ ಕಿ[೨]ತ್ತು ದೂರದಲ್ಲಿ ಯಸದುಬಿಡು. ಯಾವದರಿಂದ ಅದಕ್ಕೆ ಪುನಃ ಯಾವಾಗಲೂ ಆರೋಹಣ ವಾಗುವದಿಲ್ಲವೋ, ಹಾಗೆ ಈ ವಾರ್ತೆಯುಗೀತೆಯ ಹದಿನೈದನೇ ಅಧ್ಯಾಯದಲ್ಲಿ ಭಗವಂತನಾದರೂ ಪ್ರತಿಪಾದನಮಾಡಿರುವನು. “ ಅಶ್ವತ್ಥಮೇನಂ ಸುವಿರೂಢಮೂಲಮಸಂಗಶಸ್ತ್ರೇಣ ದೃಢೇನಛಿತ್ವಾ ,, ಅರ್ಥ॥ ಎಲೇ ಅರ್ಜುನಾ, ಈ ಯಾವ (ವಿರೂಢಮೂಲ) ಅಂದರೆ-ಸಮ್ಯಕ್ ಪ್ರಕಾರದಿಂದ ದೃಢತರವಾಗಿ ಸೇರಿಕೊಂಡಿರುವ ಮೂಲ ಉಳ್ಳ ಸಂಸಾರರೂಪವಾದ ಅಶ್ವತ್ಥವೃಕ್ಷ ಉಂಟೋ ಅದನ್ನು ಅಸಂಗ-ಅಂದರೆ-ವೈರಾಗ್ಯರೂಪವಾದ ದೃಢ ಶಸ್ತ್ರದಿಂದ ಛೇದನವಂ ಮಾಡು ಎಂದು. ಅದರಿಂದೆಲೈ ಶಿಷ್ಯನೇ, (ನಾನ್ಯತ್ತುತತ್ಸಾಧನಮಸ್ತಿ) ಅಂದರೆ-ಪೇಳಲ್ಪಟ್ಟ ಕರ್ಮರೂಪ ವೃಕ್ಷವನ್ನು ಸಮೂಲದಿಂದ ಛೇದನವಂ ಮಾಡತಕ್ಕೋಸುಗ ಪರವೈರಾಗ್ಯ ವಿನಃ ಎರಡನೇ ಯಾವದೂ ಈ ಪರಿಯಾದ ಉಪಾಯವಿಲ್ಲ. ಹಾಗೆ ಈ ಪ್ರಕಾರವಾಗಿ ಯಾವಾಗ ವೃಕ್ಷಕ್ಕೆ ಮೂಲದಿಂದ ಛೇದನವಾಗಿ ಹೋಗುವದೋ ಆ ಒಳಿಕ ಅದರ ಫಲವು ಎಲ್ಲಿಂದ ಆದೀತು ? ಆದಕಾರಣ ಎಲೈ ಶಿಷ್ಯನೇ, ನಂತರ ಸುಖದುಃಖಗಳಿಂ ರಹಿತನಾದ ನೀನು ಕೇವಲ ತನ್ನ ಸಚ್ಚಿದಾನಂದ ಸಾಮಾ

೧, ಜ್ಞಾನ ೨. ಕತ್ತರಿಸಿ.

ನ್ಯ ಸತ್ತಾಸ್ವರೂಪದಲ್ಲಿ ಜೀವನ್ಮುಕ್ತನಾಗಿ ಇರಲಾಳ್ವನಾಗುವೆ ಎಂದು ಶ್ರೀಗುರುವು ನಿರೂಪಿಸಿದರು. ... ... ||೪೮||

ಅ|| ಈ ಪ್ರಕಾರವಾಗಿ ಜೀವನ್ಮುಕ್ತಿ ಸುಖದ ಪ್ರಾಪ್ತಿ ವಿಷಯದಲ್ಲಿ ಪರವೈರಾಗ್ಯದ ಮುಖ್ಯ ಹೇತುತ್ವವನ್ನು ಕೇಳಿದವನಾಗಿ ಈಗ ವಿಷಯ ಸುಖದ ನಿಂದಾಪೂರ್ವಕ ಆತ್ಮಸುಖದ ಪ್ರಾಪ್ತಿಯ ವಾಂ[೩]ಛಾದಿಂದೊಡಗೂಡಿದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಸುಖಾಯಲೋಕೋಯತತೇನಿರಂತರಂ |
ಸುಖಂಚದುಃಖೇನಸದೈವಮಿಶ್ರಮ್ ||
ಅಮಿಶ್ರಿತಂತನ್ನುತದಾಪ್ಯತೇಕಥಂ |
ತದಾರ್ಥಿನಂಮೇವದವೇದವಿದ್ಗುರೋ || ||೪೯||

ಟೀಕಾ|| ಸುಖಾಯೇತಿ—ಎಲೈ (ವೇದವಿತ್) ಅಂದರೆ,-ಸರ್ವ ವೇದದೊಳಗಣ ರಹಸ್ಯವನ್ನು ತಿಳಿದಂಥಾ ಗುರುವೇ, ಈ ಪಶು, ಪಕ್ಷಿ, ಮನುಷ್ಯಾದಿ ಲೋಕಗಳೆಲ್ಲವೂ ಸುಖಪ್ರಾಪ್ತಿಗೋಸುಗ ಸರ್ವದಾ (ಯತತೆ) ಅಂದರೆ,-ನಾ[೧]ನಾಪ್ರಕಾರವಾದ ಯತ್ನವಂ ಮಾಡುತ್ತಿರುವರು. ಆದಾಗ್ಯೂ ಆ ಯಾವ ವಿಷಯಜನ್ಯ ಸುಖ ಉಂಟೋ ಅದನ್ನು ವಿಚಾರ ದೃಷ್ಟಿಯಿಂದ ನೋಡಿದ್ದೇ ಆದರೆ ಯಾವಾಗಲೂ (ದುಃಖೇನಮಿಶ್ರಿತಂ) ಅಂದರೆ,-ದುಃಖದಿಂದೊಡಗೂಡಿದ್ದಾಗಿರುವದು. ಹ್ಯಾಗಾದರೂ ಈ ಲೋಕದ ಅಪೇಕ್ಷೆಯಿಂದ ಸ್ವರ್ಗಾದಿಲೋಕಗಳಲ್ಲಿ ಸುಖದ ವಿಶೇಷತೆ ಕೇಳ್ಬರುತ್ತಿರುವದು. ಹಾಗಾದರೂ ಅಲ್ಲಿಯೂ ಯಾರು ತನ್ನಿಂದ ನ್ಯೂನಸುಖ ಭೋಗಿಸುತ್ತಿರುವರೋ ಅವರಕಡೆ ನೋಡುವದರಿಂದ ಅಭಿಮಾನದ ಉತ್ಪತ್ತಿಯಾಗುವದು. ಮತ್ತು ಯಾರು ತನಗೆ ಸಮಾನವಾದ ಸುಖವಂ ಭೋಗಿಸುವರೋ ಅವರಕಡೆ ನೋಡುವದ್ದರಿಂದ ಚಿತ್ತದಲ್ಲಿ ಈ[೨]ರ್ಷ್ಯೆ ಉಂಟಾಗುತ್ತಿರುವದು. ಹಾಗೆ ಯಾರು ತನಗಿಂತ ಅಧಿಕವಾದ ಸುಖವಂ ಭೋಗಿಸುವರೋ ಅವರನ್ನು ನೋಡುವದ್ದರಿಂದ ಹೃದ[೩]ಯದಲ್ಲಿ ಉರಿ

೩. ಕೋರಿಕೆ-ಅಪೇಕ್ಷೆ-ಇಚ್ಛೆ.

೧, ಸ್ತ್ರೀ ಧನ ಪುತ್ರಾದಿಗಳನ್ನು ಸಂಪಾದಿಸುತ್ತಿರುವರು, ೨, ಹೊಟ್ಟೇಕಿಚ್ಚು, ೩, ಈ ಸ್ಥಲದಲ್ಲಿ ಹೃದಯವೆಂದರೆ ಹೊಟ್ಟೆಯ ಒಳಭಾಗವೆಂದು ತಿಳಿಯತಕ್ಕದ್ದು,

ಯೋಳುತ್ತಿರುವದು. ಈ ವಿಧವಾಗಿ ಸ್ವರ್ಗಾದಿ ಲೋಕಗಳಲ್ಲಿಯೂ ಮಾನಸ ದುಃಖ ಮಾಡಲ್ಪಟ್ಟಿರುವದು. ಮತ್ತೂ ಯೇನಂದರೆ,-ದೇವತೆಗಳಲ್ಲಿ ಅಶ್ವಿನೀ ಕುಮಾರರನು ವೈದ್ಯನೆಂದು ಕೇಳ್ಪಂದಿರುವದು. ಆದ್ದರಿಂದ ಈ ಅನುಮಾನವಾಗಿರುವದು. ಅದೇನಂದರೆ,-ದೇವತೆಗಳಲ್ಲಿ ಸ್ವಲ್ಪಶರೀರದ ದುಃಖವೂ ಉಂಟಾಗುತ್ತಲಿರಬಹುದು ? ಅಲ್ಲದಿದ್ದರೆ ಸ್ವರ್ಗದಲ್ಲಿ ವೈದ್ಯರ ಪ್ರಯೋಜನವೇನಿರುವದು ಇಷ್ಟೇ ಅಲ್ಲ. ಗೌತಮಮುನಿಯ ಶಾಪದಿಂದ ಇಂದ್ರನ ಶರೀರದಲ್ಲಿ ಸಹಸ್ರ ಯೋನಿಗಳಾಗಿದ್ದವೆಂತಲೂ, ಮತ್ತು ಚಂದ್ರಮನ ಶರೀರದಲ್ಲಿ ದಕ್ಷನ ಶಾಪದಿಂದ ಕ್ಷಯರೋಗ ಉಂಟಾಗಿರುವದೆಂತಲೂ, ಇತ್ಯಾದಿಗಳೆಲ್ಲಾ ಇತಿಹಾಸಗಳಿಂದಲೂ, ಹೇಳಲ್ಪಟ್ಟ ವಾರ್ತೆಗಳ ಸಿದ್ಧಿಯಾಗಿರುವದು. ಆದಕಾರಣ ವಿಷಯ ಸುಖವು ಯಾವಾಗಲೂ ದುಃಖದಿಂ ಮಿಶ್ರಿತವಾದ್ದರಿಂದ ಆ ಸುಖವೂ ದುಃಖರೂಪವೇಯೆ. ಈ ವಾರ್ತೆಯು ಸಾಂಖ್ಯಸೂತ್ರದಲ್ಲಿ ಷಷ್ಠಾಧ್ಯಾಯದೊಳಗೆ ಕಪಿಲದೇವನೂ ಕೂಡ ವರ್ಣಿಸಿರುವನು. “ ತದಪಿದುಃಖಶಬಲಮಿತಿದುಃಖಪಕ್ಷೇನಿಃಕ್ಷಿಪಂತೆವಿವೇಚಕಾಃ ,, ಅರ್ಥ॥ ಪ್ರಥಮದಲ್ಲಾದರೋ ಈ ಜಗತ್ತಿನಲ್ಲಿ ಸುಖವೂ ಸ್ವಲ್ಪವೇ ಇರುವದು. ಪುನಃ ಅದೂ ದುಃಖದಿಂದ ಶಬಲ-ಅಂದರೆ,-ಮಿಶ್ರಿತವಾಗಿರುವದು. ಆದ್ದರಿಂದ ಅದನ್ನೂ ವಿವೇಕೀ ಪುರುಷರು ದುಃಖಪಕ್ಷದಲ್ಲೇ ಕ್ಷೇಪ ೪ ಣ ಮಾಡುತ್ತಿರುವರು ಎಂದು. ಆದಕಾರಣ ಎಲೈಭಗವಂತನೇ,(ಅಮಿಶ್ರಿತಂಯನ್ನು)ಅಂದರೆ,-ಯಾವಸುಖ ಯಾವ ಕಾಲದಲ್ಲಿಯೂ ದುಃಖದಿಂ ಮಿಶ್ರಿತವಾಗಿಲ್ಲವೋ ಅದು ಯಾವದು? ಮತ್ತು (ತದಾಪ್ತ್ಯತೆಕಥಂ) ಅಂದರೆ,-ಅದರ ಪ್ರಾಪ್ತಿ ಯಾವ ಉಪಾಯದಿಂದಾಗುವದು ? ಹಾಗೆ ಎಲೈ ಭಗವಂತನೇ, ಆ ಪರಮಸುಖದ ಇಚ್ಛೆಯುಳ್ಳ ಯಾವನಾನಿರುವೆನೋ ಅಂಥಾ ನನ್ನನ್ನು ಕುರಿತು ಕೃಪೆಯಿಂದ ಅದನ್ನ ಪ್ಪಣೆ ಕೊಡಿಸಬೇಕು ಎಂದನು. ... ॥೪೯॥

ಅ—ಈಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರುಅದರಉತ್ತರವನ್ನು ನಿರೂಪಿಸುತ್ತಾರೆ.

—ಗುರುರುವಾಚ—

ಯಸ್ಮ್ಯೈತದಾನಂದ ಮಹೋದಧೆರ್ಲವಂ |

೪, ತಳ್ಳಿಬಿಡುವದಕ್ಕೆ ಕ್ಷೇಪಣವೆಂದು ಹೆಸರು,

ಸರ್ವಂಭವೇನ್ನಿರ್ವೃತಮಾಶ್ರಿತಂಜಗತ್ ॥
ಯತ್ರಸ್ಥಿತೋವೇತ್ತಿನದುಃಖಮಣ್ವಪಿ |
ತತ್ಪ್ರಾಪ್ಯತೇಕಾಮಹತಾತ್ಮವೇದಿನಾ ॥೯೦॥

ಟೀಕಾ—ಯಸ್ಯೇತಿ॥ ಎಲೈ ಶಿಷ್ಯನೆ (ಯಸ್ಯೈತದಾನಂದ ಮಹೋದಧೇಃ) ಅಂದರೆ,-ಯಾವ ಆನಂದ ಸಮುದ್ರ ರೂಪವೆನಿಪ ಬ್ರಹ್ಮದ ಏಕ ಲವ ಮಾತ್ರವನ್ನು ಆಶ್ರಯಮಾಡಿ ಈಸಮಸ್ತವಾದ ಚರಾಚರ ಜಗತ್ತು (ನಿರ್ವೃತಂ) ಅಂದರೆ,-ಆನಂದವಂ ಪೊಂದಲ್ಪಟ್ಟಿರುವದೋ ಈ ವಾರ್ತೆಯು ಬೃಹದಾರಣ್ಯ ಕೋಪನಿಷತ್ತಿನಲ್ಲಿಯೂ ವರ್ಣಿಸಲ್ಪಟ್ಟಿರುವದು. “ ಏತಸ್ಯೈವಾನಂದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ ,, ಅರ್ಥ—ಈ ಆನಂದ ಸಮುದ್ರರೂಪವಾದ ಬ್ರಹ್ಮದ ಒಂದು ಬಿಂದುವಿನಿಂದ ಈ ಸರ್ವಭೂತ ಪ್ರಾಣಿಗಳು ಆನಂದ ಯುಕ್ತರಾಗಿರುವರು ಎಂದು ಹಾಗೆ (ಯತ್ರಸ್ಥಿತಃ) ಅಂದರೆ,-ಎಲೈ ಶಿಷ್ಯನೆ ಯಾವ ಆನಂದರೂಪ ಬ್ರಹ್ಮದೊಳಗೆ ನಿರ್ವಿಕಲ್ಪ ಸಮಾಧಿಕಾಲದಲ್ಲಿ ಸ್ಥಿತನಾದ ಯೋಗೀಪುರುಷನು (ಅಣ್ವಪಿ) ಅಂದರೆ,-ಕಿಂಚಿನ್ಮಾತ್ರವಾದರೂ ದುಃಖದ ಅನುಭವ ಮಾಡಲ್ಪಡುವದಿಲ್ಲವೋ॥ ಈವಿಷಯವು ಭಗವದ್ಗೀತೆಯಲ್ಲಿಯೂ “ಯಸ್ಮಿನ್ಸ್ಥಿತೋನದುಃಖೇನ ಗುರುಣಾಪಿವಿಚಾಲ್ಯತೆ, ,, ಅರ್ಥ—ಎಲೆ ಅರ್ಜುನ ಯಾವ ಆನಂದದಲ್ಲಿ ಸ್ಥಿತನಾದ ಯೋಗಿಯು ಮಹೋನ್ನತವಾದ ದುಃಖದಿಂದಲೂ ತೂಗಾಡಿಸಲ್ಪಡದಿರುವನೋಎಂದು ಶ್ರೀಕೃಷ್ಣನು ಪ್ರಕಟಿಸಿರುವನು. ಆದ್ದರಿಂದ ಎಲೈ ಶಿಷ್ಯನೆ, ಹೀಗೆ ವಿಷಯ ಸುಖದಿಂ ವಿಲಕ್ಷಣವಾದ ಯಾವ ಬ್ರಹ್ಮಸುಖವುಂಟೋಅದೇದುಃಖದಿಂದ ಅಮಿಶ್ರತವಾಗಿರುವದು. ಈ ಪಕಾರವಾಗಿ ಪ್ರಶ್ನೆಯ ಪ್ರಥಮಾಂಶದ ಉತ್ತರವಂ ನಿರೂಪಿಸಿ ಈಗ ಯಾವದನ್ನು ಶಿಷ್ಯನು ಕೇಳಿದ್ದನೋ ಅಂದರೆ,-ಆಸುಖಯಾವ ಉಪಾಯದಿಂದ ಪ್ರಾಪ್ತವಾಗುವದೋಅಂತೆಂಬದರ ಉತ್ತರವಂ ನಿರೂಪಿಸುತ್ತಾರೆ, (ತತ್ಪ್ರಾಪ್ಯತೆ ಕಾಮಹತಾತ್ಮವೇದಿನಾ) ಅಂದರೆ,-ಯೆಲೈ ಶಿಷ್ಯನೆ ನಾನಾ ಪ್ರಕಾರವಾದ ಕಾಮನೆಯಿಂದ ಹತ ಅಂದರೆ,- ಯಾವ ಪುರುಷನ ಚಿತ್ತ ಪ್ರ೧ ವಿದ್ಧವಾಗಿಲ್ಲವೊ ಹೀಗೆ ಯಾವನು ಆತ್ಮ ತತ್ವವನ್ನು ತಿಳಿದಂಥಾ ಜೀವನ್ಮುಕ್ತನಾದ ಜ್ಞಾ

೧ ದೊಡಿಸಿಕೊಳ್ಳದಿರುವದೊ.

ನೀ ಪುರುಷನಿರುವನೋ ಅವನೇ ಆ ಬ್ರಹ್ಮದ ಸಂಪೂರ್ಣ ಸುಖವಂ ಪೊಂದುತ್ತಿರುವನು. ಈ ವಾರ್ತೆ ತೈತ್ತಿರೀಯೊಪನಿಷತ್ತಿನಲ್ಲಿಯೂ ಪ್ರತಿಪಾದನ ಮಾಡಿರುವದು. “ಶ್ರೋತ್ರಿಯಸ್ಯಚಾಕಾಮಹತಸ್ಯ,, ಅರ್ಥ— ಈ ಸಮಸ್ತ ಪೃಥ್ವೀ ಮಂಡಲದ ಏಕ ಚಕ್ರವರ್ತಿ ರಾಜನಾಗಿಯೂ, ಮತ್ತು ನೀರೋಗ ಪುಷ್ಟನಾಗಿಯೂ ಇನ್ನು ಬಲಿಷ್ಠವಾದ ಶರೀರವುಳ್ಳವನಾಗಿಯೂ, ಹಾಗೆ ಯೌವನಾವಸ್ಥೆಯಿಂದಲೂ ಮತ್ತು ಸದ್ವಿದ್ಯೆಯಿಂದ ಸಂಪನ್ನನಾಗಿದ್ದರೂ, ಅವನಿಗೆ ಯಾವ ಸುಖ ಪ್ರಾಪ್ತವಾಗುವದೋ ಅದು ಒಬ್ಬಮನುಷ್ಯನ ಸಂಪೂರ್ಣಾನಂದವೆನ್ನಲ್ಪಡುವದು. ಅದರಿಂದ ಶತಗುಣಾಧಿಕ ಸುಖ ಗಂಧರ್ವರಿಗೆ ಪ್ರಾಪ್ತವಾಗಿರುವದು, ಮತ್ತು ಅದಕ್ಕಿಂತ ನೂರು ಗುಣಾಧಿಕ ಪಿತೃಗಳಿಗೂ ಇನ್ನು ಅದಕ್ಕಿಂತ ಶತಗುಣಾಧಿಕ ಆಜಾ[೧]ನಜ ದೇವರುಗಳಿಗೂ, ಅದರಿಂ ನೂರು ಗುಣಾಧಿಕ ಕರ್ಮದೇವತೆಗಳಿಗೂ, ಮತ್ತು ಅದಕಿಂತ ಶತಗುಣಾಧಿಕ ಅಗ್ನಿ ಆದಿ ಮುಖ್ಯದೇವತೆಗಳಿಗೂ ಉಂಟಾಗಿರುವದು. ಇನ್ನು ಆ ಅಗ್ನಿಯಾದಿ ದೇವತೆಗಳಿಗಿಂತ ನೂರು ಗುಣಾಧಿಕ ಸುಖದೇವತೆಗಳ ರಾಜನಾದ ಇಂದ್ರನಿಗೂ, ಹಾಗೆ ಅವನಿಗಿಂತ ಶತಗುಣಾದಿಕ ದೇವತೆಗಳ ಗುರುವಾದ ಬೃಹಸ್ಪತಿಗೂ ಇನ್ನು ಬೃಹಸ್ಪತಿಗಿಂತ ನೂರು ಗುಣಾಧಿಕ ಕಶ್ಯಪ ದಕ್ಷಾದಿ ಪ್ರಜಾಪತಿಗಳಿಗೂ, ಹಾಗೆ ಅವರಿಗಿಂತ ನೂರು ಗುಣಾಧಿಕ ಸುಖಪದ್ಮಸಂಭವನಾದ ಬ್ರಹ್ಮದೇವನಿಗೆ ಉಂಟಾಗಿರುವದು. ಆ ಈ ಸರ್ವಸುಖವು ಸಕಲ ಕಾಮನೆಯಿಂದ ರಹಿತನಾಗಿ ಯಾವನು ಬ್ರಹ್ಮನಿಷ್ಠ ಮತ್ತು ಬ್ರಹ್ಮ ಶ್ರೋತ್ರಿಯನಾದ ಜ್ಞಾನೀಪುರುಷನಿರುವನೊ ಅವನಿಗೆ ಪ್ರಾಪ್ತವಾಗಿರುವದು ಎಂದು. ಹಾಗೆ ಈ ವಾರ್ತೆಯು ಅನ್ಯ[೨] ಗ್ರಂಥದಲ್ಲಿಯೂ ಪ್ರಕಟಿಸಲ್ಪಟ್ಟಿರುವದು. “ನಸುಖಂದೇವರಾಜಸ್ಯ ನಸುಖಂಚಕ್ರವರ್ತಿನಃ । ಯತ್ಸುಖಂ ವೀತರಾಗಸ್ಯ ಮುನೇರೇಕಾಂತವಾಸಿನಃ,, ಅರ್ಥ॥ ಯಾವ ಸುಖವು ಏಕಾಂತದಲ್ಲಿ ವಾಸ ಮಾಡುತ್ತಿರುವ ವೀತ[೩]ರಾಗಮುನಿಗೆ ಪ್ರಾಪ್ತವಾಗುವದೋ ಆ ಸುಖವು ಚಕ್ರವರ್ತಿಯಾದ ರಾಜನಿ

---

೧ ಆಜಾನ ದೇವತಾ, ಕರ್ಮದೇವತಾ, ಮುಖ್ಯದೇವತಾ ಇವು ಮೂರು ಭೇದವು. ಸ್ವರ್ಗವಾಸಿಗಳಾದ ದೇವತೆಗಳದು. ೨ ವಾಸಿಷ್ಠಾದಿ ಗ್ರಂಥಗಳಲ್ಲಿ. ೩ ಹೇಳಲ್ಪಟ್ಟ ಇಚ್ಛೆಯುಳ್ಳ.

ಗೂ, ಮತ್ತು ದೇವತೆಗಳ ಧೊರೆಯಾದ ಇಂದ್ರನಿಗೂ ಸಹ ಪ್ರಾಪ್ತವಾಗದಿರುವದು. ಇಲ್ಲಿ ಈ ರಹಸ್ಯವಿರುವದು. ಜ್ಞಾನೀಪುರುಷನಿಗೆ ತನ್ನ ಆತ್ಮನ ಸರ್ವವ್ಯಾಪಕತೆಯು ದೃಢನಿಶ್ಚಯವಾಗಿರುವದು, ಆದರೆ ಯಾವ ಆತ್ಮನು ಇಂದ್ರಾದಿಗಳ ಶರೀರದಲ್ಲಿ ಇರುವನೋ ಅವನನ್ನೂ ಕೂಡ ಅವನು ತನ್ನ ಆತ್ಮನೆಂತಲೇ ಗ್ರಹಿಸಿರುವನು, ಆದ್ದರಿಂದ ಇಂದ್ರಾದಿಗಳಿಗೆ ಯಾವ ಸುಖವಾಗುವದೋ, ಅದನ್ನು ಜ್ಞಾನೀ ಪುರುಷನು ಆಸುಖದ ಭೋಕ್ತಾ ತಾನೇ ಎಂದು ತಿಳಿದಿರುವನು, ಮತ್ತೂ ಏನಂದರೆ,- ಇಂದ್ರಾದಿಗಳಿಗೆ ತನ್ನಿಂದಧಿಕವಾದ ಯಾವ ಬ್ರಹ್ಮಾದಿಗಳ ಸುಖವುಂಟೋ ಅದರ ಅಭಿಲಾಷೆ ಯಾವಾಗಲೂ ಇರುತ್ತಿರುವದು. ಇನ್ನು ಜ್ಞಾನೀಪುರುಷನು ಸರ್ವಾಭಿಲಾಷೆಯಿಂದ ರಹಿತನಾದಕಾರಣ ಅವನಿಗೆ ಇಂದ್ರಾದಿಗಳನುಭವಿಸುವದಕ್ಕಿಂತಲೂ ಅಧಿಕವಾದ ನಿರತಿಶಯ ಆತ್ಮಸುಖದ ಪ್ರಾಪ್ತಿಯಾಗುವದು ಅದರಿಂದೆಲೈ ಶಿಷ್ಯನೆ ಹಿಂದೆಹೇಳಿದ ಬ್ರಹ್ಮಾನಂದದ ಅನುಭವವಂ ಮಾಡಿಕೊಳ್ಳಬೇಕೆಂದು ನಿನಗೆ ಇಚ್ಛೆಯುಂಟಾಗಿದ್ದರೆ ನೀನೂಕೂಡ ಸರ್ವಕಾಮನೆ ಇಂದ ರಹಿತನಾಗಿ ತನ್ನ ಆತ್ಮಸ್ವರೂಪದಲ್ಲಿಯೆ ಇರುವವನಾಗು ||೯೦||

ಅ—ಈಪ್ರಕಾರವಾಗಿ ಪರಮಾನಂದದ ಪ್ರಾಪ್ತಿ ರೂಪವಾದ ಯಾವ ಮೋಕ್ಷದ ಒಂದು ಭಾಗವುಂಟೋ ಅದರಪ್ರಾಪ್ತಿಯ ಉಪಾಯವನ್ನು ಕೇಳಿದವನಾಗಿ ಈಗ ಸರ್ವದುಃಖಗಳ ನಿವೃತ್ತಿ ರೂಪವಾದ ಯಾವ ಮೋಕ್ಷದ ದ್ವಿತೀಯ ಭಾಗವುಂಟೋ ಅದನ್ನು ಜೀವಿಸುತ್ತಿರುವಾಗಲೇ ಪಡಿಯಲೋಸುಗ ಪುನಃ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

— ಶಿಷ್ಯ ಉವಾಚ —

ತಥೈವದುಃಖಾಪಗಮಾಯಜಂತವಃ |
ಸದಾಯತಂತೇಸತುನೈವಸಿಧ್ಯತಿ ||
ಪದಂನುಕಿಂಚಾಖಿಲದುಃಖವರ್ಜಿತಂ |
ಭವೇದ್ಭವಾಂಸ್ತತ್ಕೃಪಯಾಬ್ರವೀತುಮೆ ||೯೧||

ಟೀಕಾ—ತಥೈವೇತಿ || ಎಲೈ ಭಗವಂತನೆ ಯಾವ ಪ್ರಕಾರ ಸರ್ವ ಜೀವರು ಸುಖದ ಪ್ರಾಪ್ತ್ಯರ್ಥವಾಗಿ ಯತ್ನವಂ ಮಾಡುತ್ತಿರುವರೋ (ತಥೈವ) ಅಂದರೆ,-ಹಾಗೆಯೆ ಸರ್ವ ದುಃಖಗಳನ್ನು ದೂರಮಾಡಲೋ

ಸುಗವೂ ಸರ್ವಭೂತ ಪ್ರಾಣಿಗಳು ಯ೧ತ್ನವಂ ಮಾಡುವಂಥಾದ್ದು ದೃಷ್ಟಿಗೆ ಕಾಣ್ಬರುತ್ತಿರುವದು. ಆದಾಗ್ಯೂ (ಸತುನೈವಸಿದ್ಧ್ಯತಿ) ಅಂದರೆ,-ಅನೇಕ ಪ್ರಕಾರವಾದ ಯತ್ನವಂ ಮಾಡುವದ್ದರಿಂದಲೂ ಆ ಸರ್ವದುಃಖಗಳನ್ನು ದೂರಮಾಡಲು ಯಥಾವತ್ ಸಿದ್ಧವಾಗುವದಿಲ್ಲ ತಾತ್ಪರ್ಯವೇನೆಂದರೆ,-ಆಧ್ಯಾತ್ಮಿಕ ಆಧಿದೈವಿಕ ಮತ್ತು ಆಧಿಭೌತಿಕವೆಂದು ಈ ಪ್ರಕಾರದಿಂದ ದುಃಖವು ಮೂರು ಬಗೆಯಾಗಿರುವದು. ಅದರಲ್ಲಿ ಕಫಪಿತ್ತಾದಿಗಳ ವಿಷಮತ್ವದಿಂದ ಶರೀರದೊಳಗೆ ವ್ಯಾಧಿಪುಟ್ಟುವದರಿಂದ ಯಾವ ದುಃಖವಾಗುವದೋ ಅದು ಆಧ್ಯಾತ್ಮಿಕ ದುಃಖವೆನ್ನಲ್ಪಡುವದು. ಮತ್ತು ಅತಿ ಶೀತ ಅತಿ ಉಷ್ಣತಾ, ಅತಿವೃಷ್ಟಿ ಅತಿವಾಯುಗಳಿಂದಲೂ ಹಾಗೆ ಮಂ೨ಗಲಾದಿ ನವಗ್ರಹಗಳಿಂದಲೂ ಯಾವ ದುಃಖವಾಗುವದೋ ಅದು ಆಧಿದೈವಿಕ ದುಃಖವೆನ್ನಲ್ಪಡುವದು. ಹಾಗೆ ಸರ್ಪ ವ್ಯಾಘ್ರವೃಶ್ಚಿಕಚೋರಾದಿಗಳಿಂದಯಾವ ಕ್ಲೇಶವಾಗುವದೋಅದುಆಧಿಭೌತಿಕ ದುಃಖವೆನಿಸಿಕೊಳ್ಳುವದು ಈ ಮೂರು ಪ್ರಕಾರವಾದ ದುಃಖಗಳಿಂದಸರ್ವ ಪೃಥಿವೀ ಮಂಡಲವು ವ್ಯಾಪ್ತವಾಗಿರುವದು. ಮತ್ತು ಇವುಗಳ ನಿವೃತ್ತಿಗೋಸುಗ ಸಮಸ್ತ ಪುರುಷರು ಯಥಾ ಶಕ್ತಿಯಾವಾಗಲೂ ಉಪಾಯವಂ ಮಾಡುತ್ತಿರುವರು. ಆದಾಗ್ಯು ಅವುಗಳಿಗೆ ನಿಃಶೇಷತ್ವದಿಂದ ನಿವೃತ್ತಿ ಯಾಗದಿರುವದು. ಯಾತಕ್ಕಂದರೆ,- ಅವುಗಳ ನಿವೃತ್ತಿಗೆ ಲೌಕಿಕ ಸಾಧನವಾದ ಯಾವ ಔಷಧಾದಿಗಳುಂಟೋ ಆ ವುಗಳಿಂದ ಮೊದಲೇ ಸರ್ವದುಃಖಗಳ ನಿವೃತ್ತಿ ನಿಯಮವಾಗಿ ಆಗುವದೂ ಇಲ್ಲ ಮತ್ತು ಯೇನಾದರೂ ಒಂದು ಉಪಾಯದಿಂದ ಯಾವದಾದರೂ ದುಃಖನಿವೃತ್ತಿಸಲ್ಪಟ್ಟರೂ ಪುನಃ ಯಾವದಾದರೊಂದುಕಾಲದಲ್ಲಿ ಆದುಃಖಕ್ಕೆ ಪ್ರಾದುಭಾವವಾಗುವದು. ಆದಕಾರಣ ಔಷಧಾದಿಗಳಿಂದ ಸರ್ವಥಾ ಸರ್ವದುಃಖಗಳಿಗೂ ನಿವೃತ್ತಿ ಆಗುವದಿಲ್ಲ ಈಮಾರ್ತೆ ೩ ಯು ಸಾಂಖ್ಯಸೂತ್ರದಲ್ಲಿ ಪ್ರಥಮಾಧ್ಯಾಯದೊಳಗೆ ಕಪಿಲದೇವನಾದರೂ ವರ್ಣಿಸಿರುವನು." ನದೃಷ್ಟಾತ್ತತ್ಸಿದ್ಧಿರ್ನಿವೃತ್ತೇಪ್ಯನು

೧. ದಾನ ಧರ್ಮ ಮೊದಲಾದವುಗಳನ್ನೂ ಮತ್ತು ತರ್ಕವ್ಯಾಕರಣಾದಿ ಶಾಸ್ತ್ರಗಳ ಅಧ್ಯಯನವಂ ಮಾಡುವದಕ್ಕೆ ಇಲ್ಲಿ ಯತ್ನವೆಂದು ತಿಳಿಯತಕ್ಕದ್ದು. ೨. ಅಂಗಾರಕ ಮೊದಲಾದ ಗ್ರಹಗಳು. ೩, ವಿಷಯ,

ವೃತ್ತಿದರ್ಶನಾತ್ ,, ಅರ್ಥ॥ ಅಧ್ಯಾತ್ಮಿಕಾದಿಯಾದ ಯಾವ ತ್ರಿವಿಧ ದುಃಖವುಂಟೋ ಅದಕ್ಕೆ ಈ ಲೋಕದಲ್ಲಿನ ಯಾವ ಔಷಧಾದಿಗಳಾದ ಉಪಾಯವಿರುವದೋ ಅವುಗಳಿಂದ ಅತ್ಯಂತವಾಗಿ ನಿವೃತ್ತಿಯಾಗುವದಿಲ್ಲ. ಯಾತಕ್ಕಂದರೆ,- (ಅನುವೃತ್ತಿದರ್ಶನಾತ್) ಅಂದರೆ. ಒಂದಾವೃತ್ತಿ ನಿವೃತ್ತಿಯಾದರೂ, ಪುನಃ ಅದರ ಉತ್ಪತ್ತಿ ಕಾಣ್ಬರುತ್ತಿರುವದು ಎಂದು. ಆದ್ದರಿಂದ ಎಲೈ ಭಗವಂತನೇ ! (ಅಖಿಲದುಃಖವರ್ಜಿತಂ) ಅಂದರೆ,-ಆಧ್ಯಾತ್ಮಿಕಾದಿ ಸರ್ವದುಃಖಗಳಿಂದ ರಹಿತವಾದ ಯಾವ ಪದವಿರುವದೋ ಅರ್ಥಾತ್- ಯಾವದರ ಪ್ರಾಪ್ತಿಯಾಗುವದ್ದರಿಂದ ಪುರುಷನಿಗೆ ಸರ್ವದುಃಖಗಳ ಅತ್ಯಂತ ನಿವೃತ್ತಿ ಆಗುವದೋ ಅದನ್ನು (ಕೃಪಯಾ) ಅಂದರೆ,- ತಮ್ಮ ಸ್ವಾಭಾವಿಕ ದಯಾಲುತ್ವದಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ... ॥೯೦॥

ಅ—ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ಗುರು ಅದನ್ನು ಅನುವಾದ ಮಾಡಿಕೊಂಡು ಉತ್ತರವನ್ನು ಹೇಳುತ್ತಾರೆ.

— ಗುರುರುವಾಚ —

ಮಹೇಂದ್ರಲೋಕಂ ಭುವನಂಸ್ವಯಂಭುವೋ
ರಮೇಶಧಾಮಾ ಪಿನಗಂ ಪಿನಾಕಿನಃ ॥
ಪ್ರಯಾತುಮೀತಾಲ ಮಪಿಕ್ರಮುಚ್ಯತೆ
ನದುಃಖಲೇಶಾತ್ತು ವಿನಾತ್ಮಸಂಸ್ಥಿವಃ ॥೯೩॥

ಟೀಕಾ॥ ಮಹೇಂದ್ರಲೋಕಮಿತಿ- ಎಲೈ ಶಿಷ್ಯನೆ ಈ ಪುರುಷನು (ಮಹೇಂದ್ರಲೋಕಂ) ಅಂದರೆ,- ಮಹೇಂದ್ರಲೋಕ, ಯಾವ ಸ್ವರ್ಗವುಂಟೋ, ಅಲ್ಲಿಗೂ ಯಾವದಾದರೂ ಉಪಾಯದಿಂದ ಹೊರಟು ಹೋದರೂ ಹೋಗಬಹುದು ಹಾಗೆಯೆ (ಭುವನಂಸ್ವಯಂಭುವಃ) ಅಂದರೆ,- ಸ್ವಯಂಭು-ಯಾವ ಬ್ರಹ್ಮನುಂಟೋ ಅವನ ಲೋಕಕ್ಕೂ ಹೊರಟು ಹೋಗಬಹುದು. ಹಾಗೆ (ರಮೇಶಧಾಮ) ಅಂದರೆ,-ರಮೇಶ- ಯಾವ ವಿಷ್ಣು ಭಗವಂತನುಂಟೋ, ಅವನ ನಿವಾಸ ಭೂಮಿಯಾದ ವೈಕುಂಠಕ್ಕೂ ಯಾವದಾದರು ಪ್ರಯತ್ನದಿಂದ ಹೋಗಬಹುದು. ಅದರಂತೆಯೆ (ನಗಂಪಿನಾಕಿನಃ) ಅಂದರೆ, ಪಿನಾಕಿ- ಯಾವ ಮಹಾದೇವನಿರುವನೋ ಅವನ ನಿವಾಸ

ಸ್ಥಾನವಾದ ಯಾವ ಕೈಲಾಸ ಪರ್ವತ ಉಂಟೋ ಅಲ್ಲಿಗೂ ಯಾವದಾದರೂ ಉಪಾಯದಿಂದ ಹೊರಟುಹೋಗಬಹುದು ಅಥವಾ ಹೋಗಿರಬಹುದು. ಹಾಗೆ (ಪಾತಾಳಂ) ಅಂದರೆ,- ಬಲಿರಾಜನ ನಿವಾಸಸ್ಥಾನವಾದ ಯಾವ ಪಾತಾಲ ಉಂಟೋ, ಅಲ್ಲಿಗೂ ಯಾವದಾದರೂ ಉಪಾಯದಿಂದ ಹೋಗಬಹುದು. ಇವು ಮೊದಲಾಗಿ ಅನ್ಯ ಯಾವ ಬ್ರಹ್ಮಾಂಡದ ಅಂತರ ಅಥವಾ ಬಾಹ್ಯದಲ್ಲಿ ಸುಖದಾಯಕ ಸ್ಥಾನವಿರುವದೋ ಅಲ್ಲಿಯೂ ಯಾವದಾದರೂ ಉಪಾಯದಿಂದ ಪ್ರವೇಶಿಸಬಹುದು. ಇಷ್ಟಾದರೂ ಎಲೈ ಶಿಷ್ಯನೆ (ವಿನಾತ್ಮಸಂಸ್ಥಿತಿಂ) ಅಂದರೆ,-ತನ್ನ ಆತ್ಮಸ್ವರೂಪದಲ್ಲಿ ಯಾವ ನಿರ್ವಿಕಲ್ಪ ಸ್ಥಿತಿಯುಂಟೋ ಅದರ ವಿನಃ ಈ ಪುರುಷನು ಒಂದು ಕಾಲಕ್ಕೂ ಸರ್ವಥಾ ದುಃಖಲೇಶದಿಂದ ಬಿಡಲ್ಪಡುವದಿಲ್ಲ ಯಾತಕ್ಕಂದರೆ,-ಯಾವ ಪುರುಷನು ಸ್ವರ್ಗಕ್ಕೆ ಹೋಗುವನೋ ಒಳಿಕ ಆ ಕಾಲದಲ್ಲಿ ಅವನ ಕಂಠದೊಳ್ ಒಂದು ಪುಷ್ಪಗಳ ಮಾಲೆ ಹಾಕಲ್ಪಡುವದು ಮತ್ತು ಅವನಂ ಕುರಿತು ಹೀಗೆ ಹೇಳಲ್ಪಡುವದು. ಯೇನಂದರೆ -ಯಾವಾಗ ಈ ಮಾಲೆ ಶುಷ್ಕವಾಗಿ ಹೋಗುವದೋ ನಂತರ ಅದೇ ಕಾಲದಲ್ಲಿ ನಿನಗೆ ಸ್ವರ್ಗದಿಂ ಪತನವಾಗಿ ಹೋದೀತು ಎಂದು. ಆದ್ದರಿಂದ ಆ ಪುರುಷನ ಚಿತ್ತದಲ್ಲಿ ಯಾವಾಗಲೂ ಹೀಗೆ ಭಯ ಉಂಟಾಗುತ್ತಿರುವದು. ಅದೇನಂದರೆ,-ತಿಳಿಯದಂತೆ ಯಾವ ಕಾಲದಲ್ಲಿ ಈ ಮಾಲೆ ಬಾಡಿಹೋಗುವದೋ ಎಂದು. ಹಾಗೆ ಗೀತೆಯಲ್ಲಿ ಭಗವಂತನೂ ಈ ವಿಷಯವನ್ನು ಪ್ರಕಟ ಪಡಿಸಿರುವನು. "ಕ್ಷೀಣೇಪುಣ್ಯೇಮರ್ತ್ಯಲೋಕಂವಿಶಂತಿ" ಅರ್ಥ॥ ಎಲೇ ಅರ್ಜುನಾ, ಯಾವ ಕಾಲದಲ್ಲಿ ಸ್ವರ್ಗದೊಳ್ಪೋಗಿರುವ ಪುರುಷನ ಪುಣ್ಯವು ಕ್ಷೀಣವಾಗಿ ಹೋಗುವದೋ ನಂತರ ಅವನು ಪುನಃ ಈ ಮನುಷ್ಯಲೋಕದಲ್ಲಿ ಬರುವನು ಎಂದು ಆದಕಾರಣ ಎಲೈ ಶಿಷ್ಯನೇ, ಸ್ವರ್ಗದಲ್ಲಿ ಹೋಗುವದ್ದರಿಂದಲೂ ಸರ್ವದುಃಖಗಳ ನಿವೃತ್ತಿಯಾಗುವದಿಲ್ಲ. ಹಾಗೆ ಯಾವ ಪುರುಷನು ಪಂಚಾಗ್ನಿ ವಿದ್ಯೆಗಳ ಉಪಾಸನದಿಂದ ಬ್ರಹ್ಮಲೋಕಕ್ಕೆ ಹೋಗುವನೋ ಅವನಿಗೆ ಭೋಗಮಾತ್ರದಿಂದಲೇ ಬ್ರಹ್ಮನ ಸಮಾನತ್ವ ಪ್ರಾಪ್ತವಾಗುವದು. ಆದರೆ ಬ್ರಹ್ಮನಲ್ಲಿ ಯಾವ ಜಗತ್ತಿನ ರಚನಾದಿಗಳಂ ಮಾಡುವ ಸಾಮರ್ಥ್ಯ ಉಂಟೋ ಅದು ಮಾತ್ರ ಅವನಿಗೆ ಪ್ರಾಪ್ತವಾಗಲರಿಯದು. ಮತ್ತು ಪುನಃ ಕಲ್ಪಾಂತದಲ್ಲಿ ಬ್ರಹ್ಮಲೋ

ಕವಿಂದಲೂ ಕೆಲವು ಉಪಾಸಕರು ಅಧಃಪತನವಾಗುವರು. ಈ ವಾರ್ತೆ ಗೀತೆಯಲ್ಲಿಯೂ ಹೇಳಲ್ಪಟ್ಟಿರುವದು. "ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ ,, ಅರ್ಥ॥ ಎಲೇ ಅರ್ಜುನಾ, ಬ್ರಹ್ಮಲೋಕದಿಂ ಪಿಡಿದು ಸ್ವರ್ಗಾದಿಲೋಕಗಳಿಂದ ಪುರುಷರಿಗೆ ಪುನಃ ಈ ಲೋಕದಲ್ಲಿ ಆವೃತ್ತಿಯಾಗುವದು ಎಂದು. ಆದಕಾರಣ ಎಲೈ ಶಿಷ್ಯನೇ, ಬ್ರಹ್ಮಲೋಕದಲ್ಲಿ ಹೋಗುವದ್ದರಿಂದಲೂ ಸರ್ವ ದುಃಖಗಳ ನಿವೃತ್ತಿ ಆಗುವದಿಲ್ಲ. ಹಾಗೆ ವಾಲ್ಮೀಕ ರಾಮಾಯಣಾದಿಗಳಲ್ಲಿ ಈ ವಿಷಯವು ಪ್ರಸಿದ್ಧವಾಗಿರುವದು. ಯೇನಂದರೆ,—

ಯಾವ ವಿಷ್ಣು ಭಗವಂತನ ಪಾರ್ಶ್ವದಲ್ಲಿಜಯ ವಿಜಯರಿದ್ದರೋ ಅವರಿಗೂ ಸನಕಾದಿಗಳ ಶಾಪವಾದದ್ದೂ ವೈಕುಂಠವಿಂದ ಅಧಃಪತನವಾದದ್ದೂ ರಾಕ್ಷಸ ಕುಲದಲ್ಲಿ ಜನ್ಮವೆತ್ತಿದ್ದೂ ನಂತರ ಅನೇಕ ಪ್ರಕಾರವಾದ ಕ್ಲೇಶಗಳಿಂದ ರಣಭೂಮಿಯಲ್ಲಿ ಮರಣವಾಗತಕ್ಕದ್ದು ಇತ್ಯಾದಿ ದುಃಖಗಳು ವುಂಟಾಗುತ್ತಿರುವವು. ಆದ್ದರಿಂದ ಎಲೈಶಿಷ್ಯನೇ! ವಿಷ್ಣುಲೋಕದಲ್ಲಿ ಪೋಗುವದ್ದರಿಂದಲೂ ಸರ್ವಥಾ ದುಃಖಗಳ ನಿವೃತ್ತಿಯಾಗುವದಿಲ್ಲ. ಹಾಗೆ ಯೋಗವಾಸಿಷ್ಠದೋಳ್ ನಿರ್ವಾಣ ಪ್ರಕರಣದ ಪೂ ೧ ರ್ದ್ವಾರ್ಧದಲ್ಲಿ ಬರೆಯಲ್ಪಟ್ಟಿರುವ ಪ್ರಸಂಗವೇನಂದರೆ,-ಒಂದು ಸಮಯದಲ್ಲಿ ಯೋಗಿನಿಗಳು ಈರ್ಷೆಯಿಂದ ಪಾರ್ವತಿಯ ಶರೀರವನ್ನು ಕತ್ತರಿಸಿ ಕತ್ತರಿಸಿ ತುಂಡುಮಾಡಿ ಅದನ್ನು ಅಗ್ನಿಯಿಂದ ಬೇಯಿಸಿ ಬೋಜನ ಮಾಡಲೆಳಸಿದರು. ಆಗ ಪುನಃ ಮಹಾದೇವನ ಕ್ರೋಧ ಬಯದಿಂದಸ್ವಸ್ವಮುಖವಿಂದೊಂದೊಂದು ಅಂಗಗಳಂ ತೆಗದುಬಿಟ್ಟುಗೂಡಿಸಿ ಪಾರ್ವತಿಯಂ ಮಾಡಿಬಿಟ್ಟರು. ಇನ್ನು ಭಾಗವತಾದಿಗಳಲ್ಲಿ ಬರದಿರುವದೇನಂದರೆ,- ದಕ್ಷಪ್ರಜಾಪತಿಯ ಯಜ್ಞದಲ್ಲಿ ಹೋಗಲ್ಪಟ್ಟ ಪಾರ್ವತಿಯು ಕ್ರೋಧದಿಂದ ತನ್ನ ಶರೀರವನ್ನು ಸುಟ್ಟು ಭಸ್ಮವಂ ಮಾಡಿಕೊಂಡಳು. ಆದಕಾರಣ ಎಲೈ ಶಿಷ್ಯನೇ ! ಇತ್ಯಾದಿ ವಾರ್ತೆಗಳಿಂದ ತಿಳಿಯಬೇಕಾದದ್ದೇನಂದರೆ,- ಕೈಲಾಸಕ್ಕೆ ಪೋಗುವದರಿಂದಲೂ ಸರ್ವಥಾ ದುಃಖಗಳ ನಿವೃತ್ತಿ ಯಾಗುವದಿಲ್ಲವೆಂದು. ಮತ್ತೂ ಭಾಗವತಾದಿಗಳಲ್ಲಿ ಕೇಳ್ಪಂದಿರುವದೇನಂದರೆ,- ಪಾತಾಲದಲ್ಲಿ ಬಲಿರಾಜನು ಈಗಿನವರಿ

---

೧ ಭೃಶುಂಡೋಪಾಖ್ಯಾನದಲ್ಲಿ.

ವಿಗೂ ಬಂಧಾಯು ಮಾನನಾಗಿರುವನು, ಮತ್ತು ಯಾವ ಇತರ ರಾಕ್ಷಸ
ಜನಗಳು ಅಲ್ಲಿ ನಿವಾಸ ಮಾಡುತ್ತಿರುವರೋ ಅವರಿಗೋಸುಗ ವಿಷ್ಣು ಭಗ
ವಂತನು ತನ್ನ ಸುದರ್ಶನ ಚಕ್ರವನ್ನು ಬಿಟ್ಟಿರುವನು. ಅದರಿಂದ ಯಾ
ವಾಗ ರಾಕ್ಷಸ ಸ್ತ್ರೀಯರುಗಳು ಗರ್ಭವಂ ಧರಿಸುತ್ತಿರುವರೋ, ಆಗ ಅವರೆ
ಲ್ಲರ ಗರ್ಭಗಳನ್ನು ಸುದರ್ಶನ ಚಕ್ರವು ಕತ್ತರಿಸಿ ಬೀಳಿಸುವದು. ಹಾಗೆ
ಮಹಾಭಾರತದ ಉದ್ಯೋಗ ಪರ್ವದಲ್ಲಿ ಬರದಿರುವ ದೇನಂದರೆ,- ಪಾತಾ
ಳದೊಳ್ ಭೋಗವತೀ ನಾಮಕವಾದ ಪುರಿಯಲ್ಲಿ ಯಾವ ನಾಗಜನಗಳು
ನಿವಾಸ ಮಾಡುತ್ತಿರುವರೋ ಅವುಗಳಲ್ಲಿ ಒಂದು ನಾಗವು ಪ್ರತಿ ನಿತ್ಯ
ವೂ ಗರುಡ ಭಗವಂತನು ತನ್ನ ಭಕ್ಷಣಾರ್ಥವಾಗಿ ಬಂದು ಆಲಿಂ[೨]ಗಿಸಿ
ಪೋಗುತ್ತಿರುವನು ಎಂದು. ಆದ್ದರಿಂದ ಎಲೈ ಶಿಷ್ಯನೆ ಪಾತಾಲ ಲೋಕಕ್ಕೆ
ಪೋಗುವದ್ದರಿಂದಲೂ ಸರ್ವಥಾ ದುಃಖಗಳ ನಿವೃತ್ತಿಯಾಗುವದಿಲ್ಲ. ಇ
ದೇ ಪ್ರಕಾರವಾಗಿ ಅನ್ಯಗಂಧರ್ವಲೋಕ ಪಿತೃಲೋಕಾದಿಗಳಲ್ಲಿಯೂ
ಯಥಾ ಯೋಗ್ಯವಾಗಿ ತಿಳಿದುಕೊಳ್ಳತಕ್ಕದ್ದು. ಅದರಿಂದೆಲೈ ಶಿಷ್ಯ
ನೆ ಆತ್ಮಸ್ವರೂಪದಲ್ಲಿ ಯಾವ ನಿರ್ವಿಕಲ್ಪಸ್ಥಿತಿಯುಂಟೋ ಅದೇ ಸರ್ವ
ದುಃಖಗಳಿಂದ ರಹಿತವಾದ ಪದವು, ಅದರ ವಿನಃ ಹೇಳಲ್ಪಟ್ಟ ಲೋಕಗಳ
ಲ್ಲಿ ಹೋಗುವದರಿಂದ ದುಃಖಲೇಶ ಉಂಟಾಗಿಯೇ ಇರುವದಲ್ಲದೆ ಸರ್ವ
ಥಾ ಅದರ ನಿವೃತ್ತಿ ಆಗುವದಿಲ್ಲ. ಹಾಗೆ ಈ ಸರ್ವ ವಿಷಯವು ಯೋಗ
ವಾಸಿಷ್ಠದ ಸ್ಥಿತಿ ಪ್ರಕರಣದಲ್ಲಿ ತನ್ನ ಪುತ್ರನಂ ಕುರಿತು ದಾಶೂರಮುನಿ
ಯೂ ಕೂಡ ನಿರೂಪಿಸಿ ಇರುವನು. “ಯದಿವರ್ಷ ಸಹಸ್ರಾಣಿ ತಪ
ಶ್ಚರಸಿ ದಾರುಣಮ್ ॥ ಪಾತಾಲಸ್ಥಶ್ಚ ಭೂಸ್ಥಶ್ಚ ಸ್ವರ್ಗಸ್ಥಶ್ಚಾಪಿ ತತ್ತ್ವವ
ನ್ನಾನ್ಯಃ ಕಶ್ಚಿದುಪಾಯೋಸ್ತಿ ಸಂಕಲ್ಪೋಪಶಮಾದೃತೆ ,, ಅರ್ಥ — ಎಲೈ
ಮಗನೆ ! ಯಾವ ನೀನು ಪಾತಾಲದಲ್ಲಿದ್ದು ಕೊಂಡಾದರೂ ಅಥವಾ ಭೂ
ಮಿಯಲ್ಲಿ ಸ್ಥಿತನಾಗಿ ಯಾದರೂ ಅದೂ ಅಲ್ಲದೆ ಸ್ವರ್ಗದಲ್ಲಿ ಇದ್ದಾದರೂ
ಸಹಸ್ರವರ್ಷ ಪರ್ಯಂತ ಉಗ್ರತಪವನ್ನಾಚರಿಸೀಯೆ ? ಆದರೂ ನಿನಗೆ
ಪರಮಸುಖದ ಪ್ರಾಪ್ತಿಗೋಸುಗ ಸರ್ವಸಂಕಲ್ಪಗಳಿಂ ರಹಿತವಾದ ಆ
ತ್ಮಸುಖದಲ್ಲಿ ಇರಲಾಗುವದು ವಿನಃ ಎರಡನೆ ಯಾವ ಉಪಾಯವೂ ಇಲ್ಲ
ವೆಂದೂ. ಆದ್ದರಿಂದ ಎಲೈ ಶಿಷ್ಯನೆ ಸರ್ವದುಃಖಗಳಿಂ ರಹಿತವಾಗಿ ಒಂ
ದು ಆತ್ಮಪದವೆ ಇರುವದು. ಈ ವಾರ್ತೆಯು ಶ್ರುತಿಯಲ್ಲಿಯೂ ಪ್ರಕಟ

---

೨ ಸ್ನೇಹ ಬಳಸಿ - ಉಪಾಯಮಾಡಿ.

ಸಲ್ಪಟ್ಟಿರುವದು. “ ಸಮಾಧಿ ನಿರ್ಧೂತ ಮಲಸ್ಯಚೇತಸೋ ನಿವೇಶಿತ ಸ್ಯಾತ್ಮನಿಯತ್ಸುಖಂಭವೇತ್ ॥ ನಶಕ್ಯತೆವರ್ಣಯಿತುಂತದಾಗಿರಾಸ್ವ ಯಂತದಂತಃಕರಣೇನಗೃಹ್ಯತೆ ,, ಅರ್ಥ—ಸಮಾಧಿಯು ಅಭ್ಯಾಸದಿಂದ ನಿರ್ಮಲವಾದ ಚಿತ್ತವನ್ನು ಆತ್ಮನಲ್ಲಿ ನಿಲ್ಲಿಸುವದ್ದರಿಂದ ಯಾವ ಸುಖವಾ ಗುವದೋ ಅದನ್ನು ವಾಣಿಯಿಂದವರ್ಣಿಸುವದಕ್ಕಾಗದಿರುವದು. ಮತ್ತು ಆಕಾಲದಲ್ಲಿ ಆ ಸುಖವನ್ನು ಯೋಗೀ ಜನಗಳು ತಮ್ಮ ಅಂತಃ ೩ ಕರ ಣದಿಂದಲೇ ಅನುಭವ ಮಾಡುವರು ಎಂದು. ಹಾಗೆ ಗೀತೆಯ ಆರನೆ ಅ ಧ್ಯಾಯದಲ್ಲಿಯೂ “ ಪ್ರಶಾಂತ ಮನಸಂಹ್ಯೇನಂ ಯೋಗಿನಂ ಸುಖಮು ತ್ತಮಂ ಉಪೈತಿ ಶಾಂತರಜಸಂ ಬ್ರಹ್ಮಭೂತಮಕಲ್ಮಷಂ ,, ಅರ್ಥ— ಎಲೆ ಅರ್ಜುನ ನಿರ್ವಿಕಲ್ಪ ಸಮಾಧಿಕಾಲದಲ್ಲಿ ಪ್ರಶಾಂತ ಚಿತ್ತವೃತ್ತಿಯೋ ಗೀಪುರುಷನಿಗೆ ರಜಸ್ತಮಸ್ಸುಗಳ ಲೇಶದಿಂ ರಹಿತವಾಗಿ ಕೇವಲ ಸತ್ವಮ ಯವಾದ ಬ್ರಹ್ಮ ಭೂತ ಅನುತ್ತಮ ಸುಖದ ಪ್ರಾಪ್ತಿಯಾಗುವದು ಎಂ ದು ಶ್ರೀಕೃಷ್ಣನು ನಿರೂಪಿಸಿರುವನು॥ ಹ್ಯಾಗಾದರೂ ಸಮಾಧಿಯಿಂದ ವ್ಯುತ್ಥಾನ ಕಾಲದಲ್ಲಿ ಯೋಗಿಗೂ ಕೂಡ ಕಿಂಚಿತ್ ಶೀತೋಷ್ಣಾದಿ ದ್ವಂದ್ವಜನ್ಯ ದುಃಖದ ಅನುಭವ ವಾಗುವದು. ಹಾಗಾದರೂ ಆತ್ಮತ ತ್ವದ ದೃಢಾಭ್ಯಾಸವಾಗಿರುವದ್ದರಿಂದ ಆಯೋಗಿಯು ಆ ದುಃಖವನ್ನೂ ಮತ್ತು ಅದರ ಶೀತೋಷ್ಣಾದಿ ಹೇತುವನ್ನೂ ಇನ್ನೂ ಅದಕ್ಕೆ ಆಶ್ರಯ ವಾದ ಶರೀರವನ್ನೂ ಮತ್ತು ಅಂತಃಕರಣವನ್ನೂ ಈ ಸರ್ವವನ್ನೂ ತ ನ್ನ ಸ್ವರೂಪದಲ್ಲಿ ಮೃಗತೃಷ್ಣಾ ಜಲದಂತೆ ಕಲ್ಪಿತವೆಂದು ಗ್ರಹಿಸಿರುವ ನು. ಆದ್ದರಿಂದ ಅವನಿಗೆ ಸರ್ವ ಪ್ರಕಾರದಿಂದಲೂ ಸಕಲ ದುಃಖಗಳ ನಿವೃತ್ತಿ ಪೂರ್ವಕವಾಗಿ ಪರಮಾನಂದದ ಪ್ರಾಪ್ತಿಯಾಗುವದು. ಎಂ ತಾದರೂ ಯೋಗಿಯಿಂ ವಿನಃ ಕೇವಲ ಜ್ಞಾನೀಪುರುಷನೂ ಕೂಡ ದುಃ ಖಾದಿಗಳನ್ನು ಆತ್ಮಸ್ವರೂಪದಲ್ಲಿ ಕಲ್ಪಿತವೆಂದು ತಿಳಿದಿರುವನು. ಆದಾ ಗ್ಯೂ ಅವನಿಗೆ ದೃಢಾಭ್ಯಾಸದ ಅಭಾವವಾಗಿರುವದ್ದರಿಂದ ದೇಹದಲ್ಲಿ ಅಧಿ ಕಾಧ್ಯಾಸವಾಗುವದು. ಆದಕಾರಣ ದುಃಖಕಾಲದಲ್ಲಿ ಅವನಿಗೆ ಅವಶ್ಯವ್ಯಾ ಥೆಯುಂಟಾಗುವದು. ಆದ್ದರಿಂದಲೆ ಶಿಷ್ಯನೆ, ಯಾವ ನಿನಗೆ ಜೀವಿಸು ತ್ತಿರುವಾಗಲೇ ಸರ್ವ ದುಃಖಗಳ ನಿವೃತ್ತಿಯ ಇಚ್ಛೆಯುಂಟಾಗಿ

೩, ದೃಶ್ಯಸಿಪೇಧದಿಂದ ಅಂತರ್ಮುಖವಾಗಿ ರಜಸ್ತಮೋವಾಸನೆಗಳಿಲ್ಲದ ನಿರ್ಮಲವಾದ ಸೂಕ್ಷ್ಮವೃತ್ತಿಯಿಂದ,

ದ್ದರೆ ಆ ಸೀನೂ ಕೂಡ ನಿರ್ವಿಕಲ್ಪ ಸಮಾಧಿಯ ಅಭ್ಯಾಸವಂ ಮಾಡು ಎಂದರು. ... ... ॥೯೨॥

ಅ—ಈ ಪ್ರಕಾರದಿಂದ ನಿರ್ವಿಕಲ್ಪ ಸಮಾಧಿಯನ್ನು ಜೀವನ್ಮುಕ್ತಿಯು ನಿರತಿಶಯ ಪರಮಾನಂದಕ್ಕೆ ಹೇತುವಾಗಿರುವದನ್ನು ಕೇಳಿ ಈಗ ಈ ಸಮಾಧಿಯು ಜ್ಞಾನದಿಂ ಮೊದಲೇ ಕರ್ತವ್ಯವೊ ಅಲ್ಲದೆ ಜ್ಞಾನವಾದ ನಂತರವೂ ಕರ್ತವ್ಯವಾಗಿರುವದೊ ಎಂಬೀ ಪ್ರಕಾರವಾದ ಸಂಶಯವಂ ಹೊಂದಿದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—॥ ಶಿಷ್ಯ ಉವಾಚ ॥—

ಜ್ಞಾನೋದಯಾನಂತರಮಸ್ಯದೇಹಿನಃ ।
ಕರ್ತವ್ಯಮಸ್ತೀಹನಕಿಂಚನಾಪಿವಾ ॥
ಚೇದಸ್ತಿಕಿಂತತ್ಕೃಪಯಾಬ್ರವೀತುಮೆ ।
ಸರ್ವ್ಯಾಗ್ವಮಾನಾಗಮಗೋಪ್ಯಗೋಚರಃ॥ ॥೯೩॥

ಟೀಕಾ॥ ಜ್ಞಾನೋದಯಾನಂತರಮಿತಿ-ಎಲೈ ಭಗವಂತನೇ, ಪೂರ್ವದಲ್ಲಿ ಪೇಳಿದ ಜೀವಬ್ರಹ್ಮರ ಏಕತೆಯ ನಿಃಸಂದೇಹ ಜ್ಞಾನೋದಯವಾದ ನಂತರ ಪ್ರಾರಬ್ಧಕರ್ಮದಕ್ಷಯಪರ್ಯಂತ ಈ ಶರೀರಧಾರೀಯಾದ ಜ್ಞಾನೀಪುರುಷನಿಗೆ ಈ ಲೋಕದಲ್ಲಿ ಪುನಃ (ಕರ್ತ್ತವ್ಯಮಸ್ತಿ) ಅಂದರೆ,-ಯಾವಪ್ರಕಾರದ ಕರ್ತವ್ಯಶೇಷ ಉಂಟಾಗಿರುವದು ? ಹಾಗಲ್ಲದಿದ್ದರೆ ಕಿಂಚಿನ್ಮಾತ್ರವಾದರೂ ಇರುವದಿಲ್ಲವೋ ಯಾತಕ್ಕಂದರೆ,-ಬಹು ಸ್ಥಲಗಳಲ್ಲಿ ವೇದಾಂತ ಶಾಸ್ತ್ರಗಳೊಳ್ ಕೇಳ್ವಂದಿರುವದೇನಂದರೆ,-ಜ್ಞಾನೋದಯವಾದಬಳಿಕ ಪುರುಷನಿಗೆ ಕಿಂಚಿನ್ಮಾತ್ರವಾದರೂ ಕರ್ತವ್ಯಶೇಷ ವಿರುವದಿಲ್ಲವೆಂದೂ॥ ಹಾಗೆ ಶ್ವೇತಾಶ್ವತರೋಪನಿಷತ್ತಿನ ಭಾಷ್ಯದಲ್ಲಿ ಬರಿಯಲ್ಪಟ್ಟಿರುವದು. “ಜ್ಞಾನಾಮೃತೇನತೃಪ್ತಸ್ಯ ಕೃತಕೃತ್ಯಸ್ಯಯೋಗಿನಃ॥ ನೈವಾಸ್ತಿಕಿಂಚಿತ್ಕರ್ತವ್ಯಮಸ್ತಿಚೇನ್ನಸತತ್ವವಿತ್,, ಅರ್ಥ॥ ಜ್ಞಾನರೂಪವಾದ ಅಮೃತದಿಂದ ತೃಪ್ತನಾದಂಥಾ ಯಾವ ಕೃತ ಕೃತ್ಯನಾದ ಯೋಗೀ ಪುರುಷನಿರುವನೋ ಅವನಿಗೆ ಪುನಹ ಈ ಲೋಕದಲ್ಲಿ ಸ್ವಲ್ಪ ಮಾತ್ರವಾದರೂ ಕ ೧ ರ್ತವ್ಯ ವಿರುವದಿಲ್ಲವೆಂತಲೂ ಮತ್ತು ಯಾವದಾ

೧ ಕರ್ಮವಂ ಮಾಡತಕ್ಕ ಅಧಿಕಾರ.

ದರೂ ಬಳಿಕಲೂ ಇರುವದಾದರೆ ಆಗ ಅವನು ಯಥಾರ್ಥ ತತ್ವವನ್ನರಿತ ಜ್ಞಾನಿಯಾಗಿಲ್ಲವೆಂತಲೂ ನಿರೂಪಿಸಲ್ಪಟ್ಟಿರುವದು. ಇನ್ನು (ಚೆದಸ್ತಿ) ಅಂದರೆ ಎಲೈ ಭಗವಂತನೇ, ಯಾವದಾದರೂ ಜ್ಞಾನದ ಅನಂತರವೂ ಕಿಂಚಿತ್ಕರ್ತವ್ಯಶೇಷ ವಿರುವದಾದರೆ ಆ ಕರ್ತವ್ಯವೆಂಥಾದ್ದಾಗಿರುವದು? ಹಾಗೆ ಸರ್ವ ಶಾಸ್ತ್ರಗಳ (ಗೋಪ್ಯಗೋಚರಃ) ಅಂದರೆ,-ಗೋಪ್ಯ-ರಹಸ್ಯವನ್ನು ಸಮ್ಯಕ್ ಪ್ರಕಾರದಿಂದ ತಿಳಿದಂಥಾ ಯಾವತಾವಿದ್ಧೀರೋ ಅದಂ ನನ್ನಂ ಕುರಿತು ಕೃಪೆಯಿಂದ ಅನುಗ್ರಹಿಸಿರಿ ಎಂದನು. ॥೯೩॥

ಅ॥ ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ ಈಗ ಗುರು ಅದನ್ನು ಅನುವಾದ ಮಾಡಿ ಉತ್ತರವಂ ಪ್ರಕಟಪಡಿಸುತ್ತಾರೆ.

—— ಗುರು ರುಉವಾಚ ——

ಜ್ಞಾನಾಮೃತೇನತೃಪ್ತಸ್ಯಮುತೇರ್ವಿವೇಕಿನೋ ।
ನ್ನೈವಾಸ್ತಿಕಿಂಚಿತ್ಕರಣೀಯಂತಾಂಗತಮ್॥
ಯದ್ಯಸ್ತಿತದ್ವೃತ್ತಿನಿರೋಧಪಿಪಪ್ಯೈ ।
ನಾನ್ಯತ್ರದಾಪೀತ್ರಿವದಂತಿಸೂರಯಃ॥ ॥೯೪॥

ಟೀಕಾ॥ ಜ್ಞಾನಾಮೃತಾತೃಪ್ತಮತೇರಿತಿ—ಎಲೈ ಶಿಷ್ಯನೇ, ಜೀವಬ್ರಹ್ಮರ ಏಕತೆಯ ನಿಃಸಂದೇಹ ಜ್ಞಾನರೂಪವಾದ ಅಮೃತದಿಂದ ಯಾವ ಪುರುಷನ ಬುದ್ಧಿಯು ತೃಪ್ತವಾಗಿರುವದೋ ಅವನಿಗೆ ಈ ಲೋಕದಲ್ಲಿ ಪುನಃ ಕಿಂಚಿನ್ಮಾತ್ರವಾದರೂ (ಕರಣೀಯಂತಾಂಗತಂ) ಅಂದರೆ,-ಕಾರ್ಯ ಮಾಡಲು ಯೋಗ್ಯವಿರುವದಿಲ್ಲ. ಈ ವಾರ್ತೆಯು ಗೀತೆಯಲ್ಲಾದರೂ ಪ್ರಕಟಿಸಲ್ಪಟ್ಟಿರುವದು. "ನೈವತಸ್ಯಕೃತೇನಾರ್ಥೋನಾಕೃತೇನೆಹಕಶ್ಚನ" ಅರ್ಥ॥ ಎಲೇ ಅರ್ಜುನಾ, ಆ ಜ್ಞಾನೀಪುರುಷನಿಗೆ ಈ ಲೋಕದಲ್ಲಿ ಕರ್ಮ ಮಾಡುವದ್ದರಿಂದ ಯಾವ ಪ್ರಯೋಜನವೂ ಇಲ್ಲ. ಮತ್ತು ಕರ್ಮಗಳನ್ನು ಮಾಡದೇ ಇರುವದ್ದರಿಂದಲೂ ಯಾವ ಪ್ರಯೋಜನವೂ ಇಲ್ಲವೆಂದು ಶ್ರೀ ಕೃಷ್ಣನ ವಾಕ್ಯವು. ಯಾತಕ್ಕಂದರೆ,-"ಜ್ಞಾತ್ವಾದೇವಂ ಮುಚ್ಯತೆಸರ್ವಪಾಶೈಃ" "ಜ್ಞಾನಾದೇವತುಕೈವಲ್ಯಂ ಪ್ರಾಪ್ಯತೆಯೇನಮುಚ್ಯತೆ" ಇತ್ಯಾದಿ ಶೃತಿಸ್ಮೃತಿಗಳಲ್ಲಿ ಕೇವಲ ಜ್ಞಾನಮಾತ್ರದಿಂದಲೇ ಮೋಕ್ಷಪದದ ಪ್ರಾಪ್ತಿ ಎಂದು ಕಥನ ಮಾಡಿರುವವು. ಮತ್ತು

ಎಲೈ ಶಿಷ್ಯನೇ, ಹ್ಯಾಗೂ ಜ್ಞಾನೋದಯವಾದನಂತರ ಜ್ಞಾನೀ ಪುರುಷನಿಗೆ ಸದಾಚಾರದಿಂದ ಅಥವಾ ಜೀವನ್ಮುಕ್ತಿಯ ಸುಖಾರ್ಥವಾಗಿ ಯಾವದಾದರೂ ಕರ್ತವ್ಯವಂ ಗ್ರಹಿಸುವದಾದರೆ ಆಗ (ವೃತ್ತಿನಿರೋಧವೇವ) ಅಂದರೆ-ಪ್ರಮಾಣ, ವಿಪರ್ಯಯ, ವಿಕಲ್ಪ ೧ ಮೊದಲಾದ ಯಾವ ಚಿ ೨ ತ್ತದ ವೃತ್ತಿಗಳಿರುವವೋ ಅವುಗಳನ್ನು ಯಾವ ಅಭ್ಯಾಸದಿಂದ ನಿರೋಧಪಡಿಸತಕ್ಕದ್ದೋ ಅದೇ ಕರ್ತವ್ಯವಾಗಿರುವದು. (ನಾನ್ಯತ್) ಅಂದರೆ-ಅದರ ವಿನಃ ಬೇರೆ ಅವನಿಗೆ ಯಾವದೂ ಯಾವದಾನೊಂದು ಕಾಲದಲ್ಲೂ ಕರ್ತವ್ಯವಿರುವದಿಲ್ಲ. ಹೀಗೆ (ವದಂತಿಸೂರಯಃ) ಅಂದರೆ-ವ್ಯಾಸವಸಿಷ್ಠಾದಿಯಾದ ವಿದ್ವಾಜ್ಜನಗಳು ಪ್ರಕಟಪಡಿಸುತ್ತಿರುವರು. ಇಲ್ಲಿ ಈ ತಾತ್ಪರ್ಯವಿರುವದು. ಅದೇನಂದರೆ-ಕೃತೋಪಾಸನ ಮತ್ತು ಅಕೃತೋಪಾಸನವೆಂಬ ಈ ಭೇದದಿಂದ ಜ್ಞಾನಿ ದ್ವಿಪ್ರಕಾರವಾಗಿರುವನು. ಆದರಲ್ಲಿ ಯಾವನಿಗೆ ಮೊದಲು ಈ ಜನ್ಮದಲ್ಲಿ ದೇವತಾ ಉಪಾಸನಾ ಅಥವಾ ಯೋಗಾಭ್ಯಾಸ ಮಾರ್ಗದಿಂದ ಜ್ಞಾನದ ಪ್ರಾಪ್ತಿಯಾಗಿರುವದೋ ಆ ಜ್ಞಾನೀ ಕೃತೋಪಾಸಕನೆನಿಸಿಕೊಳ್ಳುವನು. ಹ್ಯಾಗಂದರೆ, ರಾಜಾಶಿಖಿಧ್ವಜ ಶುಕ ದೇವಾದಿಗಳಂತೆ ಮತ್ತು ಯಾವನಿಗೆ ಕೇವಲ ಯಜ್ಞಾದಿಯಾದ ನಿಷ್ಕಾಮಕರ್ಮಗಳಿಂದ ಅಂತಃಕರಣದ ಶುದ್ಧಿಯಾಗಿ ಆ ಮಾರ್ಗದಿಂ ಜ್ಞಾನದ ಪ್ರಾಪ್ತಿಯಾಗಿರುವದೋ ಆಜ್ಞಾನಿ ಅಕೃತೋಪಾಸಕನೆನ್ನಲ್ಪಡುವನು. ಅದೆಂತೆಂದರೆ-ರಾಜಾಜನಕ ಅರ್ಜುನಾದಿಗಳಂತೆ ಅದರಲ್ಲಿ ಯಾವನಿಗಾದರೆ ಕೃತೋಪಾಸನವಿರುವದೋ ಅವನಿಗಾದರೂ ಚಿತ್ತವೃತ್ತಿಗಳ ನಿರೋಧಪ್ರಥಮದಿಂದಲೇ ಸಿದ್ಧವಾಗಿರುವದು. ಆದ್ದರಿಂದವನು ಅನಾಯಾಸವಾಗಿ ಜ್ಞಾನಪ್ರಾಪ್ತಿಯಾದನಂತರ ಜೀವನ್ಮುಕ್ತಿಯ ಸುಖದ ಅನುಭವವಂ ಮಾಡುತ್ತಿರುವನು. ಎಂತೆಂದರೆ- ಶುಕ ದೇವಾದಿಗಳು ಮಾಡಿದಂತೆ ಇನ್ನು ಯಾವ ಅಕೃತೋಪಾಸಕನಿರುವನೋ

---

೧ ವಿಕಲ್ಪದಿಂದ ನಿದ್ರಾಸ್ಮೃತಿವೃತ್ತಿಗಳನ್ನು ಗ್ರಹಿಸಿಕೊಳ್ಳತಕ್ಕದ್ದು. ೨ ಪತಂಜಲಿ ಮುನಿಯು ಈ ಚಿತ್ತದ ವೃತ್ತಿಗಳ ಸ್ವರೂಪವನ್ನು ಅವುಗಳ ನಿರೋಧಕ್ರಮವನ್ನು ಯೋಗಸೂತ್ರದಲ್ಲಿ ಬರಿಯಲ್ಪಟ್ಟಿರುವರು. ಅವುಗಳಿಗೆ ಅರ್ಥರೂಪವಾಗಿ ಭೋಜಮಹಾರಾಜನಿಂದ ವೃತ್ತಿಯೂ ಮಾಡಲ್ಪಟ್ಟಿರುವದು. ಇಚ್ಛೆಯುಳ್ಳವರು ಅದನ್ನು ನೋಡಬಹುದು. ಇಲ್ಲಿ ಕೇವಲ ವಿಚಾರವೇ ಮುಖ್ಯವಾಗಿರುವದ್ದರಿಂದ ಅವುಗಳನ್ನು ಇಲ್ಲಿ ವಿವರಿಸಲಿಲ್ಲ.

ಅವರಿಗಾದರೂ ಜ್ಞಾನವಾದಬಳಿಕ ಜೀವನ್ಮುಕ್ತಿಯ ಸುಖಪ್ರಾಪ್ತಿಗೋಸುಗ ಅವಶ್ಯವಾಗಿ ಚಿತ್ತವೃತ್ತಿಗಳ ನಿರೋಧಪಡಿಸಲು ಅಭ್ಯಾಸ ಮಾಡಬೇಕಾದದ್ದು ಯೋಗ್ಯವು ಈ ಕಾರಣದಿಂದ ಶ್ರುತಿಸ್ಮೃತಿಗಳಲ್ಲಿ ವಿದ್ವತ್ ಸನ್ಯಾಸದ ವಿಧಾನ ಹೇಳಲ್ಪಟ್ಟಿರುವದು ಯಾವ ಜ್ಞಾನವಾದನಂತರ ಯಾವದೂ ಕರ್ತವ್ಯವಿಲ್ಲದಿದ್ದರೆ ವಿದ್ವತ್ ಸನ್ಯಾಸದ ಯೇನು ಪ್ರಯೋಜನವಿದ್ದೀತು ? ಮತ್ತು ಯಾಜ್ಞವಲ್ಕ್ಯಾದಿಗಳು ಜ್ಞಾನವಾದನಂತರ ಧಾರಣವು ಮಾಡಿರುವರು. ಈ ವಾರ್ತೆಯು ಬೃಹದಾರಣ್ಯಕೋಪನಿಷತ್ತಿನಲ್ಲಿ ಪ್ರಸಿದ್ಧವಾಗಿರುವದು ಇಷ್ಟೇ ಅಲ್ಲ. ಜ್ಞಾನದ ಸಪ್ತಭೂಮಿಕೆಗಳು ವೇದಾಂತಶಾಸ್ತ್ರದಲ್ಲಿ ವರ್ಣಿಸಲ್ಪಟ್ಟಿರುವದು. ಅದರಲ್ಲಿ ಜ್ಞಾನದ ಪ್ರಾಪ್ತಿಯಾದರೋ ಸತ್ವಾಪತ್ತಿನಾಮ ಉಳ್ಳ ಚತುರ್ಥಭೂಮಿಕೆಯಲ್ಲಿಯೇ ಉಂಟಾಗಿರುವದು. ಮತ್ತು ಯಾರಿಗಾದರೂ ಅದರ ಅನಂತರ ಯಾವ ಕರ್ತವ್ಯವೂ ಇಲ್ಲವಾದರೆ ಒಳಿಕ ಮೇಲಿನ ಮೂರು ಭೂಮಿಕೆಯ ವಿಧಾನವಂ ಹೇಳುವದಕ್ಕೆ ಯೇನು ಪ್ರಯೋಜನವಿದ್ದೀತು. ಆದಕಾರಣ ಇತ್ಯಾದಿ ವಾರ್ತೆಗಳಿಂದ ಈ ನಿಶ್ಚಯವಾಗಿರುವದು. ಯೇನಂದರೆ,- ಜ್ಞಾನವಾದನಂತರವೂ ಅಭ್ಯಾಸ ಕರ್ತವ್ಯವಿರುವದು. ಮತ್ತು ಜ್ಞಾನವಾದ ಅನಂತರ ಅಭ್ಯಾಸ ಮಾಡುವದ್ದರಿಂದ ಮೊದಲು ಶ್ರವಣಾದಿಗಳಿಂದ ಯಾವ ಸಾಮಾನ್ಯ ಜ್ಞಾನವಾಗಿರುವದೋ ಅದಕ್ಕೆ ದೃಢತೆ ಯುಂಟಾಗುವದು. ಯಾವ ಶ್ರವಣ ಮತ್ತು ಮನನಮಾತ್ರದಿಂದಲೇ ದೃಢಜ್ಞಾನವಾಗುವದಾದರೆ ಸಮಾಧಿಯ ಪ್ರಥಮಾವಸ್ಥಾರೂಪವಾದ ಯಾವ ನಿಧಿಧ್ಯಾಸವಿರುವದೋ ಅದಕ್ಕೆ ಸರ್ವ ವೇದಾಂತ ಶಾಸ್ತ್ರಗಳಲ್ಲಿ ಯಾತಕ್ಕಾಗಿ ವಿಧಾನ ಮಾಡಲ್ಪಟ್ಟಿರುವದು? ಇಷ್ಟೇ ಅಲ್ಲ. ಶ್ರೀಕೃಷ್ಣ ಭಗವಂತನಮುಖದಿಂದ ಸಂಪೂರ್ಣವಾಗಿ ಗೀತಾಶ್ರವಣವಂ ಮಾಡಿ, ಅಂತದಲ್ಲಿ ತನ್ನ ಮುಖದಿಂದಲೇ ಅರ್ಜುನನು ಹೇಳಿರುವನು. "ನಷ್ಟೋಮೋಹಃಸ್ಮೃತಿರ್ಲಬ್ಧಾ ತ್ವತ್ಪ್ರಸಾದಾನ್ಮಯಾಚ್ಯುತ,, ಎಲೈ ಅಚ್ಯುತ೨ ತನೇ, ನಿನ್ನ ಪ್ರಸಾದದಿಂದ ಈಗ ನನ್ನ ಅಜ್ಞಾನವು ನಷ್ಟವಾಗಿ ಹೋದುದು. ಮತ್ತು ನಾನು ತನ್ನ ಸ್ವರೂಪದ ಸ್ಮೃತಿರೂಪವೆಂಬ ಯಾವ ಜ್ಞಾನ

೨. ಚ್ಯುತವೆಂದರೆ ನಷ್ಟ, ಕೇಡು, ಅಥವಾ ನಾಶ, ಇವುಗಳಿಲ್ಲದ್ದರಿಂದ ಅಚ್ಯುತನು.

ವುಂಟೋ ಅದನ್ನು ಪಡದಿರುವೆನು ಎಂದು. ಮತ್ತು ಮರಳಿ ಅಲ್ಲಿಯೇ ಮಹಾಭಾರತದ ಅಶ್ವಮೇಧಪರ್ವದಲ್ಲಿ ಪುನಃ ಅರ್ಜುನನು ಹೇಳಿದ್ದೇನಂದರೆ,—ಎಲೈ ಭಗವಂತನೇ, ನೀವದನ್ನು ಯುದ್ಧಭೂಮಿಯಲ್ಲಿತಾವು ನನ್ನಂ ಕುರಿತು ಜ್ಞಾನೋಪದೇಶ ಮಾಡಿದ್ದಿರೋ ಅದೆಲ್ಲವನ್ನೂ ನಾನು ಯುದ್ಧಾದಿ ವ್ಯವಹಾರಗಳಲ್ಲಾಸಕ್ತನಾದ್ದರಿಂದ ಈಗ ಮರತುಹೋಗಿರುವೆನು. ಆದ್ದರಿಂದ ಈಗ ನನ್ನಂ ಕುರಿತು ಪುನಃ ಉಪದೇಶವಂ ಮಾಡಿ ಎಂದನು. ಹೀಗೆಂದಬಳಿಕ ಅಲ್ಲಿಯೇ ಭಗವಂತನು ಪುನಃ ಅವನಂ ಕುರಿತು ಉತ್ತರ ಗೀತೆಯ ಉಪದೇಶವಂ ಮಾಡಿದನು. ಹಾಗೆಯೇ ಯಾಜ್ಞವಲ್ಕ್ಯ ಸಂಹಿತೆಯಲ್ಲಿ ಒಂದಾವೃತ್ತಿ ಉಪದೇಶ ಮರತುಹೋದ್ದರಿಂದ ಗಾರ್ಗಿಯಂ ಕುರಿತು ಯಾಜ್ಞವಲ್ಕ್ಯರು ಪುನಃ ಎರಡನೆ ಆವೃತ್ತಿ ಉಪದೇಶ ಮಾಡಿರುವರು. ಅದರಂತೆಯೆ ವ್ಯಾಸರು ಶುಕದೇವನಂ ಕುರಿತು ಎರಡಾವೃತ್ತಿ ಉಪದೇಶ ಮಾಡಿದರು. ಆದರೂ ದೃಢವಾಗಲಿಲ್ಲ. ಪುನಃ ಮೂರನೆ ಆವೃತ್ತಿ ಜನಕರಾಯನು ಉಪದೇಶ ಮಾಡಿದನು. ಆದಕಾರಣ ಇವೆ ಮೊದಲಾದ ವಾರ್ತೆಗಳಿಂದ ನಿಶ್ಚಯವಾಗುವದೇನಂದರೆ,-ಅಭ್ಯಾಸದ ವಿನಃ ಉತ್ಪನ್ನವಾದರೂ ಜ್ಞಾನವು ಲುಪ್ತವಾಗಿಹೋಗುವದು. ಹಾಗೆ ಯೋಗವಾಸಿಷ್ಠದ ನಿರ್ವಾಣ ಪ್ರಕರಣದಲ್ಲಿ ವಸಿಷ್ಠಮುನಿಯೂ ಕೂಡ ಹೇಳಿರುವನು. "ಅವಿದ್ಯೋಪಶಮಸ್ತ್ವತ್ರ ಪ್ರಜಾತೋಪಿ ಭವತಾಮಿಹ ॥ ಅಭ್ಯಾಸೇನ ವಿನಾಸಾಧೋನಸಿದ್ಧಿಮುಪಗಚ್ಛತಿ " ಅರ್ಥ—ಹೇಸಾಧೋ-ಅಂದರೆ,-ಸರ್ವಪುರುಷರಲ್ಲಿ ಶ್ರೇಷ್ಠನಾದ ರಾಮಚಂದ್ರನೆ ನನ್ನ ಉಪದೇಶದಿಂದ ಹ್ಯಾಗೂ ನಿನ್ನ ಅವಿದ್ಯೆಯು ನಾಶವಾಗಿಯೇ ಹೋಗಿರುವದು. ಆದಾಗ್ಯೂ ಅಭ್ಯಾಸದವಿನಃ ಅದರ ಯಥಾವತ್ ಸಿದ್ಧಿ ಆಗಲರಿಯದು ಎಂದು. ಹಾಗೆ ಅಥರ್ವವೇದದ ಪರಮ ಹಂಸೋಪನಿಷತ್ತಿನಲ್ಲೂ ಒರೆಯಲ್ಪಟ್ಟಿರುವದು. "ಅಥಯೋಗಿನಾಂ ಪರಮ ಹಂಸಾನಾಂ ಕೋಯಂಮಾರ್ಗಃ, ಅರ್ಥ-ಒಂದು ಸಮಯದಲ್ಲಿ ನಾರದರು ಬ್ರಹ್ಮನ ಸಮೀಪಕ್ಕೆ ಹೋಗಿ ಪ್ರಶ್ನೆಯಂ ಮಾಡಿದ್ದೇನಂದರೆ,-ಎಲೈ ಭಗವಂತನೇ! ಯಾವಪುರುಷನು ಯೋಗಿ ಅಥವಾ ಪರಮ ಹಂಸನಾಗಿರುವನೋ ಅವನಿಗೆ ಯೇನು ಮಾರ್ಗವಿರುವದು ಎಂದು. ಆದ್ದರಿಂದ ಈ ಶ್ರುತಿಯಲ್ಲಿ ಪರಮ ಹಂಸ ಮತ್ತು ಯೋಗಿ ಈ ಎ

ರಡು ಪದಗಳಿಗೆ ಒಂದೇ ವಿಧಾನ ಮಾಡಲ್ಪಟ್ಟಿರುವದು. ಆದಕಾರಣ ಎಲೈ ಶಿಷ್ಯನೆ! ಇತ್ಯಾದಿ ವಾರ್ತೆಗಳಿಂದ ಇಲ್ಲಿ ಸಿದ್ಧವಾದದ್ದೇನಂದರೆ,- ಅಕೃತೋಪಾಸನ ಪುರುಷನಿಗೆ ಜ್ಞಾನವಾದ ನಂತರವೂ ಚಿತ್ತವೃತ್ತಿಗಳ ನಿರೋಧ ಅವಶ್ಯ ಕರ್ತವ್ಯವಾಗಿರುವದು. ಮತ್ತು ಈ ಸಮುದಲ್ಲಾದರೋ ಪ್ರಾಯಃ ಅಕೃತೋಪಾಸಕನೇ ಜ್ಞಾನಿಯಾಗುವನು. ಈ ಕಾರಣದಿಂದ ಆ ಸರ್ವವನ್ನು ಅಭ್ಯಾಸಮಾಡಲು ಯೋಗ್ಯವು. ॥೯೪॥

ಅ—ಈ ಪ್ರಕಾರವಾಗಿ ಚಿತ್ತ ವೃತ್ತಿಗಳ ನಿರೋಧದ ಅವಶ್ಯಕತೆಯನ್ನು ಕೇಳಿ ಈಗ ಅದರ ನಿರೋಧ ಪಡಿಸುವಂಥಾ ಉಪಾಯವಂ ತಿಳಿಯಲೋಸುಗ ಪುನಃ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

…ಶಿಷ್ಯ ಉವಾಚ—

ಇಮಾಧ್ವಜಾಗ್ರಾಗ್ನಿಶಿಖಾತಟಿತ್ಪ್ರಭಾ ।
ನದೀರಯಾಶ್ವತ್ಥದಲಾಲಿಚಂಚಲಾಃ ॥
ಕಥಂನಿರುದ್ಧಾನಸುಚಿತ್ತವೃತ್ತಯೋ ।
ಭವಂತಿತನ್ಮೇವದಯೋಗಿನಾಂಪತೇ ॥ ೯೫ ॥

ಟೀಕಾ—ಇಮಾ ಇತಿ ॥ ಯೆಲೈ (ಯೋಗಿನಾಂಪತೇ) ಅಂದರೆ,- ಸರ್ವಯೋಗಿಗಳಲ್ಲಿ ಶಿರೋಮಣಿಯಾದ ಗುರುವೆ ತಾವು ಹೇಳಿದ್ದೇನಂದರೆ,-ಚಿತ್ತದ ವೃತ್ತಿಗಳ ನಿರೋಧ ಅವಶ್ಯ ಕರ್ತವ್ಯವೆಂದು ಆದರೆ (ಇಮಾ) ಅಂದರೆ,-ಈ ಯಾವ ಚಿತ್ತದ ವೃತ್ತಿಗಳುಂಟೋ ಅದಾದರೂ ಹ್ಯಾಗೆ ಧ್ವಜದವಸ್ತ್ರದ ಅಗ್ರ[೧] ಭಾಗವು ಯಾವಾಗಲೂ ವಾಯುವಿನಿಂದ ಚಲಿಸುತ್ತಿರುವದೋ ಮತ್ತು ಹ್ಯಾಗೆ ಅಗ್ನಿಯಶಿಖೆಯು ಸರ್ವದಾ ಊರ್ಧ್ವಮುಖವಾಗಿ ಕ್ಷಣ ಕ್ಷಣದಲ್ಲಿ ನಡಿಯುತ್ತಿರುವದೋ ಇನ್ನು ಹ್ಯಾಗೆ (ತಟಿತ್ಪ್ರಭಾ) ಅಂದರೆ,-ವರ್ಷಾಕಾಲದೋಳ್ ಆಕಾಶದಲ್ಲಿ ಮಿಂಚಿನಪ್ರಭೆಯು ಕ್ಷಣಕ್ಷಣದಲ್ಲಿ ಚಂಚಲವಾಗುತ್ತಿರುವದೋ ಮತ್ತು ಹ್ಯಾಗೆ (ನದೀರಯ) ಅಂದರೆ,-ಗಂಗಾದಿ ಮಹಾನದಿಗಳ ವೇಗವು ಸರ್ವದಾ ಓಡುತ್ತಿರುವದೋ ಇನ್ನು ಹ್ಯಾಗೆ (ಅಶ್ವತ್ಥದಲ) ಅಂದರೆ,-ಅರಳೀ ಮರದ ಎಲೆಗಳು ಸರ್ವದಾ ಚಲಾಯಮಾನವಾಗುತ್ತಿರುವದೋ ಮತ್ತು ಹ್ಯಾಗೆ (ಅಲಿಃ) ಅಂದರೆ,-

೧, ಬಾವುಟದ ಬಟ್ಟೆಯ ತುದಿ,

ಭ್ರಮರವು. ಒಂದು ಪುಷ್ಪದಿಂದ ಮತ್ತೊಂದರಮೇಲೂ, ಆದರಿಂದ ಇನ್ನೊಂದರಮೇಲೂ ಸರ್ವದಾ ಹಾರಾಡುತ್ತಿರುವದೋ ಹಾಗೆಯೇ (ಚಂಚಲಾಃ) ಅಂದರೆ,-ಈ ನನ್ನ ಚಿತ್ತದ ವೃತ್ತಿಗಳು ಯಾವಾಗೂ ಚಂಚಲಿಸುತ್ತಲಿರುವವು. ಅದರಿಂದೆಲೈ ಭಗವಂತನೇ! ಈ ಚಿತ್ತದ ವೃತ್ತಿಗಳಿಗೆ (ಕಥಂ) ಅಂದರೆ,-ಯಾವ ಉಪಾಯದಿಂದ ನಿರೋಧಪಡಿಸಲಾಗುವದೋ ಅದನ್ನು ಕೃಪೆಯಿಂದ ನನ್ನಂ ಕುರಿತು ಅಪ್ಪಣೆ ಕೊಡಿಸಬೇಕು ಎಂದನು. ... ... ||೯೫||

ಅ|| ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ಗುರು ಅದಕ್ಕೆ ದೃಷ್ಟಾಂತಸಹಿತವಾಗಿ ಉತ್ತರವಂ ನಿರೂಪಿಸುತ್ತಾರೆ.

—ಗುರುರುವಾಚ—

ಯಥಾಪ್ರಮತ್ತಾವನದಂತಿನಃಕ್ವಚಿತ್ |
ಪ್ರಯಾಂತ್ಯಪಾಯೇನವಿನಾನನಿಗ್ರಹಮ್ ||
ತಥೈವಯೋಗೇನವಿನಾನವೃತ್ತಯೋ |
ನಿರೋಧನಂಯಾಂತಿತತಸ್ತಮಭ್ಯಸೇತ್|| ||೯೬||

ಟೀಕಾ|| ಯಥೇತಿ—ಎಲೈ ಶಿಷ್ಯನೇ! (ಯಥಾಪ್ರಮತ್ತಾಃ) ಅಂದರೆ,-ಹ್ಯಾಗೆ ಮದದಿಂದ ಪ್ರಮತ್ತವಾಗಿ ವಿಂಧ್ಯಾಚಲಾದಿ ಪರ್ವತಗಳ ವನಗಳಲ್ಲಿ ಚರಿಸುವಂಥಾ ದುಷ್ಟವಾದ ಆನೆಯು ಖಾ೧ತ ಅಂಕು೨ಶಾದಿ ಉಪಾಯವಂ ಮಾಡುವದರಿಂದಲ್ಲದೇ ಒಂದು ವ್ಯಾಳೆಯಲ್ಲಾದರೂ ನಿಗ್ರಹಕ್ಕೆ ಪ್ರಾಪ್ತವಾಗುವದಿಲ್ಲವೋ ಹಾಗೆಯೇ ಸಂಸಾರರೂಪವಾದ ವನದೊಳಗೆ ಚರಿಸುತ್ತಿರುವ ಯಾವ ದುಷ್ಟಚಿತ್ತ ವೃತ್ತಿಗಳುಂಟೋ ಅವು (ಯೋಗೇನವಿನಾ) ಅಂದರೆ,-ಯೋಗಾಭ್ಯಾಸದ ವಿನಃ ನಿರೋಧಕ್ಕೆ ಪ್ರಾಪ್ತವಾಗುವದಿಲ್ಲ. ಈ ವಿಷಯವು ಯೋಗವಾಸಿಷ್ಠದ ನಿರ್ವಾಣಪ್ರಕರಣದಲ್ಲಿಯೂ ವರ್ಣಿಸಲ್ಪಟ್ಟಿರುವದು. “ಅಂಕುಶೇನವಿನಾಮತ್ತೋಯಥಾದುಷ್ಟಮತಂಗಜಃ| ವಿಜೇತುಂಶಕ್ಯತೇನೈವ ತಥಾಯುಕ್ತ್ಯಾವಿನಾಮನಃ||” ಅರ್ಥ|| ಎಲೈ ರಾಮಚಂದ್ರನೇ, ಹ್ಯಾಗೆ ಮತ್ತವಾದ

---

೧ ಖಾತಂ ಎಂದು ಪದ ಇದಕ್ಕೆ ಚದರವಾದ ಕೊಳವೆಂತಲೂ, ಅಥವಾ ಕಂದಕವೆಂತಲೂ, ಕೋಟೆ ಎಂತಲೂ, ಗೋದೆ ಎಂತಲೂ, ಕೋಶಗಳಲ್ಲಿ ಅರ್ಥ ಮಾಡಿರುವರು. ೨. ಆಪಿ ಶಬ್ದದಿಂದ ಕಪ್ಪಲು, ಸರಪಣಿಗಳು, ಹಗ್ಗಗೂಟಗಳನ್ನೂ ಗ್ರಹಿಸತಕ್ಕದ್ದು.

ದುಷ್ಟಗಜವು ಅಂಕುಶದ ವಿನಃ ವಶೀಭೂತವಾಗುವದಿಲ್ಲವೋ ಹಾಗೆಯೇ ಈ ವಿಷಯ ಭೋಗರೂಪವಾದವುದರಿಂದವುತ್ತವಾದ ಮನವು ಯೋಗ ಯುಕ್ತಿಯಿಂ ವಿನಃ ಜಯುವಾಡಲಾಗುವದಿಲ್ಲವೆಂದು ವಶಿಷ್ಠರು ನಿರೂಪಿಸಿರುವರು. ಆದಕಾರಣ ಎಲೈ ಶಿಷ್ಯನೇ,ಯಾವನಾನೊಬ್ಬ ಪುರುಷನು ಚಿತ್ತದ ವೃತ್ತಿಗಳನ್ನು ನಿರೋಧ ಮಾಡಬೇಕಾದರೆ, ಅವನು (ತಮಭ್ಯಸೇತ್) ಅಂದರೆ,-ಆ ಯೋಗವನ್ನೇ ಅಭ್ಯಾಸಿಸಬೇಕು ಎಂದರು ||೯೬||

ಅ|| ಈ ಪ್ರಕಾರವಾಗಿ ಚಿತ್ತದ ವೃತ್ತಿಗಳನ್ನು ನಿರೋಧಪಡಿಸುವಲ್ಲಿ ಯೋಗಾಭ್ಯಾಸದ ಮುಖ್ಯ ಕಾರಣವನ್ನು ಕೇಳಿ ಈಗ ಆ ಯೋಗದ ಸ್ವರೂಪವಂ ತಿಳಿಯಲೋಸುಗ ಪುನಃಶಿಷ್ಯನು ಪ್ರಶ್ನೆಯಂಮಾಡುತ್ತಾನೆ.

— ಶಿಷ್ಯ ಉವಾಚ —

ಕಿಂಲಕ್ಷಣಂತಸ್ಯವದಂತಿಯೋಗಿನೊ ।
ಯೋಗಸ್ಯಚಾಂಗಾನಿಕಿಯಂತಿಸಂತಿವೈ ॥
ನಿರ್ವಿಘ್ನಮಾಯಾತಿಕಥಂಚಸಿದ್ಧತಾಂ ।
ಯೋಗೀಂದ್ರಮೆಬ್ರೂಹಿಸಮಾಸತಃಸ್ಫುಟಮ್।೯೭॥

ಟೀಕಾ|| ಕಿಂಲಕ್ಷಣಮಿತಿ—ಎಲೈ ಯೋಗೀಂದ್ರ-ಅಂದರೆ,-ಸರ್ವ ಯೋಗಿಗಳಲ್ಲಿ ರಾಜ, ಅರ್ಥಾತ್ ಸರ್ವ ಯೋಗವಿದ್ಯಗಳನ್ನು ತಿಳಿದಂಥಾವರಲ್ಲಿ ಶ್ರೇಷ್ಠನಾದ ಗುರುವೇ, ತಾವು ಹೇಳಿದ್ದೇನಂದರೆ,-ಯೋಗಾಭ್ಯಾಸದ ವಿನಃ ಚಿತ್ತದ ವೃತ್ತಿಗಳ ನಿರೋಧವಾಗುವದಿಲ್ಲವೆಂದು. ಆದರೆ, (ತಸ್ಯ) ಅಂದರೆ,-ಆ ಯೋಗಕ್ಕೆ ಯೋಗೀಪುರುಷರು ಯೇನು ಲಕ್ಷಣವೆಂದು ವರ್ಣನೇ ಮಾಡುತ್ತಿರುವರೋ ಮತ್ತು ಅದಕ್ಕೆ (ಅಂಗಾನಿಕಿಯಂತಿಸಂತಿ) ಅಂದರೆ,-ಎಷ್ಟು ಅಂಗಗಳಿರುವವೋ ಹಾಗೆ ಆ ಯೋಗವು (ಕಥಂ) ಅಂದರೆ,-ಹ್ಯಾಗೆ ಉಪಾಯದಿಂದ ಜಾಗ್ರತೆಯಲ್ಲಿ ನಿರ್ವಿಘ್ನವಾಗಿ ಸಿದ್ಧಿಯಂ ಪೊಂದುತ್ತಿರುವದೋ ಹಾಗೆ ಎಲೈ ಭಗವಂತನೇ, ಈ ಸರ್ವ ವಿಷಯವನ್ನು ಕೃಪೆಯಿಂದ (ಸಮಾಸತಃ) ಅಂದರೆ,-ಸಂಕ್ಷೇಪವಾಗಿ ನನ್ನಂಕುರಿತು ಅಪ್ಪಣೇ ಕೊಡಿಸಬೇಕು ಎಂದನು. ||೯೭||

ಅ|| ಈ ಪ್ರಕಾರದಿಂದ ಯೋಗವಿಷಯುಕವಾದ ಶಿಷ್ಯನ ಮೂರು ಪ್ರಶ್ನೆಗಳನ್ನು ಕೇಳಿ, ಈಗ ಅವುಗಳಿಗೆ ಒಂದು ಶ್ಲೋಕದಿಂದಲೇ ಗುರು ಉತ್ತರವಂ ನಿರೂಪಿಸುತ್ತಾರೆ.

—॥ ಗುರುರುವಾಚ ॥—

ಸಂತ್ಯಜ್ಯಸಂಕಲ್ಪವಿಕಲ್ಪಜಾಲಕಂ ।
ಯತ್ರಸ್ಥಿತಿಂಯಾತಿಮನೋಂತರಾತ್ಮನಿ ।
ಯೋಗಂತಮಷ್ಟಾಂಗಮವೇಹಿಸದ್ಧ್ರುವಂ ।
ವೈರಾಗ್ಯತೋಭ್ಯಾಸಬಲಾಚ್ಚಸಿದ್ಧ್ಯತಿ । ॥೯೪॥

ಟೀಕಾ॥ ಸಂತ್ಯಜ್ಯೇತಿ—ಎಲೈ ಶಿಷ್ಯನೇ, (ಯತ್ರ) ಅಂದರೆ,-ಯಾವ ಕಾಲದಲ್ಲಿ ಯಮನಿಯಮಾದಿಯಾದ ಯೋಗದ ಅಂಗಗಳನ್ನು ದೀರ್ಘಕಾಲಪರ್ಯಂತ ಅಭ್ಯಾಸ ಮಾಡುವದ್ದರಿಂದ ಈ ಸಂಕಲ್ಪವಿಕಲ್ಪಾತ್ಮಕವೆನಿಪ ಯಾವ ಮನ ಉಂಟೋ ಅದು ತನ್ನ ಎಲ್ಲಾ ಸಂಕಲ್ಪ ವಿಕಲ್ಪಗಳನ್ನು (ಸಂತ್ಯಜ್ಯ) ಅಂದರೆ,-ಪರಿತ್ಯಾಗ ಮಾಡಿ, (ಅಂತರಾತ್ಮಿ) ಯಾವ ಜ್ಯೋತಿಸ್ವರೂಪವಾಗಿ ತನ್ನ ಪ್ರತ್ಯಗಾತ್ಮನಿರುವನೋ ಅವನಲ್ಲಿ ನಿಶ್ಚಲಸ್ಥಿತಿಯಂ ಪಡೆವುತ್ತಿರುವದೋ ಅದನ್ನೇ ನೀನು ಯೋಗ[೧]ವೆಂದು ತಿಳಿ. ಅಂದರೆ,-ಸರ್ವ ಸಂಕಲ್ಪಗಳನ್ನು ಪರಿತ್ಯಾಗ ಮಾಡಿ, ಅಂತರಾತ್ಮನಲ್ಲಿ ಯಾವ ಮನದ ಏಕಾಗ್ರಸ್ಥಿತಿಯಾಗತಕ್ಕದ್ದೋ ಅದೇ ಯೋಗದ ಲಕ್ಷಣವಾಗಿರುವದು. ಹಾಗೆ ಈ ವಾರ್ತೆಯು ಯೋಗಸೂತ್ರದಲ್ಲಿ ಪತಂಜಲಿ ಋಷಿಯೂ ಪ್ರತಿಪಾದನ ಮಾಡಿರುವನು. “ಯೋಗಶ್ಚಿತ್ತವೃತ್ತಿನಿರೋಧಃ„ ಅರ್ಥ॥ ಪ್ರಮಾಣವಿಪರ್ಯಯಾದಿಗಳಾದ ಯಾವ ಚಿತ್ತದ ವೃತ್ತಿಗಳುಂಟೋ ಅವುಗಳನ್ನು ಅಭ್ಯಾಸದಿಂದ ಯಾವ ನಿರೋಧ ಮಾಡತಕ್ಕದ್ದೋ ಅದರ ನಾಮ-ಯೋಗವೆನ್ನಲ್ಪಡುವದು. ಈ ಹೇಳಿದ ಸೂತ್ರದಲ್ಲಿ ಪತಂಜಲಿಯು ಸರ್ವ ಶಬ್ದದ ಗ್ರಹಣವಂ ಮಾಡಲಿಲ್ಲ. ಆದ್ದರಿಂದ ಕಿಂಚಿತ್ ವೃತ್ತಿಸಹಿತವಾದ ಯಾವ ಸವಿಕಲ್ಪ ಸಮಾಧಿ ಇರುವದೋ ಅದೇ ಯೋಗವೆನಿಸಿಕೊಳ್ಳುವದು. ಮತ್ತು ಯಾವದರಲ್ಲಿ ಯಲ್ಲಾವೃತ್ತಿಗಳೂ ಸರ್ವವಿಧದಿಂದಲೂ ನಿರೋಧವಾಗುತ್ತಿರುವದೋ ಅದು ನಿರ್ವಿಕಲ್ಪ ಸಮಾಧಿ ಎನ್ನಲ್ಪಡುವದು. ಅದೇ ಯೋಗಶಬ್ದದ ಮುಖ್ಯಾರ್ಥವಾಗಿರುವದು. ಈ ಪ್ರಕಾರದಿಂದ ಪ್ರಥಮ ಪ್ರಶ್ನೆಗೆ ಉತ್ತರ

---

೧. ಅವಾಙ್ಮನಸಗೋಚರವಾದ ವಸ್ತುವಿನಲ್ಲಿ ಅಗೋಚರವಾದ ಅಂತರ ಪ್ರಯತ್ನದಿಂದ ಚಿತ್ತ ವಿಶ್ರಾಂತಿಯಂ ಪೊಂದುವದಕ್ಕೆ ಯೋಗವೆಂದಲ್ಲವೇ ಮಹಾ ಪುರುಷರ ನಿಶ್ಚಯವು.

ವಂ ನಿರೂಪಿಸಿ, ಈಗ ಆ ಯೋಗಕ್ಕೆ ಎಷ್ಟು ಅಂಗಗಳಿರುವವು ? ಎಂಬ ಈ ಯಾವ ಶಿಷ್ಯನ ಎರಡನೇ ಪ್ರಶ್ನೆ ಇರುವದೋ ಅದಕ್ಕೆ ಉತ್ತರವಂ ಪೇಳುತ್ತಾರೆ. (ತಮಷ್ಟಾಂಗಂ) ಅಂದರೆ,-ಎಲೈ ಶಿಷ್ಯನೇ, ಆ ಯೋಗವನ್ನು ನೀನು ಅಷ್ಟಾಂಗ ಉಳ್ಳದ್ದೆಂದು ತಿಳಿ.ಆ ಅಷ್ಟಾಂಗಗಳನ್ನೂ ಕೂಡ ಪತಂಜಲಿಮುನಿಯೇ ಪ್ರಕಟಪಡಿಸಿರುವನು. "ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರ ಧಾರಣಾಧ್ಯಾನಸಮಾಧಯೋಷ್ಟಾವಂಗಾನಿ" ಅರ್ಥ॥ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಮತ್ತು ಸಮಾಧಿ ಈಪ್ರಕಾರವಾಗಿ ಯೋಗದ ಅಷ್ಟಾಂಗ ವಿರುವದು. ಅದರಲ್ಲಿ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಶೌಚ, ಆರ್ಜವ, ಕ್ಷಮಾ, ಧೈರ್ಯ, ಮಿತಾಹಾರ, ದಯಾ ಈ ಭೇದದಿಂದ ಯ ೩ ಮ ಹತ್ತುಪ್ರಕಾರವಾಗಿರುವದು. ಹಾಗೆ ಜಪ, ತಪ, ದಾನ, ವೇದಾಂತಶ್ರವಣ, ಆಸ್ತಿಕ್ಯ, ವ್ರತ, ಈಶ್ವರಪೂಜನ, ಸಂತೋಷ, ಶ್ರದ್ಧಾ, ಲಜ್ಜಾ ಈ ಭೇದದಿಂದ ನಿ ೪ ಯ ಮ ವೂ ಹ ತ್ತು ಪ್ರ ಕಾ ರ ವಾ ದ್ದಾ ಗಿ ರು ವ ದು. ಹಾ ಗೆ ಆಸನವೆಂಬುದು ಎಲ್ಲಾ ಒಟ್ಟುಗೂಡಿ ಎಂಭತ್ತುನಾಲ್ಕು ಲಕ್ಷವಾಗಿರು

---

೨. ಈ ಯೋಗದ ಅಷ್ಟಾಂಗಗಳಾದ ಯಮನಿಯಮಾದಿಗಳು ಸಗುಣಾಷ್ಟಾಂಗವೆಂತಲೂ ನಿರ್ಗುಣಾಷ್ಟಾಂಗವೆಂತಲೂ ಎರಡುಬಗೆಯಾಗಿರುವದು. ಹಠಯೋಗದಲ್ಲಿ ಉಪಯೋಗಿಸಲ್ಪಡುವ ಈ ಅಂಗಗಳಿಗೆ ಸಗುಣಯೋಗಾಂಗವೆಂತಲೂ ರಾಜಯೋಗದಲ್ಲಿ ಉಪಯೋಗಿಸಲ್ಪಡುವ ಇವೇ ಅಂಗಗಳಿಗೆ ನಿರ್ಗುಣಯೋಗಾಂಗವೆಂತಲೂ ಹೆಸರು. ಇಲ್ಲಿ ಈ ಗ್ರಂಥಕರ್ತರಾದ ಬ್ರಹ್ಮಾನಂದಸ್ವಾಮಿಗಳು ಯಮನಿಯಮಾದಿಗಳನ್ನು ಹಠಯೋಗಪರವಾಗಿ ಸಂಕ್ಷೇಪದಿಂ ವಿವರಿಸಿರುವರು. ರಾಜಯೋಗಪರವಾಗಿ ತೇಜೋಬಿಂದೂಪನಿಷತ್ತಿನಲ್ಲಿಯೂ ತ್ರಿಶಿಖೀ ಬ್ರಾಹ್ಮಣೋಪನಿಷತ್ತಿನಲ್ಲಿಯೂ ಮತ್ತು ಶಂಕರಾಚಾರ್ಯರ ಅಪರೋಕ್ಷಾನುಭೂತಿಯಲ್ಲಿಯೂ ವಿವರಿಸಲ್ಪಟ್ಟಿರುವದು. ಆದರೆ ಇದು ವಿಚಾರಗ್ರಂಥವಾದ್ದರಿಂದ ರಾಜಯೋಗಪರವಾಗಿಯೂ ತಿಳಿಯಲಪೇಕ್ಷೆಯುಳ್ಳ ಮುಮುಕ್ಷುಗಳಿಗೋಸುಗ ಆ ಯಮಾದಿಗಳಾದ ಅಂಗಗಳನ್ನು ಅಧಿಕವಾಗಿ ವಿವರಿಸದೆ ಅದರ ಭಾವ ಮಾತ್ರ ಈ ಕೆಳಗೆ ಬರೆಯಲ್ಪಟ್ಟಿರುವದು, ೩, ಅಂದರೆ, ಯಾವ ಸಚ್ಚಿದಾನಂದ ಸ್ವರೂಪವಾದ ವಸ್ತುವಿನ ಸಿದ್ಧಿಗೋಸುಗ ದೇಹೇಂದ್ರಿಯಗಳಲ್ಲಿ ವೈರಾಗ್ಯ ಉಂಟಾಗತಕ್ಕದ್ದೋ ಅದನ್ನು ವಿದ್ವಾಂಸ ಜನಗಳು ಯಮವೆಂದು ಹೇಳುತ್ತಿರುವರು. ೪, ಯಾವ ಸರ್ವೋತ್ತಮವಾದ ತತ್ವದಲ್ಲಿ ನಿರಂತರ ವಿಶ್ವಾಸ ನೆಲೆಗೊಳ್ಳಲೋಸುಗ ಇತರ ಪದಾರ್ಥಗಳಲ್ಲಿನ ಅನುರಾಗವು ಬಿಡತಕ್ಕದ್ದೋ ಅದು ನಿಯಮವೆನ್ನಿಸಿಕೊಳ್ಳುವದು,

ವದು. ಅವುಗಳೊಳಗೆ ಎಂಭತ್ತು ನಾಲ್ಕು ಮುಖ್ಯವಾಗಿರುವವು ಅವು ಗಳಲ್ಲಿಯೂ ಪುನಃ ಪದ್ಮಾಸನ ಮತ್ತು ಸಿದ್ಧಾಸನ ಈವೆರಡು ಮುಖ್ಯವಾಗಿರುವವು. ಆ ಎರಡರಲ್ಲಿಯೂ ಪುನಃ ಸಿದ್ಧಾ೫ಸನವೆ ಪ್ರಧಾನವಾಗಿರುವದು. ಹಾಗೆ ರೇಚಕ, ಪೂರಕ, ಕುಂಭಕ, ಈ ಭೇದದಿಂದ ಪ್ರಾಣಾ೬ಯಾಮವು ಮೂರು ಬಗೆಯಾಗಿರುವದು. ಆದರಲ್ಲಿ ಉದರ ಗತವಾದ ವಾಯುವನ್ನು ವಾಮನಾಸಾ ಪುಟದಿಂದ ಯಾವ ಬಾಹ್ಯ ಪರಿತ್ಯಾಗ ಮಾಡತಕ್ಕದ್ದೋ ಅದರ ಹೆಸರು ರೇಚಕವೆನ್ನಲ್ಪಡುವದು. ಮತ್ತು ಪುನಃ ಆ ಬಾಹ್ಯಗತವಾದ ವಾಯುವನ್ನು ನಾಸಾಪುಟ ಅಥವಾ ಮುಖದಿಂದ ಯಾವ ಅಭ್ಯಂತರ ಆಕರ್ಷಣ ಮಾಡತಕ್ಕದ್ದೋ ಅದರ ನಾಮಪೂರಕವೆನ್ನಲ್ಪಡುವದು. ಹಾಗೆ ಬಾಹ್ಯದಿಂದ ಆಕರ್ಷಣ ಮಾಡಲ್ಪಟ್ಟ ಪ್ರಾಣ ವಾಯುವನ್ನು ಯಥಾ ಶಕ್ತಿ ಯಾವ ಉದರದಲ್ಲಿ ಸ್ತಂಭನ ಮಾಡಲ್ಪಡುವದೋ ಅದರ ಹೆಸರು ಕುಂಭಕವೆಂದು ಹೇಳಲ್ಪಡುವದು ಹಾಗೆ ಚಕ್ಷುರಾದಿಯಾದ ಇಂದ್ರಿಯಗಳನ್ನು ಸ್ವಸ್ವವಿಷಯಗಳಿಂದ ನಿರಾಕರಣ ಮಾಡಿ, ಯಾವ ಚಿತ್ತದ ಅನುಸಾರ ಸ್ಥಾಪನ ಮಾಡಲ್ಪಡುವದೋ ಅದನ್ನು ಪ್ರತ್ಯಾಹಾ೭ರವೆಂದು ಹೇಳುವರು. ಹಾಗೆ ಜಿಹ್ವೆಯ ಅಗ್ರಭಾಗ, ನಾಸಿಕೆಯ ಅಗ್ರಭಾಗ, ಭ್ರೂಗಳ ಮಧ್ಯ ಭಾಗ, ನಾಭಿ, ಚಕ್ರ ಇತ್ಯಾದಿ ಸ್ಥಾನಗಳಲ್ಲಿ ಅನ್ಯವಿಷಯಗಳಿಂದ ನಿರಾಕರಣ ಮಾಡಿ ಚಿತ್ತವನ್ನು ಪುನಃಪುನಃ ಯಾವ ಸ್ಥಾಪನ ಮಾಡಲ್ಪಡುವದೋ ಅದೇ ಧಾ೮ರಣವೆನಿಸಿಕೊಳ್ಳುವದು. ಹಾಗೆ ಆಧಾರಣೆಯುಳ್ಳ ಸ್ಥಾನದಲ್ಲಿ ಚಿತ್ತವೃತ್ತಿಗೆ ಯಾವ ತೈಲಧಾರೆಯಂತೆ ಸದೃಶ ಪ್ರವಾಹ ವಾಗತಕ್ಕದ್ದೋ ಅದು ಧ್ಯಾ೯ನವೆನ್ನಲ್ಪಡುವದು. ಹಾಗೆ ಅದೇ ಧ್ಯಾನವುಳ್ಳ ದೇಶದಲ್ಲಿ ಧ್ಯಾತಾ ಧ್ಯಾನ ಧ್ಯೇ

---

೫ ಯಾವ ವಸ್ತುವಿನಲ್ಲಿ ಸ್ಥಿತಿಯಾಗಲೋಸುಗ ಅನ್ಯ ಸರ್ವವಸ್ತುಗಳಲ್ಲಿ ಉದಾಸೀನ ಭಾವ ವುಂಟಾಗತಕ್ಕದ್ದೋ ಅದ (ಸಿದ್ಧಾಸನ) ವೆನ್ನಲ್ಪಡುವದು ೬ ಯಾವಸತ್ಯ ವಸ್ತುವಿನ ಅನುಭವಕ್ಕೋಸುಗ ಜಗತ್ತೆಲ್ಲವೂ ಮಿಥ್ಯವೆಂದು ನಿಶ್ಚಯಿಸಲ್ಪಡುವದೂ ಅದನ್ನು ಯತೀಶ್ವರರು ಪ್ರಾಣಾಯಾಮವೆಂದು ಹೇಳುವರು ೭ ಯಾವ ವಸ್ತುವಿನ ಸುಖಾನುಭವಾರ್ಥವಾಗಿ ಪ್ರಪಂಚದ ಭೋಗ್ಯ ಪದಾರ್ಥಗಳಿಂದ ಚಿತ್ತವನ್ನಂತರ ಮುಖಿಗೊಳಿಸತಕ್ಕದ್ದೋ, ಅದೇ ಪ್ರತ್ಯಾಹಾರವೆನ್ನಲ್ಪಡುವದು

೮ ಯಾವ ಸ್ಥಿತಿಯಲ್ಲಿ ನಿಶ್ಚಿತನಂತೆ ಸುಖಿಸಲೋಸುಗ ಚಿತ್ತವಂ ನಿಶ್ಚಲೀಭಾವದಲ್ಲಿರಿಸತಕ್ಕದ್ದೋ ಅದನ್ನು ಪಂಡಿತರು ಧಾರಣವೆಂದೆನ್ನುತ್ತಿರುವರು. ೯ ಯಾವ ಜ್ಞಾ

ಯು ರೂಪವಾದ ತ್ರಿಪುಟಿಯು ವಿಸ್ಮರಣ ಪೂರ್ವಕ ಕೇವಲ ಧ್ಯೇಯವಸ್ತುವಿನ ಆಕಾರವಾಗಿ ಯಾವ ಚಿತ್ತದ ಸ್ಥಿತಿಯಾಗತಕ್ಕದ್ದೋ ಅದರ ನಾಮವು ಸಮಾಧಿ ಎನ್ನಲ್ಪಡುವದು. ಇವು ಯೋಗದ ಅಷ್ಟಾಂಗಗಳ ಸಂಕ್ಷೇಪ ಲಕ್ಷಣವಾಗಿರುವದು. ಹಾಗೆ ಈ ಸರ್ವಕ್ಕೆ ಹೇತು ಲಕ್ಷಣ ಮತ್ತು ಫಲ (ಯೋಗಕಲ್ಪದ್ರುಮ) ನಾಮಕವಾದ ಪುಸ್ತಕದಲ್ಲಿ ನಾವು ವಿಸ್ತಾರ ಪೂರ್ವಕ ವರ್ಣನೆಯಂ ಮಾಡಿರುವೆವು. ಆದ್ದರಿಂದ ಯಾವ ಪುರುಷರಿಗೆ ವಿಶೇಷವಾಗಿ ನೋಡಬೇಕೆಂಬ ಇಚ್ಛೆಯುಂಟಾಗುವದೊ ಅವರು ಅದರಿಂದ ನೋಡಿಕೊಳ್ಳಬಹುದು. ಇಲ್ಲಿ ಗ್ರಂಥದ ವಿಸ್ತಾರಭಯದಿಂದ ಬರಿಯಲಿಲ್ಲ. ಈ ಪ್ರಕಾರವಾಗಿ ಎರಡನೆ ಪ್ರಶ್ನೆಯ ಉತ್ತರವಂ ನಿರೂಪಿಸಿ ಈಗ ಆಯೋಗವು ಯಾವ ಉಪಾಯದಿಂದ ನಿರ್ವಿಘ್ನವಾಗಿ ಸಿದ್ಧಿಯಂ ಪೊಂದುತ್ತಿರುವದೊ, ಎಂಬ ಈ ಯಾವ ಶಿಷ್ಯನ ಮೂರನೆ ಪ್ರಶ್ನೆಯುಂಟೊ ಅದಕ್ಕೆ ಉತ್ತರವಂ ಪೇಳುತ್ತಾರೆ. (ವೈರಾಗ್ಯತೋಭ್ಯಾಸ ಬಲಾಚ್ಚ) ಅಂದರೆ,-ಎಲೈ ಶಿಷ್ಯನೆ ಆಯೋಗವು (ಧ್ರುವಂ) ಅಂದರೆ,-ನಿಶ್ಚಯವಾಗಿ ವೈರಾಗ್ಯ ಮತ್ತು ಅಭ್ಯಾಸವೆಂಬ ಇವೆರಡರಿಂದ ಸಿದ್ಧಿಯಂ ಪೊಂದುತ್ತಿರುವದು. ಈ ವಾರ್ತೆಯನ್ನು ಕೂಡ ಪತಂಜಲಿ ಮುನಿಯು ಪ್ರಕಟ ಪಡಿಸಿರುವನು. " ಅಭ್ಯಾಸ ವೈರಾಗ್ಯಾಭ್ಯಾಂತನ್ನಿರೋಧಃ ", ಅರ್ಥ—ಅಭ್ಯಾಸ ಮತ್ತು ವೈರಾಗ್ಯದಿಂದ ಆ ಚಿತ್ತದ ವೃತ್ತಿಗಳ ನಿರೋಧವಾಗುವದು ಎಂದು. ಹಾಗೆ ಭಗವದ್ಗೀತೆಯಲ್ಲಿಯೂ " ಅಭ್ಯಾಸೇನತು ಕೌಂತೇಯ ವೈರಾಗ್ಯೇಣಚಗೃಹ್ಯತೆ " ಅರ್ಥ—ಎಲೆ ಅರ್ಜುನ ಹಾಗೂ ಚಿತ್ತವು ಪರಮ ಚಂಚಲವಾಗಿರುವದು. ಹಾಗಾದರೂ ಅಭ್ಯಾಸ ಮತ್ತು ವೈರಾಗ್ಯದಿಂದ ಅದರ ಗ್ರಹಣವಾಗುವದುಎಂದು. ಶ್ರೀಕೃಷ್ಣನು ಪೇಳಿರುವನು. ಆದರಲ್ಲಿ ಇಹಲೋಕ ಹಾಗೆ ಪರಲೋಕದಲ್ಲಿನ ಶಬ್ದಾದಿಯಾದ ವಿಷಯಗಳ ಅಭಿಲಾಷೆ ಮತ್ತು ಅದರ ಅನುತರ್ಷ

ನ ಮಾತ್ರನಾದ ವಸ್ತುವಿಗೆ ತಾನನ್ಯನಲ್ಲವೆಂತಲೂ ತನಿಗೆ ಆವಸ್ತುವನ್ಯವಲ್ಲವೆಂತಲೂ ಅನನ್ಯಭಾವದಿಂ ಚಿಂತಿಸಲ್ಪಡುವದೊ ಅದೆ ಧ್ಯಾನವೆಂದೆನಿಸಿಕೊಳ್ಳುವದು ೧೦ ಯಾವ ವಸ್ತುವಿನಲ್ಲಿ ಸದಾ ಜಾಗರೂಕನಾಗಿರಲೋಸುಗ ಇತರ ಪ್ರಪಂಚ ವಸ್ತುಗಳೆಲ್ಲವನ್ನು ಮರೆಯತಕ್ಕದ್ದೋ ಅಂದರೆ ಚನ್ನಾಗಿ ಧ್ಯಾನಕ್ಕೆ ವಿಸ್ಮೃತಿಯಾಗತಕ್ಕದ್ದೋ ಅದೇಸಮಾಧಿ ಎಂದು ಹೇಳಲ್ಪಡುವದು. ಇವೆಲ್ಲಾ ರಾಜಯೋಗ ಪರವಾದ ಆಶಯಗಳೆಂದು ತಿಳಿಯತಕ್ಕದ್ದು.

ಯಾಗಿರುವ ಸ್ತ್ರೀಧನಾದಿಯಾದ ಸಾಧನಗಳ ಯಾವ ಪರಿತ್ಯಾಗ ಮಾಡ ತಕ್ಕದ್ದೋ ಅದರ ನಾಮ ವೈರಾಗ್ಯವೆನ್ನಲ್ಪಡುವದು. ಅನ್ನು ಯೋಗ ದ ಸಿದ್ಧಿ ಆಗುವದಕ್ಕಾಗಿ ಯಮನಿಯಮಾಸನ ಪ್ರಾಣಾಯಾಮಾದಿಯಾ ದ ಯೋಗದ ಅಂಗಗಳನ್ನು ಯಾವ ಪುನಃ ಪುನಃ ಆ ವರ್ತನ ಮಾಡಲ್ಪ ಡುವದೋ ಅದರ ನಾಮ ಅಭ್ಯಾಸವೆನ್ನಲ್ಪಡುವದು. ಹಾಗೆ(ಅಭ್ಯಾಸಬ ಲಾಚ್ಚ) ಅಂದರೆ,-ಮೂಲಶ್ಲೋಕದೊಳಗಣ ಈ ಚತುರ್ಥ ಪಾದದಲ್ಲಿ ಯಾವ (ಚ) ಕಾರವುಂಟೊ ಅದರಿಂದ ಈಶ್ವರನ ಆರಾಧನೆಯೂ, ಯೋ ಗದ ನಿರ್ವಿಘ್ನ ಸಿದ್ಧಿಯಲ್ಲಿ ಮುಖ್ಯಹೇತುವೆಂದು ತಿಳಿದುಕೊಳ್ಳಬೇಕು. ಈ ವಾರ್ತೆಯನ್ನಾದರೂ ಪತಂಜಲಿ ಮುನಿಯೇ ನಿರೂಪಿಸಿ ಇರುವನು. “ ಸಮಾಧಿಸಿದ್ಧಿರೀಶ್ವರಪ್ರಣಿಧಾನಾತ್ ,, ಅರ್ಥ—ಈಶ್ವರನನ್ನು ಏಕಾ ಗ್ರಚಿತ್ತನಾಗಿ ಆರಾಧನ ಮಾಡುವದ್ದರಿಂದ ಸಮಾಧಿಯು ಸಿದ್ಧಿಯಾಗುವ ದು ಎಂದು॥ ಮತ್ತು ಯಾವದು ಗ್ರಂಥದ ಆದಿಯಲ್ಲಿ ದ್ವಿತೀಯ ಶ್ಲೋಕ ದ ವ್ಯಾಖ್ಯಾನದೊಳಗೆ ಪ್ರಕಟ ಮಾಡಿಬಂದಿರುವದೋ ಅಂದರೆ,-ಕಲಿಯು ಗದಲ್ಲಿ ಯೋಗದ ಸಿದ್ಧಿಯಾಗುವದಿಲ್ಲವೆಂದು ಅದಾದರು ಉದ್ದಾಲಕ, ವೀತಹವ್ಯ, ವಶಿಷ್ಠಾದಿಗಳಂತೆ ಯಲ್ಲಾ ಸಿದ್ಧಿಗಳ ಪ್ರಾಪ್ತಿಗೆ ಹೇತುವಾದ ಯಾವ ದೀರ್ಘಕಾಲ ಸಮಾಧಿ ರೂಪಯೋಗ ಉಂಟೋ ಅದರ ವಿಷಯ ಕವಾದ ನಿಷೇಧವೆಂದು ತಿಳಿಯಬೇಕು. ಮತ್ತು ಯಾವ ಕೇವಲ ಚಿತ್ತ ವೃತ್ತಿಯ ನಿರೋಧನಮಾತ್ರಕ್ಕೆ ಉಪಯೋಗಿಯಾದ ಯೋಗಾಭ್ಯಾಸವುಂ ಟೋ ಅದಕ್ಕಾದರೆ ಪ್ರಯತ್ನಮಾಡುವದ್ದರಿಂದ ಈ ಕಾಲದಲ್ಲಿಯೂ ಸಿದ್ಧಿ ಯಾಗುತ್ತಿರುವದು. ಆದ್ದರಿಂದ ಪೂರ್ವೋಕ್ತವಾದ್ದರೊಡನೆ ಈ ವಾ ಕ್ಯದ ಕಿಂಚಿನ್ಮಾತ್ರವಾದರೂ ವಿರೋಧ ವಿಲ್ಲವೆಂದು ತಿಳಿಯತಕ್ಕದ್ದು.

॥೯೮॥

ಅ—ಈಪ್ರಕಾರದಿಂದ ಸರ್ವ ಅಂಗಗಳ ಸಹಿತವಾದ ಯೋಗದ ಲ ಕ್ಷಣವನ್ನೂ ಮತ್ತು ಅದರ ಸಿದ್ಧಿಯ ಸಾದನವನ್ನೂ ಕೇಳಿದವನಾಗಿ ಈ ಗಯೋಗದ ಸಿದ್ಧಿಯು ಪ್ರಾರಬ್ಧ ಕರ್ಮದಿಂದ ಸ್ವತಃವೇ ಆಗುವದೋ ಅಲ್ಲದೇ ಪುರುಷಾರ್ಥ ಮಾಡುವದ್ದರಿಂದ ಆಗುವದೋ ಎಂಬ ಈಪ್ರ ಕಾರವಾದ ಸಂಶಯವಂ ಹೊಂದಿದ ಶಿಷ್ಯನು ಪುನಃ ಪ್ರಶ್ನೆಯಂ ಮಾ ಡುತ್ತಾನೆ,,

—॥ ಶಿಷ್ಯ ಉವಾಚ ॥—

ಕಿಂಪೌರುಷೇಣಾಭಿಮತಂ ಸ್ವಕರ್ಮಣಾ
ಪೂರ್ವಾರ್ಜಿತೇನೋತ ಜನೈರವಾಪ್ಯತೇ,
ಪಸ್ತ್ವೇತಯೋಃ ಕಿಂಚ ಬಲಿಷ್ಠ ಮುಚ್ಯತೆ
ಸರ್ವಾರ್ಥವಿದ್ಬ್ರೂಹಿ ಯದೇವ ನಿಶ್ಚಿತಮ್ ॥೯೯॥

ಟೀಕಾ—ಕಿಂಪೌರುಷೇಣೇತಿ ॥ ಎಲೈ (ಸರ್ವಾರ್ಥವಿತ್) ಅಂದರೆ ಶಾಸ್ತ್ರೋಕ್ತವಾದ ಸರ್ವಪದಾರ್ಥಗಳನ್ನು ತಿಳಿದಂಥಾಗುರುವೆ! ಈ ಲೋಕದಲ್ಲಿ ಯಾವಯಾವದು (ಅಭಿಮತಂವಸ್ತು) ಅಂದರೆ ಮನೋವಾಂಛಿತವಸ್ತು ಪ್ರಾಪನಂ ಹೊಂದುತಿರುವದೋ ಅದದು (ಪೌರುಷೇಣ) ಅಂದರೆ! ತಾನು ಪುರುಷಾರ್ಥವಂ ಮಾಡುವದ್ದರಿಂದ ಪ್ರಾಪ್ತವಾಗುವದೋ ಅಲ್ಲದೆ ಪೂರ್ವಾರ್ಜಿತವಾದ ಯಾವಪ್ರಾರಬ್ಧ ಕರ್ಮಉಂಟೋ ಅದರಿಂದ ಪ್ರಾಪ್ತವಾಗುವದೋ ಹಾಗೆ (ಏತಯೋಃ) ಅಂದರೆ—ಪುರುಷಾರ್ಥ ಮತ್ತು ಪ್ರಾರಬ್ಧ ಕರ್ಮ ಇವೆರಡರಲ್ಲಿ ಯಾವದು ಬಲವಾದ್ದೆಂದು ಹೇಳಲ್ಪಡುವದು ಅಂದರೆ ಪುರುಷಾರ್ಥವೇ ಬಲಉಳ್ಳದ್ದಾಗಿರುವದೋ ಅಲ್ಲದೆ ಪ್ರಾರಬ್ಧ ಕರ್ಮವೇ ಬಲಿಷ್ಠವಾಗಿರುವದೋ ಹಾಗೆ ಎಲೈ ಭಗವಂತನೆ, ಇವುಗಳಲ್ಲಿ ಯಾವಮಾರ್ಗವು ನಿಶ್ಚಿತವಾದದ್ದೋ ಅದನ್ನೇ ನನ್ನಂ ಕುರಿತು ಕರುಣೆ ಇಂದ ಅಪ್ಪಣೆಕೊಡಿಸಬೇಕು ಎಂದನು ॥೯೯॥

ಅ—ಈಪ್ರಕಾರವಾದ ಶಿಷ್ಯನ ಎರಡು ಪ್ರಶ್ನೆಗಳನ್ನು ಕೇಳಿ ಈಗತಿದಕ್ಕೆ ದೃಷ್ಟಾಂತ ಸಹಿತವಾಗಿ ಬಂದೇ ಶ್ಲೋಕದಿಂದ ಗುರು ಉತ್ತರವಂ ನಿರೂಪಿಸುತ್ತಾರೆ ॥

—॥ ಗುರುರುವಾಚ ॥—

ನೈಕೇನಪುಂಸಾತನಯಃಕ್ವಚಿದ್ಯಥಾ
ನೈವೈಕಯಾವಾಂಗನಯಾಪಿಜನ್ಯತೇ ॥
ಸಂಯೋಗಮೇವಾತ್ರತಥೈವಕರಣಂ॥
ವಿದ್ಧ್ಯತ್ವಮಾದ್ಯಂಚಬಲಿಷ್ಠ ಮೇತಯೋಃ ॥೧೦೦॥

ಟೀಕಾ॥ನೈಕೇನೇತಿ॥ಎಲೈಶಿಷ್ಯನೆ ಈಲೋಕದಲ್ಲಿ ಪ್ರತ್ಯಕ್ಷವಾಗಿ ಹ್ಯಾಗೆ ಒಬ್ಬನೆ ಪುರುಷನು ಯಾವಕಾಲದಲ್ಲಿಯೂ ಪುತ್ರನಂ ಉತ್ಪನ್ನಮಾಡಲಾರನೊ ಹಾಗೆ (ಅಂಗನಯಾಪಿ) ಅಂದರೆ,-ಅಂಗನಾ ಯಾವಸ್ತ್ರೀ ಉಂಟೋ

ಅವಳಾದರೂ ಒಬ್ಬಳೇ ಪುತ್ರನಂ ಪುಟ್ಟಿಸುವಲ್ಲಿ ಸಮರ್ಥ ಳಾಗುವದಿಲ್ಲ ವೋ ಹಾಗೆಯೆ ಪ್ರಾರಬ್ಧಕರ್ಮದವಿನಃ ಒಂದೇ ಪುರುಷಾರ್ಥದಿಂದ ಯಾ ವವಸ್ತುವಿನಪ್ರಾಪ್ತಿಯೂ ಆಗುವದಿಲ್ಲ. ಹಾಗೆಪುರುಷಾರ್ಥ ದಿಂವಿನಃ ಒಂ ದೇ ಪ್ರಾರಬ್ಧ ಕರ್ಮದಿಂದ ಲಾದರೂ ಯಾವವಸ್ತುವಿನ ಪ್ರಾಪ್ತಿಯು ಆ ಗುವದಿಲ್ಲ. ॥ಅದರಿಂದಲೈ ಶಿಷ್ಯನೆ ಹ್ಯಾಗೆ ದೃಷ್ಟಾಂತದಲ್ಲಿ ಪುರುಷ ಮ ತ್ತು ಸ್ತ್ರೀ ಇಬ್ಬರ ಪರಸ್ಪರ ಸಂಯೋಗ ವಾಗುವದ್ದರಿಂದಲೇ ಪುತ್ರನ ಉ ತ್ಪತ್ತಿಯಾಗುವದೋ ಹಾಗೆಯೇ ದಾರ್ಷ್ಟಾಂತದಲ್ಲಿಯೂ ಪುರುಷಾರ್ಥ ಪ್ರಾರಬ್ಧದ ಸಂಯೋಗವನ್ನೆ ಸರ್ವವಸ್ತುಗಳ ಪ್ರಾಪ್ತಿಯಲ್ಲಿ ಸೀನುಕಾರ ಣವೆಂದುತಿಳಿ, ಮತ್ತು ಯಾವದನ್ನು ನೀನು ಪ್ರಶ್ನೆಯಂ ಮಾಡಿದ್ದಿಯೊ, ಅಂದರೆ ಇವೆರಡರಲ್ಲಿ ಬಲಉಳ್ಳದ್ದು ಯಾವದೆಂದು ॥ ಅದರ ಉತ್ತರವಂಕೇ ಳು,(ಅದ್ಯಂಚಬಲಿಷ್ಠಮೇತಯೋಃ)ಅಂದರೆ, ಎಲೈಶಿಷ್ಯನೆ ಹ್ಯಾಗೆದೃಷ್ಟಾಂ ತದಲ್ಲಿ ಪುರುಷ ಮತ್ತು ಸ್ತ್ರೀ ಇವರಿಬ್ಬರಲ್ಲಿ ಪುರುಷನು ಬಲವಂತ ನಾಗಿರು ವನೋ ಹಾಗೆಯೆ ದಾರ್ಷ್ಟಾಂತದಲ್ಲಿಯೂ ಪ್ರಾರಬ್ಧಕರ್ಮಕಿಂತ ಪುರುಷಾ ರ್ಥಬಲ ಉಳ್ಳದ್ದಾಗಿರುವದು. ಯಾತಕ್ಕೆಂದರೆ-ಹ್ಯಾಗೆ ಸ್ತ್ರೀಇಲ್ಲದಿದ್ದರೂ ಕೇವಲತಮ್ಮವೀರ್ಯದಿಂಲೇ ಪೂರ್ವದಲ್ಲಿ ಋಷಿಜನಗಳು ಪುತ್ರನಂ ಉ ತ್ಪನ್ನ ಮಾಡಿರುವರು. ಎಂತೆಂದರೆ!-ವ್ಯಾಸರಿಗೆ ಗಂಗಾ ತಟದಮೇಲೆ ಅಪ್ಸರೆಯರ ನಗ್ನ ಭಾವವಂ ನೋಡಿದ್ದರಿಂದ ಹೋಮವಾಡತಕ್ಕಕಾಷ್ಠ ಗಳಮೇಲೆ ವೀರ್ಯ ಪತಿತವಾಯಿತು. ಅದರಬಳಿಕ ವ್ಯಾಸರುಆ ಕಾಷ್ಠಗಳ ನ್ನು ಮಥನಮಾಡಿ ಶುಕ ದೇವನನ್ನು ಉತ್ಪ ೩ ನ್ನ ಮಾಡಿದರು. ಹಾಗೆಯೆ ಭಾರದ್ವಾಜನ ವೀರ್ಯವು ದ್ರೋಣದಲ್ಲಿ[೧]ಪತಿತವಾದ್ದರಿಂದದ್ರೋ ಣಾಚಾರ್ಯನು ಹುಟ್ಟಿದನು. ಇವೇಮೊದಲಾದ ಅನೇಕ ಇತಿಹಾಸಗಳು ಮಹಾಭಾರತ ಭಾಗವತಾದಿ ಪುರಾಣಗಳಲ್ಲಿ ಪ್ರಸಿದ್ಧವಾಗಿರುವವು ॥ಹಾಗೆ ಯೇಪ್ರಾರಬ್ಧಕರ್ಮ ವಿಲ್ಲದಿದ್ದರೂ ಕೇವಲಪುರುಷಾರ್ಥದ ಬಲದಿಂದಲೇ

೧ ಈಗ ನಾವು ಮಾಡುವ ಪ್ರಯತ್ನ ೨ ಹಿಂದಣ ಜನ್ಮದ ಕರ್ಮಗಳ ವಾಸ ನಾ ಇದನ್ನು ಅಗ್ರುಷ್ಟವೆಂದು ದೈವವೆಂದೂ ಜನ್ಮಾಂತರೀಯವೆಂದು ಹಣೆಯ ಬರಹವೆಂದೂ ವಿಧಿ ಎಂದು ಪೂರ್ವಾರ್ಜಿತವೆಂದು ಇನ್ನೂ ನಾನಾ ಪ್ರಕಾರವಾಗಿ ಲೋಕದೊಳ್ ಪೇಳು ತ್ತಿರುವರು. ೩ ಹ್ಯಾಗಾದರೂ ಶುಕದೇವನ ಉತ್ಪತ್ತಿ ಅನ್ಯತ್ರ ಅನ್ಯಪ್ರಕಾರವಾಗಿಯೂ ಶ್ರವಣದಲ್ಲಿ ಬಂದಿರುವದು. ಆದಾಗ್ಯೂ ಮಹಾ ಭಾರತದಲ್ಲಿಹೀಗಯೆಬರೆಯಲ್ಪಟ್ಟಿರುವದು

ವಿಶ್ವಾಮಿತ್ರನು ಬ್ರಾಹ್ಮಣತ್ವವನ್ನೂ ನಂದೀಗಣನು ಅಮರತ್ವವನ್ನೂ ಧೃವನು ಅಚಲತ್ವವನ್ನೂ ಸಂಪಾದನಮಾಡಿರುವರು. ಇವೇ ಆದಿಯಾದ ಇತಿಹಾಸಗಳು ಕೂಡ ಪುರಾಣಗಳಲ್ಲಿ ಪ್ರಸಿದ್ಧವೇ ಆಗಿರುವವು. ಇಲ್ಲಿ ತಾತ್ಪರ್ಯವೇನಂದರೆ,-ಪ್ರಾರಬ್ಧ ಮತ್ತು ಪುರುಷಾರ್ಥ ಇವೆರಡೂ ಅನಾದಿಯಾದ್ದರಿಂದ ಬೀಜಾಂಕುರಗಳಂತೆ ಪರಸ್ಪರ ಕಾರ್ಯ-ಕಾರಣ ಭಾವವುಳ್ಳದ್ದಾಗಿರುವದು. ಆದರೆ,-ಅವುಗಳಲ್ಲಿಯಾವದು ಬಲವಾಗಿರುವದೋ ಅದಕ್ಕೇಜಯವಾಗುವದು. ಈ ವಿಷಯವು ಯೋಗವಾಸಿಷ್ಠದಲ್ಲಿಯೂ ಪ್ರಕಟಿಸಲ್ಪಟ್ಟಿರುವದು. “ದ್ವೌಹುಡಾವಿವಯುಧ್ಯೇತೆ ಪುರುಷಾರ್ಥೌಸಮಾಸಮೌ ॥ ಪ್ರಾಕ್ತನಶ್ಚೈಹಿಕಶ್ಚೈವಶಾಮ್ಯತ್ಯತ್ರಾಲ್ಪವೀರ್ಯವಾನ್ „ ಅರ್ಥ—ಎಲೈ ರಾಮಚಂದ್ರನೆ ಹ್ಯಾಗೆ ಎರಡು ಟಗರುಗಳು ಪರಸ್ಪರ ಯುದ್ಧ ಮಾಡುತ್ತಿರುವವೋ ಆದರೆ ಅದರಲ್ಲಿ ಯಾವದು ಬಲವಾಗಿರುವದೋ ಅದಕ್ಕೆ ಜಯವಾಗುವದು. ಹಾಗೆಯೆ ಪೂರ್ವದಲ್ಲಿ ಮಾಡಿದ ಪ್ರಾರಬ್ಧ ಕರ್ಮವು ಮತ್ತು ಈಗಿನ ಪುರುಷಾರ್ಥವು ಇವೆರಡರಲ್ಲಿ ಯಾವದು ಬಲವಾಗಿರುವದೋ ಅದಕ್ಕೇ ಜಯವಾಗುವದು ಎಂದು. ಈ ಕಾರಣದಿಂದ ಈ ಲೋಕದಲ್ಲಿ ಕೆಲವು ಕಾರ್ಯಗಳು ಬಹು ಪ್ರಯತ್ನಮಾಡುವದ್ದರಿಂದಲೂ ಅಂತದಲ್ಲಿ ಸಿದ್ಧವಾಗದೆ ಹೋಗುವದು ಎಂದರೆ, ಅದರಲ್ಲಿ ಪೂರ್ವದ ಪ್ರಾರಬ್ಧ ಕರ್ಮವೆ ಬಲವುಳ್ಳ ಪ್ರತಿಬಂಧಕವಾಗಿರುವದೆಂದು ತಿಳಿಯಬೇಕು. ಮತ್ತು ಕೆಲವು ಕಾರ್ಯಗಳು ಯಥೋಕ್ತ ಪ್ರಯತ್ನ ಮಾಡುವದ್ದರಿಂದ ಶೀಘ್ರವೆ ಸಿದ್ಧವಾಗುತ್ತಿರುವದು ಎಂದರೆ,-ಅದರಲ್ಲಿ ಈಗಿನ ಪುರುಷಾರ್ಥ ಬಲವಾಗಿರುವದೆಂದು ತಿಳಿಯಬೇಕು. ಅದು ಹ್ಯಾಗಾದರೂ ಇಲ್ಲಿ ಹೇಳಿದ ವಸಿಷ್ಠರ ನಿರೂಪಣೆಯು ಯಥಾರ್ಥವಾಗಿರುವದು. ಹಾಗಾದರೂ ಪುರುಷಾರ್ಥವೆ ಎಲ್ಲಾ ಕಡೆಯಲ್ಲೂ ಜಯವಾಗುವದು. ಮತ್ತು ಯಾವ ಕಾರ್ಯ ಇಲ್ಲಿ ಪುರುಷಾರ್ಥ ಮಾಡಿದ್ದರಿಂದಲೂ ಸಿದ್ಧವಾಗದಿದ್ದರೆ ಈಗಲೇ ಅದರಲ್ಲಿ ತನ್ನ ಪುರುಷಾರ್ಥದನ್ಯೂನತೆಯನ್ನು ತಿಳಿದುಕೊಳ್ಳಬೇಕು. ಈ ವಾರ್ತೆಯನ್ನಾದರೂ ವಸಿಷ್ಠರೆ

೪ ಜ್ಞಾನವಾಸಿಷ್ಠದ ವೈರಾಗ್ಯ ಪ್ರಕರಣಕ್ಕೆ ಸೇರಿದ ೬ನೇ ಅಧ್ಯಾಯದ ಪೌರುಷ ಸ್ಥಾಪನೆಯಲ್ಲಿ ಈ ವಿಷಯವು ಬಹುಚನ್ನಾಗಿ ವಿವರಿಸಲ್ಪಟ್ಟಿರುವದು. ಇಲ್ಲಿ ಗ್ರಂಥ ಕರ್ತರು ಸಾರ ಮಾತ್ರ ತೋರಿಸಿರುವರು.

ವರ್ಣನೆಯಂ ಮಾಡಿರುವರು. "ನತದಸ್ತಿ ಜಗತ್ಕೋಶೆ ಶುಭಕರ್ಮಾನುಪಾತಿನಾ । ಯತ್ಪೌರುಷೇಣ ಶುದ್ಧೇನ ನಸಮಾಸಾದ್ಯತೆಜನ್ಯೈಃ" ಅರ್ಥ—ಎಲೈ ರಾಮಚಂದ್ರನೆ ಇಂಥಾವಸ್ತು ಈ ಜಗನ್ಮಂಡಲದಲ್ಲಿಯಾವದೂ ಇಲ್ಲ. ಅದೇನಂದರೆ,-ಯಾವದು ಶಾಸ್ತ್ರೋಕ್ತವಾದ ಶುಭಪುರುಷಾರ್ಥವನ್ನು ಮಾಡುವದ್ದರಿಂದ ಪುರುಷನಿಗೆ ಪ್ರಾಪ್ತವಾ ೫ ಗಲರಿಯುದೊ ಎಂದು. ಮತ್ತು ಯಾವಾಗ ಪುರುಷಾರ್ಥಕ್ಕೆ ಪ್ರಧಾನತ್ವ ವಾಗದಿರುವದೋ ಆಗ ತನ್ನ ಸ್ವಾಭಾವಿಕ ಸ್ಥಿತಿಗಾಗಿ ಪ್ರಯತ್ನ ಮಾಡುವದ್ದರಿಂದ ಯಾವ ಪುರುಷನಿಗೂ ಯಾವದಾನೊಂದು ಕಾಲದಲ್ಲಿ ಯಾದರೂ ಔನ್ನತ್ಯೆಯುಂಟಾಗುವದಿಲ್ಲ. ಮತ್ತು ಆಗುತ್ತಿರುವದು ನೋಡುವಲ್ಲಿ ಕಾಣ್ಬರುತ್ತಿರುವದು. ಹಾಗಲ್ಲದಿರೆ ಪುರುಷಾರ್ಥ ಪ್ರತಿಪಾದಕವಾದ ಯಾವ ವೇದ ಮತ್ತು ಶಾಸ್ತ್ರಗಳಿರುವವೋ ಅವೆಲ್ಲವೂ ವ್ಯರ್ಥವಾಗಿ ಹೋಗುವದು; ಆದಕಾರಣ ಪ್ರಥಮದಲ್ಲಿ ಹೇಳಿದ ರೀತಿಯಿಂದ ಸರ್ವಥಾ ಪುರುಷಾರ್ಥವೇ ಬಲಿಷ್ಠವಾದುದೆಂಬ ಈ ವಿಷಯವು ಸಿದ್ಧವಾಯಿತು, ॥೧೦೦॥

ಅ—ಈ ಪ್ರಕಾರವಾಗಿ ಪ್ರಸಂಗದಿಂದಜೀವನ್ಮುಕ್ತಿಗೆ ಉಪಯೋಗವಾದ ಯೋಗಾಭ್ಯಾಸದ ಲಕ್ಷಣವನ್ನೂ ಮತ್ತು ಅದರ ಅಂಗವನ್ನೂ ಹಾಗೆ ಅದರ ಸಿದ್ಧಿಯ ವಿಷಯದಲ್ಲಿ ಪುರುಷಾರ್ಥದ ಮುಖ್ಯತೆಯನ್ನೂ ಸಹ ಕೇಳಿ ಈಗ ಪುನಃ ವಿಶೇಷ ಬೋಧಾರ್ಥವಾಗಿ ಪ್ರಕೃತ ವೇದಾಂತ ವಿಷಯದಲ್ಲಿಯೆ ಶಿಷ್ಯನು ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯಉವಾಚ—

ಸರ್ವತ್ರಗಂವೇದವಚೋಭಿರುಚ್ಯತೆ ।
ಬ್ರಹ್ಮೈಕಲಾದಾತುಕಥಂನಲಕ್ಷ್ಯತೆ ॥
ಅಸ್ಮಚ್ಛರೀರೇಷುಯುಧ್ಯೆತದಂಚಸಾ ।
ಸರ್ವಜ್ಞಮೇಬ್ರೂಹಿವಿಬೋಧವೃದ್ಧಯೆ ॥೧೧೧॥

ಟೀಕಾ—ಸರ್ವತ್ರಗಮಿತಿ ॥ ಎಲೈ (ಸರ್ವಜ್ಞಾ) ಅಂದರೆ,-ಸರ್ವ

---

೫ ಶಾಸ್ತ್ರಸಮ್ಮತವಾದ ಪುರುಷ ಪ್ರಯತ್ನದಿಂದ ಅವಾಙ್ಮನಸ ಗೋಚರವಾದ ವಸ್ತುವೇ ಪ್ರಾಪ್ತವಾಗುತ್ತಿರುವಲ್ಲಿ ಇನ್ನ್ಯಾವದು ಲೋಕದೊಳ್ ಪ್ರಾಪ್ತವಾಗಲರಿಯದೆಂದು ಭಾವವು.

ಶಾಸ್ತ್ರಪ್ರತಿಪಾದಿತವಾದ ಪದಾರ್ಥಗಳನ್ನು ಕರಾಮಲಕದಂತೆ ಸ್ಫುಟವಾಗಿ ತಿಳಿದಂಥಾ ಗುರುವೆ "ಸರ್ವಂಖಲ್ವಿದಂಬ್ರಹ್ಮ" ಇತ್ಯಾದಿ ವೇದವಾಕ್ಯಗಳಲ್ಲಿ ಬ್ರಹ್ಮವು (ಸರ್ವತ್ರಗಂ) ಅಂದರೆ,-ಯಲ್ಲಾಕಡೆಯಲ್ಲೂ ವ್ಯಾಪಕವೆಂದು ವರ್ಣಿಸಲ್ಪಟ್ಟಿರುವದು. ಹಾಗೆ ಯಾವ ಬ್ರಹ್ಮವು ಸರ್ವತ್ರಏಕರಸವಾಗಿ,ಸಮರಸವಾಗಿ,ಪರಿಪೂರ್ಣವಾಗಿದ್ದರೆ(ಅಸ್ಮಚ್ಛರೀರೇಷು ಅಂದರೆ,-ನಮ್ಮಮನುಷ್ಯ'ಪಶು,ಪಕ್ಷಿಮೊದಲಾದವುಗಳಶರೀರಗಳಲ್ಲಿ ಚೇತನಶಕ್ತಿದ್ವಾರಾ ಬ್ರಹ್ಮಕ್ಕೆ ಲಕ್ಷಣಾವೃತ್ತಿಯಿಂದ ಭಾನವಾಗುವದೋ ಹಾಗೆ (ಉಪಲಾದಿಷು) ಅಂದರೆ,-ನಿಶ್ಚೇಷ್ಟೆಯುಳ್ಳ ಯಾವ ಶಿಲಾ ಭಿತ್ತಿ ಆದಿಯಾದ ಜಡಪದಾರ್ಥಗಳಿರುವವೋ ಅವುಗಳಲ್ಲಿ ಬ್ರಹ್ಮದ ಪ್ರತೀತಿ ಯಾತಕ್ಕೆ ಆಗುವದಿಲ್ಲ? ಆದರಿಂದೆಲೈ ಭಗವಂತನೇ, (ವಿಶದಂಜಸಾ) ಅಂದರೆ,-ಈ ವಿಷಯವು ಯಾವ ಪ್ರಕಾರವಾಗಿ ನನ್ನ ಬುದ್ಧಿಯಲ್ಲಿ ಜಾಗ್ರತೆಯಿಂದ ಆರೂಢವಾಗುವದೋ ಹಾಗೆ ಸ್ಫುಟ ಮಾಡಿ, ಜ್ಞಾನದ ವೃದ್ಧಿಗೋಸುಗ ನನ್ನಂ ಕುರಿತು ಕೃಪೆಯಿಂದ ಅಪ್ಪಣೇ ಕೊಡಸಬೇಕು ಎಂದನು. ... ... ||೧೦೧||

ಅ|| ಈ ಪ್ರಕಾರವಾದ ಶಿಷ್ಯನ ಪ್ರಶ್ನೆಯನ್ನು ಕೇಳಿ, ಈಗ ದೃಷ್ಟಾಂತಸಹಿತವಾಗಿ ಗುರು ಆದಕ್ಕೆ ಉತ್ತರವನ್ನು ನಿರೂಪಿಸುತ್ತಾರೆ.

—ಗುರುರುವಾಚ—

ಸಾಮಾನ್ಯತಃಸರ್ವಗತಾಪಿಭಾನುಭಾ ।
ಯದ್ವದ್ವಿಶೇಷೇಣವಿಭಾತಿದರ್ಪಣೇ ॥
ಬ್ರಹ್ಮಾಪಿಸರ್ವತ್ರಗತಂಮತೌಸ್ಫುಟಂ ।
ತದ್ವದ್ವಿಭಾತೀತ್ಯನುಭೂಯತೇಬುಧೈಃ ।।೧೦೨।

ಟೀಕಾ|| ಸಾಮಾನ್ಯತ ಇತಿ—ಎಲೈ ಶಿಷ್ಯನೇ, (ಯದ್ವತ್) ಅಂದರೆ,-ಹ್ಯಾಗೆ ಮಧ್ಯಾಹ್ನ ಕಾಲದ ಸೂರ್ಯನ ಪ್ರಭೆಯು ಹ್ಯಾಗಾದರೂ ಸಮಾನಭಾವದಿಂದ ಯಲ್ಲಾಕಡೆಯಲ್ಲಿಯೂ ಒಂದೇ ಹ್ಯಾಗೆ ಪ್ರಸ್ತುತವಾಗಿರುವದೋ ಹಾಗಾದರೂ (ವಿಶೇಷಣ) ಅಂದರೆ,-ಅತ್ಯಂತ ಸ್ವಚ್ಛ ಪದಾರ್ಥವಾದ ಯಾವ ದರ್ಪಣಾದಿಗಳುಂಟೋ ಅದರಲ್ಲಿಯೇ ವಿಶೇಷವಿಂದ ಪ್ರತಿಬಿಂಬಿತವಾಗುವದು. ಅನ್ಯ ಕಾಷ್ಠವೃತ್ತಿಕಾದಿಯಾದ ಮಲಿನ

ಪದಾರ್ಥಗಳಲ್ಲಿ ಆಗುವದಿಲ್ಲ. (ತದ್ವತ್) ಅಂದರೆ,-ಹಾಗೆಯೇ ಹ್ಯಾಗಾದರೂ ಬ್ರಹ್ಮವು ಕೂಡ ಸರ್ವತ್ರ ಜಗತ್ತಿನ ಹೊರಗೆ ಒಳಗೆ ಏಕರಸವಾಗಿ ಆಕಾಶದಂತೆ ಪರಿಪೂರ್ಣವಾಗಿರುವದು ಹಾಗಾದರೂ ಪಂಚಮಹಾ ಭೂತಗಳ ಸತ್ವಾಂಶದ ಕಾರ್ಯವಾದ ಯಾವ ಅತ್ಯಂತ ಸ್ವಚ್ಛ ಪದಾರ್ಥವೆನಿಪ (ಮತಿ) ಅಂದರೆ,-ಬುದ್ಧಿ ಅರ್ಥಾತ್ ಅಂತಃಕರಣವುಂಟೋ ಅದರಲ್ಲಿಯೇ ವಿಶೇಷದಿಂದ ಪ್ರತಿಬಿಂಬಿತವಾಗುವದು. ಶಿಲಾ ಭಿತ್ತಿ ಮೊದಲಾದವುಗಳಲ್ಲಿ ಆಗುವದಿಲ್ಲ ಯಾತಕ್ಕಂದರೆ,—ಪಂಚಮಹಾಭೂತಗಳ ತಮೋಂಶದ ಕಾರ್ಯವಾದ್ದರಿಂದ ಶಿಲಾದಿಯಾದ ಜಡಪದಾರ್ಥಗಳು ಅತ್ಯಂತ ಮಲಿನವಾಗಿರುವವು. ಈ ಕಾರಣದಿಂದ ಅವುಗಳು ಬ್ರಹ್ಮದ ಪ್ರತಿಬಿಂಬವನ್ನು ಗ್ರಹಣ ಮಾಡಲರಿಯವು. ಹ್ಯಾಗಾದರೂ ಅಸ್ಮದಾದಿಗಳ ಯಾವ ಸ್ಥೂಲಶರೀರ ಉಂಟೋ ಅದಾದರೂ ಶಿಲಾದಿಗಳಂತೆ ಸ್ವತಃ ಜಡವೇ ಆಗಿರುವದು. ಅದಾಗ್ಯೂ ಅದರಲ್ಲಿ ಅಂತಃಕರಣದ ಯಾವ ವಿಶೇಷತೆ ಇರುವದೋ ಅದು ಅಸ್ಮದಾದಿಗಳ ಶರೀರಗಳಲ್ಲಿ ಬ್ರಹ್ಮದ ಪ್ರತಿಬಿಂಬದಿಂದೊಡ ಗೂಡಿದ ಅಂತಃಕರಣವಾಗಿರುವದು. ಆದ್ದರಿಂದ ಅದರಲ್ಲಿ ಗಮನಾಗಮನಾದಿ ಕ್ರಿಯಾದ್ವಾರಾ, ಆ ಬ್ರಹ್ಮದ ಚೇತನತ್ವವು ಪ್ರತೀತವಾಗುವದು. ಮತ್ತು ಶಿಲಾದಿಗಳಲ್ಲಿ ಅಂತಃಕರಣದ ಅಭಾವವಾಗಿರುವದ್ದರಿಂದ ಗಮನಾಗಮನಾದಿ ಕ್ರಿಯೆಗಳು ಆಗದಿರುವವು ಆದಕಾರಣ ಅದರಲ್ಲಿ ಬ್ರಹ್ಮದ ಚೇತನತ್ವಪ್ರತೀತವಾಗುವದಿಲ್ಲ. ಮುಖ್ಯವಾಗಿ ಬ್ರಹ್ಮದವ್ಯಾಪಕತೆ ಎರಡರಲ್ಲಿಯು ಸಮಾನವಾಗಿರುವದು. ಅದರಲ್ಲಿ ಕಿಂಚಿನ್ಮಾತ್ರವಾದರೂ ನ್ಯೂನಾಧಿಕ ಭಾವವಿಲ್ಲ. ಈ ವಾರ್ತೆಯು ಪಂಚದಶಿಯಲ್ಲಿಯೂ ಪೇಳಲ್ಪಟ್ಟಿರುವದು. "ಚೇತನಾ ಚೇತನಭಿದಾಕೂಟಸ್ಥಾತ್ಮಕೃತಾನಹಿ ‖ ಕಿಂತು ಬುದ್ಧಿಕೃತಾಭಾಸಕೃತೈವೆತ್ಯವಗಮ್ಯತಾಮ್", ಅರ್ಥ-ಶಿಲಾದಿಗಳು ಮತ್ತು ಶರೀರಾದಿಗಳಲ್ಲಿ ಯಾವ ಚೇತನ ಮತ್ತು ಅಚೇತನದ ಭೇದ ಪ್ರತೀತವಾಗುತ್ತಿರುವದೋ ಅದು ಕೂಟಸ್ಥಾತ್ಮ-ಯಾವ ಬ್ರಹ್ಮವುಂಟೋ ಅದರಿಂದ ಮಾಡಲ್ಪಟ್ಟದ್ದಲ್ಲ. ಮತ್ತೇನಂದರೆ,-ಕೇವಲಚೇತನದ ಆಭಾಸದಿಂದ ಸಂಯುಕ್ತವಾದ ಯಾವ ಬುದ್ಧಿ ಅಂದರೆ,-ಅಂತಃಕರಣವಿರುವದೋ ಅದರಿಂದಲೇ ಮಾಡಲ್ಪಟ್ಟಿರುವದು. ಬ್ರಹ್ಮವಾದರೋ ಸರ್ವತ್ರ ಏಕರಸವಾಗಿ ಸಮಾನ ವ್ಯಾಪಕವಾಗಿರುವದು ಹಾಗೆ ಯೋಗ

ವಾಸಿಷ್ಠದಲ್ಲಿಯೂ ಹೇಳಲ್ಪಟ್ಟಿರುವದು. “ ಆಕಾಶೋಪಲ ಕುಡ್ಯಾದೌ ಸರ್ವತ್ರಾತ್ಮದಶಾಸ್ಥಿತಾ ॥ ಪ್ರತಿಬಿಂಬವಿಮಾದರ್ಶಚಿತ್ತಏವಾತ್ರದೃಶ್ಯತೆ ,, ಅರ್ಥ— ಎಲೈ ರಾಮಚಂದ್ರನೆ! ಆಕಾಶ,ಶಿಲಾ,ಕುಡ್ಯಾದಿಗಳಲ್ಲಿ ಎಲ್ಲಾ ಕಡೆಯಲ್ಲಿಯೂ ಆತ್ಮನ ಚೇತನತ್ವವಿರುತ್ತಿರುವದು. ಆದರೂ ಅದರ ಪ್ರತಿಬಿಂಬವು ಕೇವಲ ಚಿತ್ತದಲ್ಲಿಯೆ ಆಗಿರುವದು. ಹ್ಯಾಗೆ ಸೂರ್ಯನಪ್ರಕಾಶವು ದರ್ಪಣದಲ್ಲಿ ಆಗಿರುವದೋ ಎಂದು॥ಹೀಗೆ ವಸಿಷ್ಠರು ಹೇಳಿರುವರು. “ ಹಾಗೆ ಎಲೈ ಶಿಷ್ಯನೆ ಈ ಹೇಳಿದ ವಾರ್ತೆಯು ಕೇವಲಶಾಸ್ತ್ರದಿಂದಲೇ ಸಿದ್ಧವಾಗಿಲ್ಲ. ಮತ್ತೇನಂದರೆ, (ಅನುಭೂಯತೆಬುಧೈಃ) ಅಂದರೆ, ಅಂತಃಕರಣದಲ್ಲಿಯೆ ಬ್ರಹ್ಮವು ಪ್ರತಿಬಿಂಬಿತವಾಗಿರುವದು. ಈ ವಿಷಯವನ್ನು ಬುಧಾ— ಯಾವತತ್ವದರ್ಶಿಯಾದಜ್ಞಾನೀಜನಗಳುಂಟೋ ಅವರುವೃತ್ತಿವ್ಯಾಪ್ತಿರೂಪದಿಂದಅನುಭವವಂಮಾಡುತ್ತಿರುವರು. ಈವಾರ್ತೆಯುಅಥರ್ವವೇದದ ಮುಂಡುಕೋಪನಿಷತ್ತಿನಲ್ಲಿಯೂವರ್ಣಿಸಲ್ಪಟ್ಟಿರುವದು. “ದೂರಾತ್ಸುದೂರೆತದಿಹಾಂತಿಕೇಚಪಶ್ಯತ್ಸಿಹೈವನಿಹಿತಂಗುಹಾಯಾಂ,,ಅರ್ಥ—ಆ ಬ್ರಹ್ಮವುಅಜ್ಞಾನೀಜನಗಳಿಗಾದರೆ ದೂರಕಿಂತಲೂ ಅತ್ಯಂತದೂರವಾಗಿರುವದು. ಮತ್ತುಜ್ಞಾನೀಜನಗಳಿಗಾದರೋ(ಅಂತಿಕೇಚ) ಅಂದರೆ,-ಅತಿಸಮೀಪವೇ ಆಗಿರುವದು. ಯಾತಕ್ಕಂದರೆ,-ಜ್ಞಾನರೂಪನೇತ್ರದಿಂದ ನೋಡುವಂಥಾ ತತ್ವದರ್ಶಿಗಳಿಗೆ ತಮ್ಮ ಬುದ್ಧಿರೂಪವಾದ ಗುಹೆಯಲ್ಲೇಇರುವದಾಗಿ ಬ್ರಹ್ಮದೃಷ್ಟಿಯಲ್ಲಿ ಅಂದರೆ,-ಅನುಭವದಲ್ಲಿ ಬಂದಿರುವದು. ... ... ॥೧೦॥

ಅ॥ ಈ ಪ್ರಕಾರವಾಗಿ ಬ್ರಹ್ಮದ ಸರ್ವವ್ಯಾಪಕತೆಯ ನಿರ್ಣಯವಂ ಕೇಳಿ,. ಈಗ ಹೇಳುವದೇನಂದರೆ,-ವೇದದಲ್ಲಿ “ ನಕರ್ಮಣಾನಪ್ರಜಯಾಧನೇನತ್ಯಾಗೆನೈಕೆ ಅಮೃತತ್ವಮಾನಶುಃ ,, ಅರ್ಥ॥ ಕರ್ಮದಿಂದಲೂ, ಮತ್ತು ಪ್ರಜೆಗಳಿಂದಲೂ, ಹಾಗೆ ಧನದಿಂದಲೂ ಮುಕ್ತಿಯಾಗುವದಿಲ್ಲ ಮತ್ತೇತಾಂದೆಂದರೆ,-ಕೇವಲ ತ್ಯಾಗದಿಂದಲೇ ಕೆಲವರು ಸನ್ಯಾಸೀ ಜನಗಳು ಮೋಕ್ಷವಂ ಪಡಿಯುತ್ತಿರುವರು ಎಂದು. ಇತ್ಯಾದಿ ವಾಕ್ಯಗಳಿಂದ ಕೇವಲಸನ್ಯಾಸದಿಂದಲೇ ಮೋಕ್ಷಪದದ ಪ್ರಾಪ್ತಿ ಎಂದುವರ್ಣನೆಯಂ ಮಾಡಿರುವದು. ಹಾಗೆ ಪುನಃ ಹೇಳಿದ್ದೇನಂದರೆ,-“ ಯಾವಜ್ಜೀವಮಗ್ನಿಹೋತ್ರಂಜುಹುಯಾತ್,, ಅರ್ಥ॥ ಎಲ್ಲಿಯ ಪರಿಯಂತವು ಈ ಪುರು

ಷನು ಜೀವಿಸುವನೋ ಅಲ್ಲಿಯ ಪರ್ಯಂತವು ಅಗ್ನಿಹೋತ್ರವನ್ನೇ ಮಾಡುತ್ತಿರಬೇಕೆಂದು. ಇತ್ಯಾದಿ ವಾಕ್ಯಗಳಿಂದ ಸರ್ವದಾ ಗೃಹದಲ್ಲಿ ಇದ್ದು ಕೊಂಡು ಕರ್ಮವಂ ಮಾಡತಕ್ಕ ವಿಧಾನವನ್ನು ಹೇಳಿರುವದು. ಆದರೆ ಅವೆರಡು ಪಕ್ಷಗಳಲ್ಲಿ ಯಾವದು ಶ್ರೇಷ್ಠವೋ ಎಂಬ ಈ ಪ್ರಕಾರವಾದ ಶಂಕೆಯಿಂದೊಡಗೂಡಿದ ಶಿಷ್ಯನು ಪುನಃ ಪ್ರಶ್ನೆಯಂ ಮಾಡುತ್ತಾನೆ.

—ಶಿಷ್ಯ ಉವಾಚ—

ಪರಿವ್ರಜನ್ನೆವಜನೋವಿಮುಚ್ಯತೇ |
ಗೃಹೇಪಿತಿಷ್ಠನ್ನಿಮುವಾದಯೋದಧೆ ||
ತಯೋಶ್ಚ ಕಿಂತತ್ರವಿಮೋಕ್ಷದಂಭವೇ |
ದ್ವದೈತದಾಮ್ನಾಯವಚೋನುರೋಧತಃ|| ।೧೦೩॥

ಟೀಕಾ--ಪರಿವ್ರಜನ್ನಿತಿ || ಎಲೈ (ದಯೋದಧೆ) ಅಂದರೆ,-ಸ್ವಾಭಾವಿಕ ದಯಾಸಮುದ್ರನಾದ ಗುರುವೆ (ಪರಿವ್ರಜನ್ನೆವ) ಅಂದರೆ,-ಗೃಹಾದಿಗಳನ್ನು ಪರಿತ್ಯಾಗಮಾಡಿ ಸನ್ಯಾಸಾಶ್ರಮವನ್ನು ಗ್ರಹಣ ಮಾಡುವದ್ದರಿಂದಲೇ ನಿಯಮದಿಂದ ಪುರುಷನಿಗೆ ಮುಕ್ತಿಯಾಗುವದೋ ಅಲ್ಲದೆ (ಗೃಹೇಪಿತಿಷ್ಠನ್) ಅಂದರೆ,-ಸ್ತ್ರೀಪುತ್ರಾದಿಯಾದ ಭೋಗದ ಸಾಧನಗಳಿಂದ ಯುಕ್ತನಾಗಿ ತನ್ನ ಗೃಹಾಶ್ರಮದಲ್ಲಿಯೇ ಸರ್ವದಾ ಇರಲುಳ್ಳ ಪುರುಷನಿಗೂ ಮುಕ್ತಿಯಾಗುತ್ತಿರುವದೋ ಹಾಗೆ (ತತ್ರ) ಅಂದರೆ,- ಅಲ್ಲಿ ಸನ್ಯಾಸಾಶ್ರಮ ಮತ್ತು ಗೃಹಾಶ್ರಮದಲ್ಲಿ ಅವರಿಬ್ಬರಿಗೂವಿಶುವಿಮೋಕ್ಷವನ್ನು ಕೊಡುವಂಥಾದ್ದಾಗಿರುವದು. ಅಂದರೆ, - ಮುಕ್ತನಾಗುವದಕ್ಕೆ ಯೋಗ್ಯವಾದದ್ದು ಯಾವ ಸನ್ಯಾಸತ್ವವೋ ಮತ್ತುಗೃಹಸ್ಥತ್ವವೋ, ಅವೆರಡಕ್ಕು ಯಾವಪ್ರಕಾರದ ಆಚರಣವಾಗಿರುವದು। ಹಾಗೆ ಈ ಸರ್ವವಾರ್ತೆಯನ್ನು (ಆಮ್ನಾಯವಚೋನುರೋಧತಃ) ಅಂದರೆ,- ವೇದವಚನಾನು ಸಾರವಾಗಿ ನನ್ನಂ ಕುರಿತು ಕೃಪೆಯಿಂದ ಅಪ್ಪಣೆ ಕೊಡಿಸಬೇಕು ಎಂದನು. ... ... ||೧೦೩||

ಅ--ಈ ಪ್ರಕಾರವಾದ ಶಿಷ್ಯನ ಎರಡು ಪ್ರಶ್ನೆಯನ್ನು ಕೇಳಿ ಈಗ ಮೂರು ಶ್ಲೋಕಗಳಿಂದ ಕ್ರಮವಾಗಿ ಅವುಗಳಿಗೆ ಗುರು ಉತ್ತರವಂ ಹೇಳುತ್ತಾರೆ.

ಗುರು ರುವಾಚ

ವಿಶೇಷತೋನ್ಯಸ್ತಗೃಹೋವಿಮುಚ್ಯತೇ ।
ಕ್ವಚಿದ್ಗೃಹಸ್ಥೋಪಿಚಪೂರ್ವಯತ್ನತಃ ॥
ನಚೈಹಕಶ್ಚಿನ್ನಿಯಮೋಸ್ತಿಪಕ್ಷಿಣೋ ।
ಭವನ್ಮೃಗಾಶ್ಚಾಪಿಯತೋವಿವೇಕಿನಃ ।೧೦೪॥

ಟೀಕಾ--ವಿಶೇಷತ ಇತಿ॥ ಎಲೈ ಶಿಷ್ಯನೆ ! ವಿಶೇಷದಿಂದಾದರೂ (ನ್ಯಸ್ತಗೃಹೊ) ಅಂದರೆ ಯಾವಪುರುಷನು ಗೃಹಾದಿಗಳನ್ನು ಪರಿತ್ಯಾಗಮಾಡಿ ಸನ್ನ್ಯಾಸವಂ ಗ್ರಹಣ ಮಾಡಿರುವನೋ ಅವನೆ ಮೋಕ್ಷವಡವಂ ಹೊಂದುತಿರುವನು. ಯಾತಕ್ಕಂದರೆ,- ಯಾವನಿಗೆ ಸನ್ನ್ಯಾಸ ಗ್ರಹಣದ ಪ್ರಥಮದಲ್ಲಿ ಜ್ಞಾನದಪ್ರಾಪ್ತಿಯಾಗ ದಿರುವದೋ ಅವನಿಗೆಬಳಿಕ ನಿಶ್ಚಿಂತನಾಗಿ ಬ್ರಹ್ಮನಿಷ್ಠನಾದ ಗುರುವಿನ ಮುಖದಿಂ ವೇದಾಂತ ಶಾಸ್ತ್ರದ ಶ್ರವಣಾದಿಗಳಿಂದ ಶೀಘ್ರದಲ್ಲಿಯೆ ಜ್ಞಾನದ ಪ್ರಾಪ್ತಿ ಯಾಗಿರುವದು. ಮತ್ತು ಯಾವನಿಗೆ ಪ್ರಥಮದೋಳ್ ಗೃಹದಲ್ಲಿಯೆ ಜ್ಞಾನದ ಪ್ರಾಪ್ತಿಯಾಗಿರುವದೋ ಅವನಿಗೆ ನಂತರಸನ್ನ್ಯಾಸಗ್ರಹಣಮಾಡುವದ್ದರಿಂದನಿರ್ವಿಘ್ನವಾಗಿ ಜ್ಞಾನದ ದೃಢತೆಯದ್ವಾರಾ ಜೀವನ್ಮುಕ್ತಿಯು ಸಿದ್ಧಿಯಾಗುವದು. ಈ ಕಾರಣದಿಂದಸನ್ನ್ಯಾಸೀ ಪುರುಷನುವಿಶೇಷದಿಂ ಮೋಕ್ಷವಂ ಪಡದುಕೊಳ್ಳುವನು ಈ ವಾರ್ತೆಯು ಅಥರ್ವವೇದದ ಮುಂಡ ಕೋಪನಿಷತ್ತಿನಲ್ಲಿಯೂ ಬರೆದಿರುವದು. “ವೇದಾಂತ ವಿಜ್ಞಾನಸು ನಿಶ್ಚಿತಾರ್ಥಾಃ ಸನ್ನ್ಯಾಸ ಯೋಗಾದ್ಯತಯಃ ಶುದ್ಧಸತ್ವಾಃ ॥ ತೇಬ್ರಹ್ಮಲೋಕೇಷು ಪರಾಂತಕಾಲೆ ಪರಾಮೃತಾಃ ಪರಿಮುಚ್ಯಂತಿಸರ್ವೆ,, ಅರ್ಥ- ವೇದಾಂತಶಾಸ್ತ್ರ ಪ್ರತಿ ಪಾದಿತವಾದ ಜ್ಞಾನದ ದೃಢನಿಶ್ಚಯವಾಗಲು ಸನ್ನ್ಯಾಸಾಶ್ರಮದ ಗ್ರಹಣ ಮಾಡುವದ್ದರಿಂದ ಶುದ್ಧಾಂತಃಕರಣರಾದ ಯಾವ (ಯತಯಃ) ಅಂದರೆ,-ಸನ್ನ್ಯಾಸೀ ಜನಗಳುಂಟೋ ಅವರೆಲ್ಲರೂ ಶರೀರಪಾತವಾದನಂತರಬ್ರಹ್ಮ ರೂಪವಾದಯಾವಲೋಕವುಂಟೋಅದರಲ್ಲಿಮುಕ್ತಸ್ವರೂಪರಾಗಿ ಕೈವಲ್ಯಪದವನ್ನು ಪೊಂದುತ್ತಿರುವರುಎಂದು ಹಾಗೆಮನುಸ್ಮೃತಿ ಯಲ್ಲುಹೇಳಿ ರುವದು. “ಅನೇನವಿಧಿನಾಸರ್ವಾನ್‌ಸ್ತ್ಯಕ್ತ್ವಾಸಂಗಾನ್‌ಶನೈಃಶನೈಃ॥ಸರ್ವದ್ವಂದ್ವವಿನಿರ್ಮುಕ್ತೋಬ್ರಹ್ಮಣ್ಯೇವಾವತಿಷ್ಠತೆ,,ಅರ್ಥ-

ಈ ಪ್ರಕಾರವಾಗಿ ವಿಧಿ ಪೂರ್ವಕವಾದ ಸನ್ಯಾಸದ ಗ್ರಹಣದ್ವಾರಾ
ಮೆಲ್ಲಮೆಲ್ಲನೆ ಸರ್ವಸಂಗಗಳ ಪರಿತ್ಯಾಗವಂ ಮಾಡಿ ದೇಹದ ಅಂತಕಾಲದ
ಲ್ಲಿ ಶೀತೋಷ್ಣಾದಿಯಾದ ಸರ್ವದ್ವಂದ್ವಗಳಿಂದ ರಹಿತನಾದ ಪುರುಷನು
ಬ್ರಹ್ಮದಲ್ಲಿಯೇ ಇರುತ್ತಿರು ೧ ವನು ಎಂದು. ಹಾಗೆ ಇತ್ಯಾದಿ ಶ್ರುತಿಸ್ಮೃ
ತಿಗಳಲ್ಲಿ ಸನ್ಯಾಸೀ ಪುರುಷರಿಗೇನೇ ವಿಶೇಷದಿಂದಮೋಕ್ಷಪದದಪ್ರಾಪ್ತಿ
ಎಂದು ಪ್ರತಿಪಾದನಮಾಡಿರುವವು. ಅದುಹ್ಯಾಗಾದರೂದಂಡಾದಿಲಿಂ ೨ಗ
ಧಾರಣಪೂರ್ವಕವಾದ ಸನ್ಯಾಸದಲ್ಲಿ, ಬ್ರಾಹ್ಮಣರಿಗೇ ಮುಖ್ಯಾಧಿಕಾರವಿ
ರುವದು. ಮತ್ತೆ ಕೆಲವರು ಸುರೇಶ್ವರಾಚಾರ್ಯಾದಿಗಳು ವೈದಿಕಸಂಸ್ಕಾ
ರಯುಕ್ತರಾದ ಕ್ಷತ್ರಿಯ, ಇನ್ನು ವೈಶ್ಯರಿಗೂ ಅಧಿಕಾರವನ್ನು ಗ್ರಹಿಸಿ
ರುವರು. ಹಾಗಾದರೂ ಲಿಂಗವಿಂವಿನಃ ಕೇವಲತ್ಯಾಗರೂಪವಾದ ಸನ್ಯಾ
ಸದಲ್ಲಾದರೆ, ನಾಲ್ಕುವರ್ಣದವರಿಗೆ ಅಧಿಕಾರವಿರುವದು. ಯಾಕೆಂದರೆ
ಸುಲ ೩ ಭಾ ಗಾರ್ಗಿಯಾದಿಯಾದ ಸ್ತ್ರೀಯರುಗಳು ಮತ್ತು ವಿದುರಾದಿ
ಯಾದ ಶೂದ್ರರೂಕೂಡ ಸನ್ಯಾಸಿಗಳೆಂದು ಪುರಾಣಗಳಲ್ಲಿ ಒರೆದಿರುವದು
ಹಾಗೆ (ಕ್ವಚಿದ್ಗೃಹಸ್ಥೋಪಿ) ಅಂದರೆ ಎಲ್ಲೋ ಒಬ್ಬನ ಪೂರ್ವಜನ್ಮದಲ್ಲಿ
ಅನುಷ್ಠಾನಮಾಡಿದ ನಿಷ್ಕಾಮ ಕರ್ಮರೂಪವಾದ ಪ್ರಯತ್ನದಿಂದ ಯಾ
ವದೋ ಕಾಲದಲ್ಲಿ ಯಾವನಾನೊಬ್ಬ ಗೃಹಸ್ಥ ಪುರುಷನಾದರೂ ವೇದಾಂತ
ಶಾಸ್ತ್ರದ ಶ್ರವಣಾದಿಗಳಿಂದ ಜ್ಞಾನವಂ ಪಡೆದು ಅದರ ಮೂಲಕ ಮುಕ್ತ
ನಾಗುತ್ತಿರುವನು. ಹ್ಯಾಗೆಂದರೆ,-ರಾಜಾಜನಕ, ಪ್ರತರ್ದನ, ಅಜಾತಶತ್ರು
ಮೊದಲಾದವರು ಪೂರ್ವದೊಳ್ ಆಗಿರ್ದಂತೆ. ಮತ್ತು ಎಲ್ಲೋ ಒಬ್ಬನೆ
(ನಚೇಹಕಶ್ಚಿನ್ನಿಯಮೋಸ್ತಿ) ಅಂದರೆ ಈಮೋಕ್ಷಪದದ ಪ್ರಾಪ್ತಿಯಲ್ಲಿ ಸ
ನ್ಯಾಸಿಗೇ ಮುಕ್ತಿಯಾಗುವದು ಇನ್ನೊಬ್ಬನಿಗೂ ಇಲ್ಲವೆಂತಲೂ ಇಲ್ಲಾ
ಬ್ರಾಹ್ಮಣನಿಗೇ ಮೋಕ್ಷ ವಾಗುವದು ಅನ್ಯಜಾತಿಯವರಿಗಿಲ್ಲವೆಂತಲೂ ಇ
ತ್ಯಾದಿಯಾದ ಯಾವನಿಯಮವೂಇಲ್ಲ ಯಾತಕ್ಕೆಂದರೆ (ಯತೋ) ಅಂದರೆ

---

೧ ಅಂದರೆ ವಿದೇಹಕೈವಲ್ಯಮೋಕ್ಷವಂ ಪೊಂದಿರುವನು ೨ ಲಿಂಗವೆಂದರೆ ಸ್ಫಟಿಕ
ಲಾಸ್ಫಟಿಕಾದಿಗಳಿಂ ಮಾಡಲ್ಪಟ್ಟವುಗಳಲ್ಲ ಸನ್ಯಾಸಿಗೆ ಯೋಗ್ಯವಾದ ಚಿಹ್ನೆಗಳಿಗೆ ಲಿಂಗ
ವೆಂದರ್ಥ ಅಂದರೆ ವೇದಸಮ್ಮತವಾದ ಅಂಗ. ೩ ಈ ಸುಲಭೆ ಎಂಬವಳು ರಾಜಪುತ್ರಿಯು
ಇವಳ ವಿಷಯವು ಮಹಾಭಾರತದ ಶಾಂತಿಪರ್ವದೊಳಗಣ ಮೋಕ್ಷಧರ್ಮದಲ್ಲಿ ೧೪೪ನೇ ಅ
ಧ್ಯಾಯಮೊದಲಾಗಿ ೧೪೫ನೇ ಅಧ್ಯಾಯದ ಸಮಾಪ್ತಿವರಿವಿಗೂ ಚನ್ನಾಗಿ ಒರೆಯಲ್ಪಟ್ಟಿ
ರುವದು

ಯಾವಕಾರಣದಿಂದ(ಪಕ್ಷಿಷುಸರ್ವ್ಯಗಾಶ್ಚ)ಅಂದರೆಗರುಡ,ಕಾಕ,ಭುಶುಂಡ ಸಂಪಾತಿ, ಜಟಾಯು ಮೊದಲಾದ ಪಕ್ಷಿಗಳಿಗೂ ಮತ್ತು ಹನುಮಂತ,ಜಾಂಬವಂತ, ನಂದಿಗಣಾದಿಯಾದ ಪಶುಗಳಿಗೂ ಜ್ಞಾನಸಂಪನ್ನತೆಯಿಂದ ಜೀವನ್ಮುಕ್ತಿಯು ಪೂರ್ವದೊಳಾಗುತ್ತಿದ್ದುದು ಈವಾರ್ತೆಯು ಪುರಾಣಗಳಲ್ಲಿ ಪ್ರಸಿದ್ಧವೇ ಆಗಿರುವದು. ||೧೦೪||

ಅ—ಈಪ್ರಕಾರವಾಗಿ ಪ್ರಥಮ ಪ್ರಶ್ನೆಯ ಉತ್ತರವಂ ನಿರೂಪಿಸಿ ಈಗಸನ್ಯಾಸೀ ಮತ್ತು ಗೃಹಸ್ಥನಿಗೆ ಯಾವಪ್ರಕಾರದಆಚರಣವಾಗುವದು ಎಂಬ ಈಯಾವಶಿಷ್ಯನ ದ್ವಿತಿಯಪ್ರಶ್ನೆಯುಂಟೋ ಆದಕ್ಕೆ ಎರಡು ಶ್ಲೋಕಗಳಿಂದ ಗುರುಉತ್ತರವಂ ಪ್ರಕಟಪಡಿಸುತ್ತಾರೆ ||

—ಗುರುರುವಾಚ—

ಶವೋಪಮಂ ದೇಹಮಿಮಂ ವಿಲೋಕಯ
ನ್ನಟೇದಿಮಾಂಯಸ್ತುಧರಾಂಗತಸ್ಪೃಹಃ ||
ಅಸಕ್ತಚೇತಃ ಸಮದರ್ಶನಃ ಕ್ಷಮೀ
ಶುಚಿರ್ದಯಾಲುಃ ಸವಿಮುಚ್ಯತೆಯತಿಃ ||೧೦೫||

ಟೀ—ಶವೋಪಮಮಿತಿ-ಎಲೈಶಿಷ್ಯನೆ (ಯಸ್ತು) ಅಂದರೆ ಯಾವಪುರುಷನು ಸನ್ಯಾಸ ಗ್ರಹಣವಂ ಮಾಡಿದ ಅನಂತರ(ಶವೋಪಮಂದೇಹಮಿಮಂ) ಅಂದರೆ ಈ ತನ್ನ ಶರೀರವನ್ನು ಶವಕ್ಕೆಸಮಾನವಾಗಿ ನೋಡುತ್ತಿರುವನು. ಅಂದರೆ ಹ್ಯಾಗೆ ಶವದಲ್ಲಿಯಾವದೂ ಪ್ರೀತಿಯಾಗದಿರುವದೊ ಹಾಗೆಯೇ ಶರೀರದಲ್ಲಿ ಪ್ರೀತಿಂಮಾಡದಿರುವನು ಹಾಗೆಈವಾರ್ತೆಯು ಪರಮಹಂಸೋಪನಿಷತ್ತಿನಲ್ಲಿಯೂ ಬರಿಯಲ್ಪಟ್ಟಿರುವದು “ ಸ್ವವಪುಃ ಕುಣಪ ಮಿವದೃಶ್ಯತೆಯತಸ್ತದ್ವಪುರಪಧ್ವಸ್ತಂ „ ಅರ್ಥ—ಜ್ಞಾನವಾದ ಬಳಿಕ ಆತ್ಮಸ್ವರೂಪದಲ್ಲಿ ದೃಢಾಭ್ಯಾಸವಾದ್ದರಿಂದ ಪರಮಹಂಸನಾದ ಸನ್ಯಾಸೀ ಪುರುಷನು ತನ್ನ ಶರೀರವನ್ನು ಶವದಂತೆ ನೋಡುತ್ತಿರುವನು ಯಾತಕ್ಕಂದರೆ ಯಾವಕಾರಣದಿಂದ ಜ್ಞಾನವುಂಟಾಗಿ ಅದರ ಪ್ರಭಾವದಿಂದ ಆಶರೀರವನ್ನು ಮೃಗತೃಷ್ಣಾಜಲದಂತೆ ಕಲ್ಪಿತವೆಂದು ತಿಳಿದಿರುವನೋ ಎಂದು. || ತಾತ್ಪರ್ಯ

೧. ಅಂದರೆ, ಶರೀರದ ಶೀತೋಷ್ಣಾದಿದ್ವಂದ್ವಗಳ ನಿವೃತ್ತಿಗಾದರೂ ವಿಶೇಷದಿಂದ ಪ್ರಯತ್ನ ಮಾಡದಿರುವನು.

ವೇನಂದರೆ॥ಶರೀರದ ಅನುಕೂಲಮತ್ತು ಪ್ರತಿಕೂಲದ ವ್ಯವಹಾರದಲ್ಲಿ ಚಿತ್ತದೊಳ್ ಹರ್ಷಶೋಕಗಳಂ ಪೊಂದದಿರುವನು. ಹ್ಯಾಗೆಂದರೆ,— ಜಡಭರತ,ದತ್ತಾತ್ರೇಯ ವಾಸುದೇವಾದಿಗಳು ಪೊಂದದಿದ್ದಂತೆ ಹಾಗೆ (ಅಟವಿಮಾಂಧರಾಂ) ಅಂದರೆ ಈ ಬುದ್ಧಿಯುಳ್ಳ ಸರ್ವದಾ ಸಂಚಾರಿಸುತ್ತಿರುವನು ಈವಾರ್ತೆಯಾದರೂ ಅಥರ್ವವೇದದ ಕಂಠಶ್ರುತಿಯಲ್ಲಿ ಪ್ರತಿಪಾದಣೆಸಲ್ಪಟ್ಟಿರುವದು " ಕೃಶೀಭೂತ್ವಾ ಗ್ರಾಮೆ ಏಕರಾತ್ರಂ ನಗರೇ ಪಂಚರಾತ್ರಂ ಚತುರೋವರ್ಷಾನ್ ವಾರ್ಷಿಕಾನ್ ಗ್ರಾಮೇವಾನಗರೆ ವಾಪಿವಸೇತ್ " ಅರ್ಥ—ಸನ್ಯಾಸಿಗೆ ಬೇಕಾದದ್ದೇನಂದರೆ ಚಾಂದ್ರಾಯಣಾದಿ ವ್ರತಗಳಿಂದ ಶರೀರವನ್ನು ಕೃಶಪಡಿಸಿ ಬಳಿಕ ಗ್ರಾಮದಲ್ಲಿ ಒಂದುರಾತ್ರಿಯು ಮತ್ತು ನಗರದಲ್ಲಿ ಐದು ರಾತ್ರಿ... ಪರ್ಯಂತವಾಸ ಮಾಡುವದು. ಯಾತಕ್ಕಂದರೆ ಒಂದು ರಾತ್ರಿಗಿಂತ ಅಧಿಕವಾಗಿ ವಾಸಮಾಡುವದ್ದರಿಂದ ಯಾವದೊಂದರಿಂದ ರಾಗ, ಯಾವದರಿಂದ ಲೋದ್ವೇಷಇತ್ಯಾದಿ ಅನೇಕದೋಷಗಳು ಉತ್ಪತ್ತಿಯಾಗುವದು.ಮತ್ತು ವಾರ್ಷಿಕಾನ್—ಅಂದರೆ ವರ್ಷಋತುವಿನನಾಲ್ಕುಮಾಸಪರ್ಯಂತವಾದರೆ ಗ್ರಾಮ ಅಥವಾ ನಗರದೊಳಗೆ ಒಂದೇಸ್ಥಾನದಲ್ಲಿ ನಿವಾಸಮಾಡಲ್ಪಟ್ಟರೂ ಯಾವದೋಷವೂಇಲ್ಲ.ಯಾಕೇನಂದರೆ.ನಡಿಯುವದ್ದರಿಂದದೋಷಉಂಟು. ಇನ್ನು ಕಾಶ್ಯಾದಿ ತೀರ್ಥಗಳಲ್ಲಾದರೆಸರ್ವದಾ ನಿವಾಸಮಾಡಿದಾಗ್ಯೂ ದೋಷವಿಲ್ಲ ಹಾಗೆ ಶರೀರದಲ್ಲಿ ರೋಗ ಮತ್ತುಯೋಗಾಭ್ಯಾಸಾದಿ ನಿಮಿತ್ತವಾಗಿ ಯಾದರೂ ಸದಾಏಕತ್ರನಿವಾಸದಲ್ಲಿದೋಷವಿಲ್ಲ ಹಾಗೆ(ಗತಸ್ಪೃಹಃ) ಅಂದರೆ ಯಾವಾಗ ಒಂದಾವರ್ತಿ ಪರಿತ್ಯಾಗಮಾಡಿದ ಸ್ತ್ರೀಧನಾದಿಯಾದ ಪದಾರ್ಥಗಳಲ್ಲಿ ಪುನಃಶ್ಚವಾಂಛೆ ತದಸಮಾನತಿಳಿಯುವದ್ದರಿಂದ ಆದರ ಸ್ಪೃಹಾ-ಅಂದರೆ ಅಭಿಲಾಷಾ ಮಾಡದಿರುವನು. ಯಾತಕ್ಕಂದರೆ,ಪ್ರಥಮದೊಳ್ ಪ್ರೈಷಮಂತ್ರಾದಿಯಾದ ವಿಧಿ ಪೂರ್ವಕವಾಗಿ ತ್ಯಾಗಮಾಡಿದ ಸ್ತ್ರೀಯಾದಿಗಳನ್ನು ಪುನಃ ಗ್ರಹಣಮಾಡುವಲ್ಲಿವುಇತ್ಯಾದ ದೋಷಪ್ರಾಪ್ತಿಯಾಗುವದು.ಈವಾರ್ತೆಯು ಸ್ಮೃತಿಯಲ್ಲಿಯೂ ಪ್ರಕಟಪಡಿಸಿರುವದು 'ಯಃಪ್ರವ್ರಜಿತೋ ಭೂತ್ವಾಪುನಃಸೇವೇತ ಮೈಥುನಂ ಷಷ್ಟಿವರ್ಷಸಹಸ್ರಾಣಿ ವಿಷ್ಠಾಯಾಂಜಾಯತೇಕ್ರಿಮಿಃ ,, ಅರ್ಥ —ಯಾವಪುರುಷನು

೨, ಪಿಂಡಸ್ಥಾನ, ೩, ತಿಂದು ಕಕ್ಕಿದ ಅನ್ನ ಮೊದಲಾದವುಗಳಿಗೆ,

ಒಂದಾವರ್ತಿವಿಧಿ ಪೂರ್ವಕವಾಗಿ ಸನ್ಯಾಸದ ಗ್ರಹಣವಂಮಾಡಿ ಬಳಿಕ ಯಾವದಾನೊಂದು ಕಾಲದಲ್ಲಿ ಸ್ತ್ರೀಸಂಗವು ಮಾಡಿದರೆ ಆ ಪುರುಷನು ಅರವತ್ತುಸಾವಿರ ವರ್ಷಪರಿಯಂತ ವಿಷ್ಠೆಯಲ್ಲಿ ಕ್ರಿಮಿಯಾಗಿ ನಿವಾಸ ಮಾಡುವನು ಎಂದು. ಹಾಗೆ (ಅಸಕ್ತಚೇತಾಃ) ಅಂದರೆ,- ದೇಶದೇಶಾಂತರಗಳನ್ನು ಸಂಚರಿಸುವದ್ದರಿಂದ, ಯಾವದೇಶದೊಳಗೆ ಸ್ಥಾನ, ಭಿಕ್ಷಾ, ಸನ್ಮಾನ, ಪೂಜಾ, ವಸ್ತ್ರಾದಿಯಾದ ವಿಶೇಷ ಅನುಕೂಲತೆಯನ್ನು ನೋಡಿ ಅದರಲ್ಲಿ ಆಸಕ್ತಿ ಮಾಡುವದಿಲ್ಲ. ಯಾತಕ್ಕೆಂದರೆ, ಅವುಗಳಲ್ಲಿ ಆಸಕ್ತಿ ಮಾಡುವದ್ದರಿಂದ ಪುನಃಬಂಧನದ ಪ್ರಾಪ್ತಿಯಾಗುವದು. ಈ ವಿಷಯವು ಮನುಸ್ಮೃತಿಯು ಆರನೆ ಅಧ್ಯಾಯದಲ್ಲೂ ವರ್ಣಿಸಲ್ಪಟ್ಟಿರುವದು. “ ಅಭಿಪೂಜಿತಲಾಭಾಂಸ್ತುಜುಗುಪ್ಸೇತೈವಸರ್ವಶಃ ॥ ಅಭಿಪೂಜಿತಲಾಭಾಭ್ಯಾಂಯತಿರ್ಮುಕ್ತೋಪಿಬಧ್ಯತೆ ,, ಅರ್ಥ-ಸನ್ಮಾನ ಪೂರ್ವಕವಾದ ಪೂಜನದಿಂದಲೂ ಮತ್ತು ಸುಂದರ ವಸ್ತ್ರಾದಿಗಳ ಲಾಭಗಳಿಂದಲೂ ಸನ್ಯಾಸೀ ಪುರುಷನು ಯಾವಾಗಲೂ ಜುಗುಪ್ಸೆ-ಅಂದರೆ,-ನಿಂದಿಸಿಕೊಳ್ಳುತ್ತಿರುವನು. ಯಾತಕ್ಕೆಂದರೆ,- ಪೂಜಾಲಾಭಾದಿಗಳಲ್ಲಿ ಆಸಕ್ತನಾದ್ದರಿಂದ ಮುಕ್ತನಾಗಿದ್ದರೂ ಸನ್ಯಾಸಿಯು ಪುನಃ ಬಂಧನವಂ ಪಡಿಯುತ್ತಿರುವನು ಎಂದು. ಹಾಗೆ (ಸಮದರ್ಶನಃ) ಅಂದರೆ,-ಯಾವ ತನ್ನ ಶತೃಮಿತ್ರಾದಿಗಳನ್ನು ಸಮವಾದ ದೃಷ್ಟಿಯಿಂದ ನೋಡುತ್ತಿರುವನು. ಈ ವಾರ್ತೆಯು ಗೀತೆಯಲ್ಲಿ ಭಗವಂತನೂ ಕೂಡ ಹೇಳಿರುವನು. “ ವಿದ್ಯಾವಿನಯ ಸಂಪನ್ನೇ ಬ್ರಾಹ್ಮಣೇ ಗವಿಹಸ್ತಿನಿ ॥ ಶುನಿಚೈವಶ್ವಪಾಕೇಚಪಂಡಿತಾಃಸಮದರ್ಶಿನಃ ,, ಅರ್ಥ— ವಿದ್ಯಾ ಮತ್ತು ನಮ್ರಭಾವದಿಂಯುಕ್ತನಾದ ಬ್ರಾಹ್ಮಣನಲ್ಲಿಯೂ ಇನ್ನು ಗೋವಿನಲ್ಲಿಯೂ ಹಾಗೆ ಹಸ್ತಿಯಲ್ಲಿಯೂ ಮತ್ತು ಶ್ವಾನ ಇನ್ನು ಚಾಂಡಾಲನಲ್ಲಿಯೂ ಯಾವ ಪುರುಷನಿಗೆ ಸಮದೃಷ್ಟಿಯುಂಟಾಗಿರುವದೋ ಅವನೇ ಪಂಡಿತನು. ಅರ್ಥಾತ್, ತತ್ವವೆತ್ತನಾದ ಸನ್ಯಾಸೀ ಎಂದು ಹೇಳಲ್ಪಡುವನು. ಹಾಗೆ (ಕ್ಷಮಾ) ಅಂದರೆ,-ಸಜಾತೀಯ ಸನ್ಯಾಸೀ ಆಗಲಿ ಅಥವಾ ಅನ್ಯದುಷ್ಟಪುರುಷನಾಗಲೀ ಯಾವಾಗಲಾದರೂ ಯೇನಾದರೂ ನಿಮಿತ್ತದಿಂದ ದಂಡಾದಿಗಳಿಂದ ಹೊಡದರೂ ಅಥವಾ ದುಷ್ಟವಚನವನ್ನಾಡಿದರೆ, ಆಗ ಆಸರ್ವ

೪, ಅಮೇಧ್ಯ, ೫. ಹುಳು,

ವನ್ನು ಸಹಿಸುತ್ತಿರುವನು. ಈ ವಾರ್ತೆ ಶ್ರುತಿಯಲ್ಲಿಯೂ ಉಕ್ತವಾಗಿರುವದು (ವೃಕ್ಷ ಇವತಿಷ್ಠಾಸೇತ್ ಛಿದ್ಯಮಾನೋನಕುಪ್ಯೇತನಕಂಪೇತ) ಅರ್ಥ--ಸನ್ಯಾಸೀ ಪುರುಷನು ವೃಕ್ಷಕ್ಕೆ ಸಮಾನವಾಗಿರಬೇಕು ಅದೇನೆಂದರೆ,-ಹ್ಯಾಗೆ ವೃಕ್ಷವು ಶಸ್ತ್ರದಿಂದ ಕತ್ತರಿಸುವಲ್ಲಿ ಕ್ರೋಧಮಾಡದಿರುವದೋ ಮತ್ತು ಕಂಪಾಯಮಾನವೂ ಆಗದಿರುವದೋ ಹಾಗೆಯೇ ಸನ್ಯಾಸಿಯೂ ಆಗಿರಬೇಕೆಂಬುದು ಹಾಗೆ ಮನುಸ್ಮೃತಿಯಲ್ಲಿಯೂ ಹೇಳಿರುವದು. “ಅತಿವಾದಾಂಸ್ತಿತಿಕ್ಷೇತ ನಾವಮನ್ಯೇತಕಂಚನ॥ನಚೇಮಂದೇಹಮಾಶ್ರಿತ್ಯ ವೈರಂಕುರ್ವೀತಕೇನಚಿತ್” ಅರ್ಥ--ಸನ್ಯಾಸೀ ಪುರುಷನು ಯಾವನಾದರು ದುಷ್ಟವಚನವನ್ನಾಡಿದರೆ ಅದನ್ನು ಸಹನಮಾಡುತ್ತಾ ಮತ್ತು ತನ್ನ ವಾಣಿಯಿಂದಲೂ ಅದವಾ ಶರೀರದಿಂದಲಾದರೂ ಯಾವ ಪುರುಷನಿಗೂ ಅಪಮಾನ ಮಾಡನು. ಹಾಗೆ ಕ್ಷಣಭಂಗುರವಾದ ಮನುಷ್ಯದೇಹವನ್ನಾಶ್ರಯಿಸಿ ಯಾರೊಡನೆಯೂ ವೈರಭಾವವನ್ನೂ ಮಾಡದಿರುವನು ಎಂದು. ಹಾಗೆ (ಶುಚಿಃ) ಅಂದರೆ- ಯಾವ ಶಾಸ್ತ್ರೋಕ್ತವಾದ ರೀತಿಯಿಂದ ಶರೀರದ ಬಾಹ್ಯ ಮತ್ತು ಅಭ್ಯಂತರದಲ್ಲಿ ಮೃತ್ ಜಲ ಪ್ರಾಣಾಯಾಮಾದಿಗಳಿಂದಲೂ ಇನ್ನು ಶುದ್ಧವಾದ ಭೋಜನ ಪಾನಾದಿಗಳಿಂದಲೂ ಸರ್ವದಾಪವಿತ್ರನಾಗಿರುವನು ಎಂದರೆ,ತಾನುತತ್ವವೇತ್ತನೆಂಬ ಅಭಿಮಾನ ದಿಂದವಿಹಿತ ಅವಿಹಿತವಿಚಾರಗಳ ಪರಿತ್ಯಾಗಮಾಡಿ ಯಥೇಷ್ಟಾಚರಣ ಮಾಡದಿರುವನು. ಯಾತಕ್ಕೆಂದರೆ-ಯಥೇಷ್ಟಾಚರಣಮಾಡುವದರಿಂದ ಲೋಕದಲ್ಲಿ ಅತ್ಯಂತನಿಂದಿತನಾಗುವನು ಈವಾರ್ತೆಯು ಪಂಚದಶಿಕಾರರಿಂದಲೂ ಹೇಳಲ್ಪಟ್ಟಿರುವದು “ಶುನಾಂತತ್ವ ದೃಶಾಂಚೈವಕೋ ಭೇದೋಽಶುಚಿ ಭಕ್ಷಣೇ” ಅರ್ಥ—ಜ್ಞಾನತತ್ವವೇತ್ತನಾದ ಜ್ಞಾನೀಪುರುಷನೂ ಶುಭಾಶುಭಗಳನ್ನು ಪರಿತ್ಯಜಿಸಿ ತನ್ನ ಇಚ್ಛಾನುಸಾರವಾಗಿ ಮಾಂಸಾದಿಯಾದ ಅಪವಿತ್ರಪದಾರ್ಥಗಳನ್ನು ಸೇವನೆ ಮಾಡಿದ್ದೇ ಆದರೆ,-ವಿಷ್ಠಾ[1]ದಿಯಾದ ಅಪವಿತ್ರಗಳನ್ನು ಭಕ್ಷಣೆಯಂ ಮಾಡುವಂಥಾ ಶ್ವಾನಾ[2]ದಿಗಳಿಗೂ ಅಜ್ಞಾನೀಪುರುಷನಿಗೂ ಯೇನು ಭೇದವಾಗುವದು ? ಅಂದರೆ,-ಯೇನೂ ಅಲ್ಲವೆಂದಾಶ

೧, ಅಪಶಬ್ದದಿಂದ ಮೂಳೆ, ಚರ್ಮ, ಪಾದರಕ್ಷೆ, ಶವ, ಅಂದರೆ ಹೆಣಗಳನ್ನು ತಿಳಿಯತಕ್ಕದ್ದು, ೨ ನಾಯಿ ನರಿ ಮುಂತಾದವುಗಳು,

ಯವು. ಹಾಗೆ (ದಯಾಲುಃ) ಅಂದರೆ,-ಯಾವಾಗಲೂ ಎಲ್ಲಾ ಭೂತ ಪ್ರಾಣಿಗಳಮೇಲೂ ದಯಾವಂತನಾಗಿರುವನು. ಅರ್ಥಾತ್ ಸರ್ವಜೀವ ಗಳನ್ನು ತನ್ನ ಸಮಾನವಾಗಿ ತಿಳಿದದ್ದರಿಂದ ಯಾವದಕ್ಕೂ ಮನಸ್ವಾಚ್ಯ, ಕರ್ಮಗಳಿಂ ದುಃಖವಾಗದಿರುವದು ಈ ವಿಷಯವು ಜೀವನ್ಮುಕ್ತಿ ಪ್ರ ಕರಣದಲ್ಲಿಯೂ ಕಥಿಸಲ್ಪಟ್ಟಿರುವದು. “ ಪ್ರಾಣಾಯಥಾತ್ಮನೋಽ ಭೀಷ್ಟಾ ಭೂತಾನಾಮಪಿತೇತಥಾ ॥ ಆತ್ಮೌಪಮ್ಯೇನಭೂತೇಷು ದಯಾಂ ಕುರ್ವಂತಿ ಸಾಧವಃ ,, ಅರ್ಥ—ಯಾವ ಪ್ರಕಾರವಾಗಿ ತನಿಗೆ ಪ್ರಾಣ ವು ಅತ್ಯಂತ ಪ್ರಿಯವಾಗಿರುವದೊ ಹಾಗೆಯೇ ಅನ್ಯಸರ್ವಭೂ ✓ ತಗಳಿ ಗೂ ಪ್ರಿಯವಾಗಿರುವದು. ಆದ್ದರಿಂದ ಈ ಪ್ರಕಾರವಾಗಿ ತಿಳಿಯಲ್ಪ ಟ್ಟ ಸಾಧು ಪುರುಷನು ತನಿಗೆ ಸಮಾನವಾಗಿ ಸರ್ವಭೂತಪ್ರಾಣಿಗಳಮೇ ಲೂ ದಯವಂ ಮಾಡುತ್ತಿರುವನು ಎಂದು. ಅಂತು ಎಲೈ ಶಿಷ್ಯನೆ! ಹೀಗೆ ಸಂಕ್ಷೇಪವಾಗಿ ಸನ್ಯಾಸಿಯ ಆಚರಣೆಯನ್ನು ವರ್ಣನೆ ಮಾಡ ಲ್ಪಟ್ಟಿರುವದು. ಹಾಗೆ ಈ ಸರ್ವ ಲಕ್ಷಗಳಿಂದ ಯುಕ್ತನಾದ ಯಾವ (ಯತಿಃ) ಅಂದರೆ,-ಸನ್ಯಾಸೀಪುರುಷನುಂಟೋ ಅವನು (ವಿಮುಚ್ಯತೆ) ಅಂದರೆ,-ಶೀಘ್ರದಲ್ಲಿಯೇ ನಿರ್ವಿಘ್ನವಾಗಿ ಮೋಕ್ಷಪದವಂ ಪಡದುಕೊಳ್ಳು ವನು. ಹ್ಯಾಗಾದರೂ ಪೂರ್ವೋಕ್ತರೀತಿಯಾಗಿ ಕೇವಲ ಜ್ಞಾನದಿಂದ ಲೇ ಮೋಕ್ಷನ ಪ್ರಾಪ್ತಿಯಾಗುವದು. ಹಾಗಾದರೂ ಹ್ಯಾಗೆ ಯಾವನಾ ನೊಬ್ಬ ರೋಗೀ ಪುರುಷನು ರೋಗ ನಿವೃತ್ತಮಾಡುವಂಥಾ ಔಷಧಿ ಭ ಕ್ಷಣೆ ಮಾಡಿದ್ದರೂ ಪಥ್ಯವಿರಸದಿರುವದ್ದರಿಂದ ಆ ಔಷಧಿಯು ರೋಗದ ನಿವೃತ್ತಿಯಂ ಮಾಡುವಲ್ಲಿ ಸಮರ್ಥವಾಗದಿರುವದೋ ಹಾಗೆಯೇ ಜ್ಞಾನದ ಪ್ರಾಪ್ತಿಯಾದ್ದರೂ ಬಳಿಕ ಯಾವ ಪುರುಷನು ಶಾಸ್ತ್ರೋಕ್ತವಾದ ಸ್ವಸ್ವಧರ್ಮದ ಆಚರಣ ಮಾಡದಿದ್ದರೆ ಅಜ್ಞಾನವು ಸಂಶಯ ಮತ್ತು ವಿ ಪರೀತ ಭಾವನೆಗಳಿಂದ ಯುಕ್ತವಾಗಿ ಜನ್ಮಮರಣ ರೂಪವಾದ ಸಂಸಾರ ರೋಗದ ನಿವೃತ್ತಿಯಂ ಮಾಡುವಲ್ಲಿ ಸಮರ್ಥವಾಗದಿರುವದು. ಈ ವಾ ರ್ತೆಯು ಪರಾಶರ ಮುನಿಗಳೂ ಕೂಡ ವರ್ಣಿಸಿರುವರು. “ಮಣಿಮಂ ತ್ರೌಷಧೈರ್ವಹ್ನಿಃ। ಪ್ರದೀಪ್ತೋಪಿಯಥೇಂಧನಂ ಪ್ರದಗ್ಧುಂನೈವಶಕ್ತಃ ಸ್ಯಾತ್ ಪ್ರತಿಬದ್ಧಸ್ತಥೈವಹಿ ಜ್ಞಾನಾಗ್ನಿರಪಿಸಂಜಾತಃ ಸುದೀಪ್ತಃ ಸುದ್ರ

✓, ಜೀವರ್ಧಾನ್ಯ-ಸಮ್ಮದ,

ಧೌಪಿಕೆ ಪ್ರದಗ್ಧುಂನ್ನೈವಶಕ್ತಃ ಸ್ಯಾತ್ ಪ್ರತಿಬದ್ಧಸ್ತು ಕಲ್ಮಷಮ್,,
ಅರ್ಥ—ಹ್ಯಾಗೆಮಣಿಮಂತ್ರಔಷಧಾದಿಗಳಿಂದ ಪ್ರತಿ ಬದ್ಧವಾದ ಅಗ್ನಿಯು, ಪ್ರದೀಪ್ತವಾಗಿದ್ದರೂ, ಇಂಧನವನ್ನುದಹಿಸುವದರಲ್ಲಿ ಸಮರ್ಥವಾಗದಿರುವದೋ, ಹಾಗೆಯೇ ಸಂ ೧೦ ಶಯವಿಪರೀತ ಭಾವನೆಗಳಿಂದಲೂ ದುಷ್ಟಾಚಾರಾದಿಗಳಿಂದಲೂ, ಪ್ರತಿಬದ್ಧವಾಗಿರುವ ಜ್ಞಾನರೂಪವಾದ ಅಗ್ನಿಯು, ಹ್ಯಾಗಾದರೂದೃಢವಾಗಿಯೂ,ಇನ್ನು ಅತಿಪ್ರಜ್ವಲಿತವಾಗಿಯೂಉತ್ಪನ್ನವಾದದ್ದಾದರೂ, ಅದು ಪಾಪಗಳನ್ನುದ ೧೧ಗ್ಧಮಾಡುವಲ್ಲಿ ಸಮರ್ಥವಾಗದಿರುವದು. ಆದ್ದರಿಂದ ಎಲೈ ಶಿಷ್ಯನೇ ! ಜ್ಞಾನ ಉಂಟಾಗಿದ್ದರೂ, ಶರೀರಪಾತಪರ್ಯಂತವು ಅವಶ್ಯವಾಗಿ ಶಾಸ್ತ್ರೋಕ್ತವಾದ ತಮ್ಮತಮ್ಮ ಧರ್ಮಗಳನ್ನು ಆಚರಣಮಾಡತಕ್ಕದ್ದು ಯೋಗ್ಯವು.
||೧೦೫||

ಅ—ಈಪ್ರಕಾರವಾಗಿ ಸನ್ಯಾಸಿಯ ಧರ್ಮಗಳನ್ನು ಸಂಕ್ಷೇಪದಿಂದ ನಿರೂಪಣೆಯುಂಮಾಡಿ, ಈಗ ಗೃಹಸ್ಥನಧರ್ಮವನ್ನುನಿರೂಪಿಸುತ್ತಾರೆ||

—ಗುರುರುವಾಚ—

ಯಥಾಪ್ತಿತುಷ್ಟೋನ್ಯತರಾಗವರ್ಜಿತಃ|
ಸ್ವಧರ್ಮನಿಷ್ಠೋ ತಿಥಿಪೂಜಕಃಶುಚಿಃ||
ಜಿತೇಂದ್ರಿಯೋವೃದ್ಧಜನಾನುಗಃಕ್ಷಮಿ |
ವಿಚಾರಶೀಲಶ್ಚಗೃಹೇಪಿಮುಚ್ಯತೆ ||೧೦೬||

ಟೀಕಾ_ ಯಥಾಪ್ತಿತುಷ್ಟ ಇತಿ|| ಎಲೈ ಶಿಷ್ಯನೇ ! ಯಾವಗೃಹಸ್ಥನು(ಯಥಾಪ್ತಿತುಷ್ಟಃ)ಅಂದರೆ,ತನ್ನ ಶಾಸ್ತ್ರೋಕ್ತವಾದ ವ್ಯವಹಾರದಲ್ಲಿ ಯಾವದಾದರೂದ್ರವ್ಯದ ಪ್ರಾಪ್ತಿಯಾದರೆ ಆದರಲ್ಲಿಸಂತೋಷ ಅಂದರೆ ತೃಪ್ತಿಯನ್ನರಿಯುತ್ತಿರುವನು ಯಾತಕ್ಕಂದರೆ,-ಸಂತೋಷದ ಅಭಾ

೧೦, ಇದು ಸ್ಥಾಣುವೋ ಅಥವಾ ಪುರುಷನೋ ಈವಿಧವಾಗಿ ಎರಡು ಪಕ್ಷಗಳಂ ಪಿಡಿದಿರುವ ಜ್ಞಾನಕ್ಕೆ ಸಂಶಯವೆಂದು ಹೆಸರು, ೧೧, ವಿಪರೀತ ಭಾವನೆಯಾದದ್ದು ಒಂದರಲ್ಲಿ ಮತ್ತೊಂದರ ಜ್ಞಾನವು, ಅಂದರೆ, ಶುಕ್ತಿಯಲ್ಲಿ ಇದುರಜಿತವೆಂದು ತಿಳಿಯುವ ಅವಿದ್ಯಾವೃತ್ತಿ, ಈಗ್ಯೆ ತಾನಲ್ಲದ ದೇಹಾದಿಗಳನ್ನು ತನ್ನ ಸ್ವರೂಪವಾಗಿ ತಿಳಿದಿರುವದು ವಿಪರೀತಭಾವನೆಯಾಗುವದು, ೧೨, ಸುಡತಕ್ಕ ಕಾರ್ಯದಲ್ಲಿ,

ವವಾಗುವದರಿಂದಲೇ ಲೋಭದಿಂಯುಕ್ತನಾದ ಪುರುಷನುಸ್ವಧರ್ಮದ ಪರಿತ್ಯಾಗವಮಾಡಿ ಶೇವಾದಿ ಪರಾಧೀನತೆಯಿಂದ ಅತ್ಯಂತ ಕ್ಲೇಶವಂ ಪೊಂದುತ್ತಿರುವನು. ಹಾಗೆ ಈವಾರ್ತೆಯು ಮನುಸ್ಮೃತಿಯಲ್ಲಿಯೂ ವರ್ಣಿಸಲ್ಪಟ್ಟಿರುವದು. “ ಸಂತೋಷಂಪರಮಾಸ್ಥಾಯ ಸುಖಾರ್ಥೀಸಂಯತೋಭವೇತ್ । ಸಂತೋಷಮೂಲಂಹಿಸುಖಂದುಃಖಮೂಲಂ ವಿಪರ್ಯಯಃ ,,

ಅರ್ಥ—ಸುಖದ ಆಚ್ಛೆಯುಳ್ಳ ಪುರುಷನಿಗೆ ಪರಮ ಸಂತೋಷದಲ್ಲಿ ಇರಲಾಗುವದರಿಂದ ವ್ಯವಹಾರದೊಳ್ ತತ್ಪರನಾಗಿರತಕ್ಕದ್ದು. ಯಾತಕ್ಕಂದರೆ,-ಸಂತೋಷವೇ ಸರ್ವ ಸುಖಗಳ ಮೂಲವು ಮತ್ತು ಅದಕ್ಕೆ ವಿಪರೀತವಾದ ಯಾವ ಆಶೆಯುಂಟೋ ಅದೇಯುಲ್ಲಾ ದುಃಖಗಳಿಗೂ ಮೂಲವಾಗಿರುವದು ಎಂದು. ಆದ್ದರಿಂದ ವಿವೇಕೀಪುರುಷನು ಯಾವಾಗಲೂ ತನಿಗಿಂತ ಒಡವರಾಗಿ ಮತ್ತು ದುಃಖಿಗಳಾದ ಪುರುಷರಕಡೆ ನೋಡುವದ್ದರಿಂದಲೂ ಹಾಗೆ ಪರಾಧೀನತಾದಿ ಕ್ಲೇಶಗಳ ಕಡೆ ನೋಡುವದ್ದರಿಂದಲೂ ತನ್ನ ಚಿತ್ತದಲ್ಲಿ ಸಂತೋಷವಂ ಗ್ರಹಿಸುವದೇ ಯೋಗ್ಯವು. ಹಾಗೆ ಅನೃತ-ಯಾವ ಅಸತ್ಯ ಭಾಷಣ ಉಂಟೋ ಅದರಿಂದಲೂ ರಹಿತನಾಗಿರುವನು. ಯಾತಕ್ಕಂದರೆ,-ಅಸ ೧ ತ್ಯ ಭಾಷಣ ಮಾಡುವದಕ್ಕೆ ಸಮಾನ. ಎರಡನೆ ಯಾವ ಪಾಪವೂ ಇಲ್ಲ. ಈ ವಾರ್ತೆಯೂ ಮನುಸ್ಮೃತಿಯಲ್ಲಿಯೇ ಹೇಳಿರುವದು. “ ಬ್ರಹ್ಮಘ್ನೋಯೇಸ್ಮೃತಾಲೋಕಾ ಯೇಚಸ್ತ್ರೀಬಾಲಘಾತಿನಃ ॥ ಮಿತ್ರದ್ರೋಹಃಕೃತಘ್ನಸ್ಯ ತೇತೆಸ್ಯುಬ್ರುವತೋಮೃಷಾ ,,

ಅರ್ಥ॥ ಯಾವ ಗತಿಯನ್ನು ಬ್ರಹ್ಮಹತ್ಯ ಮಾಡುವಂಥಾ ಪುರುಷನು ಪೊಂದುತ್ತಿರುವನೋ ಹಾಗೆ ಯಾವ ಗತಿಯು ಸ್ತ್ರೀ ಮತ್ತು ಬಾಲಕರನ್ನು ಕೊಲ್ಲುವರಿಗೆ ಆಗುತ್ತಿರುವದೋ ಇನ್ನು ಯಾವಗತಿಯು ಮಿತ್ರರಲ್ಲಿ ದ್ರೋಹ ಮಾಡುವಂಥಾವನಿಗೂ ಮತ್ತು ಕೃತಘ್ನ ಪುರುಷನಿಗೂ ಆಗುತ್ತಿರುವದೋ ಅದೇಗತಿ ರಾಜಸಭಾ ೨ ದಿ ಸ್ಥಲಗಳಲ್ಲಿ ಅಸತ್ಯ ಭಾಷಣಮಾಡ ವಂಥಾ ಪುರುಷನಿಗೆ ಆಗುವದು ಎಂದು. ಮತ್ತು ಯಾವ ಸ್ಥಲದಲ್ಲಿ ಯಾವದಾದರೂ ಒಂದು ಜೀವದ ಪ್ರಾಣ ರಕ್ಷಣವಾಗುವದಾಗಿದ್ದರೆ ಅಲ್ಲಿ ಒಂದು ವೇಳೆ ಅಸತ್ಯಭಾಷಣ ಮಾಡಿದರೂ ದೋಷವಾಗುವದಿಲ್ಲ. ಆದರೆ ಇದು ಮ

೧, ಸುಳ್ಳುಮಾತು, ೨, ರಾಜನ ದರ್ಬಾರ್-ಆದಿಶಬ್ದದಿಂ ಕೋರ್ಟು ಕಛೇರಿ ಮೊದಲಾದನು ಯಸ್ಥಾನಗಳನ್ನು ತಿಳಿಯ ತಕ್ಕದ್ದು,

ಗುಂಟಲ್ಪಟ್ಟ ಧರ್ಮವಾಗುವದು, ಆದಕಾರಣ ವಿವೇಕಿಪುರುಷನು ಸರ್ವತ್ರ ವಿಚಾರಮಾಡಿಯೇ ಸತ್ಯಭಾಷಣ ಮಾಡುವದು ಯೋಗ್ಯವು. ಹಾಗೆ (ರಾಗವರ್ಜಿತಃ) ಅಂದರೆ,-ರಾಗ-ಯಾವ ಸ್ತ್ರೀ ಪುತ್ರಾದಿಗಳಲ್ಲಿ ಅತ್ಯಂತ ಪ್ರೀತಿಯುಂಟೋ ಅದರಿಂದಲೂ ರಹಿತನಾಗಿರುವನು. ಯಾತಕ್ಕಂದರೆ,— ಸ್ತ್ರೀಯಾದಿಗಳಲ್ಲಿ ಅಧಿಕ ಸ್ನೇಹವಾಗುವದ್ದರಿಂದ ಅವರಿಗೋಸ್ಕರ ಸುಂದರ ಸುಂದರವಾದ ವಸ್ತ್ರಗಳು ಮತ್ತು ಆಭೂಷಣಾದಿಗಳ ಸಂಪಾದನೆಯೂ ಮಾಡಬೇಕಾಗಿ ಅಧಿಕ ದ್ರವ್ಯಾಪೇಕ್ಷೆ ಯಾಗುವದರಿಂದ ಸಂತೋಷದ ಪರಿತ್ಯಾಗ ಮಾಡಿ ಅವಶ್ಯವಾಗಿ ಪರಾಧೀನತಾದಿ ಕ್ಲೇಶಗಳ ಪ್ರಾಪ್ತಿಯಾದೀತು; ಆದ್ದರಿಂದ ಅವುಗಳವಿಷಯವಾಗಿ ಚಿತ್ತದಲ್ಲಿ ಅಧಿಕವಾದ ರಾಗವಂ ಮಾಡದೆ ಇರಬೇಕು ಈವಿಷಯವನ್ನು ಗೀತೆಯಲ್ಲಿ ಭಗವಂತನೂ ಕೂಡ ನಿರೂಪಿಸಿರುವನು " ಅಸಕ್ತಿರನಭಿಷ್ವಂಗಃ ಪುತ್ರದಾರ ಗೃಹಾದಿಷು ,, ಎಲೇ ಅರ್ಜುನ! ಮುಮುಕ್ಷು ಪುರುಷನು ಪುತ್ರಸ್ತ್ರೀ ಗೃಹಾದಿಗಳಲ್ಲಿ ಆಸಕ್ತಿಯನ್ನೂ ಮತ್ತು ಅತ್ಯಂತ ಪ್ರೇಮವನ್ನೂ ಮಾಡದೆ ಇರಬೇಕೆಂದು. ಹಾಗೆ ಯಾವ ಗೃಹಸ್ಥನು (ಸ್ವಧರ್ಮನಿಷ್ಠಃ) ಅಂದರೆ ಯಾವಾಗಲೂ ತನ್ನ ವರ್ಣಾಶ್ರಮದ ಧರ್ಮದಲ್ಲಿ ನಿಷ್ಠೆಯುಳ್ಳವನಾಗಿರುವನು. ಅರ್ಥಾತ್ ತನ್ನ ಧರ್ಮಕಿಂತ ವಿರುದ್ಧಾಚರಣ ಮಾಡುವದ್ದರಿಂದ ಯಾವಾಗಲಾದರೂ ಅಧಿಕವಾದ ದ್ರವ್ಯಪ್ರಾಪ್ತಿಯೂ ಆಗುವದಾದರೆ ಆಗ ಆಕಾರ್ಯವಂ ಮಾಡದಿರುವನು. ಮತ್ತು ಯೇನಾದರೂ ವಿಪತ್ತಿನ ಕಾಲದಲ್ಲಿ ಬ್ರಾಹ್ಮಣನಿಗೆ ತನ್ನ ಷಟ್[೩]ಕರ್ಮಗಳಿಂದ ಕುಟುಂಬದ ಪೋಷಣವಾಗಲಶಕ್ಯವಾದರೆ ಆಗಲವನಿಗೆ ಕ್ಷತ್ರಿಯ ಮತ್ತು ವೈಶ್ಯನ ಕರ್ಮ ಮಾಡುವದಕ್ಕೂ ಧರ್ಮಶಾಸ್ತ್ರದಲ್ಲಿ ಅನು[೪]ಜ್ಞಾಮಾಡಿರುವದು. ಆದ್ದರಿಂದ ಆಕಾಲದಲ್ಲಿ ದೋಷವಿಲ್ಲ. ಇಲ್ಲಿ ಧರ್ಮನಿಷ್ಠ ಶಬ್ದದಿಂದ ವೇದಾಧ್ಯಯನ ಸಂಧ್ಯಾ ತರ್ಪಣ ಶ್ರಾದ್ಧ ವೈಶ್ವದೇವಾದಿಯಾದ ಯಾವ ದ್ವಿಜಾತಿ ಪುರುಷರ ನಿತ್ಯನೈಮಿತ್ತಿಕ ಧರ್ಮ ಉಂಟೋ ಅದರಲ್ಲಿ ತತ್ಪರವಾಗಿರುವದನ್ನೂ ಗ್ರಹಿಸಿಕೊಳ್ಳತಕ್ಕದ್ದು. ಹಾಗೆ (ಅತಿಥಿಪೂಜಕಃ) ಅಂದರೆ,-ಯಾವ ತನ್ನ ಗೃಹದಲ್ಲಿ ಪ್ರಾಪ್ತವಾದ ಅತಿಥಿಯನ್ನೂ ಯಥಾಶಕ್ತಿ ಅನ್ನಜಲಾದಿಗಳಿಂದ ಸತ್ಕರಗೈಯ್ಯುವನು.

೩ ಷಟ್ಕರ್ಮಗಳಂದರೆ-ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನಪ್ರತಿಗ್ರಹಗಳೆಂಬವು ಯಜನವೆಂದರೆ, ತಾನೂ ಯಜ್ಞಮಾಡುವದು. ಯಾಜನ ಮಾಡತಕ್ಕ ಅಧಿಕಾರಿಗಳಿಂದಲೂ ಮಾಡಿಸುವದು ಅಧ್ಯಯನ-ತಾನೂ ವೇದವನ್ನೋದುವದು. ಅಧ್ಯಾಪನ ಓದತಕ್ಕ ಅಧಿಕಾರಿಗಳಿಗೂ ಓದಿಸುವದು. ದಾನ-ತಾನೂ ದೇಶಕಾಲಪಾತ್ರವರಿತು ಕೊಡುವದು. ಪ್ರತಿಗ್ರಹ ಹಾಗೆ ತಾನೂ ತೆಗದುಕೊಳ್ಳುವದು. ೪. ಅಪ್ಪಣೆ.

ಯಾತಕ್ಕೆಂದರೆ,-ಅತಿಥಿಯನ್ನು ಪೂಜಿಸದಿದ್ದರೆ ಗೃಹಸ್ಥನಿಗೆ ಮಹಾಹಾನಿಯುಂಟಾಗುವದು ಈವಾರ್ತೆಯಾದರೂ ಮನುಸ್ಮೃತಿಯಲ್ಲಿಯೇ ವರ್ಣಿಸಲ್ಪಟ್ಟಿರುವದು. ,, " ಅತಿಥಿರ್ಯಸ್ಯ ಗೃಹಾದೇವ ಭಗ್ನಾಶೋ ವಿನಿವರ್ತತೆ ಸದತ್ವಾ ದುಷ್ಕೃತಂ ತಸ್ಮೈ ಪುಣ್ಯಮಾದಾಯ ಗಚ್ಛತಿ "ಅರ್ಥ-ಯಾವಗೃಹಸ್ಥನ ಮನೆಯಿಂದ ಅತಿಥಿಯು ನಿರಾಶನಾಗಿ ಹಿಂದಕ್ಕೆ ಹೋಗುವದಾದರೆ ಅವನು ಆಗೃಹಸ್ಥನಂಕುರಿತು ತನ್ನ ಪಾಪವಂ ಕೊಟ್ಟು ಅವನ ಸರ್ವಪುಣ್ಯವನ್ನು ತೆಗದುಕೊಂಡು ಹೊರಟುಹೋಗುವನು ಎಂದು. ಹಾಗೆ (ಶುಚಿಃ) ಅಂದರೆ ಮಾಂಸ ಭಕ್ಷಣ ಮಾಡುವದು, ಮದಿರಾಪಾನ ಮಾಡುವದು, ಯಾವದಾದರು ಉಚ್ಛಿಷ್ಟ ಭೋಜನಮಾಡುವದು, ತಂಗಳನ್ನ ಭಕ್ಷಿಸುವದು, ಮ್ಲೇಚ್ಛಾದಿಯಾದ ನೀಚಪುರುಷರಲ್ಲಿ ಸ್ಪರ್ಶಮಾಡುವದು, ಸ್ನಾನವಿಲ್ಲದೆ ಭೋಜನಮಾಡುವದು ಇವೇ ಮೊದಲಾಗಿ ಯಾವ ಅಪವಿತ್ರ ವ್ಯವಹಾರ ಉಂಟೋ ಅದರಿಂದಲೂ ರಹಿತನಾಗಿರುವನು. ಯಾಕಂದರೆ "ಆಚಾರಪ್ರಭವೋ ಧರ್ಮಃ.,, ಈ ಮಹಾಭಾರತದ ವಾಕ್ಯದಲ್ಲಿ ಪ್ರಥಮ ಆಚಾರವಾದರೇನೆ. ಸರ್ವಧರ್ಮಗಳ ಉತ್ಪತ್ತಿ ಎಂದು ವರ್ಣಿಸಿರುವದು. ಹಾಗೆಯೇ (ಜಿತೇಂದ್ರಿಯಃ) ಅಂದರೆ ಜಿಹ್ವಾ ಉಪಸ್ಥಾದಿಯಾದ ಇಂದ್ರಿಯಗಳನ್ನು ಗೆದ್ದವನಾಗಿರುವನು. ಅಂದರೆ ಇಂದ್ರಿಯಗಳು ವಶೀಭೂತವಾಗುವದ್ದರಿಂದ ಶಾಸ್ತ್ರನಿಷಿದ್ಧವಾದ ಪರಸ್ತ್ರೀ ಗಮನಾದಿಗಳಲ್ಲಿ ಪ್ರವೃತ್ತನಾಗದಿರುವನು. ಮತ್ತು ಪೂರ್ಣಮಾಸ್ಯ, ಅಮಾವಾಸ್ಯ, ಏಕಾದಶೀ ಮೊದಲಾದ ಶುಭದಿನಗಳಲ್ಲಿ ತನ್ನ ಸ್ತ್ರೀಯಲ್ಲಿಯೂ ಸಂಗಮಮಾಡದಿರುವನು. ಇನ್ನು ಹಗಲಿನಲ್ಲಿ ಮರತಾದರೂ ಒಂದಾನೊಂದು ವೇಳೆ ಸ್ತ್ರೀಸಂಗಮ ಮಾಡದಿರಬೇಕು? ಯಾತಕ್ಕೆಂದರೆ ದಿವಾಮೈಥುನದಲ್ಲಿ ಧರ್ಮಶಾಸ್ತ್ರದೊಳಗೂ ಮತ್ತು ವೇದದೊಳಗೂ ಬಹುವಾಗಿ ದೋಷಬರಿಯಲ್ಪಟ್ಟಿರುವದು ಹಾಗೆ (ವೃದ್ಧಜನಾನುಗಃ) ಅಂದರೆ ಯಾವಕಾರ್ಯವನ್ನಾದರೂ ಆರಂಭ ಮಾಡಬೇಕಾದರೆ ಪ್ರಥಮದಲ್ಲಿ ತನ್ನ ಪಿತಾ ಪಿತಾಮಹಾದಿಯಾದ ವೃದ್ಧಜನರಲ್ಲಿ ಕೇಳಿಕೊಳ್ಳುವನು. ಮತ್ತು ಯಾವ ತನ್ನವರಿಂದಾಗದಿದ್ದರೆ, ಎರಡನೆ ತನ್ನ ಜಾತಿಯವರಿಂದ ಕೇಳಿಕೊಳ್ಳುವನು. ಅಥವಾ (ವೃದ್ಧಜನಾನುಗಃ) ಅಂದರೆ,- ಯಾವಪ್ರಕಾರ ತನ್ನ ಪಿತಾಪಿತಾ ಮಹಾದಿಗಳ ವ್ಯವಹಾರವಾಗಿತ್ತೋ ಅದಕ್ಕೆ ಅನುಸಾರವಾಗಿ ತಾನೂ ಆಚರಿಸುವನು " ಈವಾರ್ತೆಯೂ ಮನುಸ್ಮೃತಿಯಲ್ಲಿ ಕಥನ ಮಾಡಿರುವದು. " ಯೇನಾಸ್ಯ ಪಿತರೋ ಯಾತಾ ಯೇನ ಯಾತಾಃ ಪಿತಾಮಹಾಃ ॥ ತೇನ ಯಾಯಾತ್ಸತಾಂ ಮಾರ್ಗಂ ತೇನ ಗಚ್ಛನ್ನರಿಷ್ಯತಿ ,,

ಅರ್ಥ॥ ಯಾವ ಮಾರ್ಗದಲ್ಲಿ ಈ ಪುರುಷನ ಪಿತಾ ಮತ್ತು ಪಿತಾಮಹಾದಿಯಾದ ಸ್ವಜನರು ನಡೆಯುವರಾಗಿದ್ದರೋ ಅದೇ ಮಾರ್ಗದಲ್ಲಿ ಇವನೂ ನಡೆಯಬೇಕು ಯಾಕಂದರೆ,-ಅದರಂತೆ ನಡೆಯುವದ್ದರಿಂದ ಈ ಪುರುಷನಿಗೆ ಕದಾಚಿತ್ತಾದರೂ ದುಃಖವಾಗುವದಿಲ್ಲವೆಂದು. ಆದರೆ ಈ ಶ್ಲೋಕದಲ್ಲಿ ಮನುವು "ಸತಾಂಮಾರ್ಗ,, ಈ ಪದ ಹಿಡಿದಿರುವನು ಅದರಿಂದ ಯಾವ ತನ್ನ ಪಿತಾ ಪಿತಾಮಹಾದಿಗಳ ಧರ್ಮದಿಂ ನಡೆಯುವಂಥಾವನಾದರೆ; ಆ ಮಾರ್ಗವನ್ನು ಪರಿತ್ಯಾಗ ಮಾಡಿಬಿಟ್ಟು ಅದರಲ್ಲಿ ಹಠ ಮಾಡಲಾಗದು. ಯಾತಕ್ಕಂದರೆ,-ಒಂದು ವಿಷಯದಲ್ಲಿಯೇ ಹಠಮಾಡಿಕೊಳ್ಳುವದ್ದರಿಂದ ಪುರುಷನಿಗೆ ಉನ್ನತಿಯು ಒಂದುಕಾಲಕ್ಕೂ ಆಗುವದಿಲ್ಲ. ಈ ವಾರ್ತೆಯು ಹಿತೋಪದೇಶದಲ್ಲಿಯೂ ಹೇಳಿರುವದು. "ತಾತಸ್ಯಕೂಪೋಯಮಿತಿ ಬ್ರುವಾಣಾಃ ಕ್ಷಾರಂಜಲಂ ಕಾಪುರುಷಾಃ ಪಿಬಂತಿ ,, ಅರ್ಥ॥ ಇದು ನಮ್ಮ ಪಿತೃ ತೋಡಿದ ಭಾವಿಯಾಗಿರುವದು ಆದ್ದರಿಂದ ನಾವು ಈ ಭಾವಿಯ ನೀರನ್ನೇ ಕುಡಿದೇವು ಇನ್ನೊಂದರದೂ ಕುಡಿಯುವದಿಲ್ಲ ಎಂಬ ಈ ಪ್ರಕಾರವಾದ ಹಠದಿಂದ ಮೂರ್ಖಪುರುಷನು ಸರ್ವದಾ ಕ್ಷಾರೋದಕವನ್ನೇ ಕುಡಿಯುತ್ತಿರುವನು. ಅಥವಾ (ವೃದ್ಧಜನಾನುಗಃ) ಅಂದರೆ,-ವಿದ್ಯಾವೃದ್ಧರಾಗಿಯೂ, ಮತ್ತು ಜ್ಞಾನವೃದ್ಧರಾಗಿಯೂ, ಯಾವ ಮಹಾತ್ಮರಾದ ಪುರುಷರುಂಟೋ ಅವರ ಕಥಾನುಸಾರವಾಗಿ ನಡೆಯುವದು. ಹಾಗೆ (ಕ್ಷಮೀ) ಅಂದರೆ,-ಯಾವ ಸಜಾತೀಯರ ಮತ್ತು ಅನ್ಯ ಪುರುಷರ ತಾಡನಾ ಇನ್ನು ದುಷ್ಟ ವಚನಗಳನ್ನೂ ಸಹ ಸಹಿಸುತ್ತಿರುವನು. ಯಾಕಂದರೆ,-ಕ್ರೋಧ ಮಾಡುವದರಿಂದ ಪುರುಷನ ಜಪತಪಾದಿಯಾದ ಸುಕೃತಗಳು ನಾಶವಾಗಿ ಹೋಗುವವು. ಈ ವಾರ್ತೆಯು ಮಹಾಭಾರತದಲ್ಲಿ ವರ್ಣಿಸಲ್ಪಟ್ಟಿರವದು. "ಯತ್ಕ್ರೋಧನೋಯಜತಿಯದ್ದದಾತಿ ಯದ್ವಾತಪಸ್ತಪ್ಯತಿಯಜ್ಜುಹೋತಿ ॥ ವೈವಸ್ವತಸ್ತದ್ಧರತೇಸ್ಯಸರ್ವಂಮೋಘಃ ಶ್ರಮೋಭವತಿಹಿಕ್ರೋಧನಸ್ಯ ,,

ಅರ್ಥ॥ ಕ್ರೋಧಿಯಾದ ಪುರುಷನು ಯಾವದಾದರೂ ಯೇನಾದರೂ ಯಜನ ಮಾಡುವನೋ, ಅಥವಾ ದಾನಮಾಡುವನೋ, ಅಲ್ಲದೆ ತಪ ಮಾಡುವನೋ, ಅದೂ ಅಲ್ಲದೆ ಹೋಮ ಮಾಡುವನೋ, ಆ ಸರ್ವವನ್ನು ಯಮರಾಜನು ಹರಣಮಾಡಿಕೊಳ್ಳುವನು. ಮತ್ತು ಆ ಕ್ರೋಧಿಪುರುಷನ ಸರ್ವ ಪರಿಶ್ರಮವೂ ವ್ಯರ್ಥವೇ ಆಗುವದು ಎಂದು. ಹಾಗೆ (ವಿಚಾರಶೀಲಕ್ಷ) ಅಂದರೆ,-ಯಾವ ಪ್ರತಿನಿತ್ಯವೂ ಅಷ್ಟಪ್ರಹರಗಳಲ್ಲಿಂದ ಎರಡು

೫. ಧ್ಯಾನ.

ಅಥವಾ ಮೂರುವೇಳೆಗೇ ಸರ್ವವ್ಯವಹಾರಗಳ ಪರಿತ್ಯಾಗವಮಾಡಿ, ಏಕಾಂತ ಸ್ಥಾಲದೊಳ್ಪೋದವನಾಗಿ ತನ್ನ ಹಿತ ಮತ್ತು ಅಹಿತ ಕಾರ್ಯಗಳ ವಿಚಾರ ಮಾಡತಕ್ಕದ್ದು. ಅದರಲ್ಲಿ ಯಾವಯಾವದು ತನಿಗೆ ಅಹಿತ ಮಾಡುವಂಥಾ ಅಶುಭ ಕರ್ಮವಾಗಿರುವದೋ ಅದನ್ನು ದಿನದಿನಕ್ಕೆ ಕಡಮೆಮಾಡುತ್ತಲೂ ಮತ್ತು ಯಾವ ಯಾವದೋ ಹಿತಮಾಡುವಂಥಾ ಶುಭಕರ್ಮವಾಗಿರುವದೋ ಅದನ್ನು ವೃದ್ಧಿಗೊಳಿಸುತ್ತಲೂ ಹೋಗುವದು. ಈ ವಿಷಯವು ಮನುಸ್ಮೃತಿಯಲ್ಲಿಯೂ ಹೇಳಿರುವದು. “ಏಕಾಕೀ ಚಿಂತಯೇನ್ನಿತ್ಯಂ ವಿವಿಕ್ತೇ ಹಿತಮಾತ್ಮನಃ ॥ ಏಕಾಕೀ ಚಿಂತಯಾನೋಹಿ ಪರಂ ಶ್ರೇಯೋಧಿಗಚ್ಛತಿ” ಅರ್ಥ—ವಿವೇಕೀ ಪುರುಷನು ಪ್ರತಿನಿತ್ಯವೂ ಏಕಾಕಿಯಾಗಿ ಏಕಾಂತಸ್ಥಲದೋಳ್ ಪೋಗಿ ತನ್ನ ಆತ್ಮನಿಗೆ ಹಿತಚಿಂತನೆಯಂ ಮಾಡಬೇಕು. ಯಾತಕ್ಕಂದರೆ,- ಏಕಾಕಿಯಾಗಿ ಚಿಂತನೆಯಂ ಮಾಡುವದ್ದರಿಂದ ಈ ಪುರುಷನು ಪರಮ ಕಲ್ಯಾಣವಂ ಪೊಂದುತ್ತಿರುವನು ಎಂದು. ಅಲ್ಲಿ ವಿವೇಕ ಶಬ್ದವು ವೇದಾಂತಾದಿಯಾದ ಸಚ್ಛಾಸ್ತ್ರಗಳ ವಿಚಾರಕ್ಕೂ ಉಪಲಕ್ಷಣವೆಂದು ತಿಳಿದುಕೊಳ್ಳತಕ್ಕದ್ದು. ಹೀಗೆ ಸಂಕ್ಷೇಪದಿಂದ ಗೃಹಸ್ಥನ ಧರ್ಮಗಳನ್ನು ವರ್ಣನೆ ಮಾಡಲ್ಪಟ್ಟಿರುವದು. ಆದಕಾರಣ ಎಲೈ ಶಿಷ್ಯನೆ! ಯಾವ ಗೃಹಸ್ಥ ಪುರುಷನು ಅತ್ಯಾದಿಯಾದ ಧರ್ಮಗಳನ್ನು ಯಥಾವತ್ ಆಚರಣ ಗೈಯ್ಯುವನೋ ಅವನು (ಗೃಹೇಪಿ ಮುಚ್ಯತೆ) ಅಂದರೆ,- ಗೃಹಸ್ಥಾಶ್ರಮದಲ್ಲಿ ಇರುತ್ತಿದ್ದರೂ ಜ್ಞಾನದ ಪ್ರಾಪ್ತಿದ್ವಾರಾ ಜಾಗ್ರತೆಯಲ್ಲಿ ನಿರ್ವಿಘ್ನವಾಗಿ ಮೋಕ್ಷಪದವಂ ಪೊಂದುತ್ತಿರುವನು. ಈ ವಾರ್ತೆಯು ಅನ್ಯಸ್ಮೃತಿಯಲ್ಲಿಯೂ ಹೇಳಲ್ಪಟ್ಟಿರುವದು “ನ್ಯಾಯಾಗತಧನಸ್ತತ್ವ ಜ್ಞಾನನಿಷ್ಠೋತಿಥಿಪ್ರಿಯಃ ॥ ಶ್ರಾದ್ಧಕೃತ್ಸತ್ಯವಾದೀಚ ಗೃಹಸ್ಥೋಪಿವಿಮುಚ್ಯತೆ” ಅರ್ಥ—ಯಾವ ಪುರುಷನು ನ್ಯಾಯ ಪೂರ್ವಕವಾದ ಧರ್ಮದಿಂದ ಧನದ ಉಪಾ[೬]ರ್ಜನ ಮಾಡುವನೋ ಮತ್ತು ಜೀವ ಬ್ರಹ್ಮರ ಏಕತೆಯು ಯಾವತತ್ವಜ್ಞಾನವುಂಟೊ ಅದರಲ್ಲಿ ನಿಷ್ಠೆಯುಳ್ಳವನಾಗಿಯೂ ಹಾಗೆ ತನ್ನ ಕಾಲೋಚಿತ ಶ್ರಾದ್ಧಾದಿಯಾದ ಯಾವ ನಿತ್ಯನೈಮಿತ್ತಿಕ ಕರ್ಮವುಂಟೋ ಅವುಗಳನ್ನು ಯಥಾಶಕ್ತಿ ಆಚರಣ ಮಾಡುವವನಾಗಿಯೂ, ಮತ್ತು ಸತ್ಯವಾದೀ ಅಂದರೆ,- ಯಾವಾಗಲೂ ಸತ್ಯಭಾಷಣೆಯನ್ನಾಡುತ್ತಲಿರುವ ಇಂಥಾ ಗೃಹಸ್ಥಪುರುಷನೂ ಕೂಡ ಮೋಕ್ಷ ಪದವಂ ಪಡೆಯುತ್ತಿರುವನು. ॥೧೦೬॥

೬. ಸಂಪಾದನೆ.

ಅ—ಈ ಪ್ರಕಾರವಾಗಿ ಇಲ್ಲಿಯ ಪರ್ಯಂತವು ಯೆಲ್ಲಾ ಪ್ರೊಪ್ರೋಕ್ತವಾದ ಗ್ರಂಥ ಸಂದರ್ಭದಿಂದ ಧರ್ಮದ ಲಕ್ಷಣವನ್ನೂ ಈಶ್ವರವು ತ್ತು ಜೀವನತಟಸ್ಥ ಲಕ್ಷಣವನ್ನೂ ಇನ್ನು ಸ್ವರೂಪ ಲಕ್ಷಣವನ್ನೂ ಹಾಗೆ ಅವೆರಡರ ಏಕತೆಯನ್ನೂ ಅಂತಃಕರಣದ ಶುದ್ಧಿಯ ಉಪಾಯವನ್ನೂ ಮತ್ತು ಪರಮ ಸುಖದ ಪ್ರಾಪ್ತಿಯಲ್ಲಿ ನಿರ್ವಿಕಲ್ಪ ಸಮಾಧಿಯ ಹೇತುತ್ವವನ್ನೂ ಯೋಗದ ಅಂಗ ಮತ್ತು ಸ್ವರೂಪ ಹಾಗೆ ಪುರುಷಾರ್ಥ ಇನ್ನು ಪ್ರಾರಬ್ಧದ ಬಲಾಬಲ ಭಾವಗಳನ್ನೂ ಮತ್ತು ಸನ್ಯಾಸೀ ಹಾಗೆ ಗೃಹಸ್ಥನ ಧರ್ಮ ಇತ್ಯಾದಿ ಈ ಸರ್ವ ರಹಸ್ಯಗಳನ್ನು ಕೇಳಿ ಉತ್ತಮಾಧಿಕಾರಿಯಾದ್ದರಿಂದ ಇಷ್ಟರಲ್ಲಿಯೆ ಸರ್ವ ಸಂಶಯಗಳಿಂ ರಹಿತನಾದ ಶಿಷ್ಯನು ಈಗ ತನ್ನ ಕೃತಕೃತ್ಯತೆಯನ್ನು ಸೂಚನೆ ಮಾಡುವವನಾಗಿ ಗುರುವಿನಲ್ಲಿ ಅನುಜ್ಞೆಯಂ ಬೇಡುತ್ತಾನೆ.

—ಶಿಷ್ಯಉವಾಚ—

ಶಮಂಗತೋಮೇ ಖಿಲಸಂಶಯಜ್ವರೋ
ಭವನ್ಮುಖಾಂಭೋಜ ವಚೋಮೃತದ್ರವೈಃ ॥
ವನೇಥವಾ ಕಿಂಸದನೇ ವಿಹಾರಿಣಾ
ಮಯಾಕಥಂಸ್ಥೇಯ ಮಿಹಾಧುನಾಗುರೋ ॥೧೦೭॥

ಟೀಕಾ॥ ಶಮಂಗತಇತಿ- ಎಲೈ ಗುರುವೇ ! (ಭವನ್ಮುಖಾಂಭೋಜ) ಅಂದರೆ,- ತಮ್ಮ ಮುಖರೂಪವಾದ ಕಮಲದಿಂದ ಯಾವ ವಚನ ರೂಪವಾದ ಅಮೃತವು ದ್ರವಿಸುತ್ತಾ ಇರುವದೋ ಅದರಿಂದ (ಸಂಶಯಜ್ವರೊ) ಅಂದರೆ,- ನನ್ನ ಯಾವ ಅಜ್ಞಾನದಿಂ ಪುಟ್ಟಿದ ಜೀವೇಶ್ವರಾದಿ ವಿಷಯಕವಾದ ನಾನಾ ಪ್ರಕಾರದ ಸಂಶಯ ರೂಪ ಮೆಸಿಪ ಹೃದಯದ ಜ್ವರ (ತಾಪ) ವಿದ್ದದೋ ಅದೀಗ (ಅಖಿಲ) ಅಂದರೆ,- ಸರ್ವವೂ ನಿಃಶೇಷವಾಗಿ ಶಾಂತಿಯಂ ಪೊಂದಿಕೊಂಡಿರುವದು. ಅರ್ಥಾತ್ - ಈಗ ನಾನು ಸರ್ವ ಸಂಶಯ ವಿಪರ್ಯಯದಿಂದ ರಹಿತವಾದ ಜ್ಞಾನವಂ ಪಡದುಕೊಂಡಿರುವದರಿಂದ ಕೃತಕೃತ್ಯನಾಗುತ್ತಿರುವೆನು. ಅದರಿಂದೆಲೈ ಭಗವಂತನೇ! ಈಗ ಈ ವರ್ತಮಾನ ಶರೀರದ ಶೇಷವಿರುವಲ್ಲಿ ಪ್ರಾರಬ್ಧ ಕರ್ಮದಕ್ಷಯದ ಪರ್ಯಂತ ನನಿಗೆ (ವನೇಥವಾಕಿಂಸದನ) ಅಂದರೆ,-ಹಿಮಾಲಯಾದಿ ಪರ್ವತಗಳಲ್ಲಿ ಹೋಗಲ್ಪಟ್ಟು, ವನದಲ್ಲಿ ನಿವಾಸ ಮಾಡುವದು ಯೋಗ್ಯವೋ ಹಾಗಲ್ಲದದ್ದರೆ ಸ್ತ್ರೀ ಪುತ್ರಾದಿಗಳಿಂ ಯುಕ್ತವಾದ ತನ್ನ ಅದೇ ಮನೆಯಲ್ಲಿ ಹೋಗಲ್ಪಟ್ಟು, ನಿವಾಸ ಮಾಡುವದು ಉಚಿತವೋ ಆ ಈ ಎ

ರಡು ಪಕ್ಷಗಳಲ್ಲಿ ಯಾವದರ ಗ್ರಹಣ ಮಾಡುವದು ಯೋಗ್ಯವು? ಹಾಗೆ (ಕಥಂಸ್ಥೇಯಂ) ಅಂದರೆ,-ಅಲ್ಲಿ ವನ ಅಥವಾ ಗೃಹದಲ್ಲಿ ನಿವಾಸವಾದ ನನಿಗೆ ಯಾವ ಪ್ರಕಾರವಾದ ಆಚರಣದಲ್ಲಿರತಕ್ಕದ್ದು ಉಚಿತವಾಗುವದೋ ಅಂದರೆ, ಯಾವಾಗಲೂ ಧ್ಯಾನದಲ್ಲಿಯೆ ಇರತಕ್ಕದ್ದು ಉಚಿತವೋ ಅಲ್ಲದೆ ಲೌಕಿಕ ವ್ಯವಹಾರದಲ್ಲಿ ಯಾದರೂ ಇರಲಾಗುವದು ಯೋಗ್ಯವೋ ಅದನ್ನು ಕೃಪೆಯಿಂದ ನನ್ನಂಕುರಿತು ಆಜ್ಞಾಪಿಸಿರಿ ಎಂದನು ॥೧೦೭॥

ಅ—ಈ ಪ್ರಕಾರವಾದ ಶಿಷ್ಯನ ಕೃತಕೃತ್ಯತೆಯನ್ನೂ ಮತ್ತು ಪ್ರಾರ್ಥನೆಯನ್ನೂ ಸಹಾ ಕೇಳಿ ಹಾಗೆ ತಮ್ಮ ಉಪದೇಶದ ಪರಿಶ್ರಮಕ್ಕೆ ಸಫಲತೆಯನ್ನು ನೋಡಿ ಅತ್ಯಂತ ಪ್ರಸನ್ನತೆಯಂ ಪೊಂದಿದ ಗುರುವು ಈಗ ಮೂರು ಶ್ಲೋಕಗಳಿಂದ ಉಪದೇಶವಂ ಮಾಡುವವರಾಗಿ ಅವನಿಗೆ ಅನುಜ್ಞೆಯಂ ಕೊಡುತ್ತಾರೆ.

— ಗುರುರುವಾಚ —

ಶರೀರತಃಕರ್ಮಸಮಾಚರನ್ ಬಹಿ
ರ್ಗತಾಂತರಾಸಕ್ತಿರಮಿತ್ರಮಿತ್ರಯೋಃ ।
ಸಮಃಸತಾಂಸೇತುಮಲಂಘಯಂಸ್ತತ
ಸ್ತಪೋವನೆ ವಾಸದನೆ ರಮಸ್ವಭೋಃ ॥೧೦೮॥

ಟೀಕಾ॥ ಶರೀರತಇತಿ- ಎಲೈ ಶಿಷ್ಯನೇ ! ಎಷ್ಟುವಿಧ ಸಂಧ್ಯಾ ತರ್ಪಣಾದಿ ವೈದಿಕ ಮತ್ತು ಕ್ರಯ ವಿಕ್ರಯಾದಿ ಲೌಕಿಕ ಗೃಹಸ್ಥನ ಕರ್ಮವಿರುವದೋ ಅಥವಾ ಸ್ನಾನ, ಶೌಚ, ಭಿಕ್ಷಾಟನಾದಿಯಾದ ಯಾವ ತ್ಯಾಗಿಯ ಕರ್ಮ ಉಂಟೋ ಅವುಗಳೆಲ್ಲವನ್ನು ಲೌಕಿಕ ದೃಷ್ಟಿಯಲ್ಲಿ ಬಾಹ್ಯಶರೀರದಿಂದ ಸಮ್ಯಕ್ ಪ್ರಕಾರವಾಗಿ ಆಚರಣ ಮಾಡುತ್ತಲೂ ಮತ್ತು (ಗತಾಂತರಾಸಕ್ತಿಃ) ಅಂದರೆ,-ಆ ಕರ್ಮಗಳಂ ಮಾಡುವಲ್ಲಿ ಯಾವ 'ಅಹಂಕರ್ತಾ, ಎಂಬ ಅಭಿಮಾನರೂಪ ಆಸಕ್ತಿ ಇರುವದೋ ಅದರಿಂದಂತರದಲ್ಲಿ ರಹಿತನಾಗುತ್ತಲೂ, ಹಾಗೆ (ಅಮಿತ್ರಮಿತ್ರಯೋಃಸಮಃ) ಅಂದರೆ,-ತನ್ನ ಶತ್ರು ಮತ್ತು ಮಿತ್ರನಲ್ಲಿ ಸಮಭಾವದಿಂ ನೋಡುತ್ತಲೂ, ಇಲ್ಲಿ ಶತ್ರು ಮಿತ್ರ ಶಬ್ದದಿಂದ ಸಾಧು, ಮಧ್ಯಸ್ಥ, ಪಾಪಿ, ಬ್ರಾಹ್ಮಣ, ಚಾಂಡಾಲಶ್ವಾನಾದಿಗಳಿಗೂ ಗ್ರಹಣ ಮಾಡಿಕೊಳ್ಳತಕ್ಕದ್ದು. ಹಾಗೆ (ಸತಾಂಸೇತುಂ) ಅಂದರೆ,-ಪೂರ್ವದ ಋಷಿ ಮುನಿ ಆದಿಯಾದ ಸತ್ಪುರುಷರು ಯಾವ ಗೃಹಸ್ಥ ಅಥವಾ ತ್ಯಾಗಿಗಳಿಗೋಸುಗ ಭೋಜನ ಪಾನಾದಿಯಾದ ಮರ್ಯಾದಾ ಕಟ್ಟು ಮಾಡಿರುವರೋ ಅದನ್ನು ಜ್ಞಾಸ

ಮದದಿಂದ ಉಲ್ಲಂಘನ ಮಾಡದೇ ಇರುತ್ತಲೂ (ತತಃ) ಅಂದರೆ,—ಈ ಪೇಳಿದ ಲಕ್ಷಣಗಳಿಂದ ಯುಕ್ತನಾಗಿ ಬಳಿಕ (ತಪೋವನೇವಾಸದನೇರಮಸ್ವ) ಅಂದರೆ,-ಎಲೈ ಶಿಷ್ಯನೇ ! ಬೇಕಾದರೆ ಹಿಮಾಲಯಾದಿ ಪರ್ವತಗಳಲ್ಲಿ ಹೋಗಲ್ಪಟ್ಟ ತಪೋವನದಲ್ಲಿಯಾದರೂ ಅಥವಾ (ಸದನೆ) ಅಂದರೆ,-ಬೇಕಾದರೆ ಸ್ತ್ರೀ ಪುತ್ರಾದಿಗಳಿಂ ಸಹಿತವಾದ ತನ್ನ ಗೃಹದಲ್ಲಿಯಾದರೂ ಹೋಗಿದ್ದುಕೊಂಡು ನೀನು ರ ೧ ಮಣ ಮಾಡು ಆ ಎರಡರಲ್ಲಿ ನಿನಗೆ ಯಾವರೀತಿಯಾಗಿಯೂ ಹಾನಿ ಯುಂಟಾಗುವದಿಲ್ಲ. ಈ ವಾರ್ತೆಯು ಯೋಗವಾಸಿಷ್ಠದ ಉಪಶಮ ಪ್ರಕರಣದಲ್ಲಿಯೂ ವರ್ಣಿಸಲ್ಪಟ್ಟಿರುವದು. "ವಸತೂತ್ತಮಭೋಗಾಢ್ಯೇ ಸ್ವಗೃಹೇವಾಜನಾಕುಲೆ ॥ ಸರ್ವಭೋಗೋಜ್ಝಿತಾಭೋಗೇ ಸುಮಹತ್ಯಥವಾವನೆ । ನಾಸ೨ಕಲಂಕಮಾಪ್ನೋತಿ ಹೇಮಪಂಕಗತಂಯಥಾ ,, ಅರ್ಥ॥ ಎಲೈ ರಾಮಚಂದ್ರನೇ ! ಯಾವ ಪುರುಷನಿಗೆ ಆತ್ಮಸ್ವರೂಪದ ದೃಢಬೋಧವಾಗಿರುವದೋ ಮತ್ತು ಚಿತ್ತದಲ್ಲಿ ಭೋಗಗಳ ಆಸಕ್ತಿ ಇಲ್ಲವೋ ಆ ಪುರುಷನು ಬೇಕಾದರೆ ನಾನಾಪ್ರಕಾರವಾದ ಸ್ತ್ರೀಯಾದಿ ಉತ್ತಮಭೋಗಗಳಿಂದ ಸಂಯುಕ್ತವಾಗಿಯೂ ಮತ್ತು ನಾನಾಪ್ರಕಾರವಾದ ಬಂಧುಮಿತ್ರ ದಾಸದಾಸೀ ಮೊದಲಾದ ಜನಗಳಿಂದ ಎಲ್ಲಾಕಡೆಯಿಂದಲೂ ವ್ಯಾಪ್ತವಾದ ತನ್ನ ಗೃಹದಲ್ಲೇ ನಿವಾಸ ಮಾಡಿದರೂ ಅಥವಾ ಸರ್ವ ಭೋಗಗಳಿಂ ರಹಿತವಾದ ಯಾವ ಮಹಾಗ ೨ ಹ್ವರ ವನ ಉಂಟೋ ಅದರಲ್ಲಿ ಹೋಗಿ ನಿವಾಸ ಮಾಡಿದರೂ ಮುಖ್ಯವಾಗಿ ಆ ತತ್ವದರ್ಶೀ ಪುರುಷನು ಅವೆರಡರಿಂದಲಿಪಾಯಮಾನನಾಗದಿರುವನು. ಹ್ಯಾಗೆ ಪಂ ೩ ಕದಲ್ಲಿ ಬಿದ್ದಿರುವ ಸುವರ್ಣವು ಕಲಂ ೪ ಕವಂ ಪೊಂದದಿರುವದೋ ಹಾಗೆಂದಾಶಯವು. ॥೧೦೪॥

ಅ॥ ಈ ಪ್ರಕಾರವಾಗಿ ಬಾಹ್ಯಶರೀರದ ವ್ಯವಹಾರವನ್ನು ವರ್ಣಿಸಿ ಈಗ ಆಂತರಿಕವಾದ ಮನದ ವ್ಯವಹಾರವನ್ನು ನಿರೂಪಿಸುತ್ತಾರೆ.

—ಗು ರು ರು ವಾ ಚ—

ಮನೋಭ್ರಮಂವಿಶ್ವಮಿದಂಚರಾಚರಂ ।

ವಿಲೋಕಯನ್ನಾತ್ಮರತಿರ್ಗತೈಷಣಃ ॥

---

೧ ಕ್ರೀಡಿಸುವನಾಗು. ೨. ಇದಕ್ಕೆ ಗುಹೆ ಎಂತಲೂ, ಕಪಟವೆಂತಲೂ, ಲತಾಗೃಹವೆಂತಲೂ, ಕಾಡೆಂತಲೂ, ಹೋಗುವದಕ್ಕೆ ಅರ್ಹವಾಗದಿರುವ ಪ್ರದೇಶವೆಂತಲೂ, ವಿಶ್ವನಿಘಂಟಿನಲ್ಲಿಯೂ, ಮೇದಿನೀ ನಿಘಂಟಿನಲ್ಲಿಯೂ ಬರೆಯಲ್ಪಟ್ಟಿರುವದು. ೩. ಬೊಡಿ-ಕೆಸರು. ೪. ಕಲ್ಮಷ-ಕಪ್ಪು, ಕಳೆಹೀನತೆ ಅಥವಾ ಮಾಲಿನ್ಯ.

ವಿನಿರ್ಮಮೋಮಾನಮದಾದಿವರ್ಜಿತ |

ಸ್ತ್ರೋಪನೇವಾಸವನೇರಮಸ್ವಭೋಃ॥ ।೧೮೯॥

ಟೀಕಾ॥ ಮನೋಭ್ರಮಮಿತಿ—ಎಲೈ ಶಿಷ್ಯನೇ ! ಬ್ರಹ್ಮನೇ ಮೊದಲಾಗಿ ಸ್ಥಾಣುಪರ್ಯಂತವಾದ ಯಾವ ಈಚರಾಚರ ಜಗತ್ತು ಪ್ರತೀತವಾಗುತ್ತಿರುವದೋ ಆ ಸರ್ವವನ್ನು ನೀನು (ಮನೋಭ್ರಮಂ) ಅಂದರೆ,-ಹ್ಯಾಗೆ ಸ್ವಪ್ನಾವಸ್ಥೆಯಲ್ಲಿ ಮನದ ಭ್ರಮೆಯಿಂದ ಮಿಥ್ಯಾವಾದ ಪದಾರ್ಥಗಳು ಸತ್ಯದಂತೆ ಪ್ರತೀತವಾಗುವವೋ ಹಾಗೆಯೇ (ವಿಲೋಕಯ) ಅಂದರೆ,-ವಿಚಾರ ದೃಷ್ಟಿಯಿಂದ ನೋಡು. ॥ ಈ ವಿಷಯವು ಯೋಗವಾಶಿಷ್ಠದಲ್ಲಿಯೂ ವರ್ಣಿಸಲ್ಪಟ್ಟಿರುವದು. ‘‘ದೀರ್ಘಸ್ವಪ್ನಮಿಮಂವಿದ್ಧಿ ದೀರ್ಘಂವಾಚಿತ್ತವಿಭ್ರಮಂ। ಚರಾಚರಂಲಯಇವ ಪ್ರಸುಪ್ತಮಿಹಪಶ್ಯತಾಮ್ ॥,, ಅರ್ಥ॥ ಎಲೈ ಮುಮುಕ್ಷು ಪುರುಷನೇ ! ಈ ಚರಾಚರ ಪ್ರಪಂಚವನ್ನು ನೀನು ದೀರ್ಘಕಾಲದ ಸ್ವಪ್ನಸಮಾನವಾಗಿ ಅಥವಾ ದೀರ್ಘವಾದ ಚಿತ್ತದ ವಿಭ್ರಮವೆಂದು ತಿಳಿ. ಅಥವಾ ಪ್ರಲಯಕಾಲ ಮತ್ತು ಸುಷುಪ್ತಿಯಂತೆ ಸರ್ವವಿಧದಿಂದಲೂ ಪ್ರಸುಪ್ತಶೂನ್ಯದ ಹಾಗೆ ನೋಡು ಎಂದು॥ ಹಾಗೆ (ಆತ್ಮರತಿಃ) ಅಂದರೆ,-ಎಲೈ ಶಿಷ್ಯನೇ ! ಹೇಳಲ್ಪಟ್ಟ ಪ್ರಕಾರವಾಗಿ ಸರ್ವ ಪ್ರಪಂಚವನ್ನು ಮಿಥ್ಯಾ ಎಂದು ತಿಳಿದು ಸಕಲ ಬಾಹ್ಯ ವಿಷಯಗಳಿಂದ ಚಿತ್ತವಂ ಕಳದುಕೊಂಡು ತನ್ನ ಪ್ರತ್ಯಗಾತ್ಮಸ್ವರೂಪದಲ್ಲಿಯೇಪ್ರೀತಿಯಂ ಮಾಡುತ್ತಲೂ,ಈವಾರ್ತೆಯು ಮುಂಡಕೋಪನಿಷತ್ತಿನಲ್ಲಿಯೂ ಪ್ರಕಟ ಮಾಡಿರುವದು. ‘‘ಆತ್ಮಕ್ರೀಡ ಆತ್ಮರತಿಃ ಕ್ರಿಯಾವಾನೇಷಬ್ರಹ್ಮವಿದಾಂವರಿಷ್ಠಃ ,, ಅರ್ಥ॥ ಯಾವ ಪುರುಷನು ತನ್ನ ಆತ್ಮನಲ್ಲಿಯೇ ಕ್ರೀಡಿಸುವವನಾಗಿಯೂ, ಮತ್ತು ಆತ್ಮನಲ್ಲಿಯೇ ಪ್ರೀತಿಯುಳ್ಳವನಾಗಿಯೂ, ಹಾಗೆ ಆತ್ಮನಲ್ಲಿಯೇ ಕ್ರಿಯಾವಂತನಾಗಿಯೂ ಇರುವನೋ ಅವನೇ ಸರ್ವ ಬ್ರಹ್ಮವೇತ್ತಾ ಪುರುಷರುಗಳಲ್ಲಿ ಶ್ರೇಷ್ಠನಾಗಿರುವನು ಎಂದು॥ಹಾಗೆ (ಗತೈಷಣಃ) ಅಂದರೆ,-ವಿತ್ತೈಷಣಾ, ಪುತ್ರೈಷಣಾ, ಲೋಕೈಷಣಾ, ಎಂಬ ಈ ಪ್ರಕಾರದಿಂದ ಮೂರು ಬಗೆಯಾದಯಾವ ಏಷಣಾ-ಅಂದರೆ,-ವಾಸನೆಯುಂಟೋ ಅದನ್ನೂ ಪರಿತ್ಯಾಗ ಮಾಡುತ್ತಲೂ, ಹಾಗೆ(ವಿನಿರ್ಮಮೊ)ಅಂದರೆ,-ಯಾವ ಬಾಹ್ಯ ಪದಾರ್ಥದಲ್ಲೂ ಅಥವಾ ತನ್ನ ಶರೀರದಲ್ಲಿಯೂ ಮಮತೆಯಿಂದ ರಹಿತನಾಗುತ್ತಲೂ ಹಾಗೆ (ಮಾನಮದಾದಿವರ್ಜಿತಃ) ಅಂದರೆ,-ಜಾತಿ ವಿದ್ಯಾದಿಗಳ ಯಾವ ಅಭಿಮಾನ ಮತ್ತು ಮದವೂ ಉಂಟೋ ಅವುಗಳಿಂದಲೂ

ವರ್ಜಿತನಾಗುತ್ತಲೂ ಆದಿಶಬ್ದದಿಂದ ಕಾಮ, ಕ್ರೋಧ, ಲೋಭ, ಮೋಹಾದಿಗಳನ್ನೂ ಗ್ರಹಿಸಿಕೊಳ್ಳತಕ್ಕದ್ದು. ॥ ಹಾಗೆ ಎಲೈ ಶಿಷ್ಯನೇ ! ಈ ಸರ್ವಲಕ್ಷಣಗಳಿಂದ ಯುಕ್ತನಾದವನಾಗಿ ಒಳಿಕ ತಪೋವನದಲ್ಲೋ ಅಥವಾ ತನ್ನ ಗೃಹದಲ್ಲಿ ಎರಡರಲ್ಲಿ ಎಲ್ಲಿ ನಿನಗೆ ಇಚ್ಛೆಯಾಗುವದೋ ಅಲ್ಲಿಯೋ ನೀನು ಹೋಗಿ ಕ್ರೀಡಿಸುವನಾಗು. ... ॥೧೦೯॥

ಅ॥ ಈ ಪ್ರಕಾರದಿಂದ ಮನದ ವ್ಯಾಪಾರವನ್ನು ನಿರೂಪಣಮಾಡಿ, ಈಗ ಎಲ್ಲಾ ಗ್ರಂಥದ ಮುಖ್ಯ ರಹಸ್ಯವನ್ನು ವರ್ಣಿಸುತ್ತಾ ಉಪದೇಶದ ಸಮಾಪ್ತಿಯಂ ಮಾಡುತ್ತಾರೆ.

—ಗು ರು ರು ವಾ ಚ—

ಅಹಂಹರಿಃಸರ್ವಮಿದಂಚತನ್ಮಯಂ ।
ತತೋಽನ್ಯದಾಸೀನ್ನಭವಿಷ್ಯತಿಕ್ವಚಿತ್ ।
ಇಮಂದೃಢಾಂಸಿಸ್ಥಿಯಮಂತರಾತ್ಸ್ಥಿತ ।
ಸ್ತಪೋವನೇವಾಸದನೇರಮಸ್ವಭೋಃ॥ ।೧೧೦॥

ಟೀಕಾ॥ಅಹಂಹರಿರಿತಿ—ಎಲೈಶಿಷ್ಯನೇ ! (ಅಹಂಹರಿಃ)ಅಂದರೆ,- ನಾನು ಸಾಕ್ಷಾತ್ಸಚ್ಚಿದಾನಂದ ನಾರಾಯಣಸ್ವರೂಪನಾಗಿರುವೆನು. ಯಾತಕ್ಕಂದರೆ,-ಎಲ್ಲಿಯ ಪರ್ಯಂತವು ಈ ಅಧಿಕಾರೀಪುರುಷನು ಪ್ರಥಮ ತನ್ನನ್ನು ನಾರಾಯಣರೂಪವೆಂದು ನಿಶ್ಚಯ ಮಾಡದಿರುವನೋ ಅಲ್ಲಿಯ ಪರ್ಯಂತವೂ ಅವನಿಗೆ ನಾರಾಯಣನ ಪ್ರಾಪ್ತಿ ಆಗದಿರುವದು. ॥ ಈ ವಿಷಯವು ಯೋಗವಾಸಿಷ್ಠದ ಉಪಶಮ ಪ್ರಕರಣದಲ್ಲಿಯೂ ಪ್ರತಿಪಾದನ ಮಾಡಿರುವದು. "ನಾ೧ ವಿಷ್ಣುಃಕೀರ್ತಯೇದ್ವಿಷ್ಣುಂ ನಾವಿಷ್ಣುರ್ವಿಷ್ಣುಮರ್ಚಯೇತ್ । ನಾವಿಷ್ಣುಃಸಂಸ್ಮರೇದ್ವಿಷ್ಣುಂ ನಾವಿಷ್ಣುರ್ವಿಷ್ಣುಮಾಪ್ನುಯಾತ್ ॥" ಅರ್ಥ॥ ಯಾವವರಿಗೆ ಉಪಾಸಕ ಪುರುಷನು ಪ್ರಥಮ ಸ್ವಯಂವಿಷ್ಣುವಾಗಲಿಲ್ಲವೋ ಆವರಿಗೆ ವಿಷ್ಣುವಿನ ಕೀರ್ತನ ಮಾಡಲಿಲ್ಲ. ಮತ್ತು ಯಾವವರಿಗೆಸ್ವಯಂವಿಷ್ಣುವಾಗಲಿಲ್ಲವೋ ಆವರಿಗೆ ವಿಷ್ಣುವಿನ ಪೂಜೆಯೂ ಆಗಲಿಲ್ಲ. ಹಾಗೆ ಯಾವವರಿಗೆ ಪ್ರಥಮ ಸ್ವಯಂವಿಷ್ಣುರೂಪವಾಗಲಿಲ್ಲವೋ ಆವರಿಗೆ ವಿಷ್ಣುವಿನ ಸ್ಮರಣೆಯೂ ಆಗಲಿಲ್ಲ ಇನ್ನು ಯಾವವರಿಗೆ ಸ್ವಯಂವಿಷ್ಣುರೂಪವಾಗದಿರುವನೋ ಆವರಿಗೆ ವಿಷ್ಣುವಿನ ಪ್ರಾಪ್ತಿಯೂ ಆಗುವದಿಲ್ಲವದು ಎಂದು॥ ಮತ್ತು " ವಾಸು

೧ ಈ ಶ್ಲೋಕವು ಬ್ರಹ್ಮನಾರಾಸಿಸ್ಯದೊಳು ಪ್ರಹ್ಲಾದೋಪಾಖ್ಯಾನದಲ್ಲಿ ಹೇಳಲ್ಪಟ್ಟಿರುವದು.

ದೇವಃಸರ್ವಮಿತಿ ,, ಈ ಪ್ರಕಾರದಿಂದ ಸರ್ವ ಜಗತ್ತನ್ನು ಯಾವ ನಾರಾಯಣರೂಪವಾಗಿ ನೋಡತಕ್ಕದ್ದೋ ಅದೇ ಎಲ್ಲಕ್ಕಿಂತ ಉತ್ತಮಪರವಾದ ಭಕ್ತಿ ಎನಿಸುವದು. ಅದರಿಂದೀಪ್ರಕಾರವಾಗಿ ಯಾವಾಗ ಸರ್ವ ಜಗತ್ತು ನಾರಾಯಣರೂಪವಾದುದೋ ಅದರ ಹಿಂದೆ ಆ ಉಪಾಸಕನು ಅದರಿಂ ಭಿನ್ನವಾಗಿ ಎಲ್ಲಿರುವನು ? ಮತ್ತು ಯಾವಾಗ ಪುನಃ ಭಿನ್ನವಾಗಿದ್ದರೆ ಅವನು ಸರ್ವ ಜಗತ್ತನ್ನು ನಾರಾಯಣರೂಪವಾಗಿ ತಿಳಿಯಲಿಲ್ಲ ಇನ್ನು ಯಾವಾಗ ಸರ್ವ ಜಗತ್ತನ್ನು ನಾರಾಯಣರೂಪವಾಗಿ ತಿಳಿಯಲಿಲ್ಲವೋ ಆಗ ಉತ್ತಮಭಕ್ತಿಯಾಗಲಿಲ್ಲ. ಆದ್ದರಿಂದ ವಿಷ್ಣುವಿನ ಉಪಾಸಕಪುರುಷರು ತನ್ನನ್ನೂ ವಿಷ್ಣುರೂಪವೇ ಎಂದು ತಿಳಿಯಬೇಕು.

ಹಾಗೆ (ಸರ್ವಮಿದಂಚತನ್ಮಯಂ) ಅಂದರೆ,-ಎಲೈ ಶಿಷ್ಯನೇ! ಈ ಯಾವ ಚರಾಚರ ಜಗತ್ತು ನೋಟದಲ್ಲಿ ಮತ್ತು ಶ್ರವಣದಲ್ಲಿ ಬಂದಿರುವದೋ ಅದೂ ಎಲ್ಲ ನಾರಾಯಣರೂಪವೇ ಆಗಿರುವದು. ಈ ವಾರ್ತೆಯು ಶ್ರುತಿಯಲ್ಲಿಯೂಕೂಡ ವರ್ಣಿಸಲ್ಪಟ್ಟಿರುವದು. “ ಯಾವಕ್ಕಿಂಚಿಜ್ಜಗತ್ಸರ್ವಂ ದೃಶ್ಯತೆಶ್ರೂಯತೇಪಿವಾ । ಅಂತರ್ಬಹಿಶ್ಚತತ್ಸರ್ವಂ ವ್ಯಾಪ್ಯನಾರಾಯಣಃಸ್ಥಿತಃ ॥ ,, ಅರ್ಥ॥ ಯಾವನ್ಮಾತ್ರ ಈ ಜಗತ್ತು ನೋಟದಲ್ಲಿ ಮತ್ತು ಶ್ರವಣದಲ್ಲಿ ಬಂದಿರುವದೋ ಹಾಗೆ ಅವುಗಳೆಲ್ಲದರ ಅಂತರ ಮತ್ತು ಬಾಹ್ಯದೊಳ್ ವ್ಯಾಪ್ಯದಿಂದನಾರಾಯಣನಿರುತ್ತಿರುವನುಎಂದು.

ಹಾಗೆ ವಿಷ್ಣುಪುರಾಣದಲ್ಲಿ ಪರಾಶರಮುನಿಯು ಮೈತ್ರೇಯನಂ ಕುರಿತು ಕೂಡ ಹೇಳಿರುವನು. “ ಜ್ಯೋತೀಂಷಿವಿಷ್ಣುರ್ಭುವನಾನಿವಿಷ್ಣುರ್ವನಾನಿವಿಷ್ಣುರ್ಗಿರಯೋದಿಶಶ್ಚ । ನದ್ಯಃಸಮುದ್ರಾಶ್ಚಸಏವಸರ್ವಂಯದಸ್ತಿಯನ್ನಾಸ್ತಿಚವಿಪ್ರವರ್ಯ ॥ ,,

ಅರ್ಥ॥ಎಲೈವಿಪ್ರಶ್ರೇಷ್ಠನಾದ ಮೈತ್ರೇಯನೇ!ಎಷ್ಟರವರಿಗೆ ಸೂರ್ಯ, ಚಂದ್ರಮಾ, ಧ್ರುವ,ಶುಕ್ರಾದಿಯಾದಆಕಾಶ ಮಂಡಲದಲ್ಲಿ ಜ್ಯೋತಿಗಳಿರುವವೋ,ಅವೆಲ್ಲವು ವಿಷ್ಣುರೂಪವೇಯೆ. ಮತ್ತು ಎಷ್ಟುವಿಧವಾಗಿ ಭೂರ್ಭುವಸ್ಸ್ವರಾದಿಯಾದ ಚತುರ್ದಶಭುವನವುಂಟೋ ಅದೂ ಸರ್ವವೂ ವಿಷ್ಣುರೂಪವೆ. ಹಾಗೆ ಎಷ್ಟುಮಾತ್ರ ಸುಮೇರು ಹಿಮಾಲಯಾದಿ ಪರ್ವತಗಳಿರುವವೋ ಅವೂ ಎಲ್ಲವೂ ವಿಷ್ಣುರೂಪವೆ. ಮತ್ತು ಎಷ್ಟರವರಿವಿಗೆ ಪೂರ್ವ ಪಶ್ಚಿಮಾದಿಯಾದ ದಿಕ್ಕುಗಳುಂಟೋ ಅವೂ ಎಲ್ಲವೂ ವಿಷ್ಣುರೂಪವೇಯೆ. ಹಾಗೆ ಯಾವನ್ಮಾತ್ರ ಗಂಗಾ ಯಮುನಾದಿಯಾದ ನದಿಗಳಿರುವವೋ ಅವೂ ಎಲ್ಲಾ ವಿಷ್ಣುರೂಪವೆ. ಮತ್ತು ಎಷ್ಟುಮಾತ್ರ

ಕ್ಷಾರೋದಕ ಕ್ಷೀರೋದಕಾದಿಯಾದ ಸಮುದ್ರಗಳಿರುವವೋ ಅವೂ ಎಲ್ಲಾ ವಿಷ್ಣುರೂಪವೇಯು. ಅಂದರೆ,- ಎಲ್ಲಿನ ಪರ್ಯಂತ ವರ್ಣಿಸಿದರೂ (ಯದಪಿ) ಅಂದರೆ,- ಈ ಜಗನ್ಮಾತ್ರದಲ್ಲಿ ಯಾವ ವಸ್ತುವು ಪ್ರತ್ಯಕ್ಷವಾಗಿಧೆಯೋ ಮತ್ತು ಪ್ರತ್ಯಕ್ಷದಲಿಲ್ಲವೋ ಆ ಸರ್ವವೂ ವಿಷ್ಣುರೂಪವೇ ಎಂದು. ಹಾಗೆ ಎಲೈ ಶಿಷ್ಯನೇ! (ತತೋನ್ಯದಾಸೀನ್ನ) ಅಂದರೆ,- ಆ ನಾರಾಯಣನ ವಿನಃ ಎರಡನೆ ಯಾವವಸ್ತುವು ಈ ಕಾಲದಿಂ ಪೂರ್ವದಲ್ಲೂ ಉಂಟಾಗಿರಲಿಲ್ಲ. ಮತ್ತು ಈ ಕಾಲದಲ್ಲಿಯೂ ಇಲ್ಲ. ಇನ್ನು ಮುಂದಕ್ಕೂ ಉಂಟಾಗಲಾರದು. ಅರ್ಥಾತ್-ಭೂತಭವಿಷ್ಯತ್ ಮತ್ತು ವರ್ತಮಾನ ಕಾಲದಲ್ಲಿ ಸಹ ಒಬ್ಬನಾರಾಯನೆ ನಾನಾ ಪ್ರಕಾರವಾದ ಪದಾರ್ಥಗಳ ಆಕಾರವಿಂದ ಪ್ರತೀತ ವಾಗುತ್ತಿರುವನು. ಹಾಗೆ ಈ ವಾರ್ತೆಯು ನಾರಾಯಣೋಪನಿಷತ್ತಿನಲ್ಲೂ ನಿರೂಪಣಮಾಡಿರುವದು. “ ನಾರಾಯಣ ಏವೇದಂ ಸರ್ವಂ ಯದ್ಭೂತಂ ಯಚ್ಚ ಭಾವ್ಯಂ ,, ಅರ್ಥ—ಈ ಸರ್ವಜಗತ್ತು ನಾರಾಯಣನೇ ಆಗಿರುವದು. ಮತ್ತು ಯಾವ ಭೂತ ಹಾಗೆಭಾವ್ಯ ಅಂದರೆ,- ಭವಿಷ್ಯದ್ವಸ್ತುಗಳುಂಟೋ ಅವೂ ಎಲ್ಲಾ ನಾರಾಯಣನೆ ಆಗಿರುವದು ಎಂದು. ಇಲ್ಲಿ ನಾರಾಯಣನಲ್ಲಿ ಮತ್ತು ನಿರ್ಗುಣ ಬ್ರಹ್ಮದಲ್ಲಿ ಯಾವ ಭೇದದ ಶಂಕೆಯೂ ಮಾಡದೆ ಇರಬೇಕು. ಯಾತಕ್ಕಂದರೆ,-ಯಾವದಾನೊಂದು ಕಾರಣದಿಂದ ಬ್ರಹ್ಮವೆ ಸ್ಥೂಲಮತಿಯುಳ್ಳ ಭಕ್ತರ ಅನುಗ್ರಹಾರ್ಥವಾಗಿ, ನಾರಾಯಣನ ವ್ಯಕ್ತಿರೂಪದಿಂದ ಪ್ರತೀತವಾಗಿರುವದು. ಈ ವಿಷಯವು ಅಥರ್ವ ವೇದದ ರಾಮಪೂರ್ವತಾಪನೀ ಉಪನಿಷತ್ತಿನಲ್ಲಿಯೂ ಪ್ರಕಟಸಲ್ಪಟ್ಟಿರುವದು. “ ಚಿನ್ಮಯಸ್ಯಾದ್ವಿತೀಯಸ್ಯ ನಿಷ್ಕಲಸ್ಯಾಶರೀರಿಣಃ॥ ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋರೂಪಕಲ್ಪನಾ ,, ಅರ್ಥ—ಸಚ್ಚಿದಾನಂದ ಮಯವಾಗಿ ಅದ್ವಿತೀಯವಾಗಿ ನಿಷ್ಕಲವಾಗಿ ಮತ್ತು ಶರೀರದಿಂದ ರಹಿತವಾದ ಯಾವ ಪರಬ್ರಹ್ಮವುಂಟೋ ಅದೇ ಉಪಾಸಕ ಜನಗಳಿಗೋಸುಗವೆ ಚತುರ್ಭುಜ ವಿಷ್ಣ್ವಾದಿಯಾದ ವ್ಯಕ್ತಿಯು ಕಲ್ಪನಾ --ಅಂದರೆ,-— ನಿರ್ಮಾಣವಾಗಿರುವದು ಎಂದು ಹಾಗೆ ಸಾಮವೇದದ ತಲವಕಾರೋಪನಿಷತ್ತಿನಲ್ಲಿಯೂ “ ಬ್ರಹ್ಮಹದೇವೇಭ್ಯೋವಿಜಿಗ್ಯೇ ,, ಇತ್ಯಾದಿಯಾಗಿ ಬರೆಯಲ್ಪಟ್ಟಿರುವದು. ಯೇನಂದರೆ,-ಅಸುರರು ಮತ್ತು ದೇವತೆಗಳ ಯುದ್ಧದಲ್ಲಿ ಬ್ರಹ್ಮನು ದೇವತೆಗಳಿಗೆ ಜಯವಂ ಕೊಟ್ಟನು. ಅದರ ಒಳಿಕ ಆ ದೇವತೆಗಳು ಬ್ರಹ್ಮನನ್ನು ತಿಳಿಯದವರಾಗಿ ತಮ್ಮಿಂದಲೇ ಅಸುರರಿಗೆ

ಜಯುಮಸೂಚಲ್ಪಟ್ಟಿತೆಂದು ತಿಳಿದುಕೊಂಡು ಅಭಿಮಾನವಂ ಪೊಂದುತ್ತಿ
ದ್ದರು. ಹೀಗಿರಲು ಆ ವಿಷಯುವಂ ತಿಳಿದು ಅವರ ಮದವನ್ನು ದೂರಮಾ
ಡ ವದ್ವಾರಾ ಅವರ ಮೇಲೆ ಅನುಗ್ರಹಾರ್ಥವಾಗಿ ಆ ಬ್ರಹ್ಮನು ಆದೇವತೆ
ಗಳಿಗೆ ಸನ್ಮುಖನಾಗಿ ತೇಜೋಮಯವಾದ ಯಕ್ಷಸ್ವರೂಪದಿಂದ ಪ್ರಕಟ
ವಾಗುತ್ತಿದ್ದನು ಎಂದು ಹೇಳಿರುವದು. ಹಾಗೆ ಕೃಷ್ಣಾವತಾರದಲ್ಲಿ
ಭಗವಂತನು ತನ್ನ ಮುಖದಿಂದಲೇ ಹೇಳಿರುವನು. “ ಬ್ರಹ್ಮಣೋಹಿ
ಪ್ರತಿಷ್ಠಾಹಮಮೃತಸ್ಯಾವ್ಯಯಸ್ಯಚ ,, ಅರ್ಥ—ಎಲೆ ಅರ್ಜುನ,ಮೋ
ಕ್ಷರೂಪವಾಗಿ ಮತ್ತು ನಿರ್ವಿಕಾರ ಬ್ರಹ್ಮದ ಯಾವ ಪ್ರತಿಷ್ಠಾ-ಅಂದರೆ,
ಸ್ಥಿತಿಯುಂಟೋ ಅದು ನಾನೇಯಾಗಿರುವೆನು. ಅರ್ಥಾತ್—ಯಾವದನ್ನು
ವೇದಾಂತಿ ಜನಗಳು ಬ್ರಹ್ಮವೆಂದು ಹೇಳುತ್ತಿರುವರೋ, ಅದು ನಾನೇಯಾ
ಗಿರುವೆನು ಎಂದು ಶ್ರೀಕೃಷ್ಣನ ವಾಕ್ಯವು. ಆದ್ದರಿಂದ ನಾರಾಯಣ
ನಲ್ಲಿ ಮತ್ತು ಬ್ರಹ್ಮದಲ್ಲಿ ಕಿಂಚಿನ್ಮಾತ್ರವಾದರೂ ಭೇದವಿಲ್ಲ. ಹಾಗೆ ಎ
ಲೈ ಶಿಷ್ಯನೆ ! ನಾನು ಇನ್ನು ಈ ಸರ್ವಜಗತ್ತು ನಾರಾಯಣರೂಪವೆ,
ಅವನಿಂಭಿನ್ನವಾಗಿ ಯಾವ ವಸ್ತುವೂ ಇಲ್ಲ. ಈ ಹೇಳಲ್ಪಟ್ಟ ಪ್ರಕಾರ
ವಾದ ಯಾವ ನಿಶ್ಚಯವುಂಟೋ ಆ ನಿಶ್ಚಯದೋಳ್ ನೀನು ಸರ್ವದಾ
ತನ್ನ ಹೃದಯದಲ್ಲಿ ದೃಢಸ್ಥಿತನಾಗಿ ನಂತರ ಬೇಕಾದರೆ ತಪೋವನದಲ್ಲಿ
ಅಥವಾ (ಸದನೆ)ಅಂದರೆ,-ತನ್ನ ಗೃಹದಲ್ಲಿ ಹೋಗಲ್ಪಟ್ಟು ರಮಣಮಾಡು
ಹ್ಯಾಗೂ ನೀನು ಸರ್ವ ವಿಧದಿಂದಲೂ ಮುಕ್ತಸ್ವರೂಪನೆ ಆಗಿದ್ಧಿ. ಯಾ
ತಕ್ಕಂದರೆ,— ಈ ಹೇಳಲ್ಪಟ್ಟ ರೀತಿಯಾಗಿ ನಿಶ್ಚಯವುಳ್ಳ
ರುಷನಿಗೆ ಪುನಃ ಜನ್ಮ ಮರಣ ರೂಪವಾದ ಸಂಸಾರದ ಪ್ರಾಪ್ತಿಯಾ
ಗುವದಿಲ್ಲ. ಈ ವಾರ್ತೆವಿಷ್ಣುಪುರಾಣದಲ್ಲಿಯೂ ವರ್ಣಿಸಲ್ಪಟ್ಟಿರುವದು.
ಅಹಂಹರಿಃ ಸರ್ವಮಿದಂಜನಾರ್ದನೋನಾನ್ಯತ್ತತಃಕಾರಣಕಾರ್ಯಜಾ
ತಂ ॥ ಈದೃಙ್ಮನೋಯಸ್ಯನತಸ್ಯಭೂಯೋಭವಪ್ರೋದ್ಭವಾದ್ವಂದ್ವಗದಾಭ
ವಂತಿ ,, ಅರ್ಥ--ನಾನು ಹರಿಯಾಗಿರುವೆನು, ಮತ್ತು ಈ ಸರ್ವ ಚರಾ
ಚರ ಜಗತ್ತೂ ಕೂಡ ಜನಾರ್ದನ ರೂಪವಾಗಿರುವದು. ಅವನ ವಿನಃ
ಎರಡನೆ ಯಾವ ಕಾರಣ ಕಾರ್ಯರೂಪವಾದ ಪದಾರ್ಥ ಸಮೂಹವೂ
ಇಲ್ಲ. ಹೀಗೆಂಬ ಪ್ರಕಾರವಾಗಿ ಯಾವ ಪುರುಷನ ಮನದಲ್ಲಿ ದೃಢನಿಶ್ಚ
ಯವಾಗಿರುವದೋ(ತಸ್ಯ) ಅಂದರೆ,-ಅವನಿಗೆ ಪುನಃ ಜನ್ಮ ಮರಣದ ಅಭಾ
ವವಾದ್ದರಿಂದ ಬಳಿಕ ಶೀತೋಷ್ಣಕ್ಷುಧಾಪಿಪಾಸಾದಿಯಾದ ದ್ವಂದ್ವಜ
ನ್ಯಬಾಧಗಳು ಕದಾಚಿತ್ತಾದರೂ ಉಂಟಾಗುವದಿಲ್ಲ. ಅರ್ಥಾತ್-ಹ್ಯಾಗೆ.

ನದಿಯು ಜಲವು ಸಮುದ್ರದಲ್ಲಿ ಹೋಗಲ್ಪಟ್ಟು, ತನ್ನ ನಾಮ ಮತ್ತು ರೂಪದ ಪರಿತ್ಯಾಗಮಾಡಿ, ಸಮುದ್ರದೊಡನೆ ಏಕೀಭಾವವಂ ಪೊಂದುತ್ತಿರುವದೋ ಹಾಗೆಯೇ ಆತತ್ವದರ್ಶೀ ಪುರುಷನು ತನ್ನ ನಾಮರೂಪಗಳ ಪರಿತ್ಯಾಗ ಮಾಡಿ ವರ್ತಮಾನ ಶರೀರದ ಪಾತವಾದ್ದರಿಂದ ಸಚ್ಚಿದಾನಂದಮಯನಾದ ನಾರಾಯಣನೊಡನೆ ಏಕೀಭಾವವಂ ಪೊಂದಿರುವನು. ಹಾಗೆ ಈ ವಾರ್ತೆಯು ಮುಂಡಕೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು. "ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಸ್ತಂ ಗಚ್ಛಂತಿ ನಾಮರೂಪೇ ವಿಹಾಯ । ತಥಾ ವಿದ್ವಾನ್ ನಾಮರೂಪಾದ್ವಿಮುಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್" ಅರ್ಥ— ಹ್ಯಾಗೆ ಗಂಗಾದಿಯಾದ ಹರಿಯುತ್ತಿರುವ ನದಿಗಳು, ತಮ್ಮ ನಾಮ ಮತ್ತು ರೂಪಗಳ ಪರಿತ್ಯಾಗಮಾಡಿ, ಸಮುದ್ರದೋಳ್ ಪೋಗಿ ಲೀನವಾಗುತ್ತಿರುವವೋ ಹಾಗೆಯೆ ತತ್ವವೇತ್ತನಾದ ಪುರುಷನು ನಾಮರೂಪ ಉಪಾಧಿ ಇಂದ ರಹಿತನಾಗಿ, ಶರೀರದ ಅಂತಕಾಲದಲ್ಲಿ ಪ್ರಕೃತಿಯಿಂ ಪರವಾದ, ಯಾವ ದಿವ್ಯಪುರುಷ-ಅಂದರೆ, ಬ್ರಹ್ಮ ಉಂಟೋ, ಅದರಲ್ಲಿ ಲೀನವಾಗಿ ಪೋಗುವನು ಎಂದು.॥ ಈಪ್ರಕಾರವಾದ ಗತಿ ಯಾವಪುರುಷನಿಗೆ ಆಗುವದೋ ಅವನಿಗೆ ಈಸಂಸಾರದಲ್ಲಿ ಜನ್ಮವೆತ್ತಿದ್ದು ಸಫಲವಾಗುವದು ಮತ್ತು ಆ ಪುರುಷನೆ ಧನ್ಯನೆಂದು ಹೇಳುವದಕ್ಕೂ ಯೋಗ್ಯವಾಗಿರುವದು. ಈವಿಷಯವು ಅನ್ಯತ್ರದಲ್ಲೂ ವರ್ಣಿಸಲ್ಪಟ್ಟಿರುವದು. "ಕುಲಂ ಪವಿತ್ರಂ ಜನನೀ ಕೃತಾರ್ಥಾ ವಸುಂಧರಾ ಪುಣ್ಯವತೀ ಚ ತೇನ । ಅಪಾರಸಂವಿತ್ಸುಖಸಾಗರೇಸ್ಮಿನ್ ಲೀನಂ ಪರೇ ಬ್ರಹ್ಮಣಿ ಯಸ್ಯ ಚೇತಃ" ಅರ್ಥ— ಯಾವ ಪುರುಷನ ಅಪಾರ ಜ್ಞಾನ ಮತ್ತು ಆನಂದಸಮುದ್ರ ರೂಪವಾದ ಬ್ರಹ್ಮದಲ್ಲಿ, ಚಿತ್ತ ಲೀನವಾಗಿರುವದೋ, ಆ ಪುರುಷನ ಸರ್ವಕುಲವು ಪವಿತ್ರವಾಗಿರುವದು. ಇನ್ನು ಅವನ ಜನನೀ-ಅಂದರೆ, ಯಾವ ಮಾತೆ ಇರುವಳೋ ಅವಳೂ ಕೃತಾರ್ಥಳಾಗಿರುವಳು ಹಾಗೆ ಆ ಪುರುಷನು ಎಲ್ಲೆಲ್ಲಿ ಗಮನ ಮಾಡುವನೋ, ಅಲ್ಲಲ್ಲಿ ಅವನ ಚರಣಗಳ ಸ್ಪರ್ಶದಿಂದ, ವಸುಂಧರಾ—ಯಾವ ಪೃಥಿವೀ ಉಂಟೋ ಅದೂ ಪಾವನವಾಗುತ್ತಿರುವದು. ಮತ್ತು ಯಾವ ಯಾವ ಪುರುಷರು ಅವನ ದರ್ಶನ, ಸ್ಪರ್ಶನ, ಸೇವಾದಿಗಳನ್ನು ಮಾಡುವಂಥಾವರು ಇರುವರೋ ಅವರೂ ಕೃತಾರ್ಥರಾಗುತ್ತಿರುವರು ಎಂದು. ॥೧೧೦॥

೧, ಮುಕ್ತಿ. ೨. ಸ್ವರ್ಗಮರ್ತ್ಯ ನರಕಗಳಲ್ಲಿ ತತ್ತದುಚಿತವಾದ ದೇಹಗಳಂ ಪಡೆದು ಜೀವನು ವ್ಯವಹರಿಸುತ್ತಿರುವದಕ್ಕೆ ಸಂಸಾರವೆಂದು ಹೆಸರು. ಇದನ್ನೇ ತಿರ್ಯಗೂರ್ಧ್ವ ಅಧೋಚಕ್ರಭ್ರಮಣವೆಂದು ಹೇಳುವರು. ೪, ಅಖಂಡ, ೫, ಚಿತ್ತ,

ಅ—ಈ ಪ್ರಕಾರವಾಗಿಗ್ರಂಥಕಾರನು ಶಿಷ್ಯಮತ್ತು ಗುರುವಿನವ್ಯಾಜದಿಂದ, ಪ್ರಶ್ನೋತ್ತರದ್ವಾರಾ, ಸರ್ವ ವೇದಾಂತಶಾಸ್ತ್ರಗಳರಹಸ್ಯವನ್ನು ಸಂಕ್ಷೇಪವಾಗಿ ಪ್ರತಿಪಾದನಮಾಡಿ, ಈಗಳಪ್ರಸಂಗದಸಮಾಪ್ತಿಯಂಮಾಡುತ್ತಾ ಗ್ರಂಥದ ಉಪಸಂಹಾರ ಮಾಡುತ್ತಾನೆ॥

ಶ್ಲೋ—ತತಃಸಮಭ್ಯರ್ಚಗುರುಂಮುಹುರ್ಮುಹುಃ
ಪ್ರಣಮ್ಯಚೈವಾಮುದಿತಾಶಯೋಗತಮ್॥
ಸುಖೇಪ್ಸುರೇಕಾಂತನಿಕೇತನಂತತಃ
ಪರಂಪದಂತ್ಯಕ್ತತನುರ್ಜಗಾಮಸೈ ॥೧೧೧॥

ಟೀಕಾ—ತತಃಇತಿ (ತತಃ) ಅಂದರೆ, ಹೇಳಲ್ಪಟ್ಟ ಮೂರು ಶ್ಲೋಕಗಳಿಂದ ದೃಢನಿಶ್ಚಯವರ್ಣನಾ ಪೂರ್ವಕವಾಗಿ, ಗುರುವಿನ ಅಪ್ಪಣೆಯಾದ ಮೇಲೆ ಆಮುಮುಕ್ಷು ಪುರುಷನು, (ಮುಹುರ್ಮುಹುಃ) ಅಂದರೆ,—ಅತಿ ಆದರದಿಂದ ಪುನಃ ಪುನಃ ಗುರುವನ್ನು ಪುಷ್ಪಚಂದನಾದಿಗಳಿಂದ, ವಿಧಿಪೂರ್ವಕವಾಗಿ ಪೂಜಿಸುತ್ತಲೂ, ಮತ್ತುಸ್ತುತಿಸುತ್ತಲೂ, ಹಾಗೆಭಾರಿಭಾರಿಗೂ ದಂಡದಂತೆ ಪ್ರಣಾಮಂಗೈಯುತ್ತಾ ಮತ್ತು ಪ್ರದಕ್ಷಿಣೆಯಂ ಮಾಡಿ,(ಆಮುದಿತಾಶಯಃ)ಅಂದರೆ, ಬ್ರಹ್ಮವಿದ್ಯದ ಪ್ರಾಪ್ತಿಯಾದ್ದರಿಂದ ಮನದೊಳ್ ಒಹಳವಾದ ಹರ್ಷವಂ ಪಡದನು.॥ ಹ್ಯಾಗೂ ಗುರುವು ತಪೋವನ ಮತ್ತು ಗೃಹದೊಳಗೆ ನಿವಾಸ ಮಾಡಲು ಸಮಾನವಾಗಿಯೇ ಅನುಜ್ಞಾ ಮಾಡಿದ್ದರು. ಆದಾಗ್ಯೂ ಅವನು (ಸುಖೇಪ್ಸುಃ) ಅಂದರೆ, ನಿರ್ವಿಕಲ್ಪ ಸಮಾಧಿದ್ವಾರಾ ಜೀವನ್ಮುಕ್ತಿಯ ಸುಖದ ಇಚ್ಛೆ ಮಾಡುತ್ತಿದ್ದನಾದ್ದರಿಂದ (ಏಕಾಂತನಿಕೇತನಂ) ಅಂದರೆ,-ಯಾವದೋ ಒಂದು ಪರ್ವತದ ಗುಹಾದಿ ನಿರ್ಜನಸ್ಥಾನದೊಳ್ ಹೊರಟು ಹೋದವನಾದನು. ॥ ತತಃ-ಅಂದರೆ,-ಅಲ್ಲಿ ಕೆಲವುಕಾಲ ಜೀವನ್ಮುಕ್ತಿಯ ಸುಖವನ್ನನುಭವಿಸಿ ಆ ಮೇಲೆ ಶರೀರದ ಪ್ರಾರಬ್ಧ ಕರ್ಮಗಳು ಕ್ಷೀಣವಾದ್ದರಿಂದ (ತ್ಯಕ್ತತನುಃ) ಅಂದರೆ,-ಸ್ಥೂಲಸೂಕ್ಷ್ಮ ಮತ್ತು ಅವೆರಡಕ್ಕೂ ಕಾರಣಭೂತವಾದ ಯಾವ ಅವಿದ್ಯಾರೂಪ ಶರೀರವುಂಟೋ ಆ ಮೂರು ಶರೀರಗಳಿಗೂ ಪರಿತ್ಯಾಗ ಮಾಡಿ, (ಪರಂಪದಂಜಗಾಮ) ಅಂದರೆ,-ಸರ್ವ ಜ್ಞಾನಿಗಳಿಗೆ ನಿವಾಸಭೂತವಾದ ಯಾವ ಸಚ್ಚಿದಾನಂದ ಸ್ವರೂಪವೆನಿಪ ಪರಬ್ರಹ್ಮ ಪದವಿರುವದೋ ಅದಂ ಪೊಂದಿದಂಥಾವನಾದನು ॥ ಆದಕಾರಣ ಹೀಗೆ ಜ್ಞಾನಿಯಾದ ಪುರುಷನಿಗೆ ಯಾವ ದೇಶಾಂತರದಲ್ಲಿ ಹೋಗುವದ್ದರಿಂದಲೂ ಬ್ರಹ್ಮದ ಪ್ರಾಪ್ತಿಯಾಗುವದಿಲ್ಲ. ಮತ್ತೇ·

ನಂದರೆ,-ಯಾವ ಸ್ಥಾನದೊಳಗೆ ಅವನ ಶರೀರವು ಪಾತವಾಗುವದೋ ಅಲ್ಲಿಯೇ ಅವನ ಪು[1]ರ್ಯಷ್ಟಕಕ್ಕೆ ಭೇದನವಾದ್ದರಿಂದ ಸರ್ವ ವ್ಯಾಪಕವಾದ ಬ್ರಹ್ಮದೊಡನೆ ಏಕೀಭಾವವಾಗಿ ಹೋಗುವದು. ಹ್ಯಾಗೆ ಘಟವು ಒಡೆಯುವದ್ದರಿಂದ ಘಟಾಕಾಶಕ್ಕೆ ಅಲ್ಲಿಯೇ ಮಹಾಕಾಶದೊಡನೇ ಏಕತೆಯಾಗಿ ಹೋಗುವದೋ॥ ಹಾಗೆ ಈ ವಾರ್ತೆಯು ಯಜುರ್ವೇದದ ಬೃಹದಾರಣ್ಯಕೋಪನಿಷತ್ತಿನಲ್ಲಿಯೂ ಹೇಳಲ್ಪಟ್ಟಿರುವದು "ನತಸ್ಯ ಪ್ರಾಣಾ ಉತ್ಕ್ರಾಮಂತ್ಯತ್ರೈವಸಮವಲೀಯಂತೆ„ ಅರ್ಥ॥ ಆ ಜ್ಞಾನಿ ಪುರುಷನಿಗೆ ಮರಣಕಾಲದಲ್ಲಿ ಶರೀರದಿಂ ಹೊರಗೆ ಪ್ರಾಣಗಳ ಗಮನವಾಗುವದಿಲ್ಲ ಮತ್ತೇನಂದರೆ,-ಅಲ್ಲಿಯೇ ಅವಕ್ಕೆ ವಿಲಯವಾಗುವದು ಎಂದು॥ ಹಾಗೆ ಮುಂಡಕೋಪನಿಷತ್ತಿನಲ್ಲಿಯೂ ಹೇಳಿರುವದು. "ಗತಾಃಕಲಾಃ ಪಂಚದಶಪ್ರತಿಷ್ಠಾ ದೇವಾಶ್ಚ ಸರ್ವೇಪ್ರತಿದೇವತಾಸು । ಕರ್ಮಾಣಿವಿಜ್ಞಾನಮಯಶ್ಚ ಆತ್ಮಾ ಪರೇವ್ಯಯೇಸರ್ವ ಏಕೀಭವಂತಿ ॥„ ಅರ್ಥ॥ ಯಾವಕಾಲದಲ್ಲಿ ಜ್ಞಾನಿಪುರುಷನ ಶರೀರ ಪಾತವಾಗುವದೋ ಆಗಲವನ ಪ್ರಾಣಾದಿಯಾದ ಯಾವ ಪಂಚದಶಕಲೆಗಳಿರುವವೋ ಅವು ಪ್ರತಿಷ್ಠಾ-ಅಂದರೆ, ಆ ಕಾಲದಲ್ಲಿ ಸ್ವಸ್ವಕಾರಣದೊಳಗೆ ಲೀನವಾಗಿ ಹೋಗುವವು ಮತ್ತು ಚಕ್ಷುರಾದಿ ಗೋಲಕಗಳಲ್ಲಿ ಇದ್ದ ಯಾವ ದೇವತೆಗಳು ಅಂದರೆ,-ಇಂದ್ರಿಯಗಳುಂಟೋ ಅವು ತಮ್ಮತಮ್ಮ ಅಧಿಷ್ಠಾನಭೂತವಾದ ಸೂರ್ಯಾದಿ ದೇವತೆಗಳಲ್ಲಿ ಏಕೀಭಾವವಂ ಪಡದುಕೊಳ್ಳುತ್ತಿರುವವು ಹಾಗೆ ಅವನ ಜೀವಾತ್ಮನೂ ಇನ್ನು ಶುಭಾಶುಭ ಕರ್ಮಗಳು ನಿರ್ವಿಕಾರವಾದ ಯಾವ ಪರಬ್ರಹ್ಮ ಉಂಟೋ ಅದರೊಡನೆ ಏಕೀಭಾವವಂ ಹೊಂದಿಕೊಳ್ಳುತ್ತಿರುವವು ಎಂದು. ... ... ॥೧೧೧॥

ಅ॥ ಈ ಪ್ರಕಾರವಾಗಿ ಗ್ರಂಥದಪರಿ ಸಮಾಪ್ತಿಯಂ ಮಾಡಿ ಈಗ ಗ್ರಂಥಾಧ್ಯಯನಕ್ಕೆ ಫಲವನ್ನು ವರ್ಣಿಸುತ್ತಾರೆ.

ಶ್ಲೋ॥—ಇಮಂಮುಮುಕ್ಷುಃಕುರುಮುಮುಕ್ಷುಮೋಕ್ಷದಂ
ವಿಚಾರಯೇದ್ಯಸ್ತುವಿಚಾರದೀಪಕಮ್॥

---

೧ ಜ್ಞಾನೇಂದ್ರಿಯಪಂಚಕ, ೧. ಕರ್ಮೇಂದ್ರಿಯಪಂಚಕ, ೧. ಮಾನಸಾದಿಚತುಷ್ಟಯ, ೧. ಪ್ರಾಣಾದಿಪಂಚಕ, ೧ ವಿಯದಾದಿಪಂಚಕ, ೧. ಕಾಮ, ೧, ಕರ್ಮ, ೧, ಅಜ್ಞಾನ, ಇವಂಟೂ ಕೂಡಿದ್ದಕ್ಕೆ ಪುರ್ಯಷ್ಟಕವೆಂದು ಹೆಸರು. ಇದೇ ಲಿಂಗದೇಹವೆಂತಲೂ, ಮತ್ತು ಸೂಕ್ಷ್ಮದೇಹವೆಂತಲೂ ಹೇಳಲ್ಪಡುವದು.

ಸಮಾಹಿತಃಸೋಸ್ತಸಮಸ್ತಸಂಶಯಃ
ಪುನರ್ಭವಂಯಾತಿನಯಾತಿತತ್ಪದಮ್ ।೧೧೨॥

ಟೀಕಾ॥ ಇಮಮಿತಿ ಯಾವ (ಮುಮುಕ್ಷುಃ) ಅಂದರೆ, ಜನ್ಮಮರಣರೂಪವಾದ ಸಂಸಾರ ಬಂಧನದಿಂದ, ಮುಕ್ತನಾಗಲಿಚ್ಛೆಯುಳ್ಳ ಜಿಜ್ಞಾಸು ಪುರುಷನ (ಸುಮುಮುಕ್ಷುಮೋಕ್ಷದಂ) ಅಂದರೆ, ವಿವೇಕ ವೈರಾಗ್ಯಾದಿಯಾದ, ಸಾಧನ ಸಂಪನ್ನತೆಯಿಂ ಶ್ರೇಷ್ಠರಾದ ಅಧಿಕಾರಿಜನರಿಗೆ ವಿಚಾರದ್ವಾರಾ ಮೋಕ್ಷಪದವಂಕೊಡುವಂಥಾ ಯಾವ ಈ ವಿಚಾರದೀಪಕವೆಂಬ ನಾಮವುಳ್ಳಪುಸ್ತಕಉಂಟೋ ಅದನ್ನು ಆದಿಯಿಂ ಹಿಡಿದು ಅಂತಪರ್ಯಂತವು ಸಮ್ಯಕ್ ಪ್ರಕಾರದಿಂದ ಗುರುಖದ್ವಾರಾ, ಅಥವಾ ತಾನೇಯಾದರು (ಸಮಾಹಿತಃ) ಅಂದರೆ, ಏಕಾಗ್ರಚಿತ್ತನಾಗಿ, ಭಾರಿಭಾರಿಗೂ ವಿಚಾರಿಸುವನೂ, ಅವನೂಸಹ ಪೂರ್ವೋಕ್ತವಾದ ಮುಮುಕ್ಷು ಶಿಷ್ಯನಂತೆ ಸರ್ವಸಂಶಯಗಳಿಂದರಹಿತನಾಗಿ, (ಪುನರ್ಭವಂಯಾತಿನ) ಅಂದರೆ, ಮರಳಿ ಜನ್ಮಮರಣರೂಪವಾದ ಸಂಸಾರವಂ ಪೊಂದಲ್ಪಡಲಾರನು. ಮತ್ತೂ ಯೇನಂದರೆ, (ಯಾತಿತತ್ಪದಂ) ಅಂದರೆ, ಯಾವವಿದೇಹ ಕೈವಲ್ಯರೂಪವಾದ, ಪರಮಪದವನ್ನು ಆ ಶಿಷ್ಯನು ಹೊಂದಿದವನಾದನೋ, ಅದೇಪದವನ್ನು ಅವನೂಕೂಡ. ಶೀಘ್ರವೇ ಪೊಂದಲ್ಪಡುವನು ।೧೧೨॥

ಅ—ಈಪ್ರಕಾರವಾಗಿ ಗ್ರಂಥಾಧ್ಯಯನದಫಲವನ್ನು ನಿರೂಪಣಮಾಡಿ, ಈಗ ಗ್ರಂಥಕಾರನು ಈಗ್ರಂಥವನ್ನು ತನ್ನ ಇಷ್ಟದೇವನಂಕುರಿತು ಅರ್ಪಣವಂಮಾಡುತ್ತಾನೆ.

ಶ್ಲೋ॥ ವಿಚಾರದೀಪಕೋಯಂವೈಮನೋವಿಷ್ಣವೇಯೋರ್ಪಿತಃ ।
ಬ್ರಹ್ಮಾನಂದಾಭಿಧಾನೇನಭಿಕ್ಷುಣಾಹರಿತುಷ್ಟಯೆ ।೧೧೩॥

ಟೀಕಾ—ವಿಚಾರದೀಪಕೋಯಮಿತಿ—(ವಿಚಾರದೀಪಕಃ) ಅಂದರೆ,—ಆತ್ಮವಿಚಾರವಂಪ್ರಕಾಶ ಮಾಡುವಂಥಾ, ಯಾವ ಈ ವಿಚಾರದೀಪಕವೆಂಬ ಪೆಸರುಳ್ಳ ಪುಸ್ತಕವಿರುವದೋ, ಅದನ್ನು ತಿಳಿದರೆ, ಒಂದು ದೀಪಕವಾಗಿರುವದು. ಅದೆಂತೆಂದರೆ, ಹ್ಯಾಗೆ ಯಾವನಾನೊಬ್ಬಶ್ರದ್ಧಾವಂತನಾದ ಪುರುಷನು, ದೀಪಕವಂ ನಿರ್ಮಾಣಮಾಡಿ, ಮಂದಿರಗೋಳ್ ಪೋಗಿ, ತನ್ನ ಇಷ್ಟದೇವನಂಕುರಿತು ಅರ್ಪಣವಂಮಾಡುವನೋ, ಹಾಗೆಯೆ ಈ ವಿಚಾರರೂಪದೀಪಕವನ್ನು ನಿರ್ಮಾಣಮಾಡಿ, ಬ್ರಹ್ಮಾನಂದನಾಮಕನಾ

ದಪರಮಹಂ ೧ ಸನ್ಯಾಸನೊವಿಷ್ಣ್ವಾಲಯೆ)ಅಂದರೆ, ಜಿಜ್ಞಾಸು ಪುರುಷರ ಶುದ್ಧ ಮನಸ್ಸೆಂಬ ಯಾವವಿಷ್ಣು ಭಗವಂತನ ಮಂದಿರ ಉಂಟೊ,ಅದರಲ್ಲಿ ಭಗವಂತನ ಪ್ರಸನ್ನತೆ ಗೋಸುಗ, ಅರ್ಪಣಮಾಡಿರುವನು.

ಯಾತಕ್ಕಂದರೆ,-ಹ್ಯಾಗೆ ದೇವ ಮಂದಿರದಲ್ಲಿ ದೀಪಕದ ಅರ್ಪಣ ಮಾಡು ವದ್ದರಿಂದ ಅದರ ಪ್ರಕಾಶದಿಂ ಸರ್ವ ಪುರುಷರಿಗೂ ದೇವತೆಯು ಅಪ ೨ ರೋಕ್ಷ ದರ್ಶನ ವಾಗುವದೋ ಹಾಗೆಯೇ ಈ ವಿಚಾರ ರೂಪ ದೀಪಕ ವನ್ನು ಮನೋರೂಪ ಮಂದಿರದಲ್ಲಿ ಅರ್ಪಣ ಮಾಡುವದ್ದರಿಂದ ಸರ್ವಮು ಮುಕ್ಷು ಪುರುಷರಿಗೂ ಸಚ್ಚಿದಾನಂದ ಸ್ವರೂಪನಾದ ವಿಷ್ಣು ಭಗವಂತನ

---

೧ ಇಲ್ಲಿ ಶಿರೋಮುಂಡನಮಾಡಿ ಕಾವೀ ವಸ್ತ್ರವಂ ಧರಿಸಿ ಕಾಲಹರಣೆ ಮಾಡುವರಿಗೆ ಪರಮ ಹಂಸರೆಂದರ್ಥವಲ್ಲ. ಜೀವ ಪರಮಾತ್ಮರ ಐಕೀಭಾವ ಜ್ಞಾನದಿಂದ ನಿಶ್ಶೇಷವಾಗಿ ಅಜ್ಞಾನವಂ ಹೋಗಲಾಡಿಸಿಕೊಂಡು ಜನ್ಮಮರಣ ರೂಪವಾದ ಸಂಸಾರದ ಪಾರವಂ ಪೊಂದಿರುವರಿಗೆ ಪರಮ ಹಂಸರೆಂದರ್ಥವು. ಹಾಗಲ್ಲದೆ ಕಾಷ್ಠದಂಡವಂ ಪಿಡಿದು ಜ್ಞಾನವರ್ಜಿತ ರಾಗಿ ಸರ್ವ ವಿಧದಿಂದಲೂ ಆಶೆಯಂ ಬಿಡದೆ ತಿತೀಕ್ಷಾ, ಜ್ಞಾನವೈರಾಗ್ಯ ಶಮಾದಿ ಗುಣಗಳಂ ತೊರೆದು ಎಲ್ಲಿ ಯಾದರೂ ಇಷ್ಟು ಅನ್ನ ದೊರೆಯುವದು ಎಂದು ವಿಧಿ ನಿಷೇಧಗಳಂ ಬಿಟ್ಟು ವೇಷಧಾರಿಗಳಾಗಿ ಪರರಂ ವಂಚಿಸುತ್ತಿರುವ ಸನ್ಯಾಸಿಗಳು ಪಾಪಿಗಳೆಂತಲೂ ಕಡೆಗೆ ಇವರು ಯಮರಾಜನ ಪಟ್ಟಣದಲ್ಲಿ ಪ್ರವೇಶಿಸುವರೆಂತಲೂ ಉಪನಿಷತ್ತುಗಳಲ್ಲಿ "ಕಾಷ್ಠದಂಡೋ ಧೃತೋಯೇನ ಸರ್ವಾಶೀಜ್ಞಾನವರ್ಜಿತಃ | ತಿತಿಕ್ಷಾಜ್ಞಾನವೈರಾಗ್ಯಶಮಾದಿ ಗುಣವರ್ಜಿತಃ|| ಭಿಕ್ಷಾಮಾತ್ರೇಣಯೊಜೀವೇತ್ಸಪಾಪೀಯತಿವೃತ್ತಿಹಾ | ಸಯಾತಿನರಕಾನ್‍ಘೋರಾನ್ ಮಹಾರೌರವಸಂಜ್ಞಕಾನ್ | ಎಂದು ಪ್ರತಿಪಾದನ ಮಾಡಿರುವವು. ಆದ್ದರಿಂದ ಮೇಲೆ ಹೇಳಲ್ಪಟ್ಟ ರೀತಿಯಾಗಿ ಸರ್ವಕಾಮಗಳನ್ನು ಬಿಟ್ಟು ಜ್ಞಾನದಂಡವಂ ಪಿಡಿದು ಸಂಸಾರ ಸಮುದ್ರವಂ ದಾಟಿಪರಮಾದ್ವೈತದಲ್ಲಿ ಸ್ಥಿತಿಯುಳ್ಳವರಾರೋ ಅವರೆ ಪರಮ ಹಂಸರೆಂದು ತಿಳಿಯುತಕ್ಕದ್ದು. ಈ ಗ್ರಂಥ ಕರ್ತನಾದ ಮಹಾನುಭಾವನು ಇಂಥಾವನೆ ಅಹುದೋ ಅಲ್ಲವೊ ಎಂಬುವದಕ್ಕೆ ಈ ಗ್ರಂಥವೆ ನಿದರ್ಶನವಾಗಿರುವದು. ೨ ಪ್ರತ್ಯಕ್ಷ-ಕಣ್ಣುಗಳಿಗೆ ಗೋಚರ

ಆತ್ಮಸ್ವರೂಪದಿಂದ ಅಪರೋಕ್ಷ ದರ್ಶನವಾಗುವದು. ಆದ್ದರಿಂದ ಸರ್ವ ಮುಮುಕ್ಷು ಪುರುಷರುಗಳು ಅವಶ್ಯವಾಗಿ ಆದ್ಯೋಪಾಂತ ವಿಚಾರ ಮಾಡಿ ತನ್ನ ಮನೋರೂಪ ಮಂದಿರದಲ್ಲಿ ಈ ವಿಚಾರ ರೂಪ ದೀಪಕಕ್ಕೆ ಪ್ರಜ್ವಾಲಿತ ಮಾಡತಕ್ಕದ್ದು ಯೋಗ್ಯವು ... ||೧೧೩||

ಇತಿ ಶ್ರೀಮತ್ಪರಮ ಹಂಸಸ್ವಾಮಿ ಬ್ರಹ್ಮಾನಂದ ವಿರ
ಚಿತೂ ಭಾವಾರ್ಥಭಾಸಿನೀ ನಾಮಭಾಷಾ ಟೀಕಾ
ಸಮೇತೂ ವಿಚಾರ ದೀಪಕಃ ಸಂಪೂರ್ಣಃ.
ಹರಿಃ ಓಂ.

---

೩ ತನ್ನ ಅಂತರಾನುಭವಕ್ಕೆ ವ್ಯಾಪಕ ಚೈತನ್ಯವು ವಿಷಯವಾಗುವದು.

ಇದು ಶ್ರೀಮನ್ಮಹಾಬಲೇಶ್ವರಕ್ಷೇತ್ರ (ಗೋಕರ್ಣಕ್ಷೇತ್ರ) ನಿವಾ
ಸಿಗಳಾಗಿದ್ದ ಶ್ರೀಮತ್ಸಚ್ಚಿದಾನಂದ ಸ್ವರೂಪಿಗಳಾದ ಪರಮ
ಹಂಸ ಸ್ವಾಮಿಗಳ ನಿಜ ಶಿಷ್ಯನಾದ ಮಹೀಶೂರ ರಾಜ
ಧಾನಿಯಲ್ಲಿರುವ ಶಿವಾನಂದ ಸುಬ್ರಹ್ಮಣ್ಯನಿಂದ ಕನ್ನ
ಡದಲ್ಲಿ ಭಾಷಾಂತರ ಮಾಡಲ್ಪಟ್ಟ ಭಾವಾರ್ಥ
ಭಾಸಿನೀ ಟೀಕಾ ಸಹಿತವಾದ ವಿಚಾರ ದೀಪ
ಕವು ಸಂಪೂರ್ಣ ಮಾದುದು.
ಓಂ "ತತ್‌ಸತ್." ,,

ಶುದ್ಧಿಪತ್ರಿಕೆ.

ಪುಟ	ಪಂಕ್ತಿ	ಅಶುದ್ಧ.	ಶುದ್ಧ.
೧	೧೧	ಮಾಡಿವೆ	ಮಾಡಿದ
೨	೨೦	ನಾಮುಸನ್ನಿಟ್ಟರು	ನಾಮುವನ್ನಿಟ್ಟರು
೧೧	೧೫	ವರ್ಣಿಶಿ	ವರ್ಣಿಸಿ
೧೭	೧೩	ಜೇತನ	ಚೇತನ
೪	೨೫	ಶಬು	ಶಬ್ದ
೬	೨೬	ಸಿದ್ದ	ಸಿದ್ಧ
೭	೧೪	ಸಿದ್ದ	ಸಿದ್ಧಿ
೧೧	೫	ಆಹಾ	ಆಹಾರ
೧೨	೧	ವಿರುವಡು	ವಿರುವದು
೧೨	೭	ಶೊಧೀ	ಶೊಲ್ಲೀ
೧೩	೨೯	ಶೊಬ್ಬೀ	ಶೊಲ್ಲೀ
೧೫	೨೦	ಮಾಡದಿದ್ದರ	ಮಾಡದಿದ್ದರೆ
೨೪	೨೪	ಅಫಿಮಾನವು	ಅಭಿಮಾನವು
೨೫	೧೫	ಅಗೃಹ	ಆಗೃಹ
೩೬	೨೦	ತೋರಿಸಿದವರಾಗಿ	ತೋರಿಸಿದವನಾಗಿ
೩೯	೨೦	ಪ್ರಯಾತ್ಯ	ಪ್ರಯಾಂತ್ಯ
೪೬	೭	ಘ್ರಾಣೇಂದ್ರಿಯುವ	ಘ್ರಾಣೇಂದ್ರಿಯದ
೪೮	೨	ಮಾಡುವವಕ್ಕೋಸುಗೆ	ಮಾಡುವದಕ್ಕೋಸುಗ
೪೭	೨೬	ಇಚೆ	ಇಚ್ಛೆ
೬೫	೯	ವಿಚಾರಿಸುವ್ದರಿಂದ	ವಿಚಾರಿಸುವದ್ದರಿಂದ
೬೮	೧೬	ಅಡಗಿಲ್ಲದೆ	ಹಡಗಿಲ್ಲದೆ
೫೭	೯	ಪ್ರಶಿವಾದಿ	ಪ್ರತಿಪಾದಿ
೫೯	೨೦	ಕೃತ್ಸ್ನ	ಕೃತ್ಸ್ನ
೮೬	೧೨	ನಿಶಾಕಾರ	ನಿಶಾಕರ
೭೬	೭	ಶಿಶ್ಯನ	ಶಿಷ್ಯನ
೭೮	೨೧	ದೇವವನ	ದೇವನ
೯೧	೨೬	ಕರ್ಮಾಪೇಂದರ್ಥವಲ್ಲ	ಕರ್ಮಾಪೇಂದರ್ಥವಲ್ಲ
೯೨	೨೬	ಬ್ರಹ್ಮಕ್ಯ	ಬ್ರಹ್ಮೈಕ್ಯ
೯೬	೨೬	ಅತ್ರ	ಆತ್ರ
೧೦೦	೨೩	ಚಾಪಾಕನ	ಚಾಪಾಲಕನ

೧೦೪	೨೪	ಪುರುಷನಿಗೋಸ:ವೇ	ಪುರುಷನಿಗೋಸುಗವೇ
೧೦೬	೧೯	ಕೊಟ್ಟಿಸ್ದನಂದರೆ	ಕೊಟ್ಟಿದ್ದೇನಂದರೆ
೧೦೮	೪	ಅಂದರೆ	ಅಂದರೆ
೧೧೨	೨೭	ಸಂವ್ರುದೆ	ಸವ್ರುದೆ
೧೧೯	೭	ಮಾಡುತ್ತಾ	ಮಾಡುತ್ತಾನೆ
೧೨೧	೨೬	ತಳ್ಳರುವರೆಂ	ತಳ್ಳರುವರೆಂದು
೧೨೪	೧೭	ಶರೀರ	ಶರೀರ
೧೨೪	೨೧	ನಾದಾನೋ	ನಾದನೋ
೧೩೫	೨೩	ಈಕಾರವಾದ	ಈಪ್ರಕಾರವಾದ
೧೩೯	೪	ವೃಗ್ರ	ಉಗ್ರ
೧೪೫	೨೪	ಸ್ವರೂಪವದ	ಸ್ವರೂಪವಾದ
೧೪೬	೧೪	ಸಿದ್ದಿ	ಸಿದ್ಧಿ
೧೪೮	೧೩	ದ್ವಾರ್ರಾ	ದ್ವಾರಾ
೧೫೭	೨೮	ಹೆಸರ ,	ಹೆಸರು
೧೫೯	೮	ಸಂಪೂರ್ಣಾರ್ನೆಂದ	ಸಂಪೂರ್ಣಾನಂದ
೧೫೯	೧೦	ಗಣಾಧಿಕ	ಗುಣಾಧಿಕ
೧೫೯	೧೫	ಗುಣಾದಿಕ	ಗುಣಾಧಿಕ
೧೬೧	೨೩	ಅವ್ರುಷಧಾ	ಔಷಧಾ
೧೬೧	೨೬	ಮೊದಲಾದವ್ರುಗಳವನ್ನು	ಮೊದಲಾದವ್ರುಗಳನ್ನು
೧೬೬	೧೫	ದೇಃಖದ	ದುಃಖದ
೧೭೩	೩	ಯಾವಾಗೂ	ಯಾವಾಗಲೂ
೧೭೭	೨	ಸಿದ್ದಾಸನ	ಸಿದ್ಧಾಸನ
೧೭೭	೧೨	ಚಕ್ಷ	ಚಕ್ಷು
೧೭೮	೧೫	ಸಿರಾದ್ಧಿ	ಸಿದ್ಧಿ
೧೭೯	೧೫	ಹೇತವಾದ	ಹೇತುವಾದ
೧೭೯	೨೩	ಸಾದನವನ್ನು	ಸಾಧನವನ್ನು
೧೮೧	೨೧	ಪತಿತವಾದರಿಂದ	ಪತಿತವಾದ್ದರಿಂದ
೧೮೧	೨೮	ಬಂಧಿರುವೆದು	ಬಂದಿರುವದು
೧೮೬	೬	ವಸಿಷ್ಟ್ರರು	ವಸಿಷ್ಠರು
೧೮೮	೧೯	ನ್ಯಾಸ	ಸನ್ಯಾಸ
೧೯೫	೨	ಬದ್ದವಾದ	ಬದ್ಧವಾದ
೧೯೫	೫	ಬದ್ದ	ಬದ್ಧ
೧೯೬	೨೮	ನಾಘು	ನ್ಯಾಯು